# ಪಾಠಶಾಲಾ

## ಒಳಗು - ಹೊರಗು

ಸಂಚಿಕೆ 22 / ಡಿಸೆಂಬರ್ 2024
ತ್ರೈಮಾಸಿಕ / ಕನ್ನಡ ಆವೃತ್ತಿ / ಬೆಂಗಳೂರು

Azim Premji University

ಸಮನ್ವಯ ಶಿಕ್ಷಣದ ವಿಶೇಷಾಂಕ



# ಪಾಠಶಾಲಾ

## ಒಳಗು - ಹೊರಗು

ಡಿಸೆಂಬರ್ 2024 । ಸಂಚಿಕೆ 22


## ಸಂಪಾದಕ ಮಂಡಳಿ

- **ಪ್ರತಿಭಾ ಕಟಿಯಾರ್ (ಮುಖ್ಯ ಸಂಪಾದಕರು)**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಆಮ್‌ವಾಲಾ ತರಲಾ, ಸಹಸ್ರಧಾರಾ ರೋಡ್
  ಡೆಹರಾಡೂನ್, ಉತ್ತರಾಖಂಡ್
  pratibha.katiyar@azimpremjifoundation.org

- **ಶೆಫಾಲಿ ತ್ರಿಪಾಠಿ ಮೆಹ್ತಾ (ಸಹ ಸಂಪಾದಕರು)**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಸರ್ವೆ ನಂ. 66, ಬೂರುಗುಂಟೆ ಗ್ರಾಮ
  ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
  ಬೆಂಗಳೂರು - 562125
  shefali.mehta@apu.edu.in

- **ಸಂಪಾದಕರ ಕಛೇರಿ**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಸರ್ವೆ ನಂ. 66, ಬೂರುಗುಂಟೆ ಗ್ರಾಮ
  ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
  ಬೆಂಗಳೂರು - 562125
  publications@apu.edu.in

- **ಗೌತಮ್ ಪಾಂಡೇಯ್**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಭೋಪಾಲ್, ಮಧ್ಯಪ್ರದೇಶ
  gautam@azimpremjifoundation.org

- **ಸುನೀಲ್ ಕುಮಾರ್ ಸಾಹ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ರಾಯ್‌ಪುರ, ಛತ್ತೀಸ್‌ಗಢ
  sunil@azimpremjifoundation.org

- **ಜಗಮೋಹನ್ ಕಠೈತ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಡೆಹರಾಡೂನ್, ಉತ್ತರಾಖಂಡ
  jagmohan@azimpremjifoundation.org

- **ದೀಪಕ್ ಕುಮಾರ್ ರಾಯ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಜಯಪುರ, ರಾಜಾಸ್ಥಾನ
  deepak.rai@azimpremjifoundation.org

- **ಸಿದ್ಧಾರ್ಥ್ ಕುಮಾರ್ ಜೈನ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಭೋಪಾಲ್, ಮಧ್ಯ ಪ್ರದೇಶ
  siddharth.jain@azimpremjifoundation.org

- **ರಜನಿ ದ್ವಿವೇದಿ**
  ಅಸ್ಸಾಂ ವ್ಯಾಲಿ ಸ್ಕೂಲ್
  ತೇಜ್‌ಪುರ, ಅಸ್ಸಾಂ
  rajni.dwivedi@azimpremjifoundation.org

- **ಕಮಲೇಶ್ ಜೋಶಿ**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಉಧಮ್‌ಸಿಂಗ್ ನಗರ, ಉತ್ತರಾಖಂಡ
  kamlesh@azimpremjifoundation.org

- **ರಾಘವೇಂದ್ರ ಹೇರ್ಳೆ ಜಿ.**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು
  raghavendra.herle@azimpremjifoundation.org

- **ಅನುವಾದ ಸಂಪಾದಕರು**
  ಮಧುಕರ ಎಸ್ ಪುಟ್ಟಿ (ಕನ್ನಡ)
  ರಾಜೇಶ್ ಉತ್ಸಾಹೀ (ಹಿಂದಿ)
  ಶೆಫಾಲೀ ತ್ರಿಪಾಠೀ ಮೆಹ್ತಾ (ಇಂಗ್ಲಿಷ್)
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು

- **ಪ್ರಕಾಶನ ತಂಡ**
  ಮೀರಾ ಪ್ರಭು
  ಶಹನಾಜ್ ಬೇಗಂ
  ಲೋಕ ರಾಮ್ ವಿ. ಜಿ.
  ಸಂಬಿತ್ ಮಹಾಪಾತ್ರ
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು

- **ವಿನ್ಯಾಸ**
  ಲೇಔಟ್ (ಹಿಂದಿ)
  ಗಣೇಶ್ ಗ್ರಾಫಿಕ್ಸ್, ಭೋಪಾಲ್, ಮಧ್ಯ ಪ್ರದೇಶ

  ಲೇಔಟ್ (ಕನ್ನಡ)
  ಫ್ಲವರ್ ಗ್ರಾಫಿಕ್ಸ್, ಬೆಂಗಳೂರು

- **ಮುದ್ರಣ**
  ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು


***ಪಾಠಶಾಲಾ*** ಒಳಗು-ಹೊರಗು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಪ್ರಕಟಿಸುವ ಪ್ರಾಥಮಿಕ ಶಿಕ್ಷಣವನ್ನು ಕುರಿತಾದ ಒಂದು ತ್ರೈಮಾಸಿಕ ಪತ್ರಿಕೆ. ಈ ಪತ್ರಿಕೆಯು ದೇಶದಾದ್ಯಂತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮತ್ತು ಹಿರಿಯ ಪ್ರಾಥಮಿಕ ಹಂತಗಳ ಸರ್ಕಾರಿ ಶಾಲಾ ಶಿಕ್ಷಕರಿಗೆ ಅಭ್ಯಾಸ ಆಧಾರಿತ ಲೇಖನಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ಇದು, ರಾಷ್ಟ್ರೀಯ ಶಿಕ್ಷಣ ನೀತಿ 2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳೊಂದಿಗೆ ಹೊಂದಿಕೊಂಡಿರುವ ಪರಿಣಾಮಕಾರಿ ಬೋಧನಾ ವಿಧಾನಗಳ ಮೇಲೆ ಬೆಳಕು ಚೆಲ್ಲುವ ದೃಷ್ಟಿಕೋನಗಳು, ಅನುಭವಗಳು, ಪರ್ಯಾಲೋಚನೆಗಳು ಮತ್ತು ತರಗತಿ ಪ್ರಕ್ರಿಯೆಗಳನ್ನು ಶಿಕ್ಷಕರು ಹಂಚಿಕೊಳ್ಳಲು ಇರುವ ಒಂದು ವೇದಿಕೆ. ಈ ಪತ್ರಿಕೆಯು ಮೊದಲು ಹಿಂದಿಯಲ್ಲಿ ಪ್ರಕಟಗೊಂಡು, ನಂತರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಲ್ಪಡುತ್ತದೆ.

# ಸಂಪಾದಕೀಯ

***ಪಾಠಶಾಲಾ*** ಒಳಗು-ಹೊರಗು, ನಿಯತಕಾಲಿಕೆಯು (ಹಿಂದಿ ಆವೃತ್ತಿ) ಓದುಗರನ್ನು ತಲುಪಿ ಇದುವರೆಗೆ 21 ಸಂಚಿಕೆಗಳ ಪ್ರಯಾಣವನ್ನು ಪೂರ್ಣಗೊಳಿಸಿದೆ. ಈ ಪ್ರಯಾಣದಲ್ಲಿ ನಾವು ಪರಸ್ಪರ ಸಾಕಷ್ಟು ಕಲಿತಿದ್ದೇವೆ. ಅಗತ್ಯಕ್ಕೆ ತಕ್ಕಂತೆ, ಪತ್ರಿಕೆಯಲ್ಲಿ ಕಾಲ ಕಾಲಕ್ಕೆ ಬದಲಾವಣೆಗಳು ಆಗುತ್ತಾ ಹೋಗಿವೆ. ಈಗ ಪತ್ರಿಕೆಯ 22ನೇ ಸಂಚಿಕೆ ನಿಮ್ಮ ಕೈಯಲ್ಲಿದೆ, ಇದರಲ್ಲೂ ಕೆಲವು ಬದಲಾವಣೆಗಳನ್ನು ನೀವು ಗಮನಿಸಬಹುದು. ಈ ಸಂಚಿಕೆಯಿಂದ ಪತ್ರಿಕೆಯು ಹೊಸ ಬಣ್ಣದಲ್ಲಿ ಪ್ರಕಟವಾಗುವುದಲ್ಲದೆ ಅದರ ವ್ಯಾಪ್ತಿ ಕೂಡ ಹೆಚ್ಚುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಮತ್ತು ಎನ್. ಸಿ. ಎಫ್ – ಎಸ್. ಇ., ಎನ್. ಸಿ. ಎಫ್ – ಎಫ್. ಎಸ್ (ಶಾಲಾಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಬುನಾದಿ ಹಂತದ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು) ಗಳ ಆಶಯಕ್ಕನುಗುಣವಾಗಿ, ಭಾರತದಾದ್ಯಂತ ಶಾಲಾ ಶಿಕ್ಷಣದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಹಿಂದಿಯನ್ನು ಹೊರತುಪಡಿಸಿ ದೇಶದ ವಿವಿಧ ಭಾಗಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಜನರ ಪ್ರಯತ್ನಗಳನ್ನು ಒಳಗೊಳ್ಳಲು ಇಂಗ್ಲಿಷ್ ಮತ್ತು ಕನ್ನಡದಲ್ಲಿಯೂ ಪ್ರಕಟಿಸಲಾಗುವುದು. ಈ ಮೂರು ಭಾಷೆಗಳಲ್ಲಿಯೂ ಪತ್ರಿಕೆಯು ಹೊರಬರುತ್ತಿರುವುದರಿಂದ ಹೆಚ್ಚಿನ ಶಿಕ್ಷಕರು, ಶಿಕ್ಷಣದಲ್ಲಿ ಕೆಲಸ ಮಾಡುವವರು ಮತ್ತು ಬರಹಗಾರರನ್ನು ತಲುಪಲು ಸಾಧ್ಯವಾಗುತ್ತದೆ. ಈ ಸಂಚಿಕೆಯಲ್ಲಿ ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ, ಛತ್ತೀಸ್‌ಘಡ್, ಕರ್ನಾಟಕ, ಪುದುಚೇರಿ, ತೆಲಂಗಾಣ, ಈಶಾನ್ಯ ಭಾರತ, ಜಾರ್ಖಂಡ್, ದೆಹಲಿ, ಉತ್ತರ ಪ್ರದೇಶದ ಲೇಖಕರು ಇರುವುದನ್ನು ನೀವು ನೋಡುತ್ತೀರಿ. ತಳಮಟ್ಟದಲ್ಲಿ ಕೆಲಸ ಮಾಡುವ ಶಿಕ್ಷಕ ಸಮುದಾಯದವರು ಮತ್ತು ಸಂಬಂಧಿತ ವ್ಯಕ್ತಿಗಳಿಗೆ ಇದರಲ್ಲಿ ಪ್ರಕಟವಾದ ವಿಷಯವು ಹೆಚ್ಚು ಉಪಯುಕ್ತವಾಗುವಂತೆ ಮಾಡಲು ಪ್ರಯತ್ನಿಸಲಾಗಿದೆ. ಪತ್ರಿಕೆಯು ಮೊದಲಿನಂತೆಯೇ ತ್ರೈಮಾಸಿಕ ಸ್ವರೂಪದ್ದಾಗಿರುತ್ತದೆ ಮತ್ತು ವರ್ಷಕ್ಕೆ ಒಂದು ಸಂಚಿಕೆಯು ಮಾತ್ರ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಒಂದು ವಿಷಯವನ್ನು ಕೇಂದ್ರೀಕರಿಸುತ್ತದೆ. ಈ ಸಂಚಿಕೆಯ ವಿಷಯವೆಂದರೆ 'ಶಾಲಾ ಶಿಕ್ಷಣದಲ್ಲಿ ಸಮನ್ವಯ ಶಿಕ್ಷಣ!'.

ಈ ಸಾಲುಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ದಾಖಲಿಸಲಾಗಿದೆ, "ಶಿಕ್ಷಣವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸುವ ಏಕೈಕ ಮತ್ತು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಸಮಾನ ಮತ್ತು ಸಮನ್ವಯ ಶಿಕ್ಷಣವು ಸ್ವತಃ ಅತ್ಯಗತ್ಯವಾದ ಗುರಿ ಮಾತ್ರವಲ್ಲದೆ ಸಮಾಜದಲ್ಲಿ ಸಮತೆ ಮತ್ತು ಸಮನ್ವಯವನ್ನು ನಿರ್ಮಿಸುವ ಅತ್ಯಗತ್ಯ ಹೆಜ್ಜೆಯಾಗಿದೆ", ಪಾಠಶಾಲಾ ಸಂಚಿಕೆಯು ಹೊಸ ಪಯಣಕ್ಕೆ ಅತ್ಯಗತ್ಯ ಆರಂಭದ ಹಂತವಾಗಿ ಕಂಡಿತು. ಈ ಸಂಚಿಕೆಯ ಉದ್ದೇಶವು ನೀತಿನಿರೂಪಣಾ ದಸ್ತಾವೇಜುಗಳಲ್ಲಿ ಬರೆಯಲಾದ ಸಮನ್ವಯ ಶಿಕ್ಷಣದ ಬಗೆಗಿನ ಪಠ್ಯಗಳನ್ನು ಶಾಲಾ ಪ್ರಕ್ರಿಯೆಗಳಲ್ಲಿ ಸೇರಿಸುವುದನ್ನು ಖಚಿತ ಪಡಿಸಿಕೊಳ್ಳುವುದಾಗಿದೆ. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಯಾವ ಬಗೆಯ ದೃಷ್ಟಿಕೋನವನ್ನು ಹೊಂದಿದ್ದಾರೆ, ಅವರು ಎಷ್ಟು ಸೂಕ್ಷ್ಮತೆಯನ್ನು ಹೊಂದಿದ್ದಾರೆ, ಯಾವ ಬಗೆಯ ಸವಾಲುಗಳನ್ನು ಎದುರಿಸುತ್ತಾರೆ, ಅವರು ಏನು ಮಾಡುತ್ತಿದ್ದಾರೆ ಮತ್ತು ಅದನ್ನು ಹೇಗೆ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಈ ಸಂಚಿಕೆಯಲ್ಲಿ ಅವರ ಅನುಭವಾತ್ಮಕ ಬರಹಗಳ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ಸಂಚಿಕೆಯಲ್ಲಿ ನೀವು ಶಿಕ್ಷಕರು ಮಾಡಿದ ಸಮನ್ವಯ ಶಿಕ್ಷಣದ ಪ್ರಯತ್ನಗಳ ಕೆಲವು ಉದಾಹರಣೆಗಳನ್ನು ಸಹ ಓದಬಹುದು.

ಸಮನ್ವಯ ಶಿಕ್ಷಣ ಎಂಬ ಪದವು ವಿಶೇಷ ಸಾಮರ್ಥ್ಯಗಳನ್ನು ಹೊಂದಿರುವ ಮಕ್ಕಳೊಂದಿಗೆ ಸಂಬಂಧಿಸಿದೆ ಎಂದು ತೋರುತ್ತದೆ. ಆದರೆ ಅದರ ಪದರಗಳನ್ನು ತೆರೆದಾಗ, ಇದು ಖಂಡಿತವಾಗಿಯೂ ವಿಶೇಷ ಕೌಶಲ ಹೊಂದಿರುವ ಮಕ್ಕಳ ಬಗ್ಗೆ ಎಂದು ಅರ್ಥವಾಗುವುದರ ಜೊತೆಗೆ, ಇದು ವಿಭಿನ್ನ ಸಾಮಾಜೋ–ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ಅವಕಾಶ ವಂಚಿತ ಸಮುದಾಯಗಳ ಮಕ್ಕಳ ಶಿಕ್ಷಣ ಮತ್ತು ಸಂಪನ್ಮೂಲಗಳ ಬಗ್ಗೆಯೂ ಚರ್ಚಿಸುತ್ತದೆ.

ಕೆಲವೇ ಕೆಲವು ಮಕ್ಕಳನ್ನು ಹೊಗಳುವುದನ್ನು ಮುಂದುವರಿಸುವ ಹಾಗೂ ಕೆಲವೇ ಮಕ್ಕಳು ಮುಖ್ಯ ಪಾತ್ರಗಳಲ್ಲಿ ಕಂಡುಬರುವ ಪ್ರಕ್ರಿಯೆಗಳ ಬಗೆಗಿನ ಸಂವಾದಗಳು, ಸ್ಪರ್ಧೆಗಳಲ್ಲಿ ಕೆಲವು ಮಕ್ಕಳನ್ನು ಚಪ್ಪಾಳೆ ಗಿಟ್ಟಿಸುವವರನ್ನಾಗಿಸಿ, ಮತ್ತೆ ಕೆಲವರನ್ನು ಕುಳಿತು ಚಪ್ಪಾಳೆ ತಟ್ಟುವಂತೆ ಮಾಡಿದ ಬಗ್ಗೆಯೂ ಸಂಚಿಕೆಯು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.
ಯಾವ ಮಗು ಯಾವ ವಿಷಯವನ್ನು ಆರಿಸಿಕೊಳ್ಳಬೇಕು, ಯಾವ ಕ್ರೀಡೆಯನ್ನು ಆಡಬೇಕು, ಯಾವ ಸಾಂಸ್ಕೃತಿಕ

ಚಟುವಟಿಕೆಯಲ್ಲಿ ಭಾಗವಹಿಸಬೇಕು ಎಂಬುದಷ್ಟೇ ಅಲ್ಲ, ಶಾಲೆ ಮತ್ತು ಕುಟುಂಬದ ದೈನಂದಿನ ಜೀವನದಲ್ಲಿ ಸಮನ್ವಯ ಶಿಕ್ಷಣದ ಕಾಳಜಿಯನ್ನು ಅಲ್ಲಿನ ಕೆಲಸಗಳಲ್ಲಿ ಹೇಗೆ ಹುಡುಗರು ಮತ್ತು ಹುಡುಗಿಯರನ್ನು ಪಡಿಯಚ್ಚು ಮಾದರಿಗಳನ್ನಾಗಿಸಲಾಗಿದೆ ಎಂಬುದರ ಮೂಲಕವೂ ಕಾಣಬಹುದು. ಹಾಗೆಯೇ, ಪ್ರಪಂಚವು ಚಂದ್ರ ಮತ್ತು ಮಂಗಳವನ್ನು ತಲುಪುತ್ತಿದ್ದರೂ ಸಹ, ಜೈವಿಕ ಬದಲಾವಣೆಯಂತಹ 'ಋತುಸ್ರಾವ'ದಿಂದಾಗಿ ಹೆಣ್ಣುಮಕ್ಕಳು ಇನ್ನೂ ಶಿಕ್ಷಣಕ್ಕೆ ಸವಾಲುಗಳನ್ನು ಎದುರಿಸಬೇಕಾಗಿದೆ ಎಂದು ತಿಳಿಯಬಹುದು. ಶಿಕ್ಷಣದಲ್ಲಿ ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಕುರಿತು ನೀವು ಈ ಸಂಚಿಕೆಯಲ್ಲಿ ಲೇಖನಗಳನ್ನು ಓದುತ್ತೀರಿ.

ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಇದರ 2ನೇ ಅಧ್ಯಾಯವು ಸಮನ್ವಯ ಶಿಕ್ಷಣದ ಕುರಿತು ವಿವರವಾಗಿ ಹೇಳುತ್ತದೆ, "ಶಾಲೆಗಳು ವಲಸಿಗ ಸಮುದಾಯಗಳು, ಕಡಿಮೆ-ಆದಾಯದ ಕುಟುಂಬಗಳು, ದುರ್ಭರ ಪರಿಸ್ಥಿತಿಗಳಲ್ಲಿ ವಾಸಿಸುವವರು, ಮಕ್ಕಳ ಕಳ್ಳಸಾಗಾಣಿಕೆಯ ಬಲಿಪಶುಗಳು, ಅನಾಥರು, ಭಿಕ್ಷುಕರು, ಮುಂತಾದ ವೈವಿಧ್ಯಮಯ ಸಾಮಾಜೋ-ಆರ್ಥಿಕವಾಗಿ ಹಿಂದುಳಿದವರಿಗೆ (ಎಸ್.ಇ.ಡಿ.ಜಿ) ಸೇವೆ ಸಲ್ಲಿಸುತ್ತವೆ. ಅವು, ವಿಭಿನ್ನ ಸಾಂಸ್ಕೃತಿಕ-ಸಾಮಾಜಿಕ ಗುರುತುಗಳು (ಉದಾ ಎಸ್.ಸಿ-ಎಸ್.ಟಿ, ಓ.ಬಿ.ಸಿ, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ತೃತೀಯಲಿಂಗಿಗಳು); ವೈವಿಧ್ಯಮಯ ಧಾರ್ಮಿಕ ಅಸಮಾನತೆಗಳು ಭಾಷಾ ಮತ್ತು ಭೌಗೋಳಿಕ ಹಿನ್ನೆಲೆಯಿಂದ ಬಂದಿರುವ (ಉದಾಹರಣೆಗೆ ಗ್ರಾಮ, ಪಟ್ಟಣ, ವಿಶೇಷ ಅಗತ್ಯಗಳು); ಪ್ರತಿ ಮಗುವಿಗೆ ಗೌರವಯುತ ಸ್ಥಳವಾಗಬೇಕು."

ನಮ್ಮ ಸಾಂವಿಧಾನಿಕ ಮೌಲ್ಯಗಳಲ್ಲಿ ಅಡಕವಾಗಿರುವ ವಾತ್ಸಲ್ಯ ಮತ್ತು ಗೌರವದಂತಹ ಮಾನವೀಯ ಮೌಲ್ಯಗಳು ಪ್ರತಿ ಮಗುವಿಗೆ ಮುಖ್ಯವಾಗಿವೆ. ಈ ಸಂಚಿಕೆಯಲ್ಲಿ, ಶಿಕ್ಷಕರು ಮಾನವೀಯ ಮೌಲ್ಯಗಳನ್ನು ಸಮನ್ವಯ ಶಿಕ್ಷಣದ ಆಧಾರವನ್ನಾಗಿ ಮಾಡಿದ ಅನುಭವಗಳನ್ನು ನೀವು ಓದುತ್ತೀರಿ, ಅದು ಅವರ ಬೋಧನೆ ಮತ್ತು ಮಕ್ಕಳ ಕಲಿಕೆಯನ್ನು ಸುಧಾರಿಸಿವೆ. ಈ ಸಂಚಿಕೆಗೆ ಬಂದ ಎಲ್ಲ ಲೇಖನಗಳಲ್ಲಿ ನಾವು ನೋಡಿದ ಅನುಭವಗಳು, ಪ್ರಕ್ರಿಯೆಗಳು ಮತ್ತು ಕಾಳಜಿಗಳು ನಮ್ಮ  ಸಮುದಾಯದವರ ಮೇಲಿನ ನಮ್ಮ ನಂಬಿಕೆಯನ್ನು ಇನ್ನಷ್ಟು ಬಲಪಡಿಸುತ್ತವೆ.

ಬಹಿಷ್ಕಾರಕ್ಕೆ ಕಾರಣವಾಗುವ ಉದ್ದೇಶಗಳನ್ನು ಶಿಕ್ಷಕರು ಅರ್ಥಮಾಡಿಕೊಂಡಿದ್ದಾರೆ. ಇದು ಕೆಲವು ಮಕ್ಕಳನ್ನು ಶಾಲೆಯಲ್ಲಿ, ತರಗತಿಗಳಲ್ಲಿ, ಕ್ರೀಡೆಗಳಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಿಂದುಳಿಯುವಂತೆ ಮಾಡುತ್ತದೆ. ಸಾಮಾನ್ಯವಾಗಿ ಈ ಕಾರಣಗಳು ತುಂಬಾ ಸೂಕ್ಷ್ಮವಾಗಿದ್ದು ಮಕ್ಕಳಿಗಾಗಲಿ, ಶಿಕ್ಷಕರಿಗಾಗಲಿ ತಿಳಿದಿರುವುದಿಲ್ಲ. ಆದರೆ ತರಗತಿಯ ಪ್ರತಿಯೊಂದು ಮಗುವೂ ಕಲಿಕೆ, ಆಟ ಮತ್ತು ಶಾಲಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳದಿದ್ದರೆ ಶಿಕ್ಷಣವು ಅದರ ಉದ್ದೇಶದಲ್ಲಿ ಯಶಸ್ವಿಯಾಗುತ್ತದೆಯೇ ಎಂಬುದು ದೊಡ್ಡ ಪ್ರಶ್ನೆಯಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದು ಸಮನ್ವತೆಯ ಕಡೆಗೆ ಒಂದು ಪ್ರಮುಖ ಹೆಜ್ಜೆಯಾಗಿದೆ.

ಈ ಸಂಚಿಕೆಯು ಪ್ರಾಥಮಿಕ ಶಿಕ್ಷಣದಲ್ಲಿ ಸಮನ್ವಯ ಶಿಕ್ಷಣದ ಕೆಲವು ತಳಸ್ತರದ ಉದಾಹರಣೆಗಳು, ಅನುಭವಗಳು ಮತ್ತು ಸವಾಲುಗಳನ್ನು ಒಗ್ಗೂಡಿಸುವ ಒಂದು ಸಣ್ಣ ಪ್ರಯತ್ನವಾಗಿದೆ. ಎಲ್ಲವನ್ನೂ ಒಂದೇ ಸಂಚಿಕೆಯಲ್ಲಿ ಸೇರಿಸುವುದು ಸಾಧ್ಯವಿಲ್ಲ. ಚರ್ಚಿಸಲು ಇನ್ನೂ ಹಲವು ಅಂಶಗಳಿವೆ, ಅದನ್ನು ಮುಂದಿನ ಸಂಚಿಕೆಗಳಲ್ಲಿ ಚರ್ಚಿಸಲಾಗುವುದು. ಇದು ಕಿಟಕಿಯನ್ನು ತೆರೆದಂತೆ ಮತ್ತು ತಿಳುವಳಿಕೆ ಹಾಗೂ ಸಹಾನುಭೂತಿಗಳು ಹೇಗೆ ಸಾಧ್ಯತೆಯ ಅವಕಾಶವನ್ನು ತೆರೆಯುತ್ತವೆ ಎಂಬುದನ್ನು ನೋಡುವುದಾಗಿದೆ.

ನೀವೆಲ್ಲರೂ ಬುದ್ಧಿವಂತ ಓದುಗರು. ನಿಮ್ಮ ಅಭಿಪ್ರಾಯಗಳು ಹಾಗೂ ಸಲಹೆಗಳು ಪತ್ರಿಕೆಯನ್ನು ಸುಧಾರಿಸಲು ನಮಗೆ ಯಾವಾಗಲೂ ಸ್ಫೂರ್ತಿ ನೀಡುತ್ತವೆ. ಭವಿಷ್ಯದಲ್ಲಿ ಕೂಡ ನಮ್ಮೊಂದಿಗೆ ಸಂಪರ್ಕದಲ್ಲಿರಿ, ಪಾಠಶಾಲಾ ಒಳಗು-ಹೊರಗು (ಪಾಠಶಾಲೆ -ಒಳಗು ಮತ್ತು ಹೊರಗು) ಓದುವುದನ್ನು ಮುಂದುವರಿಸಿರಿ ಮತ್ತು ನಿಮ್ಮ ಅನುಭವಗಳನ್ನು ಲೇಖನಗಳ ಮತ್ತು ಸಲಹೆಗಳ ರೂಪದಲ್ಲಿ ಕಳುಹಿಸುತ್ತಿರಿ.

ಶುಭ ಹಾರೈಕೆಗಳೊಂದಿಗೆ
ಪ್ರತಿಭಾ ಕಟಿಯಾರ್
ಮುಖ್ಯ ಸಂಪಾದಕಿ

# ಪರಿವಿಡಿ

ಸಂಪಾದಕೀಯ

1. ಕೇವಲ ದಾಖಲಾತಿ ಹಂತದಲ್ಲಿ 'ಸಮನ್ವಯ ಶಿಕ್ಷಣ'ವು ಸಾಕಾಗುವುದಿಲ್ಲ - ಮಧು ಕುಶ್ವಾಹ 4
2. ಸಮನ್ವಯದ ಅಭ್ಯಾಸಗಳ ದಿಕ್ಕಿನಲ್ಲಿ ಕೆಲವು ಸಣ್ಣ-ಸಣ್ಣ ಹೆಜ್ಜೆಗಳು - ಜಯನಾ ಜಗಾನಿ ಮತ್ತು ರೀಮಾ ಕೌರ್ 8
3. ಮಕ್ಕಳ ಶಿಕ್ಷಣದ ಮೇಲೆ ಸಾಮಾಜಿಕ-ಭಾವನಾತ್ಮಕ ಬೆಂಬಲದ ಪ್ರಭಾವ - ದೀಪಿಕಾ ಝೂಲಾ 13
4. ಕಲಿಯಲು ಎಲ್ಲರಿಗೂ ಸಮಾನ ಹಕ್ಕಿದೆ - ವಿಷ್ಣು ಗೋಪಾಲ್ 17
5. ಹೆಚ್ಚಿನ ಆರೈಕೆ ಮತ್ತು ಅವಕಾಶಗಳ ಅವಶ್ಯಕತೆಯಿರುವಂತಹ ಮಕ್ಕಳು - ಸುಜಾತಾ ರಾವಿ ಮತ್ತು ದಸನ್ನಾ ಮರೆಡ್ಡಿ 22
6. ಕಲೆಯಲ್ಲಿ ಸಮನ್ವಯ ಶಿಕ್ಷಣ- ಶಿಕ್ಷಕರ ಪಾತ್ರ - ದೀಪಿಕಾ ಶರ್ಮಾ 26
7. ಪ್ರೀತಿ ಮತ್ತು ಸಮಾನತೆಯಿಂದ ಮಕ್ಕಳ ಕಲಿಕೆಯು ಸುಗಮಗೊಳ್ಳುತ್ತದೆ - ಮಮತಾ ಸಿಂಗ್ 30
8. ಹುಡುಗಿಯರಲ್ಲಿ ಮುಟ್ಟು ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ - ರೂಬಿನಾ ಖಾನ್ 34
9. ಒಂದು ವಿಶೇಷ ಶಾಲೆಯನ್ನು ಸಮನ್ವಯದ ಶಾಲೆಯನ್ನಾಗಿ ಮಾಡುವುದು - ಆರ್ ಲಾಲ್‌ಮಳುವಾನಿ 37
10. ಕಲಿಕೆಯ ಹಂತಗಳಲ್ಲಿ ವಿವಿಧತೆಯನ್ನು ನಿರ್ವಹಿಸುವುದು: ಕೆಲವು ತಂತ್ರಗಳು - ಅಕ್ಷತಾ ಎಸ್ ಬೆಳ್ಳುಡಿ 41
11. ಎಲ್ಲರಿಗಾಗಿ ಸಂಗೀತ ಶಿಕ್ಷಣ - ಸಂತೋಷ ರಾಜ್ . ಕೆ 45
12. ಕಿಶನ್ ಈಗ ಖುಷಿಯಾಗಿದ್ದಾನೆ - ಓಂ ಪ್ರಕಾಶ್ ಸಿಂಗ್ 48
13. ಶಿಕ್ಷಕರ ದಿನಚರಿಯಿಂದ
    - ಗಜಲಕ್ಷ್ಮಿ ಟಿ. 52
    - ಕುಸುಮ್ ಲತಾ ಶರ್ಮ 54
    - ಮಧುಮಾಲತಿ 55
    - ಪೂನಮ್ ಭಾಟಿಯಾ 56
14. ಭರವಸೆ ಮೂಡಿಸುವ ಶಿಕ್ಷಕರು - ಸಂಗೀತಾ ಫರಾಸಿ
    - ಪ್ರತಿಭಾ ಕಟಿಯಾರ್ 58
15. ಪುಸ್ತಕಗಳೊಂದಿಗೆ ಸ್ನೇಹ
    - ಶಾರೂನ್ ಸನಿ 65
    - ಧ್ರುವ ದೇಸಾಯಿ 66
    - ನಿಶಾ ನಾಗ್ 67
16. ಬನ್ನಿ, ಸ್ವತಃ ಮಾಡಿ ನೋಡೋಣ 69
17. ಸಂಪಾದಕರಿಗೆ ಪತ್ರ 72

- ಲೇಖನಗಳಲ್ಲಿ ವ್ಯಕ್ತವಾದ ವಿಚಾರಗಳು ಮತ್ತು ದೃಷ್ಟಿಕೋನಗಳು ಲೇಖಕರ ಸ್ವಂತದ್ದಾಗಿವೆ. ಅವುಗಳ ಬಗ್ಗೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
- ಪತ್ರಿಕೆಯಲ್ಲಿ ಪ್ರಕಟಿತವಾದ ಸಾಮಗ್ರಿಗಳ ಉಪಯೋಗವು ಶೈಕ್ಷಣಿಕ ಮತ್ತು ಲಾಭರಹಿತ ಕಾರ್ಯಗಳಿಗಾಗಿ ಇರುವುದಾಗಿದೆ. ಆದರೆ ಇದಕ್ಕಾಗಿ ಲೇಖಕರು ಮತ್ತು ಪ್ರಕಾಶಕರ ಅನುಮತಿ ಪಡೆಯುವುದು ಹಾಗೂ ಆಧಾರಗಳ ಉಲ್ಲೇಖ ನೀಡುವುದು ಅನಿವಾರ್ಯವಾಗಿದೆ.
- ಮಕ್ಕಳ ಗುರುತನ್ನು ಗೌಪ್ಯವಾಗಿರಿಸುವ ಸಲುವಾಗಿ ಅವರ ಹೆಸರುಗಳನ್ನು ಬದಲಾಯಿಸಿ ನೀಡಲಾಗಿದೆ.
- ಮುಖಪುಟದಲ್ಲಿ ಮೂಲದಲ್ಲಿ ಒಳಗೊಂಡಿರುವ ಅಂಶಗಳನ್ನು ಅನೇಕ ವಿಧಾನಗಳಿಂದ ಅವಲೋಕಿಸಬಹುದಾಗಿದೆ. ಅದರಲ್ಲಿ ಹೆಬ್ಬೆರಳಿನ ಮಾದರಿಯಲ್ಲಿ ಚಿತ್ರಿಸಿರುವ ಮರವು ಮೂಲದಲ್ಲಿ ವಿವಿಧತೆಯನ್ನು ಸಾಕಾರಗೊಳಿಸುತ್ತದೆ.

# ಕೇವಲ ದಾಖಲಾತಿ ಹಂತದಲ್ಲಿ 'ಸಮನ್ವಯ ಶಿಕ್ಷಣ'ವು ಸಾಕಾಗುವುದಿಲ್ಲ

ಮಧು ಕುಶ್ವಾಹ

ಭಾರತವೂ ಸೇರಿದಂತೆ ಜಗತ್ತಿನ ಎಲ್ಲಾ ಶಿಕ್ಷಣ ವ್ಯವಸ್ಥೆಗಳು 100% ಎಲ್ಲರನ್ನೂ ಒಳಗೊಂಡಿವೆ ಎಂದು ಹೇಳಿಕೊಳ್ಳಲಾಗುವುದಿಲ್ಲ. ಇದಕ್ಕೆ ಎರಡು ಕಾರಣಗಳಿವೆ; ಮೊದಲನೆಯದಾಗಿ, ಸಮನ್ವಯ ಶಿಕ್ಷಣವು ಒಂದು ನಿರಂತರ ಪ್ರಕ್ರಿಯೆಯಾಗಿದೆ. ನಾವು ಒಂದು ಹಂತದಲ್ಲಿ ಅಥವಾ ಒಂದು ಗುಂಪಿನಲ್ಲಿ ಒಳಗೊಳ್ಳುವಿಕೆಯ ಅಗತ್ಯಗಳನ್ನು ಪೂರೈಸಿದಾಗ, ಶಿಕ್ಷಣ ಸೌಲಭ್ಯಗಳ ವಿಸ್ತರಣೆಯು ಹೊಸ ಸಾಮಾಜಿಕ ಗುರುತನ್ನು ಹೊಂದಿರುವ ಹೊಸ ವಿದ್ಯಾರ್ಥಿಗಳ ಹೊಸ ಬೇಡಿಕೆಗಳನ್ನು ತರುವುದು ಸಹಜ.

ಎರಡನೆಯದಾಗಿ, ಸಮನ್ವಯ ಶಿಕ್ಷಣವನ್ನು ಕುರಿತಾದ ಶೈಕ್ಷಣಿಕ ನೀತಿಗಳನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಹೊಂದಿರುವ ಅಧಿಕಾರಿಗಳು ಮತ್ತು ಶಿಕ್ಷಕರು ಇದುವರೆಗೆ ವಿವಿಧ ಆಧಾರದ ಮೇಲೆ 'ಸಮನ್ವಯವಲ್ಲದ' ಆಚರಣೆಗಳನ್ನು ಸಮರ್ಥಿಸುತ್ತ ಬಂದಿರುವ ಅದೇ ಸಮಾಜದ ಸದಸ್ಯರು. ಆದ್ದರಿಂದ, ಧನಾತ್ಮಕ ವರ್ತನೆಗಳನ್ನು ಹುಟ್ಟು ಹಾಕುವುದು ಮತ್ತು ಸಮನ್ವಯ ಶಿಕ್ಷಣದ ತತ್ವಗಳ ಕಡೆಗೆ ಪ್ರತಿಯೊಬ್ಬರ ಮತ್ತು ವಿಶೇಷವಾಗಿ ಶಿಕ್ಷಕರ ಸಾಮರ್ಥ್ಯಗಳನ್ನು ಬೆಳೆಸುವುದು, ನೀತಿಗಳನ್ನು ಕಾರ್ಯಗತಗೊಳಿಸಲು ಪೂರ್ವಾಪೇಕ್ಷಿತ ಅಂಶವಾಗಿವೆ.

ಸಮನ್ವಯ ಶಿಕ್ಷಣದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ವರದಿಗಳಲ್ಲಿ ಒತ್ತಿಹೇಳಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲೂ ಸಮನ್ವಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

"ಶಿಕ್ಷಣವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸುವ ಏಕೈಕ ಮತ್ತು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ, ಆದರೆ ಸಮತೆಯ ಮತ್ತು ಸಮನ್ವಯ ಶಿಕ್ಷಣವು ತನ್ನಲ್ಲಿನ ಅತ್ಯಗತ್ಯ ಗುರಿಯಾಗಿದೆ, ಆದರೆ ಪ್ರತಿಯೊಬ್ಬ ನಾಗರಿಕನಿಗೂ ಅವಕಾಶವಿರುವ ಸಮಾನ ಮತ್ತು ಸಮನ್ವಯ ಸಮಾಜವನ್ನು ನಿರ್ಮಿಸಲು ಇದು ಅತ್ಯಗತ್ಯ ಹೆಜ್ಜೆಯಾಗಿದೆ. ಈ ನೀತಿಯು ಶಾಲಾ ಶಿಕ್ಷಣದಲ್ಲಿ ಸಾಮಾಜಿಕ ವರ್ಗಗಳ ಅಂತರವನ್ನು ತೆಗೆದುಹಾಕುವುದು. ಎಲ್ಲಾ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳ ಕೇಂದ್ರಬಿಂದುವಾಗಿದೆ "– ರಾಷ್ಟ್ರೀಯ ಶಿಕ್ಷಣ ನೀತಿ 2020, ಅಧ್ಯಾಯ 6, ಪಾಯಿಂಟ್ 6.1, ಪುಟ 38



ಚಿತ್ರ 1: ಶಿಕ್ಷಕರು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಕ್ಕಳ ಸಾಮಾಜಿಕ ವಿಭಜನೆಗಳ ನಡುವೆ ಸೇತುವೆಯಾಗಲು ಸಹಾಯವಾಗುತ್ತದೆ.

ನೀತಿಯು ಮುಂದುವರಿದು, "ಸಮಾಜೋ-ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು (ಎಸ್‌ಇಡಿಜಿ) ಶಿಕ್ಷಣ ವ್ಯವಸ್ಥೆಯಿಂದ ಹೊರಗಿಡುವುದಕ್ಕೆ ಸಂಬಂಧಿಸಿದ ಹಲವು ಕಾರಣಗಳು ಶಾಲಾ ಶಿಕ್ಷಣ ವ್ಯವಸ್ಥೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಸಮಾನವಾಗಿವೆ. ಆದ್ದರಿಂದ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ವಿಧಾನ ಸಮತೆ ಮತ್ತು ಸಮನ್ವಯದ ಕಡೆಗೆ ಏಕರೂಪವಾಗಿರಬೇಕು ಆದ್ದರಿಂದ, ಸಮತೆ ಮತ್ತು ಸಮನ್ವಯವು ಉನ್ನತ ಶಿಕ್ಷಣದಲ್ಲಿ ಗುರಿಗಳನ್ನು ಸಾಧಿಸಲು ಅಗತ್ಯವಾದ ನೀತಿ ಉಪ-ಕ್ರಮಗಳನ್ನು ಶಾಲಾ ಶಿಕ್ಷಣದಲ್ಲಿ ನೋಡಬೇಕು." ಎಂದು ಹೇಳುತ್ತದೆ – ರಾಷ್ಟ್ರೀಯ ಶಿಕ್ಷಣ ನೀತಿ 2020, ಅಧ್ಯಾಯ 14, ಪಾಯಿಂಟ್ 14.2, ಪುಟ 66

## ಶಿಕ್ಷಕರ ಶಿಕ್ಷಣ ಕಾರ್ಯಕ್ರಮದಲ್ಲಿ ಸೇರ್ಪಡೆ

ಸಮನ್ವಯಿತ ಶೈಕ್ಷಣಿಕ ನೀತಿಗಳನ್ನು ಅನುಷ್ಠಾನಗೊಳಿಸುವ ಯಾವುದೇ ಯೋಜನೆಯು ಶಿಕ್ಷಕರಲ್ಲಿ ಸಾಮರ್ಥ್ಯ ಮತ್ತು ಸಮನ್ವಯದ ಮನೋಭಾವವನ್ನು ಬೆಳೆಸದ ಹೊರತು ಯಶಸ್ವಿಯಾಗುವುದಿಲ್ಲ. ಅದಕ್ಕಾಗಿಯೇ 2014 ರಿಂದ ಜಾರಿಗೆ ತಂದ ಎರಡು ವರ್ಷಗಳ ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಪಠ್ಯಕ್ರಮಕ್ಕೆ ಸಮನ್ವಯ ಶಿಕ್ಷಣದ ಕೋರ್ಸ್ ಅನ್ನು ಸೇರಿಸಲಾಗಿದೆ. ಶಿಕ್ಷಕರು ಸಮನ್ವಯದ ಪರಿಕಲ್ಪನೆ, ತತ್ವ ಮತ್ತು ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು ಮಾತ್ರವಲ್ಲದೆ ಅದನ್ನು ಅವರ ಬೋಧನಾ ನಡವಳಿಕೆ ಮತ್ತು ಅಭ್ಯಾಸದ ಅವಿಭಾಜ್ಯ ಅಂಗವಾಗಿಸುವುದು ಇದರ ಗುರಿಯಾಗಿದೆ.

ನನ್ನ ಪ್ರಕಾರ, ಯಾವುದೇ ಶಿಕ್ಷಕರು ತನ್ನ ಶೈಕ್ಷಣಿಕ ಪ್ರಯಾಣದಲ್ಲಿ ಸಮನ್ವಯ ದಾಖಲಾತಿಯ ಅನುಭವ ಹೊಂದಿದ್ದರೆ ಆತ ಸಮನ್ವಯ ದಾಖಲಾತಿಯ ಮಹತ್ವವನ್ನು ಅರಿಯಬಲ್ಲ ಮತ್ತು ಅದನ್ನು ಕಾರ್ಯರೂಪಕ್ಕೆ ತರಬಲ್ಲ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು ತಮ್ಮ ಪ್ರಶಿಕ್ಷಣಾರ್ಥಿಗಳಿಗೆ ಸಮನ್ವಯದ ಶಿಕ್ಷಣ ತಂತ್ರಗಳನ್ನು ಉತ್ತಮವಾಗಿ ಕಲಿಸಬಹುದು. ಮತ್ತು ಅವರಲ್ಲಿ ಸಮನ್ವಯದ ಕುರಿತು ಸಕಾರಾತ್ಮಕ ದೃಷ್ಟಿಕೋನ ಬೆಳೆಸಬಹುದು. ನನ್ನ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಸಮನ್ವಯದ ನಿಟ್ಟಿನಲ್ಲಿ ಮಾಡಿದ ಪ್ರಯತ್ನಗಳ ಬಗ್ಗೆ ನಾನು ಮಾತನಾಡುತ್ತೇನೆ.

## ಸಮನ್ವಯದ ಕುರಿತು ನಿಜವಾದ ಮತ್ತು ಆಳವಾದ ತಿಳುವಳಿಕೆಯನ್ನು ಬೆಳೆಸುವುದು.

ಸಮನ್ವಯಕ್ಕೆ ಹಲವು ಆಯಾಮಗಳಿವೆ. ಆದರೆ ವಿದ್ಯಾರ್ಥಿಗಳೂ ಸೇರಿದಂತೆ ಬಹುತೇಕರು ಸಮನ್ವಯವನ್ನು ಕೇವಲ ದಾಖಲಾತಿಯ ಸಂದರ್ಭದಲ್ಲಿ ಮಾತ್ರ ನೋಡುತ್ತಾರೆ. ಅವರ ಪ್ರಕಾರ ದಾಖಲಾತಿಯಲ್ಲಿ ಆದ್ಯತೆ ನೀಡುವ ಮೂಲಕ ಸಮನ್ವಯದ ಗುರಿ ಸಾಧಿಸಿದಂತಾಗುತ್ತದೆ ಹಾಗೂ ಶಾಲೆಯಲ್ಲಿ ಯಶಸ್ಸು ಮತ್ತು ವೈಫಲ್ಯದ ಜವಾಬ್ದಾರಿಯು ಆಯಾ ವಿದ್ಯಾರ್ಥಿಗಳದ್ದು ಎಂದು ಭಾವಿಸಲಾಗುತ್ತದೆ. ಈ ತಿಳುವಳಿಕೆಯು ಶೈಕ್ಷಣಿಕ ಯಶಸ್ಸು-ವೈಫಲ್ಯವನ್ನು ಪ್ರಯತ್ನ, ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆ-ಯಂತಹ ಸಂಪೂರ್ಣ ವೈಯಕ್ತಿಕ ಅಂಶಗಳಿಗೆ ಸೀಮಿತಗೊಳಿಸುತ್ತದೆ. ಅವುಗಳ ಹಿಂದೆ ಇರಬಹುದಾದ ಸಾಮಾಜಿಕ-ರಚನಾತ್ಮಕ ಅಂಶಗಳು, ಸೌಲಭ್ಯಗಳು ಮತ್ತು ನಿರ್ಬಂಧಗಳನ್ನು ಈ ಬಗೆಯ ಸೀಮಿತ ತಿಳುವಳಿಕೆಯು ಕಡೆಗಣಿಸುತ್ತದೆ. ದುರದೃಷ್ಟವಶಾತ್ ಸಮನ್ವಯದ ಕುರಿತ ಈ ಮೇಲ್ನೋಟದ ವಿಧಾನವು ಭಾರತೀಯ ಸಮಾಜದಲ್ಲಿ ವ್ಯಾಪಕವಾಗಿದೆ ಹಾಗೂ ಪರಿಣಾಮಕಾರಿಯಾಗಿ ಪ್ರಚಲಿತದಲ್ಲಿದೆ.

> **“ನಿಜವಾದ ಅರ್ಥದಲ್ಲಿ ಸಮನ್ವಯವು ಭಾಷಾಶಾಸ್ತ್ರ, ಪಠ್ಯಕ್ರಮ ಸಂಬಂಧಿಯಾದ ಶಿಕ್ಷಣ ಸಾಮಗ್ರಿಗಳಿಗೆ ಸಂಬಂಧಿಸಿದ, ಕಲಿಕೆ ಮತ್ತು ಮೌಲ್ಯಾಂಕನ ವಿಧಾನಗಳಿಗೆ ಸಂಬಂಧಿಸಿದ ಒಟ್ಟಾರೆ ಶಾಲಾ ಪರಿಸರದಲ್ಲಿ ನಡೆಯುವ ಅನುಭವಗಳಿಗೆ ಸಂಬಂಧಿಸಿದೆ.”**

ಸಮನ್ವಯಿತ ದಾಖಲಾತಿಯು ಒಳಗೊಳ್ಳುವಿಕೆಯ ಮೊದಲ ಹೆಜ್ಜೆಯಾಗಿದೆ. ಅದರ ನಿಜವಾದ ಅರ್ಥದಲ್ಲಿ ಸಮನ್ವಯವು ಭಾಷಾಶಾಸ್ತ್ರ, ಪಠ್ಯಕ್ರಮ, ಬೋಧನಾ ಸಾಮಗ್ರಿಗಳು, ಕಲಿಕೆ ಮತ್ತು ಮೌಲ್ಯಮಾಪನದ ವಿಧಾನಗಳು ಮತ್ತು ಶಾಲೆಯ ದೈನಂದಿನ ಜೀವನದಲ್ಲಿ ಹೊಂದಾಣಿಕೆ, ರೂಪಾಂತರ ಮತ್ತು ಬದಲಾವಣೆಗಳನ್ನು ಬಯಸುತ್ತದೆ.

ಸಮನ್ವಯ ಶಿಕ್ಷಣದ ವಿಶಾಲ ಮತ್ತು ನಿಜವಾದ ಅರ್ಥವನ್ನು ಶಿಕ್ಷಕರಿಗೆ ಪರಿಚಯಿಸುವುದು ಶಿಕ್ಷಕರ ತರಬೇತಿ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಿಸುವ ಪ್ರಶಿಕ್ಷಣಾರ್ಥಿಗಳು ವೈವಿಧ್ಯಮಯ ಶೈಕ್ಷಣಿಕ ಹಿನ್ನೆಲೆಯಿಂದ ಬಂದವರು. ಸಮನ್ವಯ ಎಂದರೆ ಪ್ರವೇಶ ದಾಖಲಾತಿಗಳಲ್ಲಿ ಮೀಸಲಾತಿ ಮತ್ತು ಶೈಕ್ಷಣಿಕ ವೈಫಲ್ಯವು ವೈಯಕ್ತಿಕ ಕಾರಣಗಳಿಂದ ಉಂಟಾಗುತ್ತದೆ ಎಂದೇ ಬಹುತೇಕರು ನಂಬುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ಸಮಾಜೋ – ರಚನಾತ್ಮಕ ಅಂಶಗಳು ಶಾಲೆಯಲ್ಲಿ ವಿದ್ಯಾರ್ಥಿಯ ಯಶಸ್ಸು ಅಥವಾ ವೈಫಲ್ಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎಂದು ಪ್ರಶಿಕ್ಷಣಾರ್ಥಿಗಳಿಗೆ ವಿವರಿಸುವುದು ಒಂದು ಸವಾಲಿಗಿಂತ ಕಡಿಮೆಯೇನಲ್ಲ. ಯಾವುದೇ ವಿದ್ಯಾರ್ಥಿಯ ಜಾತಿ, ಲಿಂಗ ಮತ್ತು ವರ್ಗ ಭೇದದ ಗುರುತು ಶಾಲೆಯಲ್ಲಿ ಅವನಿಗೆ ಅನುಕೂಲಗಳು ಅಥವಾ ಅನನುಕೂಲಗಳ ರಚನೆಯನ್ನು ಸೃಷ್ಟಿಸುತ್ತದೆ. ಈ ರಚನೆಯು ಶಾಲೆಯಲ್ಲಿ ಯಶಸ್ಸು ಅಥವಾ ವೈಫಲ್ಯಕ್ಕೆ ಕಾರಣವಾಗಿದೆ. ಶಾಲೆಯಲ್ಲಿನ ಯಶಸ್ಸು ವಿದ್ಯಾರ್ಥಿಗಳ ಸಹಜ ಬೌದ್ಧಿಕ ಸಾಮರ್ಥ್ಯಗಳಿಗೆ ನೇರವಾಗಿ ಸಂಬಂಧಿಸಿಲ್ಲ.

ತರಗತಿಯಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಶೈಕ್ಷಣಿಕ ಪ್ರಯಾಣವನ್ನು ಹಂಚಿಕೊಳ್ಳುವುದು ಸಮನ್ವಯ ಶಿಕ್ಷಣದ ನಿಜವಾದ ಅರ್ಥವನ್ನು ವಿವರಿಸಲು ಪರಿಣಾಮಕಾರಿ ಮಾರ್ಗವಾಗಿದೆ. ಇದಕ್ಕಾಗಿ, ಕೋರ್ಸಿನ

ಪ್ರಾರಂಭದಲ್ಲಿ, ನಾನು ವಿದ್ಯಾರ್ಥಿಗಳಿಗೆ ಅವರ ವೈಯಕ್ತಿಕ ಶೈಕ್ಷಣಿಕ ಪ್ರಯಾಣವನ್ನು ದಾಖಲಿಸುವ ಕಾರ್ಯವನ್ನು ನೀಡುತ್ತೇನೆ ಮತ್ತು ಕೆಲವು ಅಂಶಗಳ ಬಗ್ಗೆ ಯೋಚಿಸಲು ಮತ್ತು ಬರೆಯಲು ಕೇಳುತ್ತೇನೆ. ಉದಾಹರಣೆಗೆ, – ಅವನು ಎಲ್ಲಿ ಓದಿದನು; ನೀವು ಯಾವ ರೀತಿಯ ಶಾಲೆಗೆ ಹೋಗಿದ್ದೀರಿ; ಅವರ ಅಧ್ಯಯನದಲ್ಲಿ ಕುಟುಂಬದ ಬೆಂಬಲ ಎಷ್ಟು; ಅವರು ಉನ್ನತ ಶಿಕ್ಷಣದಲ್ಲಿ ಏನು ಅಧ್ಯಯನ ಮಾಡಲು ಬಯಸಿದ್ದರು; ಅವರು ಬಯಸಿದ ಕೋರ್ಸ್ ಅಥವಾ ಸಂಸ್ಥೆಯಲ್ಲಿ ಅಧ್ಯಯನ ಮಾಡಲು ಸಾಧ್ಯವಾಯಿತೇ?; ಶಿಕ್ಷಣ ಪಡೆಯಲು ಅವರು ಯಾವುದೇ ರೀತಿಯ ತೊಂದರೆಗಳನ್ನು ಎದುರಿಸಿದ್ದಾರೆಯೇ; ಇತ್ಯಾದಿ. ಈ ಪ್ರಶ್ನೆಗಳಿಗೆ ಉತ್ತರ 'ಹೌದು' ಎಂದಾದರೆ ಇದನ್ನು ಸಾಧ್ಯವಾಗಿಸಿದ ಕಾರಣಗಳು ಅಥವಾ ಅಂಶಗಳ ಬಗ್ಗೆ ಬರೆಯಿರಿ. ಹಾಗೆಯೇ, ಈ ಪ್ರಶ್ನೆಗಳಿಗೆ ಉತ್ತರ 'ಇಲ್ಲ' ಎಂದಿದ್ದರೂ, ಅದಕ್ಕೆ ಕಾರಣವಾಗಿರ– ಬಹುದಾದ ಅಂಶಗಳು ಅಥವಾ ಕಾರಣಗಳನ್ನು ಗುರುತಿಸಿ. ಮುಂದೆ, ನಾನು ಅವರ ಲಿಖಿತ ಕೆಲಸದ ಚರ್ಚೆಯನ್ನು ನಡೆಸುತ್ತೇನೆ ಮತ್ತು ಶಾಲೆಯ ಯಶಸ್ಸು ಮತ್ತು ವೈಫಲ್ಯಕ್ಕೆ ಕಾರಣವಾದ ಸಮಾಜೋ – ರಚನಾತ್ಮಕ ಅಂಶಗಳನ್ನು ಗುರುತಿಸಲು ಅವರ ವೈಯಕ್ತಿಕ ಶೈಕ್ಷಣಿಕ ಅನುಭವಗಳತ್ತ ಗಮನ ಸೆಳೆಯುತ್ತೇನೆ. ಚರ್ಚೆಯ ಮೂಲಕ, ವಿದ್ಯಾರ್ಥಿಗಳು ಲಿಂಗ ಗುರುತಿಸುವಿಕೆ ಮತ್ತು ಶೈಕ್ಷಣಿಕ ಅವಕಾಶಗಳು, ಹಿಂದಿ ಮಾತನಾಡುವ ಮತ್ತು ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಯಶಸ್ವಿಯಾಗಲು ಪಡುವ ಪಡಿಪಾಟಲು, ವರ್ಗ ಸ್ಥಾನಮಾನ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಮತ್ತು ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಅವಕಾಶಗಳ ನಡುವಿನ ಸಂಬಂಧವನ್ನು ಬಹು ಬೇಗ ಗುರುತಿಸಿಕೊಳ್ಳುತ್ತಾರೆ.

ಇಂತಹ ಚರ್ಚೆಗಳು ವಿದ್ಯಾರ್ಥಿಗಳಲ್ಲಿ ತಿಳುವಳಿಕೆಯನ್ನು ಬೆಳೆಸಲು ಸಹಾಯಕವಾಗಿವೆ, ಮೀಸಲಾತಿಯ ಹೊರತಾಗಿಯೂ, ಶಾಲೆ ಅಥವಾ ಸಂಸ್ಥೆಯು ಪಠ್ಯಕ್ರಮ ಮತ್ತು ಮೂಲಭೂತ ಭಾಷಾಶಾಸ್ತ್ರ ಮತ್ತು ಸೌಲಭ್ಯಗಳಲ್ಲಿ (ರಾಂಪ್‌ಗಳು, ಶೌಚಾಲಯಗಳು, ಬ್ರೈಲ್ ಪ್ರಿಂಟರ್ಗಳು, ಭಾಷಣ ಓದುವ ಕಂಪ್ಯೂಟರ್‌ಗಳು ಇತ್ಯಾದಿ) ಹೊಂದಾಣಿಕೆಗಳನ್ನು ಮಾಡಬೇಕಾಗಬಹುದು. ಎಲ್ಲಾ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸಮಾನವಾಗಿ ಭಾಗವಹಿಸಲು ತರಬೇತಿಯ ಅಗತ್ಯವಿದೆ.

## ಭಾಷಾ ಶಾಸ್ತ್ರದ ಸಮನ್ವಯತೆ

ಭಾರತದಲ್ಲಿ ಶಿಕ್ಷಣದ ವಿಷಯದಲ್ಲಿ ಇಂಗ್ಲಿಷ್ ಪ್ರಾಬಲ್ಯ ನಿರ್ವಿವಾದವಾಗಿದೆ. ಇಂಗ್ಲಿಷ್‌ನಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಅಧ್ಯಯನ ಸಾಮಗ್ರಿಗಳು, ಪುಸ್ತಕಗಳು ಮತ್ತು ತರಗತಿಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಅವಕಾಶ ಹೆಚ್ಚಿರುತ್ತದೆ. ಇಂಗ್ಲಿಷ್ ಬಾರದ ವಿದ್ಯಾರ್ಥಿಗಳು ಇದರ ಕುರಿತು ಹೆಚ್ಚು ಭಯಭೀತರಾಗಿರುತ್ತಾರೆ. ಕಲಿಸುವ ವಿಷಯವಾಗಿ ಹಿಂದಿ ಮತ್ತು ಇಂಗ್ಲಿಷ್ ಎರಡಕ್ಕೂ ಮಾನ್ಯತೆ ಇದೆ ಆದರೆ ಗ್ರೇಡ್ ಮಟ್ಟದ ಪಠ್ಯ ಸಾಮಗ್ರಿಗಳು, ಪರಾಮರ್ಶನ ಪುಸ್ತಕಗಳು ಇತ್ಯಾದಿ ಹೆಚ್ಚಾಗಿ ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿದೆ. ಆದ್ದರಿಂದ ಹಿಂದಿ ಮಾಧ್ಯಮದ ವಿದ್ಯಾರ್ಥಿಗಳು ತಮ್ಮನ್ನು ತಾವು ಬಹಿಷ್ಕೃತರೆಂದು ಪರಿಗಣಿಸುತ್ತಾರೆ ಮತ್ತು ಅಧ್ಯಯನ ಪ್ರಕ್ರಿಯೆಯಲ್ಲಿ ವಿಷಯ ಮತ್ತು ಇಂಗ್ಲಿಷ್ ಭಾಷೆ ಎರಡರೊಂದಿಗೂ ನಿರಂತರವಾಗಿ ಗುದ್ದಾಡುತ್ತಿರುತ್ತಾರೆ. ನನ್ನ ಕೋರ್ಸ್ ನಲ್ಲಿ ನಾನು ಅವರಿಗೆ ಹಿಂದಿಯಲ್ಲಿ ಅನುವಾದಿತ ಕೆಲವು ಪಠ್ಯ ಸಾಮಗ್ರಿಗಳನ್ನು ಒದಗಿಸಿದಾಗ ಅವರು ಆಶ್ಚರ್ಯ ವ್ಯಕ್ತಪಡಿಸಿದರು. ತರಗತಿಯಲ್ಲಿ ಅವರ ಭಾಗವಹಿಸುವಿಕೆ ಹೆಚ್ಚಾಯಿತು. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಅನುವಾದ ಸಂಪದ' ಕಾರ್ಯಕ್ರಮದೊಂದಿಗಿನ ನನ್ನ ಒಡನಾಟದಿಂದ ಇದು ಸಾಧ್ಯವಾಯಿತು. ಈ ಕಾರ್ಯಕ್ರಮವು ಶಿಕ್ಷಣದ ಕುರಿತು ಹಿಂದಿಯಲ್ಲಿ ಬರೆಯಲಾದ ಮತ್ತು ಅನುವಾದಿಸಲಾದ ವಸ್ತುಗಳ ಲಭ್ಯತೆಯ ಪ್ರಮುಖ ಆನ್‌ಲೈನ್ ಕಣಜವಾಗಿದೆ. ಈ ರೀತಿಯ ಸೌಲಭ್ಯಗಳಿಂದ ಭಾಷೆಗೆ ಸಂಬಂಧಿಸಿದ ಅಡೆತಡೆಗಳನ್ನು ತಕ್ಕಮಟ್ಟಿಗೆ ನಿವಾರಿಸಬಹುದು.

## ಶಾಲೆಯ ದೈನಂದಿನ ಬದುಕಿನಲ್ಲಿ ಸಮನ್ವಯತೆ

ವಿಶೇಷ ದೈಹಿಕ ಅಗತ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳ ದೃಷ್ಟಿಕೋನದಿಂದ ಶಿಕ್ಷಣ ಸಂಸ್ಥೆಗಳು ಮತ್ತು ಶಾಲೆಗಳು ಅವರಿಗೆ ಸವಾಲಿನ ಸ್ಥಳಗಳಾಗಿವೆ. ನಾವು ವಿಶೇಷ ದೈಹಿಕ ಅಗತ್ಯಗಳ ಬಗ್ಗೆ ಮಾತನಾಡುವಾಗ ನಮ್ಮ ಮನಸ್ಸಿಗೆ ಮೊದಲು ದೈಹಿಕವಾಗಿ ಅಂಗವಿಕಲರಾಗಿರುವ ವಿದ್ಯಾರ್ಥಿಗಳು ಬರುತ್ತಾರೆ. ಸಾಮಾನ್ಯವಾಗಿ ಹುಡುಗಿಯರನ್ನು ನಾವು ಈ ವರ್ಗಕ್ಕೆ ಸೇರಿಸುವುದಿಲ್ಲ. ಯೋಜನೆಗಳ ತಯಾರಕರು, ಶಿಕ್ಷಣ ಅಧಿಕಾರಿಗಳು, ಶಿಕ್ಷಕರು ಮುಟ್ಟಿಗೆ ಸಂಬಂಧಿಸಿದ ಅವರ ವಿಶೇಷ ಜೈವಿಕ–ಭೌತಿಕ ಅಗತ್ಯಗಳ ಬಗ್ಗೆ ಗಮನ ಹರಿಸುವುದಿಲ್ಲ.

ಹೆಣ್ಣು ಮತ್ತು ಮಹಿಳೆ ತನ್ನ ಮುಟ್ಟನ್ನು 'ಸದ್ದಿಲ್ಲದೆ' ಮತ್ತು ಪ್ರತ್ಯೇಕವಾಗಿ ನಿರ್ವಹಿಸಬೇಕು ಎಂಬ ಸಮಾಜದಲ್ಲಿ ಚಾಲ್ತಿಯಲ್ಲಿರುವ ನಂಬಿಕೆ ಸಾಕಷ್ಟು ಹಾನಿಕಾರಕವಾಗಿದೆ. ಈ ಮಹತ್ವದ ವಿಷಯದ ಬಗ್ಗೆ ಸಾರ್ವಜನಿಕ ಚರ್ಚೆಗೆ ಅವಕಾಶವಿಲ್ಲ ಅಥವಾ ಶಾಲೆಗಳಲ್ಲಿ ಮುಟ್ಟಿನ ನಿರ್ವಹಣೆಗೆ ಸೌಲಭ್ಯಗಳ ಬೇಡಿಕೆಯೂ ಇಲ್ಲ.

ಮುಟ್ಟಿನ ಬಗೆಗೆ ಅಸಮರ್ಪಕ ಆರೋಗ್ಯ ಶಿಕ್ಷಣವು ಜಾಗತಿಕ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ. ಮುಟ್ಟಿನ ಸಮಸ್ಯೆಯು ಮುಖ್ಯವಾಗಿದೆ. ಏಕೆಂದರೆ ಅದು ಅನೇಕ ಮಾನವ ಹಕ್ಕುಗಳ ಬಗ್ಗೆ ನಮ್ಮ ಗ್ರಹಿಕೆಯನ್ನು ಒಂದೋ ಸುಗಮಗೊಳಿಸುತ್ತದೆ ಇಲ್ಲವೇ ಅಡ್ಡಿಪಡಿಸುತ್ತದೆ.

ಮುಟ್ಟಿನವರು (ಪ್ರಾಥಮಿಕವಾಗಿ ಹುಡುಗಿಯರು ಮತ್ತು ಮಹಿಳೆಯರು ಹಾಗೂ ನಾನ್ ಬೈನರಿ ಟ್ರಾನ್ಸ್ ಜೆಂಡರ್) ಶಾಲೆಯಲ್ಲಿ ಮತ್ತು ಕೆಲಸದ ಸ್ಥಳಗಳಲ್ಲಿ ಕೆಲವು ಮೂಲಭೂತ ಅವಶ್ಯಕತೆಗಳನ್ನು ಹೊಂದಿರಬೇಕು. ಇವುಗಳ ಅಲಭ್ಯತೆಯು ಶಾಲೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಅವರ ಸಮನ್ವಯತೆಯ ಮೇಲೆ ಪರಿಣಾಮ ಬೀರುತ್ತದೆ. ಬಾಲಕಿಯರ ಶೈಕ್ಷಣಿಕ ಅವಕಾಶಗಳ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತಿದ್ದರೂ ಶಾಲಾ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಿಂದ ಈ ಸಮಸ್ಯೆಯು ಕಾಣೆಯಾಗಿದೆ. ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಈ ಮೌನ ಸಂಸ್ಕೃತಿಯಡಿಯಲ್ಲಿ ದೀಕ್ಷೆ ಪಡೆದ ಪ್ರಶಿಕ್ಷಣಾರ್ಥಿಗಳು ತಾವೇ ಶಿಕ್ಷಕರಾಗುವಾಗ ಈ ಸಂಸ್ಕೃತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಾರೆ.

ಮುಟ್ಟಿನ ಸುತ್ತಲಿನ ಸಂಭಾಷಣೆಯನ್ನು 'ಸಾಮಾನ್ಯೀಕರಿಸಲು' ನಾನು ಬಯಸಿದ್ದೇನೆ. ಇದರಿಂದಾಗಿ ಹೊಸ ಋತುಚಕ್ರವು 'ಧನಾತ್ಮಕ ವ್ಯಕ್ತಿತ್ವದೊಂದಿಗೆ' ನೊಂದಿಗೆ ಬೆಳೆಯುತ್ತದೆಯೇ ಹೊರತು ಮುಟ್ಟಿನಿಂದಾಗಿ ತಮ್ಮ ದೇಹವು ಅಪವಿತ್ರ ಅಥವಾ ಅಶುದ್ಧತೆಯ ಮೂಲವಾಗಿದೆ ಎಂಬ ಭಾವನೆಯಿಂದಲ್ಲ. ಒಂದು ಅಧ್ಯಯನದ ಪ್ರಕಾರ ಭಾರತದಲ್ಲಿ ಕೇವಲ 4 ಶಿಕ್ಷಣ ಮಂಡಳಿಗಳು ತಮ್ಮ ಪಠ್ಯಪುಸ್ತಕಗಳಲ್ಲಿ ಮುಟ್ಟಿನ ಬಗ್ಗೆ ಪಾಠಗಳನ್ನು ಹೊಂದಿವೆ ಮತ್ತು ಅವುಗಳಲ್ಲಿ ಎರಡು ಮಾತ್ರ ಮುಟ್ಟಿನ ತಪ್ಪು ಕಲ್ಪನೆಗಳ ವಿಭಾಗವನ್ನು ಹೊಂದಿವೆ. (ಕುಶ್ವಾಹ ಮತ್ತು ಮೌರ್ಯ 2017). ಈ ಅಧ್ಯಯನದಲ್ಲಿ ವಿದ್ಯಾರ್ಥಿಗಳನ್ನು ಕೇಳಿದಾಗ ತಿಳಿದದ್ದೆಂದರೆ ಪಠ್ಯ ಪುಸ್ತಕದಲ್ಲಿ ಋತುಸ್ರಾವದ ಬಗ್ಗೆ ಪಾಠವಿದ್ದರೂ ಅದನ್ನು ಕಲಿಸಲು ಶಿಕ್ಷಕರು ಹಿಂದೇಟು ಹಾಕುತ್ತಾರೆ. ಈ ಪಾಠವನ್ನು ಮನೆಯಲ್ಲಿ ನೀವೇ ಓದಿಕೊಳ್ಳಿ ಎಂದು ಹೇಳುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಈ ವಿಷಯದ ಬಗ್ಗೆ ಮುಕ್ತವಾಗಿ ಮಾತನಾಡಬಲ್ಲಂತಹ ಶಿಕ್ಷಕರನ್ನು ನಾವು ಸಿದ್ಧಪಡಿಸುವುದು ಮತ್ತು ಭವಿಷ್ಯದಲ್ಲಿ ನಮ್ಮ ಯುವ ವಿದ್ಯಾರ್ಥಿಗಳಿಗೆ ಆಸರೆಯಾಗುವುದು ಮುಖ್ಯ ಎಂದು ನಾನು ಭಾವಿಸಿದೆ.

ಮುಟ್ಟಿನ ಪರಿಕರಗಳನ್ನು ಒದಗಿಸುವ ಕೆಲಸವನ್ನು ರಹಸ್ಯವಾಗಿ ಮಾಡದಿರಲು ನಾನು ಪ್ರಯತ್ನಿಸುತ್ತೇನೆ. ಉದಾಹರಣೆಗೆ ಅವರಿಗೆ ಮುಟ್ಟಿನ ಪರಿಕರಗಳ ಅಗತ್ಯವಿದ್ದಾಗ ಅವರು ಅದನ್ನು ಸ್ಪಷ್ಟ ಧ್ವನಿಯಲ್ಲಿ ಕೇಳಬೇಕು. ಅವರ ಕಿವಿಯಲ್ಲಿ ಪಿಸುಗುಟ್ಟಬಾರದು ಎಂದು ನಾನು ಅವರಿಗೆ ಹೇಳುತ್ತೇನೆ. ಅಲ್ಲದೇ ತರಗತಿಯಲ್ಲಿ ಪುರುಷ ಸಂಶೋಧಕರಿದ್ದರೆ, ಅವರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ನೀಡುವಂತೆ ನಾನು ಪ್ರಾಸಂಗಿಕವಾಗಿ ಕೇಳುತ್ತೇನೆ. ಶಿಕ್ಷಕ ಶಿಕ್ಷಕರು ಮುಟ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸುತ್ತಾರೆ ಮತ್ತು ಭವಿಷ್ಯದಲ್ಲಿ ಈ ಸಮಸ್ಯೆಯ ಬಗ್ಗೆ ಯುವ ವಿದ್ಯಾರ್ಥಿಗಳೊಂದಿಗೆ ಮಾತನಾಡಲು ಮತ್ತು ಬೆಂಬಲಿಸಲು ಅವರು ಸಿದ್ಧರಾಗಿದ್ದಾರೆ ಎಂದು ಅವರು ನಂಬುತ್ತಾರೆ.

ಕೆಲವು ಅನುಭವಗಳ ಮೂಲಕ, ಅಧ್ಯಾಪಕರು ಶಿಕ್ಷಣದಲ್ಲಿ ಸಮನ್ವಯದ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಬೇಕಾದ ಮಾರ್ಗೋಪಾಯಗಳು ಅಥವಾ ಪ್ರಯತ್ನಗಳಿಗೆ ಸ್ಪಷ್ಟ ರೂಪ ನೀಡಲು ಪ್ರಯತ್ನಿಸಿದ್ದೇನೆ. ಭವಿಷ್ಯದ ಮಹಿಳಾ ಶಿಕ್ಷಕರು ತಮ್ಮ ತರಗತಿ ಮತ್ತು ಶಾಲೆಗಳಲ್ಲಿ ಈ ಚರ್ಚೆಗಳನ್ನು ಮುಂದಕ್ಕೆ ಕೊಂಡೊಯ್ಯುತ್ತಾರೆ ಎಂದು ನಾನು ಭಾವಿಸಿದ್ದೇನೆ.

**ಪರಾಮರ್ಶನ:**


ರಾಷ್ಟ್ರೀಯ ಶಿಕ್ಷಣ ನೀತಿ, 2020,
https://www.education.gov.in/sites/upload _files/rnhrd/files/NEP _Final_ English_ 0.pdf

Kushwaha, M. & Maurya, A. (2017) 'Menstruation and Textbook.' International Refereed Journal of Reviews and Research. Vol. 5, Issue 5, September 2017 https://www.irjrr.com/research/index.php/vol-5-issue-5-september-2017





**ಮಧು ಕುಶ್ವಾಹ** ಕಳೆದ 25 ವರ್ಷಗಳಿಂದ ವಾರಣಾಸಿಯ ಕಾಶಿ ಹಿಂದೂ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಬೋಧನೆ ಮಾಡುತ್ತಿದ್ದಾರೆ. ಅವರು ಶಿಕ್ಷಣದ ಸಾಮಾಜಿಕ ಸಂದರ್ಭ ಮತ್ತು ಶಿಕ್ಷಣದಲ್ಲಿನ ಲಿಂಗ ಸಮಸ್ಯೆಗಳನ್ನು ತನ್ನ ಬೋಧನೆ ಮತ್ತು ಸಂಶೋಧನೆಯ ವಿಷಯವನ್ನಾಗಿ ಮಾಡಿಕೊಂಡಿದ್ದಾರೆ.
ಸಂಪರ್ಕ: mts.kushwaha@gmail.com

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಸಮನ್ವಯದ ಅಭ್ಯಾಸಗಳ ದಿಕ್ಕಿನಲ್ಲಿ ಕೆಲವು ಸಣ್ಣ-ಸಣ್ಣ ಹೆಜ್ಜೆಗಳು

ಜಯನಾ ಜಗಾನಿ ಮತ್ತು ರೀಮಾ ಕೌರ್

ಸಮನ್ವಯತೆ ಎಂದರೆ ದೊಡ್ಡ ನೀತಿ ಬದಲಾವಣೆಗಳನ್ನು ಮಾಡುವುದು ಅಥವಾ ಆ ಬದಲಾವಣೆ ನಮ್ಮ ಶಾಲೆಗಳಿಗೆ ಬರಲು ಕಾಯುವುದು ಎಂದಲ್ಲ. ಶಿಕ್ಷಕಿಯರಾದ ಶ್ರೀಮತಿ ಅನಿತಾ ಮತ್ತು ಶ್ರೀಮತಿ ಬಬಿತಾ ಅವರು ಸಮನ್ವಯ ಶಿಕ್ಷಣ ಮತ್ತು ವಿವಿಧ ಅಗತ್ಯಗಳಿರುವ ಮಕ್ಕಳಿಗೆ ಕಲಿಸುವಲ್ಲಿ ಯಾವುದೇ ನಿರ್ದಿಷ್ಟ ತರಬೇತಿ ಹೊಂದಿಲ್ಲ. ಆದರೂ ಅವರು ಕಲಿಯುವವರಿಗೆಲ್ಲ ಪಾಠಗಳನ್ನು ಉತ್ತಮಗೊಳಿಸಲು ತಜ್ಞರ ಸಲಹೆಯೊಂದಿಗೆ ಶ್ರಮಿಸುತ್ತಾರೆ.



ಚಿತ್ರ 1: ಸಮನ್ವಯ ಶಿಕ್ಷಣದಲ್ಲಿ ಎಲ್ಲ ಮಕ್ಕಳೂ ಒಟ್ಟಿಗೆ ಭಾಗವಹಿಸುತ್ತಾರೆ.

### ಶಬ್ದ ಚಿತ್ರ 1

ಹರ್ಷಿತಾಗೆ 6 ವರ್ಷ. ಅವಳು ಮೀರತ್‌ನ ಗ್ರಾಮೀಣ ಪ್ರದೇಶದ ಖಾಸಗಿ ಶಾಲೆಗೆ ಹೋಗುತ್ತಾಳೆ, ಅಲ್ಲಿ ಶುಲ್ಕ ತುಂಬಾ ಹೆಚ್ಚಿಲ್ಲ. ಅವಳು ಒಂದು ವರ್ಷದವಳಿದ್ದಾಗ ತಾಯಿ ತೀವ್ರ ಅನಾರೋಗ್ಯಕ್ಕೆ ಒಳಗಾದಳು. ಇದರಿಂದ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಹರ್ಷಿತಾ ಶಾಲೆಗೆ ಹೋಗಲಾಗದೆ, ಅವಳ ಓದು ಕೂಡ ಕುಂಠಿತವಾಗಿತ್ತು. ಅವಳು ಸುಮಾರು 6 ವರ್ಷದವಳಿದ್ದಾಗ, ಮತ್ತೆ ಶಾಲೆಗೆ ಹೋಗಲು ಪ್ರಾರಂಭಿಸಿದಳು. ಪಠ್ಯಕ್ರಮವನ್ನು ಅರ್ಥ ಮಾಡಿಕೊಳ್ಳುವಂತೆ, ಓದು ಬರಹ ಅಭ್ಯಾಸ ಮಾಡುವಂತೆ ಹರ್ಷಿತಾಳ ಪೋಷಕರಿಗೆ ಶಿಕ್ಷಕರು ಸಲಹೆ ನೀಡಿದರು.

ಒಂದನೇ ತರಗತಿಯಲ್ಲಿ ಇಂಗ್ಲಿಷ್, ಹಿಂದಿ ವ್ಯಾಕರಣ, ಗಣಿತ ಮುಂತಾದ ವಿಷಯಗಳ ಕಲಿಕೆಗೆ ವಿವಿಧ ಅವಶ್ಯಕತೆಗಳಿದ್ದು ಹರ್ಷಿತಾಗೆ ತೊಂದರೆಯಾಯಿತು. ಯಾವುದೇ ರೀತಿಯ ಲಿಖಿತ ಕೆಲಸದಿಂದ ಅವಳು ನಿರಾಶೆಗೊಳ್ಳಲು ಪ್ರಾರಂಭಿಸಿದಳು. ಪರಿಣಾಮವಾಗಿ, ಅವಳು

ಇತರ ಮಕ್ಕಳನ್ನು ಹೊಡೆಯಲು ಪ್ರಾರಂಭಿಸಿದಳು. ಕಿರುಚುವುದು ಮತ್ತು ಕೆಲವೊಮ್ಮೆ ಅಳುವುದು. ಇದೆಲ್ಲ ನಿತ್ಯ ನಡೆಯತೊಡಗಿದಾಗ ಶಿಕ್ಷಕರು ಹರ್ಷಿತಾಳ ಪೋಷಕರಿಗೆ ಕರೆ ಮಾಡಿದ್ದಾರೆ. ಆಕೆಯ ತಾಯಿ ಶಿಕ್ಷಕರನ್ನು ಬೆಂಬಲಿಸಿದರು ಮತ್ತು ಹರ್ಷಿತಾಳ ನಡೆವಳಿಕೆಯನ್ನು ಗುರುತಿಸಲು ಪ್ರಯತ್ನಿಸಿದರು. "ಮೇಡಮ್, ಸ್ವಲ್ಪ ನೀವೇ ಗಮನ ಕೊಡಿ. ಅವಳು ಹಾಗೆಯೇ ಇದ್ದಾಳೆ ಗೊತ್ತಾ.? ಅವಳಿಗೆ ತರಗತಿಯಲ್ಲಿ ಕಡಿಮೆ ಕೆಲಸ ಕೊಡಿ, ಉಳಿದದ್ದನ್ನು ನಾನು ಮನೆಯಲ್ಲಿ ಮಾಡಿಸುತ್ತೇನೆ." ಹರ್ಷಿತಾಳ ತಾಯಿ ಇಷ್ಟನ್ನು ಮಾತ್ರ ಹೇಳಬಲ್ಲವರಾಗಿದ್ದರು.

ಶಿಕ್ಷಕಿ ಶ್ರೀಮತಿ ಅನಿತಾ ಅವರು ಹರ್ಷಿತಾಳಿಗೆ ಕಡಿಮೆ ಬರವಣಿಗೆಯ ಕೆಲಸವನ್ನು ನೀಡುವ ಮೂಲಕ ಸಹಾಯ ಮಾಡಲು ನಿರ್ಧರಿಸುತ್ತಾರೆ. ತರಗತಿಯಲ್ಲಿ ಇತರರು 8–10 ಪದಗಳನ್ನು ಬರೆಯಬೇಕಾದರೆ, ಹರ್ಷಿತಾಳಿಗೆ 4–5 ಪದಗಳನ್ನು ಮಾತ್ರ ಬರೆಯಲು ಕೇಳಿದರು. ಟೀಚರ್ ಹರ್ಷಿತಾಳ ನೋಟ್‌ಬುಕ್‌ನಲ್ಲಿ ಪ್ರಶ್ನೆಗಳನ್ನು ಬರೆಯುತ್ತಿದ್ದರು, ಇದರಿಂದ ಹರ್ಷಿತಾ ಉತ್ತರಿಸುವತ್ತ ಗಮನ ಹರಿಸಬಹುದಾಗಿತ್ತು. ಹರ್ಷಿತಾಗೆ ಶಾಂತವಾಗಿರಲು ಕೆಲವು ತಂತ್ರಗಳನ್ನು ಕಲಿಸುವುದರ ಜೊತೆಗೆ ಆಳವಾದ ಉಸಿರಾಟದ, ಅಭ್ಯಾಸದೊಂದಿಗೆ ಅವರು ಸಂತೋಷ, ದುಃಖ, ಕೋಪ, ಹತಾಶೆ ಮುಂತಾದ ವಿಭಿನ್ನ ಭಾವನೆಗಳ ಫ್ಲ್ಯಾಷ್‌ಕಾರ್ಡ್‌ಗಳನ್ನು (ಮಿಂಚುಪಟ್ಟಿಗಳನ್ನು) ಸಹ ಬಳಸಿದರು. ಹರ್ಷಿತಾ ಈಗ ತನ್ನ ಭಾವನೆಗಳನ್ನು ಉತ್ತಮವಾಗಿ ನಿಭಾಯಿಸಬಲ್ಲಳು. ಕುತೂಹಲದ ವಿಷಯವೆಂದರೆ, ಆಕೆಯ ತರಗತಿಯ ಇತರ ವಿದ್ಯಾರ್ಥಿಗಳು ಸಹ ಅದೇ ರೀತಿ ಮಾಡಲು ಕಲಿಯುತ್ತಿದ್ದಾರೆ.

## ಶಬ್ದ ಚಿತ್ರ 2

12 ವರ್ಷದ ಮಯೂರ್ ಕೆಲ ವರ್ಷಗಳಿಂದ ಶಾಲೆಗೆ ಹೋಗುತ್ತಿದ್ದ. ಆ ಸಮಯದಲ್ಲಿ ಅವನು ಮೂರ್ಛೆ ರೋಗದಿಂದ ಬಳಲುತ್ತಿದ್ದಾನೆ ಎಂಬುದು ತಿಳಿದುಬಂತು. ರೋಗವು ಸೌಮ್ಯವಾಗಿದ್ದರೂ, ಅವನು ಪದೇ ಪದೇ ಮೂರ್ಛೆ ಬೀಳುತ್ತಿದ್ದ. ಅವನ ಹೆತ್ತವರು ಅವನನ್ನು ತಮ್ಮ ಕೈಗೆಟುಕುವ ಕೆಲವು ವೈದ್ಯರ ಬಳಿಗೆ ಕರೆದೊಯ್ದರು. ಮಯೂರ್ ಸ್ಥಿತಿ ಈಗ ಸ್ಥಿರವಾಗಿದೆ. ಆದರೆ ಔಷಧಿಗಳ ಕಾರಣದಿಂದಾಗಿ ಅವನು ಆಗಾಗ್ಗೆ ತರಗತಿಯಲ್ಲಿ ನಿದ್ದೆ ಮಾಡುತ್ತಾನೆ. ಅವನು ಭಾಷೆ ಮತ್ತು ಅಂಕಗಣಿತದಲ್ಲಿ ಉತ್ತಮ ಸಾಮರ್ಥ್ಯಗಳನ್ನು ಸಾಧಿಸಿದ್ದು, 40 ನಿಮಿಷಗಳ ಕಾಲ ತರಗತಿಯಲ್ಲಿ ಗಮನ ಹರಿಸಬಲ್ಲವನಾಗಿದ್ದ.

ಮಯೂರನ ತಾಯಿ ಆತನ ದೈಹಿಕ ಆರೋಗ್ಯವನ್ನು ನೋಡಿಕೊಳ್ಳುತ್ತಾರೆ, ಆದರೆ ಅವರು ಅವನನ್ನು 'ಸೋಮಾರಿ' ಮತ್ತು 'ನಿಷ್ಪ್ರಯೋಜಕ' ಎಂದು ಕರೆಯಲು ಪ್ರಾರಂಭಿಸಿದ್ದಾರೆ. ಮಯೂರನ ತಂದೆ ಆತನ ಶಾಲಾ ಶಿಕ್ಷಣದ ಬಗ್ಗೆ ಮೌನವಾಗಿದ್ದಾರೆ. ಮತ್ತು ಅಸಡ್ಡೆ ಹೊಂದಿದ್ದಾರೆ. ಅವರು ಮಯೂರನ ಬಗ್ಗೆ ಯಾವುದೇ ರೀತಿಯ ಚರ್ಚೆಯಲ್ಲಿ ಭಾಗವಹಿಸಲು ಹಿಂಜರಿಯುತ್ತಾರೆ. ಪೋಷಕರು ಮಯೂರ್ ನನ್ನು ಐದನೇ ತರಗತಿಗೆ ಕಡಿಮೆ ಶುಲ್ಕದ ಖಾಸಗಿ ಶಾಲೆಗೆ ಸೇರಿಸಿದ್ದರು.

ಶಿಕ್ಷಕಿ ಶ್ರೀಮತಿ ಬಬಿತಾ ಅವರು ಮಯೂರ್‌ಗೆ ಹಗಲಿನಲ್ಲಿ ಸ್ವಲ್ಪ ಸಮಯ ಮಲಗಲು ಅವಕಾಶ ನೀಡಿದರೆ, ತರಗತಿಯಲ್ಲಿ ಆತನ ಗಮನ ಮತ್ತು ಚಟುವಟಿಕೆ ಗಮನಾರ್ಹವಾಗಿ ಹೆಚ್ಚಾಗುತ್ತದೆ ಎಂದು ಗಮನಿಸಿದರು. ಇತರ ಮಕ್ಕಳು ಮಯೂರ್ ನನ್ನು ಸ್ನೇಹಿತ ನಂತೆ ನೋಡಲಿ ಎಂದು ಅವರು ಗುಂಪು ಚಟುವಟಿಕೆಗಳನ್ನು ಸಹ ಆಯೋಜಿಸುತ್ತಾರೆ. ಈಗ ಅವನು ಹೊರಗೆ ಹೋಗುತ್ತಾನೆ ಮತ್ತು ಇತರ ಎಲ್ಲ ಮಕ್ಕಳಂತೆ ಆಡುತ್ತಾನೆ. ಶಿಕ್ಷಕರು ಮಯೂರ್‌ನ ಆರೋಗ್ಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಅವನ ಪ್ರಗತಿಯನ್ನು ಗಮನಿಸುತ್ತಾರೆ.

ಒಂದು ದಿನ ಮಯೂರ್ ತರಗತಿಯಲ್ಲಿ ಮೂರ್ಛೆ ಹೋದಾಗ ಇಡೀ ತರಗತಿ ಆತನಿಗೆ ಸಹಾಯ ಮಾಡಿತು. ಅಂತಹ ಅನುಭವಗಳು ಮಯೂರ್‌ನಲ್ಲಿ ವಿಶ್ವಾಸ ಮೂಡಿಸಿದವು.

## ಎಲ್ಲ ಮಕ್ಕಳನ್ನು ಸೇರಿಸಿಕೊಳ್ಳಿ

ಹರ್ಷಿತಾ ಮತ್ತು ಮಯೂರ್ ಇಬ್ಬರಿಗೂ ಯಾವುದೇ ಅಂಗವೈಕಲ್ಯವಿಲ್ಲ. ಇಬ್ಬರೂ ಖಾಸಗಿ ಶಾಲೆಯಲ್ಲಿ ಕಡಿಮೆ ಶುಲ್ಕದಲ್ಲಿ ಓದುತ್ತಿದ್ದರು. ಇಬ್ಬರೂ ತಿರಸ್ಕಾರವನ್ನು ಅನುಭವಿಸಿದವರು. ಮಯೂರ್ ಪ್ರಕರಣದಲ್ಲಿ, ಅವನ ಕುಟುಂಬ ಸದಸ್ಯರು ಅವನನ್ನು 'ಸೋಮಾರಿ' ಮತ್ತು 'ನಿಷ್ಪ್ರಯೋಜಕ' ಎಂದು ಟೀಕಿಸುವುದರಿಂದ ಮನೆಯ ವಾತಾವರಣದಿಂದಲೇ ಹೊರ–ಗಿಟ್ಟಂತಾಯಿತು. ಆದ್ದರಿಂದ ಅವನು ಭಾವನಾತ್ಮಕ ನಿರ್ಲಕ್ಷ್ಯವನ್ನು ಎದುರಿಸಬೇಕಾಗುತ್ತದೆ. ಸಮನ್ವಯವು ಸಾಮಾನ್ಯವಾಗಿ ವಿಶೇಷ ಸಾಮರ್ಥ್ಯಗಳನ್ನು ಹೊಂದಿರುವ ಮಕ್ಕಳನ್ನು ಸೇರಿಸುವುದ– ರೊಂದಿಗೆ ಸಂಬಂಧಿಸಿದೆಯಾದರೂ, ಸಮನ್ವಯ ಶಿಕ್ಷಣ ಎಂದರೆ ಎಲ್ಲಾ ಮಕ್ಕಳನ್ನು ಸ್ವಾಗತಿಸುವುದು ಮತ್ತು ಬೆಂಬಲಿಸುವುದು ಎಂದರ್ಥ.

ಹರ್ಷಿತಾಳ ವಿದ್ಯಾಭ್ಯಾಸಕ್ಕೆ ಅಡ್ಡಿಯುಂಟಾಗಿದ್ದು, ಆಕೆಯ ಓದು ಮುಂದುವರಿಸಲು ಕಷ್ಟವಾಯಿತು. ಕುಟುಂಬದಲ್ಲಿ ಯಾರೊಬ್ಬರ ಅನಾರೋಗ್ಯ ಅಥವಾ ಮರಣ, ಕಳಪೆ ಆರೋಗ್ಯ, ಆರ್ಥಿಕ ಸಮಸ್ಯೆಗಳು, ಸಂದರ್ಭಾನುಸಾರ ವಲಸೆ, ಸಂಘರ್ಷ ವಲಯಗಳಲ್ಲಿ ಹಿಂಸಾಚಾರ ಇತ್ಯಾದಿಗಳಿಂದ ಶಾಲಾ ಶಿಕ್ಷಣದಲ್ಲಿ ಆಗಾಗ್ಗೆ ಅಡಚಣೆಗಳ ಪ್ರಕರಣಗಳು ಕಂಡುಬರುತ್ತವೆ. ಅದನ್ನು ನಿಭಾಯಿಸಲು ಹರ್ಷಿತಾ ಅಸಹ್ಯಕರ ವರ್ತನೆಯನ್ನು ಆಶ್ರಯಿಸುತ್ತಾಳೆ. ಆಕೆಯ ತಾಯಿಯು ಸಮಸ್ಯೆಯನ್ನು ಅರ್ಥಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ ಮತ್ತು ಅವರು ಶಾಲೆಯೊಂದಿಗೆ ಸಹಕರಿಸಲು ಪ್ರಯತ್ನಿಸಿದರು. ಹೆಚ್ಚಿನ ಪೋಷಕರು ಅಂತಹ ಪ್ರಯತ್ನವನ್ನು ಮಾಡುವುದಿಲ್ಲ.

ಮಯೂರನ ಪ್ರಕರಣದಲ್ಲಿ, ದೀರ್ಘಕಾಲದ ಮೂರ್ಛೆರೋಗವು ಮಗುವಿನ ಶಾಲಾ ಶಿಕ್ಷಣ ಮತ್ತು ಜೀವನದ ಗುಣಮಟ್ಟದ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರುತ್ತದೆ ಎಂದು ನಾವು ನೋಡಿದ್ದೇವೆ. ಮೂರ್ಛೆರೋಗವನ್ನು ಸಾಮಾನ್ಯವಾಗಿ ಗುಪ್ತ ಅಥವಾ ಅದೃಶ್ಯ ಅಸ್ವಸ್ಥತೆ ಎಂದು ಕರೆಯಲಾಗುತ್ತದೆ. ಮೂರ್ಛೆ ಬರುವವರೆಗೆ ಈ ರೋಗ ಕಾಣಿಸಿಕೊಳ್ಳುವುದಿಲ್ಲ. ಈ ರೋಗವನ್ನು ಸಾಮಾಜಿಕ ಪೂರ್ವಾಗ್ರಹವಾಗಿ ನೋಡಲಾಗುತ್ತದೆ ಮತ್ತು ಅದರಿಂದ ಬಳಲುತ್ತಿರುವ ಜನರು ತಾರತಮ್ಯಕ್ಕೆ ಒಳಗಾಗುತ್ತಾರೆ. ಮಯೂರನಿಗೆ ಸಹ ಕಲಿಕೆಯಲ್ಲಿ ತೊಂದರೆಯಾಗುತ್ತಿದೆ. ಹಾಗಾಗಿ ಅವನಿಗೆ ಪೂರಕ ವಾತಾವರಣದ ಅಗತ್ಯವಿದೆ.

## ಸಕಲ ಸನ್ನಿವೇಶಗಳಲ್ಲಿ ಸಮನ್ವಯ ಶಿಕ್ಷಣ

ಹರ್ಷಿತಾಳ ಶಿಕ್ಷಕಿ ಶ್ರೀಮತಿ ಅನಿತಾ, ಆಕೆಗೆ ಹೆಚ್ಚಿನ ಹೊರೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರು ಶಿಕ್ಷಣದ ಪ್ರಯತ್ನಿಸಿದ ಮತ್ತು ಪರೀಕ್ಷಿಸಿದ ತತ್ವಗಳನ್ನು ಅನ್ವಯಿಸುವಾಗ ಜಾಗರೂಕರಾಗಿರುತ್ತಾರೆ. ಕಲಿಯುವವರ ಪೂರ್ವಜ್ಞಾನವನ್ನು ಪರಿಗಣಿಸುವುದು ಮತ್ತು ಅವರನ್ನು ಬೆಂಬಲಿಸುವುದು, ಕಲಿಕೆಯನ್ನು ಪ್ರಮಾಣೀಕೃತಗೊಳಿಸಲು ನೈಜ–ಜೀವನದ ಅನುಭವಗಳಿಗೆ ಬೋಧನೆಯನ್ನು ಬೆಸೆಯುವುದು, ಅವನ / ಅವಳ ಕಲಿಕೆಯ ವೇಗ ಮತ್ತು ಬೆಳವಣಿಗೆಯ ಪ್ರಗತಿಗೆ ಸೂಕ್ಷ್ಮವಾಗಿರುವುದು ಮತ್ತು ಕಲಿಕೆಯು ನೀರಸವಾಗದಂತೆ ಆಕರ್ಷಕವಾಗಿರುವಂತೆ ನೋಡಿ–ಕೊಳ್ಳುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಶಿಕ್ಷಕಿಯೊಬ್ಬರು ಹೇಗೆ ಎಚ್ಚರದಿಂದಿದ್ದು ಸೂಕ್ಷ್ಮ ಮತ್ತು ಚಿಂತನಶೀಲರಾಗಿರುವ ಮೂಲಕ ಸಮನ್ವಯ ಶಿಕ್ಷಣವನ್ನು ಹೇಗೆ ಪ್ರಯತ್ನಿಸಬಹುದು ಎಂದು ತೋರಿಸಿದರು.

ಮಯೂರನ ಶಿಕ್ಷಕಿ ಶ್ರೀಮತಿ ಬಬಿತಾ, ಆತನ ದೈಹಿಕ, ಸಾಮಾಜಿಕ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಆದ್ಯತೆ ನೀಡುತ್ತಾರೆ. ಮಯೂರ್ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಬೇಕಾದರೆ ಅವನನ್ನು ಬೆಂಬಲಿಸುವುದು ಮುಖ್ಯ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಮೊದಲ ಹಂತವೆಂದರೆ ಅವನಿಗೆ ಅಥವಾ ಅವಳಿಗೆ ಶಾಲೆಯಲ್ಲಿ ಸರಿಯಾದ ಸ್ವಾಗತ ಸಿಗಬೇಕು ಮತ್ತು ತಾವು ಸುರಕ್ಷಿತವಾಗಿದ್ದೇವೆ ಎಂಬ ಭಾವ ಅವರಲ್ಲಿ ಬರುವಂತೆ ನೋಡಿಕೊಳ್ಳಬೇಕು. ಶಿಕ್ಷಕಿ ಕೇವಲ ಮಯೂರನ ಪೋಷಕರ ವಿಶ್ವಾಸ ಮಾತ್ರ ಗೆಲ್ಲಲಿಲ್ಲ; ಬದಲಿಗೆ ಮಯೂರನಿಗೆ ಶಾಲೆಯಲ್ಲಿ ಯಾವುದೇ ರೀತಿಯ ಸಾಮಾಜಿಕ ಪೂರ್ವಾಗ್ರಹ ಅಥವಾ ತಾರತಮ್ಯವು ಎದುರಾಗದಂತೆ ನೋಡಿಕೊಂಡರು. ವಿಶೇಷ ಕಾಳಜಿ ಮತ್ತು ಗಮನ ಅಗತ್ಯವಿರುವ ಮಕ್ಕಳನ್ನು ಬೆಂಬಲಿಸಲು ಶಾಲೆಗಳು ಮತ್ತು ಶಿಕ್ಷಕರು ಹೇಗೆ ಹೆಣಗಾಡುತ್ತಾರೆ ಎಂಬುದನ್ನು ಹರ್ಷಿತಾ ಮತ್ತು ಮಯೂರ್ ಅವರ ಉದಾಹರಣೆಗಳು ತೋರಿಸುತ್ತವೆ. ಮತ್ತು ಅಂತಹ ಬದ್ಧತೆಯ ಶಿಕ್ಷಕರನ್ನು ನಾವು ಕಂಡುಕೊಳ್ಳುವ ಸ್ಥಳದಲ್ಲಿ, ಅರ್ಥಪೂರ್ಣ ಕಲಿಕೆಯ ಅನುಭವಗಳು ಕಾರ್ಯರೂಪಕ್ಕೆ ಬರುವುದನ್ನು ನಾವು ನೋಡಬಹುದು. ಇಬ್ಬರೂ ಶಿಕ್ಷಕರು ಮಕ್ಕಳಿಗೆ ತರಗತಿಯಲ್ಲಿ ಸುರಕ್ಷಿತವಾಗಿರಲು ಮತ್ತು ಉತ್ತಮವಾಗಿ ಕಲಿಯಲು ಸಣ್ಣ ಶೈಕ್ಷಣಿಕ ಕಾರ್ಯಗಳನ್ನು ಮಾಡಿದ್ದಾರೆ. ಅದೇ ಅವರಿಗೆ ಉತ್ತಮ ಸಂಪನ್ಮೂಲಗಳನ್ನು ನೀಡಿದರೆ ಅವರು ಎಂತಹ ವ್ಯತ್ಯಾಸವನ್ನು ತರಬಹುದು ಎಂದು ಊಹಿಸಿ!

## ಸಮನ್ವಯದ ಶಿಕ್ಷಣ: ಒಂದು ಅಧಿಕಾರದ ರೂಪದಲ್ಲಿ

ನಮ್ಮ ದೇಶದಲ್ಲಿ, ಶಿಕ್ಷಣದ ಹಕ್ಕು (ಆರ್‌ಟಿಇ) ಕಾಯಿದೆ 2009 ಇದು ವಿಕಲಾಂಗ ಮಕ್ಕಳನ್ನು ಒಳಗೊಂಡಂತೆ 6 ರಿಂದ 14 ವರ್ಷ ವಯಸ್ಸಿನ ಪ್ರತಿ ಮಗುವಿಗೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ನೀಡಿದೆ.

ಇದರ ಹೊರತಾಗಿ, ನಮ್ಮ ದೇಶದ ವಿಕಲಚೇತನರ ಹಕ್ಕುಗಳ (RPWD) ಕಾಯಿದೆ 2016, 6 ರಿಂದ 18 ವರ್ಷ ವಯಸ್ಸಿನ ನಿರ್ದಿಷ್ಟ ಅಂಗವೈಕಲ್ಯ ಹೊಂದಿರುವ ಯಾವುದೇ ಮಗುವು ಉಚಿತ ಶಿಕ್ಷಣದ ಹಕ್ಕನ್ನು ಹೊಂದಿದೆ ಎಂದು ಹೇಳುತ್ತದೆ.

ಶಿಕ್ಷಣದ ಹಕ್ಕು ಮತ್ತು ವಿಕಲಚೇತನರ ಹಕ್ಕುಗಳು ನಮ್ಮ ದೇಶದಲ್ಲಿ ಐತಿಹಾಸಿಕ ಕಾರ್ಯಗಳಾಗಿವೆ. ಆದರೆ ಸಮನ್ವಯತೆ ಎಂದರೆ ಸೇರ್ಪಡೆ ಎಂದಲ್ಲ. ವಿಕಲಾಂಗ ಮಕ್ಕಳೂ ಸೇರಿದಂತೆ ವಿವಿಧ ಗುಂಪುಗಳು ಒಂದೇ ಶಾಲೆಗೆ ಹಾಜರಾಗಬಹುದು, ಅದೇ ಶಿಕ್ಷಕರಿಂದ ಒಂದೇ ಪಠ್ಯಕ್ರಮವನ್ನು ಕಲಿಸಬಹುದು, ಆದರೆ ಈ ಮಕ್ಕಳು ಇನ್ನೂ ಪ್ರತಿದಿನ ಅನೇಕ ರೀತಿಯ ಪ್ರತ್ಯೇಕತೆಯನ್ನು ಅನುಭವಿಸುತ್ತಿದ್ದಾರೆ.

ತಮ್ಮ ತರಗತಿಗಳು ಎಲ್ಲಾ ಮಕ್ಕಳನ್ನು ಒಳಗೊಂಡಿವೆಯೇ ಎಂಬುದನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರು ತಮ್ಮನ್ನು ತಾವು ಕೇಳಿಕೊಳ್ಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ. ಇವುಗಳನ್ನು ಒಳಗೊಳ್ಳುವ ತರಗತಿ ಕೊಠಡಿಗಳನ್ನು ರಚಿಸಲು ಮಾರ್ಗಸೂಚಿಗಳಾಗಿ ಕಾಣಬಹುದು.

| ಪಠ್ಯಕ್ರಮದ ಅಂಶಗಳು | ಆರಂಭಿಕ ಹಂತಗಳು | ಮುಂದಿನ ಹಂತಗಳು |
|---|---|---|
| ಕಲಿಕಾ ಪರಿಸರ (ದೈಹಿಕ) | • ತರಗತಿಯಲ್ಲಿ / ಸಮೀಪದಲ್ಲಿ ಗಮನ ತಪ್ಪಿಸುವ ದೀಪಗಳು ಅಥವಾ ಶಬ್ದಗಳಿವೆಯೇ?<br>• ಎಲ್ಲಾ ಮಕ್ಕಳು ತರಗತಿಯ ಸಾಮಗ್ರಿ ಮತ್ತು ಇತರ ಸಂಪನ್ಮೂಲಗಳನ್ನು ಸುಲಭವಾಗಿ ಉಪಯೋಗಿಸಬಹುದೇ? | • ತರಗತಿಯ ಸ್ಥಳವು ಎಲ್ಲಾ ಮಕ್ಕಳಿಗೆ ಆರಾಮದಾಯಕವಾಗಿದೆಯೇ?<br>• ಕಪ್ಪು ಹಲಗೆ ಮತ್ತು ಇತರ ಪ್ರದರ್ಶನಗಳು ಸ್ಪಷ್ಟವಾಗಿ ಗೋಚರಿಸುತ್ತವೆಯೇ?<br>• ಪೀಠೋಪಕರಣಗಳ ವ್ಯವಸ್ಥೆಯು ಸಮನ್ವಯ ಮತ್ತು ಕಲಿಕೆಗೆ ಅನುಕೂಲಕರವಾಗಿದೆಯೇ? |
| ಕಲಿಕಾ ಪರಿಸರ (ಸಾಮಾಜಿಕ) | • ಮಕ್ಕಳು ನೀರು ಕುಡಿಯಲು ಅಥವಾ ಶೌಚಾಲಯಕ್ಕೆ ಹೋಗಲು ಹಿಂಜರಿಯುತ್ತಾರೆಯೇ?<br>• ಮಕ್ಕಳು ಪ್ರಶ್ನೆಗಳನ್ನು ಕೇಳಲು ಮತ್ತು ತರಗತಿಯಲ್ಲಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸ್ವತಂತ್ರರೇ? | • ಮಕ್ಕಳು ಪ್ರತಿದಿನ ಶಾಲೆಗೆ ಬರುವುದನ್ನು ಆನಂದಿಸುತ್ತಾರೆಯೇ?<br>• ಅವರು ನಿಮ್ಮೊಂದಿಗೆ ಮತ್ತು ಅವರ ಸ್ನೇಹಿತರೊಂದಿಗೆ ತಮ್ಮ ಶಾಲಾ ದಿನದ ಬಗ್ಗೆ ಮಾತನಾಡಲು ಇಷ್ಟಪಡುತ್ತಾರೆಯೇ? |
| ದೈನಂದಿನ ಕಾರ್ಯಕ್ರಮಗಳ ದಿನಚರಿ | • ಮಕ್ಕಳು ಹೆಚ್ಚು ಹೊತ್ತು ಕುಳಿತುಕೊಳ್ಳಬೇಕೇ? ಮಕ್ಕಳಿಗೆ ಕೆಲಸದಲ್ಲಿ ಆಸಕ್ತಿ ಇಲ್ಲ ಅಥವಾ<br>• ಅವರು ದಣಿದಿದ್ದಾರೆ ಎಂದು ನೀವು ಎಂದಾದರೂ ಭಾವಿಸಿದ್ದೀರಾ? | • ಪ್ರತಿ ಅವಧಿಯ ಕಾಲಾವಧಿಯು ಮಕ್ಕಳಿಗೆ ಸೂಕ್ತವಾಗಿದೆಯೇ?<br>• ಮಕ್ಕಳಿಗೆ ಚಟುವಟಿಕೆಯನ್ನು ಆಯ್ಕೆ ಮಾಡಲು ಅನುಮತಿಸುವ ಕಾಲಾವಕಾಶ ಇದೆಯೇ? ವಿಶ್ರಾಂತಿ ಕೊಠಡಿಗಳು ಮತ್ತು ಊಟಕ್ಕೆ 'ನಿಗದಿತ ವಿರಾಮಗಳು' ಇವೆಯೇ? |
| ವಿಷಯ ವಸ್ತು (ಪಠ್ಯ ಪುಸ್ತಕಗಳು ಮತ್ತು ಇತರ ಬೋಧನ ಸಾಮಗ್ರಿಗಳು) | • ವಿಷಯವು ಮಕ್ಕಳ ದೈನಂದಿನ ಜೀವನ ಮತ್ತು ಅನುಭವಗಳಿಗೆ ಸಂಬಂಧಿಸಿದೆಯೇ?<br>• ಪಠ್ಯದ ವಿಷಯ ಮತ್ತು ವಸ್ತು ಮಕ್ಕಳಿಗೆ ಆಸಕ್ತಿಯನ್ನುಂಟುಮಾಡುತ್ತದೆಯೇ? | • ವಿಷಯವು ಕಲಿಯುವವರ ಸಮಾಜೋ-ಸಾಂಸ್ಕೃತಿಕ ಸಂದರ್ಭಕ್ಕೆ ಸೂಕ್ತವಾಗಿದೆಯೇ?<br>• ವಿಷಯವು ಬಹು-ಸಂವೇದನಾಶೀಲವಾಗಿದೆಯೇ ಮತ್ತು ಅದನ್ನು ವಿವಿಧ ಸ್ವರೂಪಗಳಲ್ಲಿ ಪ್ರಸ್ತುತಪಡಿಸಲಾಗಿದೆಯೇ? |
| ಶಿಕ್ಷಣಶಾಸ್ತ್ರ | • ನಿಮ್ಮ ಬೋಧನಾ ವಿಧಾನವು ಆಟ-ಆಧಾರಿತವಾಗಿದೆಯೇ, ಮಕ್ಕಳಿಗಾಗಿ ಪರಸ್ಪರ ಕ್ರಿಯೆಗೆ ಅವಕಾಶವಿದೆಯೇ?<br>• ಮಕ್ಕಳ ಹಿಂದಿನ ಅನುಭವಗಳನ್ನು ಸೇರಿಸಲಾಗಿದೆಯೇ ಮತ್ತು ಮೌಲ್ಯಯುತವಾಗಿದೆಯೇ? ನೀವು ಮಕ್ಕಳ ಮನೆ ಭಾಷೆಗಳನ್ನು ಸ್ವಾಗತಿಸುತ್ತೀರಾ? | • ಅಭಿವೃದ್ಧಿಯ ಎಲ್ಲಾ ಕ್ಷೇತ್ರಗಳಲ್ಲಿ ಚಟುವಟಿಕೆಗಳು ಸಮತೋಲಿತವಾಗಿದೆಯೇ?<br>• ನೀವು ಕಲಿಯುವವರಿಗೆ ಮಾರ್ಗದರ್ಶನ ನೀಡುವುದು ಹೀಗೆಯೇ? ಆದ್ದರಿಂದ ಅವರು ಉತ್ತಮವಾಗಿ ಕಲಿಯಬಹುದೇ? |
| ಮೌಲ್ಯಮಾಪನ | • ನೀವು ವಿವಿಧ ಸಂದರ್ಭಗಳಲ್ಲಿ ಮಕ್ಕಳನ್ನು ಗಮನಿಸುತ್ತೀರಾ?<br>• ಮಕ್ಕಳಿಗೆ ತಿಳಿದಿರುವುದನ್ನು ವ್ಯಕ್ತಪಡಿಸಲು ವಿಭಿನ್ನ ಮಾರ್ಗಗಳಿವೆಯೇ? | • ಪೇಪರ್-ಪೆನ್ಸಿಲ್ ಪರೀಕ್ಷೆಗಳು/ಪರೀಕ್ಷೆಗಳು ಅಥವಾ ವರ್ಕ್‌ಶೀಟ್‌ಗಳಿಗೆ ಕಡಿಮೆ ಒತ್ತು ಇದೆಯೇ?<br>• ಅಭಿವೃದ್ಧಿಯ ಎಲ್ಲಾ ಕ್ಷೇತ್ರಗಳನ್ನು ಸಮತೋಲಿತ ರೀತಿಯಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆಯೇ? ಮೌಲ್ಯಮಾಪನದಿಂದ ನೀವು ಪಡೆಯುವ ತಿಳಿವಳಿಕೆಯನ್ನು ಆಧರಿಸಿ ನಿಮ್ಮ ಪಾಠವನ್ನು ಯೋಜಿಸುತ್ತೀರಾ? |

> ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ, "ಸಮನ್ವಯ ಶಿಕ್ಷಣವು ಮೂಲಭೂತ ತತ್ವಗಳಲ್ಲಿ ಒಂದಾಗಿದೆ. ಸಮಾಜೋ-ಆರ್ಥಿಕವಾಗಿ ಹಿಂದುಳಿದ ಗುಂಪುಗಳ ವಿದ್ಯಾರ್ಥಿಗಳು ಎದುರಿಸುತ್ತಿರುವ ಶೈಕ್ಷಣಿಕ ಅಂತರವನ್ನು ಗಮನಿಸಿದರೆ ಇದು ಮಹತ್ವದ್ದಾಗಿದೆ."

## ಸಮನ್ವಯದ ಅಭ್ಯಾಸಕ್ಕೆ ಸಣ್ಣ ಹೆಜ್ಜೆಗಳು

ಮನುಷ್ಯರು ಎಲ್ಲಿ ವಾಸಿಸುತ್ತಾರೋ ಅಲ್ಲೆಲ್ಲಾ ಭಾಷೆಗಳು, ಕುಟುಂಬಗಳು, ಸಂಸ್ಕೃತಿಗಳು, ಕಲಿಕೆಯ ಅಗತ್ಯಗಳು ಮತ್ತು ಆಸಕ್ತಿಗಳ ವೈವಿಧ್ಯ ಇರುತ್ತದೆ. ಆದ್ದರಿಂದ ಸಮನ್ವಯದ ಶಿಕ್ಷಣವನ್ನು ಒದಗಿಸುವುದು ಮುಖ್ಯವಾಹಿನಿಯ ಶಾಲೆಗಳ ಜವಾಬ್ದಾರಿಯಾಗಿದೆ. ನಮ್ಮ ಶಾಲೆಗಳು ಎಲ್ಲರನ್ನೂ ಒಳಗೊಳ್ಳದಿದ್ದರೆ ಖಂಡಿತವಾಗಿಯೂ ಸಮಾಜವನ್ನು ಒಳಗೊಳ್ಳಲು ಸಾಧ್ಯವಿಲ್ಲ.

> "ಸಮನ್ವಯದ ಕ್ರಿಯೆ: ಮಕ್ಕಳು ತಮ್ಮ ವೈಯಕ್ತಿಕ ಕಲಿಕೆಯ ವ್ಯತ್ಯಾಸಗಳನ್ನು ಲೆಕ್ಕಿಸದೆ, ಶಾಲೆ ಮತ್ತು ತರಗತಿಯ ಎಲ್ಲಾ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಸಮಾನ ಅವಕಾಶಗಳನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು. ಬುನಾದಿ ಹಂತದ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2023, ರಾಷ್ಟ್ರೀಯ ಶೈಕ್ಷಣಿಕ ಮತ್ತು ಸಂಶೋಧನಾ ತರಬೇತಿ ಮಂಡಳಿ, ನವದೆಹಲಿ

ಪ್ರಮುಖ ನೀತಿ ಬದಲಾವಣೆಗಳು ಮುಖ್ಯವಾಗಿವೆ. ಏಕೆಂದರೆ ಅವು ಮೂಲಸೌಕರ್ಯ, ಪಠ್ಯಕ್ರಮ, ಪಠ್ಯ ಪುಸ್ತಕಗಳು ಮತ್ತು ಇತರ ಸಂಪನ್ಮೂಲ ಸಾಮಗ್ರಿಗಳು, ಬೋಧನಾ ವಿಧಾನಗಳು ಮತ್ತು ಮೌಲ್ಯಮಾಪನದ ಮೇಲೆ ಕೇಂದ್ರೀಕರಿಸುತ್ತವೆ. ಆದರೆ ಸಮನ್ವಯತೆ ಎಂದರೆ ಕೇವಲ ದೊಡ್ಡ ಬದಲಾವಣೆಗಳನ್ನು ಮಾಡುವುದು ಅಥವಾ ನಿಮ್ಮ ಶಾಲೆಗಳಲ್ಲಿ ಆ ಬದಲಾವಣೆಗಳು ಪ್ರಾರಂಭವಾಗುವವರೆಗೆ ಕಾಯುವುದು ಎಂದಲ್ಲ. ಶ್ರೀಮತಿ ಅನಿತಾ ಮತ್ತು ಶ್ರೀಮತಿ ಬಬಿತಾ ಇಬ್ಬರೂ ಸಮನ್ವಯದ ಶಿಕ್ಷಣ, ಅಡ್ಡ-ಅಂಗವೈಕಲ್ಯ ಶಿಕ್ಷಣ ಅಥವಾ ವಿಶೇಷ ಶಿಕ್ಷಣದಲ್ಲಿ ನಿರ್ದಿಷ್ಟವಾಗಿ ತರಬೇತಿ ಪಡೆದಿಲ್ಲ, ಆದರೂ ಅವರು ತಮ್ಮ ಬೋಧನೆಯನ್ನು ತಮ್ಮ ಕಲಿಯುವವರ ಅಗತ್ಯಗಳಿಗೆ ತಕ್ಕಂತೆ ಮಾಡಲು ಪ್ರಯತ್ನಿಸುತ್ತಾರೆ, ತಜ್ಞರಿಂದ ಸಲಹೆ ಪಡೆಯುತ್ತಾರೆ.

ಸಮನ್ವಯದ ಸಿದ್ಧಾಂತವನ್ನು ಬಹು ದೀರ್ಘಕಾಲದಿಂದ ಚರ್ಚಿಸಲಾಗುತ್ತಿದೆ. ಅಂತರ್ಗತ ಕ್ರಿಯಾವಾದವು ಸಾಮಾಜಿಕ ನ್ಯಾಯ, ನಾಗರಿಕ ಹಕ್ಕುಗಳು ಮತ್ತು ದುರ್ಬಲ ಜನರ ಧ್ವನಿಗಾಗಿ ಬೆಳೆಯುತ್ತಿರುವ ಬೇಡಿಕೆಗಳ ಪರಿಣಾಮವಾಗಿದೆ (ಕಿನ್ಸೆಲ್ಲಾ ಮತ್ತು ಹಿರಿಯ, 2008). ಶಿಕ್ಷಕರು, ಶಿಕ್ಷಕ ತರಬೇತುದಾರರು ಮತ್ತು ಪೋಷಕರು ಸಹ ಸಂವೇದನಾಶೀಲರಾಗಿರಬೇಕು ಮತ್ತು ಸಮನ್ವಯ ಶಿಕ್ಷಣಕ್ಕಾಗಿ ಕೆಲಸ ಮಾಡಲು ಅಗತ್ಯ ಅರಿವನ್ನು ಹೊಂದಿರಬೇಕು.

**ಪರಾಮರ್ಶನ**


Government of India. (2009). The Right of Children to Free and Compulsory Education Act or The Right to Education Act, 2009. https://www.education.gov.in/sites/upload_files/mhrd/files/upload_document/rte.pdf

Government of India. (2016). The Rights of Persons with Disabilities Act, 2016. http://www.disabilityaffairs.gov.in/upload/uploadfiles/files/RPWD%20ACT%202016.pdf

Kinsella, W., & Senior, J. (2008). 'Developing inclusive schools: a systemic approach'. *International Journal of Inclusive Education,* 12(5–6), 651–665. https://doi.org/10.1080/13603110802377698


Ministry of Education. (2020). *National Education Policy 2020.* https://www.education.gov.in/sites/upload_files/mhrd/files/NEP_Final_English_0.pdf

NCERT. (2022). *National Curriculum Framework for Foundational Stage 2022.* https://ncert.nic.in/pdf/NCF_for_Foundational_Stage_20_October_2022.pdf





**ಜಯನಾ ಜಗಾನಿ** ಪ್ರಸ್ತುತ ಮೀರತ್‌ನಲ್ಲಿರುವ ಒಂದು ಕುಟುಂಬ ನಡೆಸುವ ಶಾಲೆಯ ಕೆ.ಜಿ ವಿಭಾಗವಾದ 'ಬುನಿಯಾದ್' ನಲ್ಲಿ ಕ್ರೀಡಾ ಆಧಾರಿತ ಪಠ್ಯಕ್ರಮವನ್ನು ಅಳವಡಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿನಿ ಮತ್ತು ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ಅಕಾಡೆಮಿಕ್ ಅಸೋಸಿಯೇಟ್ ಆಗಿ ಕೆಲಸ ಮಾಡಿದ್ದಾರೆ.
ಸಂಪರ್ಕ - jayanajagani@gmail.com


**ರೀಮಾ ಕೌರ್** ಅವರು ಸ್ಕೂಲ್ ಆಫ್ ಕಂಟಿನ್ಯೂಯಿಂಗ್ ಎಜುಕೇಶನ್ ಮತ್ತು ಯೂನಿವರ್ಸಿಟಿ ರಿಸೋರ್ಸ್ ಸೆಂಟರ್, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದಾರೆ. ಅವರು ಆರಂಭಿಕ ಸಾಕ್ಷರತೆ ಮತ್ತು ಆರಂಭಿಕ ಬಾಲ್ಯ ಶಿಕ್ಷಣದ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದಾರೆ.
ಸಂಪರ್ಕ - rima.kaur@azimpremjifoundation.org


ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಮಕ್ಕಳ ಶಿಕ್ಷಣದ ಮೇಲೆ ಸಾಮಾಜಿಕ-ಭಾವನಾತ್ಮಕ ಬೆಂಬಲದ ಪ್ರಭಾವ

ದೀಪಿಕಾ ಝಾಲಾ

ಬೇರೆ ಬೇರೆ ಹಿನ್ನೆಲೆಯ ಮಕ್ಕಳು ತರಗತಿಯಲ್ಲಿ ಒಟ್ಟಿಗೆ ಅಧ್ಯಯನ ಮಾಡುವಾಗ ಶಿಕ್ಷಕರ ಪಾತ್ರವು ಬಹಳ ಮುಖ್ಯವಾಗುತ್ತದೆ. ಏಕೆಂದರೆ ಅವರು ಪರಸ್ಪರ ತಿಳುವಳಿಕೆ, ಕರುಣೆ ಮತ್ತು ಸಹಾನುಭೂತಿಯನ್ನು ಬೆಳೆಸಿಕೊಳ್ಳಲು ಮತ್ತು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಗೌರವಿಸಲು ಮಕ್ಕಳಿಗೆ ಕಲಿಸಬೇಕು.



ಚಿತ್ರ 1: ತಮ್ಮ ಚಿತ್ರಗಳು ಮತ್ತು ಕವಿತೆಗಳನ್ನು ತರಗತಿಯಲ್ಲಿ ಪ್ರದರ್ಶಿಸುತ್ತಿರುವ ಮಕ್ಕಳು

ಅಜೀಂ ಪ್ರೇಮ್‌ಜಿ ಶಾಲೆ, ಮಂಡಾವಾ, ಸಿರೋಹಿ ರಾಜಸ್ಥಾನದಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತ ಮಕ್ಕಳ ಶಿಕ್ಷಣದಲ್ಲಿ ಸಾಮಾಜಿಕ–ಭಾವನಾತ್ಮಕ ಸವಾಲುಗಳ ಪ್ರಭಾವದ ಬಗ್ಗೆ ನನ್ನ ತಿಳುವಳಿಕೆಯನ್ನು ಆಳಗೊಳಿಸಿಕೊಂಡಿದ್ದೇನೆ. ಭಾರತದ ಅರ್ಥವ್ಯವಸ್ಥೆ ವೇಗವಾಗಿ ಬೆಳೆಯುತ್ತಿದೆ. ಆದರೆ ಇಲ್ಲಿ ಹಿಂದುಳಿದ ಮಕ್ಕಳ ಜೀವನ ಪರಿಸ್ಥಿತಿ ತುಂಬಾ ಕಳಪೆಯಾಗಿರುವುದನ್ನು ನಾನು ನೋಡಿದ್ದೇನೆ. ಈ ಮಕ್ಕಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕುಟುಂಬದ ಆರ್ಥಿಕ ಪರಿಸ್ಥಿತಿಗಳಿಂದಾಗಿ ನಿಂದನೆ, ಲಿಂಗ ತಾರತಮ್ಯ, ಅಪೌಷ್ಟಿಕತೆ, ಬಾಲ ಕಾರ್ಮಿಕತೆ, ರೋಗಗಳು, ವಿಘಟಿತ ಕುಟುಂಬಗಳು, ಸಾಮಾಜಿಕ ಒತ್ತಡ ಇತ್ಯಾದಿ. ಈ ತೊಂದರೆಗಳು ಎಲ್ಲ ಮಕ್ಕಳು ಸಮಾನವಾಗಿ ಬೆಳೆಯಲು ಮತ್ತು ಪ್ರಗತಿ ಹೊಂದಬೇಕಾದ ಅವಕಾಶಗಳಿಂದ ವಂಚಿತರಾಗುವಂತೆ ಮಾಡುತ್ತವೆ. ಈ ಲೇಖನದಲ್ಲಿ ಸಮನ್ವಯ ಶಿಕ್ಷಣದ ತರಗತಿಯಲ್ಲಿ ಕಲಿಸುವ ನನ್ನ ಅನುಭವಗಳನ್ನು ನಾನು ಹಂಚಿಕೊಳ್ಳುತ್ತೇನೆ. ಈ ವಿವರಣೆಯಲ್ಲಿ, ನಮ್ಮ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿ ಇಂದ್ರಳ ಕಲಿಕೆಯ ಸಂದರ್ಭಗಳಿಗೆ ವಿಶೇಷ ಒತ್ತು ನೀಡಲಾಗಿದೆ.


## ಶಿಕ್ಷಕನ ಪಾತ್ರ

ಸಮನ್ವಯ ಶಿಕ್ಷಣದ ತರಗತಿಯಲ್ಲಿ ಶಿಕ್ಷಕರ ಪಾತ್ರವು ಪ್ರಮುಖ ಮತ್ತು ಸವಾಲಿನದು. ಶಿಕ್ಷಕರು ವಿಷಯದ ಜ್ಞಾನವನ್ನು ನೀಡುವುದಲ್ಲದೆ ಅವರು ವಿದ್ಯಾರ್ಥಿಗಳ ಭಾವನಾತ್ಮಕ ಯೋಗಕ್ಷೇಮದ ಬಗ್ಗೆ ಗಮನ ಹರಿಸುತ್ತಾರೆ. ಇದು ಶೈಕ್ಷಣಿಕ ಕಲಿಕೆಯ ಪ್ರಮುಖ ಅಡಿಪಾಯವೆಂದು ಪರಿಗಣಿಸಲಾಗಿದೆ. ಸಾಮಾನ್ಯವಾಗಿ ವಿವಿಧ ಸಾಮಾಜಿಕ ಆರ್ಥಿಕ ಹಿನ್ನೆಲೆಯ ಮಕ್ಕಳು ತರಗತಿಗಳಲ್ಲಿ ಒಟ್ಟಿಗೆ ಅಧ್ಯಯನ ಮಾಡುತ್ತಾರೆ. ಹಾಗಾಗಿ ಶಿಕ್ಷಕರು ಮಕ್ಕಳ ಶೈಕ್ಷಣಿಕ ಸಾಧನೆಗೆ ಅಡ್ಡಿಯಾಗುವ ಅವರ ಭಾವನಾತ್ಮಕ ಮತ್ತು ಸಾಮಾಜಿಕ ಸವಾಲುಗಳಿಗೆ ಸಂವೇದನಾಶೀಲರಾಗಿರಬೇಕು.

ವಿಭಿನ್ನ ಸಾಮರ್ಥ್ಯದ ಮಕ್ಕಳನ್ನು ಒಂದೇ ತರಗತಿಯಲ್ಲಿ ಇರಿಸುವುದನ್ನು ಸಮನ್ವಯ ಶಿಕ್ಷಣ ಎಂದು ಕರೆಯಲಾಗುವುದಿಲ್ಲ. ಸಮನ್ವಯತೆ ಎಂದರೆ ತರಗತಿಯಲ್ಲಿ ಪ್ರತಿ ಮಗುವೂ ಗೌರವಾನ್ವಿತ ಮತ್ತು ಪರಿಣಾಮಕಾರಿ ಎಂಬ ವಾತಾವರಣ ಸೃಷ್ಟಿಸುವುದು. ಮತ್ತು ಅದರ ಕಲಿಕೆಯ ಎಲ್ಲ ಅಗತ್ಯಗಳನ್ನು ಪೂರೈಸುವುದು. ಇದಕ್ಕಾಗಿ ನಾವು ಪ್ರತಿ ಮಗುವಿನ ಸಾಮಾಜಿಕ ಪರಿಸರ, ಭಾವನಾತ್ಮಕ ಸ್ಥಿತಿ ಮತ್ತು ಹಿನ್ನೆಲೆಯ ಬಗ್ಗೆ ಆಳವಾದ ತಿಳುವಳಿಕೆ ಹೊಂದಿರಬೇಕು. ಸಮನ್ವಯಿತ ತರಗತಿಯಲ್ಲಿ ಕೆಲಸ ಮಾಡುವುದರಿಂದ ನನ್ನ ಅಭಿಪ್ರಾಯವೆಂದರೆ ಅವರು ಯಾವ ರೀತಿಯ ಕುಟುಂಬದಿಂದ ಬಂದಿದ್ದಾರೆ, ಅವರ ಅಗತ್ಯ ಮತ್ತು ಸಮಸ್ಯೆಗಳೇನು, ಮನೆಯಲ್ಲಿ ಅವರಿಗೆ ಯಾವ ರೀತಿಯ ಬೆಂಬಲ ಸಿಗುತ್ತದೆ, ಅವರ ಸಾಮರ್ಥ್ಯಗಳೇನು ಇದನ್ನೆಲ್ಲ ತಿಳಿಯದೆ ಕೇವಲ ಶೈಕ್ಷಣಿಕ ಕಲಿಕೆಯನ್ನಷ್ಟೇ ಒದಗಿಸುವುದು ಪ್ರಯೋಜನಕಾರಿಯಲ್ಲ.

ಪ್ರತಿಕೂಲ ಸನ್ನಿವೇಶದ ಹಿನ್ನೆಲೆಯ ಅನೇಕ ಮಕ್ಕಳು ಹಲವಾರು ವೈಯಕ್ತಿಕ ಸವಾಲುಗಳನ್ನು ಸಹ ಎದುರಿಸುತ್ತಾರೆ. ಅವರ ಭಾವನಾತ್ಮಕ ಸಮಸ್ಯೆಗಳು ಹಲವು ರೂಪದಲ್ಲಿ ಪ್ರಕಟವಾಗಬಹುದು. ಸ್ವಾಭಿಮಾನದ ಕೊರತೆ, ಆತಂಕ, ಸಾಮಾಜಿಕ ಸಂವಹನಗಳಿಂದ ದೂರವಿರುವುದು, ಕಲಿಯಲು ಪ್ರೇರಣೆಯ ಕೊರತೆ ಇತ್ಯಾದಿ.

8ನೇ ತರಗತಿಯ ಇಂದ್ರ ಕೂಡ ಈ ಬಗೆಯ ಸವಾಲುಗಳನ್ನು ಎದುರಿಸಬೇಕಾಗಿದೆ. ಆಕೆಯ ಕುಟುಂಬವು ಗೇಣಿ ವ್ಯವಸಾಯದಲ್ಲಿ ತೊಡಗಿದ್ದು ಕೆಲವೊಮ್ಮೆ ಆಕೆಯೂ ವಿಶೇಷವಾಗಿ ಸುಗ್ಗಿಯ ಸಮಯದಲ್ಲಿ ತನ್ನ ಕುಟುಂಬದ ಜೊತೆ ಹೊಲದಲ್ಲಿ ಕೆಲಸ ಮಾಡುತ್ತಾಳೆ. ಅವಳು ಏಳನೇ ತರಗತಿಯಲ್ಲಿದ್ದಾಗ ಮೂಲ ಅಕ್ಷರಗಳನ್ನು ಗುರುತಿಸಲು ಕಷ್ಟವಾಯಿತು. ಕಡಿಮೆ ಬಳಕೆಯಾಗುವ ಅಕ್ಷರಗಳ ಬಗ್ಗೆ ಅವಳು ಗೊಂದಲಕ್ಕೊಳಗಾಗಿದ್ದಳು. ತನ್ನ ಏಕಾಂತ ಪ್ರವೃತ್ತಿ ಮತ್ತು ಅಂತರ್ಮುಖಿ ಸ್ವಭಾವದಿಂದ ಆಕೆ ತನ್ನ ಗೆಳತಿಯರೊಂದಿಗೆ ಮಾತನಾಡಲು ಹಿಂಜರಿಯುತ್ತಿದ್ದಳು. ಈ ಮಕ್ಕಳಲ್ಲಿ ಅನೇಕರು ಆಕೆಗಿಂತ ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ ಹೊಂದಿದ್ದರು.


Q.5 Write 6 sentences about the given picture, using the words given in the box.

Girl, Boy, Tree, cycle, play, cricket, Ball, ground, road, fountain, children

Q.6 Rearrange the Sentence.


a. She / is /beautiful/ girl/ a She is beautifull a girl

b. teacher/she/is/a teacher she a is

c. She/a/girl/is She a is girl

d. tea/I/like tea like ke

ಚಿತ್ರ 2: ಇಂದ್ರಳ ಕಾರ್ಯನಿರ್ವಹಣೆಯ ಒಂದು ಮಾದರಿ (ಆಗಸ್ಟ್ 2023)


Date = 30/8/24 Name = Indra Class = 8th

My self

My Name is Indra. My shools Name is AJim Parmje shools. I study in class 8th. My Fathr Name is runes. My Fathr is Farmr. My mathr Name is Vathri. My mathr is hom meca. My Fathr is daevr. my 5 siestr Raka, goodeeya, kirun, and Anitha. my brothr Name is Athool. my femuli mebrs is 8. my Ferst Tichr is Deepika mem, Jaygrathi mem, Somiya mem, Anil sur, moeth surma sur, Smoeth yathu sur. my Frend ars meni but my best Frehd is shilpa, Deepika and ......ga. my Fevrt Ford is mago. my Fevrt subet is hinthi, eglis, and ganith. my Fevrt but is Pecop. shilpa is my helpig. Deepicka mem is my best tchr. my sestr and mi Pleg in Farmig.

ಚಿತ್ರ 3: ಇಂದ್ರಳ ಕಾರ್ಯನಿರ್ವಹಣೆಯ ಇನ್ನೊಂದು ಮಾದರಿ (ಆಗಸ್ಟ್ 2024)

## ನಂಬಿಕೆಯನ್ನು ಗಳಿಸಿಕೊಳ್ಳುವುದು.

ಇಂದ್ರ ಮತ್ತು ಆಕೆಯಂತಹ ಅನೇಕ ಇತರ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಿದ್ದರಿಂದ ನಾನು ಕಲಿತದ್ದೇನೆಂದರೆ , ಅವರು ಚೆನ್ನಾಗಿ ಕಲಿಯಬೇಕೆಂದು ನಾವು ಬಯಸುತ್ತೇವೆಯಾದರೆ ನಾವು ಅವರೊಂದಿಗೆ ಉತ್ತಮ ಸಂಪರ್ಕ ಸಾಧಿಸಬೇಕು ಮತ್ತು ಬಾಂಧವ್ಯ ಬೆಳೆಸಿಕೊಳ್ಳಬೇಕು. ನನ್ನ ಶಾಲೆಗೆ ಹೋಗುವ ದಾರಿಯಲ್ಲಿ ಇಂದ್ರಳ ಮನೆ ಇತ್ತು. ನಾನು ಅವಳ ಕ್ಲಾಸ್ ಟೀಚರ್ ಕೂಡ ಆಗಿದ್ದರಿಂದ ಆಕೆಯ ಮನೆಗೆ ಆಗಾಗ ಹೋಗುತ್ತಿದ್ದೆ. ನಾನು ಅವರ ಸುತ್ತಮುತ್ತಲಿನ ಕೃಷಿ, ದನಗಳು ಮತ್ತು ದಿನನಿತ್ಯದ ಕೆಲಸ ಇತ್ಯಾದಿಗಳ ಬಗ್ಗೆ ಅನೌಪಚಾರಿಕವಾಗಿ ಮಾತನಾಡಿದ್ದೇನೆ.  ಈ ಕಾರಣದಿಂದಾಗಿ ಆಕೆ ನನ್ನೊಂದಿಗೆ ತೆರೆದ ಮನಸ್ಸಿನಿಂದ ಮಾತನಾಡಲು ಪ್ರಾರಂಭಿಸಿದಳು ಮತ್ತು ವೈಯಕ್ತಿಕ ಮಟ್ಟದಲ್ಲಿ ಅವಳೊಂದಿಗೆ ಸಂಪರ್ಕ ಸಾಧಿಸಲು ಅವಕಾಶ ಸಿಕ್ಕಿತು. ಆಕೆಯ ಮನೆಗೆ ಭೇಟಿ ನೀಡಿದ ನಂತರವೇ ಅವರ ಕುಟುಂಬವು ಸಾಕಷ್ಟು ಆರ್ಥಿಕ ತೊಂದರೆಗಳನ್ನು ಮತ್ತು ದೈನಂದಿನ ಜೀವನದ ಸವಾಲುಗಳನ್ನು ಎದುರಿಸುವುದನ್ನು ನೋಡಿದೆ. ಕ್ರಮೇಣ ಇಂದ್ರ ನನ್ನೊಂದಿಗೆ ಆರಾಮದಾಯಕವಾಗಿ ಮಾತನಾಡತೊಡಗಿದಳು ಹಾಗೂ ಶಾಲೆ ಮತ್ತು ಸಹಪಾಠಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದಳು. ಇದು ಇಂಗ್ಲೀಷ್ ಭಾಷೆಯ ಬುನಾದಿ ವಿಷಯಗಳಿಂದ ಪ್ರಾರಂಭಿಸಿ ಅವರ ಅಗತ್ಯಗಳಿಗೆ ಅನುಗುಣವಾಗಿ ನನ್ನ ಬೋಧನಾ ಯೋಜನೆಯನ್ನು ಪ್ರಾರಂಭಿಸಲು ನನಗೆ ಸಹಾಯ ಮಾಡಿತು. ನಾವು ಅಕ್ಷರ ಮತ್ತು ಧ್ವನಿ ಗುರುತಿಸುವಿಕೆಯೊಂದಿಗೆ ಪ್ರಾರಂಭಿಸಿದೆವು. ಇದರಿಂದ ಕ್ರಮೇಣ ಆಕೆಯ ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಹೆಚ್ಚತೊಡಗಿತು.

## ಗೆಳೆಯರ ಬೆಂಬಲ ಮತ್ತು ಪ್ರೋತ್ಸಾಹ

ಇಡೀ ತರಗತಿಯಲ್ಲಿ ಬೇರೆ ಬೇರೆ ಸಾಮರ್ಥ್ಯವುಳ್ಳ ಮಕ್ಕಳನ್ನು ನಾನು ಬೇರೆ ಬೇರೆ ಚಟುವಟಿಕೆ ಮತ್ತು ಸ್ನೇಹಿತರೊಂದಿಗೆ ಕಲಿಯಲಿ ಎಂಬ ಕಾರಣಕ್ಕೆ ಮೂರು ಗುಂಪುಗಳಾಗಿ ಮಾಡಿದೆ. ಪ್ರತಿಯೊಂದು ಗುಂಪು ಗ್ರಾಮೀಣ ಮತ್ತು ನಗರ ಹಿನ್ನೆಲೆಯಿಂದ, ಲಿಂಗ ಭಿನ್ನತೆ ಮತ್ತು ವಿಭಿನ್ನ ಸಾಮಾಜಿಕ ಹಿನ್ನೆಲೆಯಿಂದ ಬಂದ ಮಕ್ಕಳನ್ನು ಹೊಂದಿತ್ತು. ಇಂದ್ರಳಿಗೆ ಶಾಹಿಸ್ತಾ ಮತ್ತು ಶೌರ್ಯರಿಂದ ಸಂಪೂರ್ಣ ಬೆಂಬಲ ಸಿಕ್ಕಿತು. ಇಬ್ಬರೂ ಎಲ್ 3 (ಮೂರನೇ ಹಂತ) ವಿದ್ಯಾರ್ಥಿಗಳು ಮತ್ತು ನಗರ ಪರಿಸರದಿಂದ ಬಂದವರು.

ಇವರಿಬ್ಬರೂ ಆಕೆಗೆ ಓದಲು-ಬರೆಯಲು ನೆರವಾದರು. ಇದು ಇಂಗ್ಲಿಷ್ ತರಗತಿ ಮುಗಿದ ನಂತರವೂ ಮುಂದುವರಿಯಿತು.

ಕಲಿಕೆಯ ಪ್ರಕ್ರಿಯೆಯಲ್ಲಿ ಭಾವನಾತ್ಮಕ ಬೆಂಬಲ ಎಷ್ಟು ಮುಖ್ಯ ಎಂಬುದನ್ನು ಇಂದ್ರಳ ಉದಾಹರಣೆ ತೋರಿಸುತ್ತದೆ. ಮಕ್ಕಳು ಪ್ರೀತಿ ಮತ್ತು ಕಾಳಜಿಯನ್ನು ಅನುಭವಿಸಿದಾಗ ಅವರು ತಮ್ಮ ಶೈಕ್ಷಣಿಕ ಸಾಧನೆ ಅಥವಾ ಇತರ ಅಂಶಗಳನ್ನು ಲೆಕ್ಕಿಸದೆ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಹೆಚ್ಚು ಸಿದ್ಧರಿರುತ್ತಾರೆ. ಒಂದು ಬಾರಿಗೆ ಒಂದೇ ಪದ ಅಥವಾ ಒಂದೇ ವಾಕ್ಯವಾದರೂ ಸರಿ, ನಾನು ಇಂದ್ರಳನ್ನು ತರಗತಿಯಲ್ಲಿ ಮಾತನಾಡಲು ಪ್ರೋತ್ಸಾಹಿಸಿದೆ. ಇದು ಆಕೆಯ ಆತ್ಮ ವಿಶ್ವಾಸವನ್ನು ಹೆಚ್ಚಿಸಿತು. ತರಗತಿಯ ಚರ್ಚೆಗಳಲ್ಲಿ ಉತ್ತರಿಸಲು ಅಥವಾ ಭಾಗವಹಿಸಲು ಅವಳು ಕೈ ಎತ್ತಿದಾಗ ಇತರ ಎಲ್ಲ ಮಕ್ಕಳು ಅವಳನ್ನು ಪ್ರೋತ್ಸಾಹಿಸುತ್ತಿದ್ದರು. ಇಂದ್ರಳೇ ಉತ್ತರಿಸಲು ಮುಂದೆ ಬರಬೇಕೆಂದು ಅವರು ಬಯಸುತ್ತಿದ್ದರು. ಅಷ್ಟೇ ಅಲ್ಲ ಚಪ್ಪಾಳೆ ತಟ್ಟುವ ಮೂಲಕ ಆಕೆಯ ಪ್ರಯತ್ನವನ್ನು ಶ್ಲಾಘಿಸುತ್ತಾರೆ. ತರಗತಿಯಲ್ಲಿ ಆಕೆಯನ್ನು ಹೆಸರಿನಿಂದ ಕರೆಯುವುದು, ಉದಾಹರಣೆಗಳನ್ನು ನೀಡುವುದು, ಕೆಲವು ಪರಿಕಲ್ಪನೆಗಳನ್ನು ಕಲಿಸುವಾಗ ಮೂಲಭೂತ ಪ್ರಶ್ನೆಗಳನ್ನು ಕೇಳುವುದು ಮುಂತಾದ ಸಣ್ಣ ಪ್ರಯತ್ನಗಳು ಆಕೆಯ ಸ್ವಾಭಿಮಾನ ಹೆಚ್ಚಿಸಲು ಸಹಾಯ ಮಾಡಿತು. ಎಷ್ಟೇ ಚಿಕ್ಕದಾದರೂ ಯಾವುದೇ ಕೆಲಸವನ್ನು ಪೂರ್ಣಗೊಳಿಸಿದ ನಂತರ ಆಕೆಯಲ್ಲಿ ಮೂಡುವ ಆತ್ಮವಿಶ್ವಾಸ ಮತ್ತು ಸಾಧನೆಯ ಭಾವನೆ ಅವಳ ಶೈಕ್ಷಣಿಕ ಬೆಳವಣಿಗೆಗೆ ಬಹಳ ಮುಖ್ಯವಾಗಿತ್ತು.

## ತರಗತಿಯ ಕಾರ್ಯನೀತಿಗಳು

ಶಿಕ್ಷಕರಾಗಿ, ನಾವು ಯಾವಾಗಲೂ ನಮ್ಮ ಪ್ರೇರಣೆಯ ಮಟ್ಟವನ್ನು ಹೆಚ್ಚು ಇಟ್ಟುಕೊಳ್ಳಬೇಕು. ಕಲಿಕೆಯಲ್ಲಿ ತೊಂದರೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ನಾವು ಸಹಾಯ ಮಾಡುವಾಗ ಇದು ಮುಖ್ಯವಾಗಿದೆ. ಸಕಾರಾತ್ಮಕ ಬದಲಾವಣೆಯನ್ನು ತರುವ ಪ್ರಕ್ರಿಯೆಯಲ್ಲಿ , ನಾವು ನಮ್ಮ ಸ್ವಂತ ಪ್ರಯತ್ನಗಳಲ್ಲಿ ನಂಬಿಕೆಯನ್ನು ಹೊಂದಿರುವುದು ಮುಖ್ಯವಾಗಿದೆ. ಒಬ್ಬ ಶಿಕ್ಷಕಿಯಾಗಿ ನನ್ನ ಬೋಧನಾ ವಿಧಾನಗಳು ಎಲ್ಲಾ ವಿದ್ಯಾರ್ಥಿಗಳಿಗೆ ಅದರಲ್ಲೂ ವಿಶೇಷವಾಗಿ ಸವಾಲಾಗಿರುವ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಕಲಿಯಲು ಸಹಾಯ ಮಾಡುತ್ತದೆ ಎಂದು ಖಚಿತ ಪಡಿಸಿಕೊಳ್ಳಲು ನಾನು ಪ್ರಯತ್ನಿಸುತ್ತೇನೆ. ಇಲ್ಲಿ ನಾನು ಪರಿಗಣಿಸಿ ಸಹಾಯಕವೆನ್ನಿಸಿದ ಕೆಲವು ವಿಧಾನಗಳನ್ನು ನೀಡಿದ್ದೇನೆ.

ಆರೋಗ್ಯಕರ ವಾತಾವರಣ ನಿರ್ಮಾಣ- ಸ್ವಾಸ್ಥ್ಯ ಮತ್ತು ಭಾವನಾತ್ಮಕವಾಗಿ ಸುರಕ್ಷಿತವೆನ್ನಿಸುವ ವಾತಾವರಣವು ವಿದ್ಯಾರ್ಥಿ-ಗಳಿಗೆ ಸೋಲು ಅಥವಾ ಟೀಕೆಯಿಂದ ಹೆದರದಂತೆ ಅವರಿಗೆ ಕಲಿಯುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ.

ನಿರ್ದಿಷ್ಟ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದು – ಇಂದ್ರಳ ವಿಷಯದಲ್ಲಿ ಭಾಷಾ ಕಲಿಕೆಯ ಬುನಾದಿ ಅಂಶಗಳಿಂದ ಪ್ರಾರಂಭಿಸುವುದು ಮುಖ್ಯವಾಗಿತ್ತು. ಆಕೆಯ ಆತ್ಮ ವಿಶ್ವಾಸ ತುಸು ತುಸು ಹೆಚ್ಚಿದಂತೆಲ್ಲ ಕಠಿಣತೆಯ ಮಟ್ಟವನ್ನು ಹೆಚ್ಚಿಸುವುದಕ್ಕೆ ಒತ್ತು ನೀಡಲಾಗಿತ್ತು.

ಬಲವರ್ಧನೆ- ಇಂದ್ರಳ ಸಹಪಾಠಿಗಳು ಮತ್ತು ಶಿಕ್ಷಕರು, ಆಕೆಯ ಪ್ರತಿ ಸಾಧನೆಯನ್ನು, ಅದೆಷ್ಟೇ ಚಿಕ್ಕದಾಗಿದ್ದರೂ ಸಂಭ್ರಮಿಸುತ್ತಿದ್ದರು. ಪ್ರತಿಯೊಂದು ಸಣ್ಣ ಪ್ರಯತ್ನವನ್ನು ಶ್ಲಾಘಿಸುವುದು ಮತ್ತು ಗುರುತಿಸುವುದು ಮಗುವನ್ನು ಪ್ರೇರೇಪಿಸುತ್ತದೆ.

ಸಹಪಾಠಿಗಳ ಬೆಂಬಲ- ಈಗ ಇಂದ್ರ ಮಾತನಾಡಲು ಹಿಂಜರಿಯುವುದಿಲ್ಲ. ಆಕೆ ತನ್ನ ಸಹಪಾಠಿಗಳೊಂದಿಗೆ ಸಂವಹನ

> ಯಾವಾಗ ನಾವು ಸಮನ್ವಯದ ತರಗತಿಗಳನ್ನು ರೂಪಿಸಿ ಪ್ರತಿ ಮಗುವಿನ ವಿವಿಧತೆ ಮತ್ತು ವಿಶಿಷ್ಟತೆಯನ್ನು ಸಂಭ್ರಮಾಚರಣೆಯೊಂದಿಗೆ ಗೌರವಿಸುತ್ತೇವೋ ಆಗ ಎಲ್ಲಾ ಮಕ್ಕಳು ಸಮನ್ವಯಗೊಳ್ಳುವಂತಹ ಕಲಿಕೆಯ ಪರಿಸರವನ್ನು ಅವರ ಯಾವುದೇ ಕೌಟುಂಬಿಕ ಹಿನ್ನೆಲೆಯನ್ನು ಪರಿಗಣಿಸದೆ ರೂಪಿಸುವುದು ನಮ್ಮ ಗುರುತರವಾದ ಜವಬ್ದಾರಿಯಾಗುತ್ತದೆ.

ನಡೆಸಲು ಇಷ್ಟ ಪಡುತ್ತಾಳೆ. ದೊಡ್ಡ ಪದವನ್ನು ಓದಲು ಅಥವಾ ವಾಕ್ಯ ರಚಿಸಲು ಆಕೆಗೆ ಸಹಾಯ ಬೇಕಾದರೆ ತನ್ನ ಸಹಪಾಠಿಗಳನ್ನು ಕೇಳುತ್ತಾಳೆ. ಗೆಳೆಯರೊಂದಿಗೆ ಕಲಿಯುವುದು ಸಾಮಾಜಿಕ ಕೌಶಲಗಳನ್ನು ಅಭಿವೃದ್ಧಿ ಪಡಿಸುವುದಲ್ಲದೆ ಕಲಿಕೆಗೆ ಸಹಕಾರಿಯಾಗುತ್ತದೆ.

ಪೋಷಕರೊಂದಿಗೆ ಸಂವಹನ– ಪೋಷಕರೊಂದಿಗಿನ ಸಂವಹನವು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಬಹಳಷ್ಟು ಸಹಾಯ ಮಾಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಿಯುವುದರ ಜೊತೆಗೆ ಕಲಿಕೆಯಲ್ಲಿ ಈಗ ಇರುವುದಕ್ಕಿಂದ ಒಂದು ಹೆಜ್ಜೆ ಮುಂದೆ ಹೋಗುವಂತೆ ತರಗತಿಯನ್ನು ನಡೆಸುವುದು ಶಿಕ್ಷಕರಿಗೆ ಅತ್ಯಂತ ಸವಾಲಿನ ಸಂಗತಿಯಾಗಿದೆ.

ಇಂದ್ರಳಂತಹ ವಿದ್ಯಾರ್ಥಿಗಳು ಕಲಿತಾಗ ಶಿಕ್ಷಕರಿಗೆ ಬಹಳ ಖುಷಿಯಾಗುತ್ತದೆ. ತಮ್ಮ ವಿದ್ಯಾರ್ಥಿಗಳು ವರ್ಣಮಾಲೆಯೊಂದಿಗೆ ಗುದ್ದಾಡುತ್ತ, ಸಣ್ಣ ಸಣ್ಣ ಅಂಶಗಳನ್ನು ಓದುತ್ತಾ, ಮತ್ತು ತರಗತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗ ಶಿಕ್ಷಕರಿಗಂತೂ ಸಂತೋಷವಾಗಿಯೇ ಆಗುತ್ತದೆ. ಮಾತ್ರವಲ್ಲದೆ ಎಲ್ಲ ವಿದ್ಯಾರ್ಥಿಗಳು ಕಲಿಯಬಹುದೆಂಬ ಭಾವನೆ ಮೂಡುತ್ತದೆ. ಸಮನ್ವಯದ ತರಗತಿಗಳನ್ನು ನಡೆಸುವ ಮೂಲಕ ನಾವು ಪ್ರತಿ ಮಗುವಿನ ವೈವಿಧ್ಯ ಮತ್ತು ಅನ್ಯೋನ್ಯತೆಯನ್ನು ಅನುಭವಿಸುತ್ತೇವೆ. ಅವರ ಹಿನ್ನೆಲೆಯನ್ನು ಲೆಕ್ಕಿಸದೆ ಎಲ್ಲಾ ಮಕ್ಕಳು ಕಲಿಯಬಹುದಾದ ವಾತಾವರಣ ನಿರ್ಮಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಆದ್ದರಿಂದ ನಿರ್ದಿಷ್ಟ ಸವಾಲುಗಳನ್ನು ಅರ್ಥ ಮಾಡಿಕೊಳ್ಳಲು, ಭಾವನಾತ್ಮಕ ಬೆಂಬಲ ಒದಗಿಸಲು, ವಿಶ್ವಾಸವನ್ನು ಹುಟ್ಟಿಸಲು ಅಚಲವಾದ ಬದ್ದತೆಯ ಅಗತ್ಯವಿದೆ. ಈ ಬದ್ಧತೆಯು ಮಕ್ಕಳ ಕಲಿಕೆಯನ್ನು ಬೆಂಬಲಿಸುವುದಲ್ಲದೆ ಅವರ ಯೋಗಕ್ಷೇಮಕ್ಕೂ ಕೊಡುಗೆ ನೀಡುತ್ತದೆ.



**ದೀಪಿಕಾ ಝಾಲಾ** ರಾಜಸ್ಥಾನದ ಸಿರೋಹಿಯಲ್ಲಿರುವ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಶಿಕ್ಷಕಿ. ಆಕೆ ಹನ್ನೆರಡು ವರ್ಷಗಳ ಬೋಧನೆ ಮತ್ತು ಸಂಶೋಧನಾ ಅನುಭವವನ್ನು ಹೊಂದಿದ್ದಾರೆ. ಆಕೆ ರಾಜಸ್ಥಾನದ ಅನೇಕ ಶಾಲಾ ಕಾಲೇಜುಗಳಲ್ಲಿ ಕಲಿಸಿದ್ದಾರೆ.
ಸಂಪರ್ಕ: deepika.jhala@gmail.com

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಕಲಿಯಲು ಎಲ್ಲರಿಗೂ ಸಮಾನ ಹಕ್ಕಿದೆ

**ವಿಷ್ಣು ಗೋಪಾಲ್**

ಯಾವುದೇ ಕ್ರೀಡೆ, ಯಾವುದೇ ಕೆಲಸ, ಯಾವುದೇ ಪ್ರಕ್ರಿಯೆಯನ್ನು ಗುರುತು ಅಥವಾ ವ್ಯಕ್ತಿತ್ವಗಳ ಆಧಾರದ ಮೇಲೆ ವಿಂಗಡಿಸುವುದು ಅನ್ಯಾಯ. ಇದನ್ನು ತಿಳಿದಿದ್ದರೂ ಶಾಲೆಗಳಲ್ಲಿ ಇಂತಹ ಉದಾಹರಣೆಗಳು ಹೆಚ್ಚಾಗಿ ಕಂಡುಬರುತ್ತವೆ. ಇದು ಸಮನ್ವಯದ ಶಿಕ್ಷಣಕ್ಕೆ ದೊಡ್ಡ ಸಮಸ್ಯೆಯಾಗಿದೆ. ಇದರ ಪರಿಣಾಮ ಮಕ್ಕಳ ಕಲಿಕೆಯ ಮೇಲೂ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹರಿಸಲು ಪ್ರಯತ್ನಗಳನ್ನು ಮಾಡುವುದು ಸಮನ್ವಯತೆಯ ಕಡೆಗೆ ಮೊದಲ ಹೆಜ್ಜೆಯಾಗಿದೆ.

ಆಟ, ಇದನ್ನು ಸಾಮಾನ್ಯವಾಗಿ ಹುಡುಗರ ವಿಷಯವೆಂದು ಪರಿಗಣಿಸಲಾಗುತ್ತದೆ. ಹುಡುಗಿಯರು ಹುಡುಗರೊಂದಿಗೆ ಆಟ–ವಾಡುವುದಿಲ್ಲ, ಹಾಗೂ ಅವರಿಗೆ ಆಟವಾಡಲು ಬಿಡುವುದಿಲ್ಲ ಕೂಡ. ಹಾಗೆಯೇ ಅಡುಗೆ ಮಾಡುವುದು, ಊಟ ಬಡಿಸುವುದು, ಪಾತ್ರೆಗಳನ್ನು ಸ್ವಚ್ಛಗೊಳಿಸುವುದು ಇತ್ಯಾದಿಗಳನ್ನು ಹೆಣ್ಣುಮಕ್ಕಳ ಕೆಲಸವೆಂದು ಪರಿಗಣಿಸಲಾಗಿದೆ. ಹುಡುಗರು ಇಂತಹ ಕೆಲಸಗಳನ್ನು ಮಾಡಿದರೂ ಗೇಲಿ ಮಾಡುತ್ತಾರೆ. ತದನಂತರ ಅಂತಹ ಕೆಲಸವನ್ನು ಬುಡಕಟ್ಟು, ದಲಿತ ಮತ್ತು ಸಾಮಾನ್ಯ ವರ್ಗದ ಮಕ್ಕಳನ್ನು ಒಳಗೊಂಡಿರುವ ಹುಡುಗರ ಗುಂಪಿಗೆ ಬಳಸಿದರೆ, ಸಮಸ್ಯೆ ಹೆಚ್ಚು ಜಟಿಲವಾಗುತ್ತದೆ. ಮೊದಲನೆಯದಾಗಿ, ಹುಡುಗರು ಅಡುಗೆ ಮಾಡುವ ಕೆಲಸವನ್ನು ಮಾಡುವುದಿಲ್ಲ, ಎರಡನೆಯದಾಗಿ, ಅವರು ಸಿದ್ಧರಿದ್ದರೂ ಸಹ, ದಲಿತ ಅಥವಾ ಬುಡಕಟ್ಟು ಹುಡುಗರ ಜೊತೆಗೆ ಸಾಮಾನ್ಯ ಹುಡುಗರು ಅಡುಗೆ ಮಾಡಲು ನಿರಾಕರಿಸುತ್ತಾರೆ ಎಂಬ ಸಮಸ್ಯೆ ಹುಡುಗರ ಗುಂಪಿನಲ್ಲಿ ಉದ್ಭವಿಸುತ್ತದೆ. ಉತ್ತಮ ಪ್ರಜಾಸತ್ತಾತ್ಮಕ ಸಮಾಜವನ್ನು ನಿರ್ಮಿಸಲು, ಸಾಂವಿಧಾನಿಕ ಮೌಲ್ಯಗಳು ಮತ್ತು ನಂಬಿಕೆಗಳನ್ನು ಅನುಸರಿಸುವಾಗ ಈ ವಿಷಯಗಳ ಬಗ್ಗೆ ಕೆಲಸ ಮಾಡುವುದು ಶಾಲೆಗಳ ಜವಾಬ್ದಾರಿಯಾಗಿದೆ. ಈ ಮೌಲ್ಯಗಳು ಮತ್ತು ನಂಬಿಕೆಗಳು ಒಂದು ಸಮನ್ವಯತೆಯ ವಿಷಯವಾಗಿದೆ.

ಗ್ರಾಮೀಣ ಶಿಕ್ಷಾ ಕೇಂದ್ರ (ಜಿ.ಎಸ್.ಕೆ) ರಾಜಸ್ಥಾನದ ಸವಾಯಿ ಮಾಧೋಪುರ್ ಮತ್ತು ಟೋಂಕ್ ಜಿಲ್ಲೆಗಳಲ್ಲಿನ ಸಮುದಾಯ–ದೊಂದಿಗೆ ಶಿಕ್ಷಣ ಪರಿಸ್ಥಿತಿಯ ವ್ಯವಸ್ಥೆಯನ್ನು ಹೆಚ್ಚು ಅನುಕೂಲಕರವಾಗಿಸಲು ಕೆಲಸ ಮಾಡುತ್ತಿದೆ. ಕೇಂದ್ರದ ಮುಖ್ಯ ಕಾರ್ಯಕ್ರಮವಾದ 'ಉದಯ್' ಸಮುದಾಯ ಮತ್ತು ಇತರ ಶಾಲೆಗಳಿಗೆ ಗುಣಮಟ್ಟದ ಶಿಕ್ಷಣ ಏನೆಂದು ತೋರಿಸಲು ಸ್ಥಾಪಿಸಲಾದ ಪಾಠಶಾಲೆಗಳ ಸುತ್ತಲೂ ಕೇಂದ್ರೀಕೃತವಾಗಿದೆ.

ಗ್ರಾಮೀಣ ಶಿಕ್ಷಣ ಕೇಂದ್ರ ನಡೆಸುತ್ತಿರುವ ಎರಡು ಶಾಲೆಗಳಲ್ಲಿ ಸಮನ್ವಯತೆಯ ಬಗ್ಗೆ ಕೆಲಸ ಮಾಡಲಾಗುತ್ತಿದೆ. ಶಾಲೆಗಳಲ್ಲಿ ಸಮನ್ವಯತೆಯ ಈ ಕಾರ್ಯದಲ್ಲಿ ವ್ಯವಸ್ಥಿತ ಸುಧಾರಣೆಗಳ ಜೊತೆಗೆ ಮಕ್ಕಳೊಂದಿಗೆ ಮಾತನಾಡುವುದು, ಶಾಲಾ ಅಸೆಂಬ್ಲಿಯಲ್ಲಿ ಎಲ್ಲಾ ಸಮುದಾಯಗಳ ಮಕ್ಕಳು ಮತ್ತು ಶಿಕ್ಷಕರು ಸಮಾನವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸುವುದು, ತರಗತಿಯ ಸಭೆಯ ವ್ಯವಸ್ಥೆಗಳು, ಅಲ್ಲಿನ ದೈನಂದಿನ ಚಟುವಟಿಕೆಗಳು ಇತ್ಯಾದಿಗಳ ನಿರಂತರ ಕೆಲಸವನ್ನು ಮಾಡಲಾಯಿತು. ಈ ಎಲ್ಲಾ ಪ್ರಯತ್ನಗಳ ಫಲಿತಾಂಶಗಳು ಕ್ರಮೇಣ ಗೋಚರಿಸಿದವು. ಒಟ್ಟಿಗೆ ಆಡುವುದು, ಅಡುಗೆ ಮಾಡುವುದು ಮತ್ತು ಒಟ್ಟಿಗೆ ಊಟ ಮಾಡುವಂತಹ ಕೆಲವು ಗುಂಪು ಚಟುವಟಿಕೆಗಳು ಸಮನ್ವಯತೆಯ ವೇಗವನ್ನು ಹೆಚ್ಚಿಸುತ್ತವೆ ಎಂಬುದು ನಮ್ಮ ಅವಲೋಕನವಾಗಿದೆ.

> **“ಊಟ ಬಡಿಸುವ, ಉಣ್ಣುವ, ಪಾತ್ರೆ ಶುಚಿಗೊಳಿಸುವ ಕೆಲಸಗಳಲ್ಲಿ ಜಾತಿ-ವರ್ಗದ ಭೇದಗಳು ಯಾವಾಗ ಕೊನೆಗೊಂಡವು ಎಂಬುದು ಮಕ್ಕಳ ಅರಿವಿಗೆ ಬರಲಿಲ್ಲ.”**



ಚಿತ್ರ 1: ಒಟ್ಟಿಗೆ ಅಡುಗೆಯ ಚಟುವಟಿಕೆಯಲ್ಲಿ ತೊಡಗಿರುವ ಹುಡುಗಿಯರು



ಚಿತ್ರ 2: ಶಾಲೆಯಲ್ಲಿ ರೊಟ್ಟಿ ಮಾಡುವ ಚಟುವಟಿಕೆಯಲ್ಲಿ ತೊಡಗಿರುವ ಹುಡುಗರು



ಚಿತ್ರ 3: ಆಟದ ಸಮಯದಲ್ಲಿ ಮೇಲಕ್ಕೆ ಹೋದ ಚೆಂಡನ್ನು ನೋಡುತ್ತಿರುವ ವಿದ್ಯಾರ್ಥಿಗಳು

## ಒಟ್ಟಿಗೆ ಆಡಲು ಪ್ರಾರಂಭ

ಒಳಾಂಗಣ ಆಟಗಳಾದ ಕೇರಂ ಬೋರ್ಡ್, ಲೂಡೋ ಅಂತಹ ಆಟಗಳ ಜೊತೆ ನಮ್ಮ ಚಟುವಟಿಕೆ ಪ್ರಾರಂಭವಾಯಿತು. ಹುಡುಗರು ಮತ್ತು ಹುಡುಗಿಯರಿಗೆ ಆಟದ ಸಾಮಗ್ರಿಗಳನ್ನು ನೀಡಿದಾಗ, ಹುಡುಗಿಯರು ಹುಡುಗಿಯರನ್ನು ಹಾಗೂ ಹುಡುಗರು ಹುಡುಗರನ್ನೇ ತಮ್ಮ ಸಂಗಾತಿಯನ್ನಾಗಿ ಆರಿಸಿದ್ದನ್ನು ನಾವು ಗಮನಿಸಿದೆವು. ಮಾರನೆಯ ದಿನ ಹುಡುಗರು ಮತ್ತು ಹುಡುಗಿಯರನ್ನು ಬಲವಂತವಾಗಿ ಒಟ್ಟಿಗೆ ಕೂರಿಸುವ ಬದಲು ಮುಂಚಿತವಾಗಿಯೇ ನಾನು ಉಪಗುಂಪುಗಳನ್ನು ಮಾಡಿದೆ, ಇದರಲ್ಲಿ ಹುಡುಗರು ಮತ್ತು ಹುಡುಗಿಯರನ್ನು ತೊಡಗಿಸಿಕೊಂಡೆ, ಆದರೆ ಈಗ ಹೊಸದಾಗಿ ಒಂದು ಸಮಸ್ಯೆ ರೂಪುಗೊಂಡಿತು. ಬುಡಕಟ್ಟು ಮತ್ತು ದಲಿತರ ಮಕ್ಕಳನ್ನು ಯಾರೂ ಜೊತೆಗೆ ಕೂರಿಸಿಕೊಳ್ಳಲಿಲ್ಲ, ಅವರು ಹುಡುಗರಾಗಿರಲಿ ಅಥವಾ ಹುಡುಗಿಯರಾಗಿರಲಿ. ಕಾರಣ ಕೇಳಿದಾಗ ಅವರು ನಾವು ದಲಿತರ ಮತ್ತು ನಾಯಕರ ಜೊತೆ, ಅವರು ಹುಡುಗರಾಗಿರಲಿ ಅಥವಾ ಹುಡುಗಿಯರಾಗಿರಲಿ ಆಡುವುದಿಲ್ಲ ಎಂದು ಹೇಳಿದರು.

ಊಟದ ಸಮಯದಲ್ಲಿ ಹಾಗೂ ನಲ್ಲಿಯಿಂದ ನೀರು ಕುಡಿಯುವಾಗ ಕೂಡ ಕೆಲವರು ಅದೇ ರೀತಿ ಮಾಡುತ್ತಿರುವುದು ಕಂಡು ಬಂತು. ಒಂದೇ ಒಂದು ನಲ್ಲಿ ಇದ್ದುದರಿಂದ, ಸಾಮಾನ್ಯ ವರ್ಗದ ಮಕ್ಕಳು ನೀರು ಕುಡಿಯುವ ಮೊದಲು ನಲ್ಲಿಯನ್ನು ಹಲವಾರು ಬಾರಿ ಶುಚಿಮಾಡುತ್ತಿದ್ದರು. ಹುಡುಗಿಯರಲ್ಲಿ ಈ ಭಾವನೆಯು ಸ್ವಲ್ಪ ಹೆಚ್ಚಾಗಿ ಇತ್ತು. ಇದು ಇರಬೇಕಾದದ್ದೇ, ಏಕೆಂದರೆ ಹೆಚ್ಚು ಶುದ್ಧತೆ ಮತ್ತು ವ್ಯಕ್ತಿತ್ವಗಳ ಪಾಠಗಳನ್ನು ಅವರಿಗೆ ಹೆಚ್ಚು ಕಲಿಸುತ್ತಾರೆ. ಪ್ರತಿಯೊಬ್ಬರೂ ಜಾತಿ ಮತ್ತು ಲಿಂಗದ ಪ್ರಕಾರ ಶ್ರೇಷ್ಠತೆಯ ಭಾವವನ್ನು ಹೊಂದಿದ್ದರು. ಹಿಂದುಳಿದ ಮತ್ತು ದಲಿತ ವರ್ಗದ ಮಕ್ಕಳು ಎಲ್ಲರಿಂದ ಅಂತರ ಕಾಯ್ದುಕೊಳ್ಳುತ್ತಾರೆ, ನನ್ನ ಅನುಭವದ ಮೇರೆಗೆ ಅವರು ಒಟ್ಟಿಗೆ ಬೆರೆಯುವುದಿಲ್ಲ. ನಾನು ಹೇಳಿದ ಮೇಲೂ ಅವರು ಜೊತೆಗೆ ಬರುತ್ತಿರಲಿಲ್ಲ ಹಾಗೂ ನನ್ನಿಂದ ದೂರವಿರುತ್ತಿದ್ದರು. ಸಮನ್ವಯತೆಯನ್ನು ನನ್ನಿಂದಲೇ ಪ್ರಾರಂಭಿಸ ಬೇಕೆಂದು ನನಗೆ ಅರಿವಾಯಿತು, ಜೊತೆಗೆ ಕೆಲವು ಶಿಕ್ಷಕರನ್ನು ಕೂಡ ಸೇರಿಸಿಕೊಳ್ಳಬೇಕಾಗಿತ್ತು. ಅಸೆಂಬ್ಲಿಯನ್ನು ಸಹ ವಿಭಿನ್ನವಾಗಿ ಮಾಡಬೇಕಾಗಿದೆ ಎಂದು ನನಗೆ ಅನ್ನಿಸಿತು. ನನ್ನ ಈ ಯೋಜನೆಯನ್ನು ಸಹ ಶಿಕ್ಷಕರು ಸರಿಯಾಗಿ ಅರ್ಥಮಾಡಿಕೊಂಡರು.

## ಅಸೆಂಬ್ಲಿಯಲ್ಲಿ ಬದಲಾವಣೆಗಳು

ಅಸೆಂಬ್ಲಿಯಲ್ಲಿ ಬದಲಾವಣೆಗಳನ್ನು ಮಾಡುತ್ತಾ ಮಕ್ಕಳನ್ನು ಸಾಲಾಗಿ ಕೂರಿಸುವ ಬದಲು ವೃತ್ತಾಕಾರವಾಗಿ ಕುಳಿತುಕೊಳ್ಳುವಂತೆ

ಮಾಡತೊಡಗಿದೆ. ಈಗ ಯಾರೂ ಒಬ್ಬರ ಹಿಂದೆ ಒಬ್ಬರು ನಿಲ್ಲದೆ ಎಲ್ಲರೂ ಸರಿಸಮಾನವಾಗಿ ಕುಳಿತುಕೊಳ್ಳುತ್ತಿದ್ದರು. ನಾನೂ ಕೂಡ ಮಕ್ಕಳ ಜೊತೆಗೆ ಕೂರುತ್ತಿದ್ದೆ. ಮಕ್ಕಳು ತಮ್ಮ ಹತ್ತಿರ ಬಂದು ಕೂರುವಂತೆ ಹಠ ಮಾಡುತ್ತಿದ್ದರು. ನಾನು ಹೋಗದಿದ್ದರೆ ಅವರು ನಾನು ಕೂತಲ್ಲಿಗೆ ಬಂದು ನನ್ನ ಪಕ್ಕ ಕೂರಬೇಕೆಂದು ತಮ್ಮಲ್ಲಿಯೇ ಜಗಳಮಾಡುತ್ತಿದ್ದರು. ಆದ್ದರಿಂದ, ನಾನು ಪ್ರತಿದಿನ ಸ್ಥಳಗಳನ್ನು ಬದಲಾಯಿಸುತ್ತಿದ್ದೆ ಮತ್ತು ಎಲ್ಲಾ ವರ್ಗದ ಹುಡುಗರು ಮತ್ತು ಹುಡುಗಿಯರೊಂದಿಗೆ ಕುಳಿತು ಮಾತನಾಡುತ್ತಿದ್ದೆ, ಮತ್ತು ಅವರ ಜೊತೆ ಹಾಡುತ್ತಿದ್ದೆ. ಇದು ಅವರೊಂದಿಗೆ ಸಂಭಾಷಣೆಗಳಲ್ಲಿ ಶಾಮೀಲಾಗಲು ನನಗೆ ಅನುವು ಮಾಡಿಕೊಡುತಿತ್ತು.

## ಸಾಮಾಜಿಕ ಸಂದರ್ಭಗಳಲ್ಲಿ ಭಾಗವಹಿಸುವಿಕೆ

ಅದೊಂದು ದಿನ ನನ್ನ ದಲಿತ ವಿದ್ಯಾರ್ಥಿಯೊಬ್ಬನ ಮನೆಯಲ್ಲಿ ಮದುವೆಯ ಕಾರ್ಯಕ್ರಮವಿದೆ ಎಂದು ತಿಳಿಯಿತು. ನಾನು ಅಲ್ಲಿ ಹೋಗಲು ತೀರ್ಮಾನಿಸಿದೆ, ಆದರೆ ಅವನ ತಂದೆ ತಾಯಿ ನನಗೆ ಮದುವೆಗೆ ಆಮಂತ್ರಣವನ್ನು ನೀಡಿರಲಿಲ್ಲ. ಹಾಗೂ ನಾನು ಈ ಅವಕಾಶವನ್ನು ತಪ್ಪಿಸಿಕೊಳ್ಳಲು ತಯಾರಿರಲಿಲ್ಲ. ನಾನು ಆ ಹುಡುಗನಿಗೆ ಕೇಳಿದೆ, "ನಿಮ್ಮ ಮನೆಯಲ್ಲಿ ಮದುವೆ ಇದೆ, ಆದರೆ ನೀನು ನನ್ನನ್ನು ಕರೆಯಲಿಲ್ಲ" ಎಂದು.

ಬಾಲಕ ನನ್ನತ್ತ ನೋಡಿದ, ಮತ್ತು ಏನನ್ನೂ ಹೇಳದೆ ಮನೆಗೆ ಹೊರಟು ಹೋದ. ಸ್ವಲ್ಪ ಸಮಯದ ನಂತರ ಅವನ ತಂದೆ ಬಂದರು. ಅವನ ತಂದೆ ತುಂಬಾ ವಿನಮ್ರತೆಯಿಂದ, "ಗುರುಗಳೇ ನಿಮಗೆ ನಾವು ಯಾರೆಂದು ತಿಳಿದಿದೆ, ಆ ಹೆದರಿಕೆಯಿಂದಲೇ ನಾವು ನಿಮಗೆ ಆಮಂತ್ರಣ ನೀಡಲಿಲ್ಲ" ಎಂದರು.

ನಾನು ಕೂಡಲೇ ಮಾತನ್ನು ಸಂಭಾಳಿಸುತ್ತ ಹೇಳಿದೆ, "ಈಗ ನೀವು ಕರೆದುಕೊಂಡು ಹೋಗಲು ಬಂದಿದ್ದಿರೋ ಅಥವಾ ಬೇಡ ಎನ್ನಲು ಬಂದಿದ್ದಿರೋ" ಅವರಿಗೆ ಆಶ್ಚರ್ಯವಾಯಿತು, ಅವರು " ಬನ್ನಿ ಗುರುಗಳೇ" ಎಂದು ಕರೆದುಕೊಂಡು ಹೊರಟರು, ಆದರೆ ನನ್ನ ಸಹಶಿಕ್ಷಕರು ನಿಂತ ಜಾಗದಿಂದ ಅಲ್ಲಾಡಲಿಲ್ಲ. ಪರೀಕ್ಷೆಗಳಲ್ಲಿ ಮತ್ತು ಭಾಷಣಗಳಲ್ಲಿ ಸಮನ್ವಯತೆಯನ್ನು ಎಲ್ಲರೂ ಸರ್ವಾನುಮತದಿಂದ ಬೆಂಬಲಿಸುತ್ತಾರೆ, ಆದರೆ ಇಲ್ಲಿ ಪ್ರಾಯೋಗಿಕ ವಿಷಯವು ಅವರನ್ನು ನಿಲ್ಲಿಸಿತು, ಶಿಕ್ಷಣದ ದೃಷ್ಟಿಯಿಂದ ಅವರು ಕೂಡ ಜೊತೆಗೆ ಬರುವುದು ಅಗತ್ಯವಾಗಿತ್ತು. ನಾನು ಒತ್ತಾಯಿಸಿದ ನಂತರವೇ ಅವರು ಜೊತೆಗೆ ಹೊರಟರು. ಮನೆಯು ಶಾಲೆಯ ಮುಂಭಾಗದಲ್ಲಿಯೇ ಇದ್ದುದರಿಂದ ತಲುಪಲು ಹೆಚ್ಚು ಸಮಯ ಹಿಡಿಯಲಿಲ್ಲ. ಎಲ್ಲರೂ ನಮ್ಮನ್ನು ಗುರುತಿಸಿ ನಮಸ್ಕಾರ ಹೇಳತೊಡಗಿದರು. ನಾವು ಕುಳಿತುಕೊಳ್ಳಲು ಹಾಗೂ ಊಟ ಮಾಡಲು ಪ್ರತ್ಯೇಕ ಕಾರ್ಪೆಟ್ ಮತ್ತು ಪಾತ್ರೆಗಳ ವ್ಯವಸ್ಥೆ ಪ್ರಾರಂಭವಾಯಿತು. ಆದರೆ ನಾನು ಸ್ಪಷ್ಟವಾಗಿ ಹೇಳಿದೆ, ನಾವು ಆಹಾರ ಸೇವಿಸಿದರೆ ಎಲ್ಲರೊಂದಿಗೆ ಮತ್ತು ಎಲ್ಲರಂತೆ ತಿನ್ನುತ್ತೇವೆ, ಇಲ್ಲದಿದ್ದರೆ ನಾವು ತಿನ್ನುವುದಿಲ್ಲ, ಎಂದು. ಅವರು ನನ್ನ ಮಾತು ಒಪ್ಪಬೇಕಾಯಿತು, ಮತ್ತು ನಾವು ಎಲ್ಲರೊಂದಿಗೆ ಕುಳಿತು ಊಟ ಮಾಡಿ ಮತ್ತು ನೀರನ್ನು ಸೇವಿಸಿದೆವು.

ಈ ಘಟನೆ ಸಾಕಷ್ಟು ಪ್ರಭಾವ ಬೀರಿತು. ಮರುದಿನದಿಂದ ದಲಿತ ಮಕ್ಕಳು ಹೆಚ್ಚು ಆರಾಮದಾಯಕ ಹಾಗೂ ಸಹಜವಾಗತೊಡಗಿದರು. ಇದನ್ನು ನೋಡಿ ಬೇರೆ ವರ್ಗದ ಕೆಲವು ಮಕ್ಕಳಿಗೆ ವಿಚಿತ್ರ ಅನಿಸಿತು. ಈ ವಿಷಯದ ಬಗ್ಗೆ ಚರ್ಚೆಗಾಗಿ ಅಧಿವೇಶನವನ್ನು ನಡೆಸಿದೆವು. ಜಾತಿ ಮತ್ತು ವರ್ಣ ವ್ಯವಸ್ಥೆಯು ಮಕ್ಕಳಲ್ಲಿ ವಿವೇಕ ಮತ್ತು ತರ್ಕವನ್ನು ನಿರ್ಲಕ್ಷಿಸುವಷ್ಟು ಆಳವಾಗಿ ಬೇರೂರಿರಲಿಲ್ಲ. ಒಟ್ಟಿಗೆ ಕೂತು, ಓದುತ್ತಾ, ಮಾತನಾಡುತ್ತಾ ಎಲ್ಲವೂ ಚರ್ಚೆಯಾಗುತಿತ್ತು. ಇದಕ್ಕಾಗಿ ನಿತ್ಯ ಚರ್ಚೆಗಳು ನಡೆಯುತ್ತಿದ್ದವು. ಇವುಗಳಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರದ ಬಳಕೆ ಹಾಗೂ ಅದಕ್ಕೆ ಸಂಬಂಧಿಸಿದ ನಂಬಿಕೆಗಳು ಚರ್ಚೆಗೆ ಗ್ರಾಸವಾದವು. ಕೆಲವೊಮ್ಮೆ ವೃತ್ತಿ, ಜಾತಿ, ಉದ್ಯೋಗ, ಆಹಾರ ಮತ್ತು ಶುಚಿತ್ವದಂತಹ ವಾದಗಳು ಸೇರಿಕೊಳ್ಳುತ್ತವೆ ಮತ್ತು ನಂತರ ನಾವು ಪ್ರತಿಯೊಂದು ವಿಷಯದ ಬಗ್ಗೆ ಪ್ರತ್ಯೇಕ ಚರ್ಚೆಗಳನ್ನು ನಡೆಸಬೇಕಾಗುತಿತ್ತು. ಆದರೆ, ಮುಟ್ಟುವುದು, ತಳ್ಳುವುದು ಮತ್ತು ಒಟ್ಟಿಗೆ ತಿನ್ನುವುದು ಇನ್ನೂ ಕೂಡ ಆಗುತ್ತಿರಲಿಲ್ಲ. ಇದಕ್ಕಾಗಿ ನಾವು ಇನ್ನೂ ಕೆಲವು ಆಟಗಳನ್ನು ಯೋಜಿಸಿದೆವು.

## ನಮಸ್ಕಾರ - ನಮಸ್ಕಾರದ ಆಟ

ಈ ಆಟದಲ್ಲಿ ಎಲ್ಲಾ ಮಕ್ಕಳು ಒಂದು ವೃತ್ತದಲ್ಲಿ ಕುಳಿತುಕೊಳ್ಳುತ್ತಾರೆ. ಒಂದು ಮಗು ವೃತ್ತದ ಹೊರಗೆ ಉಳಿಯುತ್ತದೆ ಮತ್ತು ಇನ್ನೊಂದು ಮಗುವಿನ ಬೆನ್ನನ್ನು ಸ್ಪರ್ಶಿಸಿದ ನಂತರ ಓಡಿಹೋಗುತ್ತದೆ. ಬೆನ್ನನ್ನು ಮುಟ್ಟಿದ ಮಗು ಅವನನ್ನು ಮುಂಭಾಗದಿಂದ ಭೇಟಿಯಾಗುತ್ತಾನೆ ಹಾಗೂ ವಿರುದ್ಧ ದಿಕ್ಕಿನಲ್ಲಿ ಓಡುತ್ತಾನೆ. ಇಲ್ಲಿ ಇಬ್ಬರೂ ಹಸ್ತಲಾಘವ ಮಾಡಿ ನಮಸ್ತೆ ಹೇಳಿ ಖಾಲಿ ಆಸನದಲ್ಲಿ ಕೂರಲು ಓಡುತ್ತಾರೆ. ತಡವಾಗಿ ತಲುಪುವ ಮಗು ನಿಸ್ಸಂಶಯವಾಗಿ ಕುಳಿತುಕೊಳ್ಳಲು ಸಾಧ್ಯವಿಲ್ಲ ಮತ್ತು ನಂತರ ಅವನು ಅದೇ ಪ್ರಕ್ರಿಯೆಯನ್ನು ಪುನರಾವರ್ತಿಸಬೇಕು. ಈ ಆಟದ ಕೊನೆಯಲ್ಲಿ ಎಲ್ಲಾ ಹುಡುಗರು ಮತ್ತು ಹುಡುಗಿಯರು ಪರಸ್ಪರ ಸ್ಪರ್ಶಿಸಿ ಕೈಕುಲುಕುವುದನ್ನು ನಾವು ನೋಡಿದ್ದೇವೆ. ಮೊದಲು ತಲುಪಬೇಕೆಂಬ ಹಂಬಲದಲ್ಲಿ ಅವರು ಎಲ್ಲವನ್ನೂ ಮರೆತರು. ನಂತರ ಯಾರಾದರೂ ಅದನ್ನು ನೆನಪಿಸಿಕೊಂಡರೂ ಸಹ ಅವರು ಆಟದಿಂದ ಪಡೆದ ಸಂತೋಷಕ್ಕೆ ಮಾತ್ರ ಪ್ರಾಮುಖ್ಯತೆ ನೀಡಿದರು. ನಾವು ಓಡು, ಇಲಿ – ಬೆಕ್ಕು ಬಂತು, ಚಾವಟಿಯು ಜಮಾಲ್ಶಾಹಿ ಆಗಿದೆ, ಹಾಗೂ ಖೋ–ಖೋ ಮತ್ತು ಇನ್ನೂ ಅನೇಕ ಆಟಗಳನ್ನು ಆಡಿಸಿದೆವು. ಕ್ರೀಡೆಗಳನ್ನು ಆಡುವಾಗ, ಮಕ್ಕಳಲ್ಲಿ ಯಶಸ್ವಿಯಾಗುವ, ಗೆಲ್ಲುವ ಮತ್ತು ತಮ್ಮನ್ನು ತಾವು ಸಾಬೀತುಪಡಿಸುವ ಬಯಕೆ ಬಲವಾಯಿತು. ಅವರು ಎಲ್ಲವನ್ನೂ ಮರೆತು ತಮ್ಮ ಕೌಶಲದ ಮೇಲೆ ಕೆಲಸ ಮಾಡಲು ಪ್ರಾರಂಭಿಸಿದರು. ಅವರು ಉತ್ತಮ ಪ್ರದರ್ಶನಕ್ಕಾಗಿ ಉತ್ತಮ ತಂಡಗಳನ್ನು ರಚಿಸಲು ಪ್ರಾರಂಭಿಸಿದರು. ದಲಿತರಾಗಲಿ, ಬುಡಕಟ್ಟು ಜನಾಂಗದವರಾಗಲಿ ಅಥವಾ ಬೇರೆ ಯಾರೇ ಆಗಿರಲಿ ಅವರಿಗೆ ಅದು ಮುಖ್ಯವಾಗಿರಲಿಲ್ಲ.

## ಒಟ್ಟಿಗೆ ಕೂತು ತಿನ್ನುವುದು

ವಾತಾವರಣ ಮೊದಲಿಗಿಂತ ಸ್ವಲ್ಪ ಉತ್ತಮವಾಗಿತ್ತು, ಆದರೆ ಊಟದ ಸಮಯದಲ್ಲಿ ಕೆಲವು ಮಕ್ಕಳು ಮಾತ್ರ ಮನೆಯಿಂದ ಆಹಾರವನ್ನು ತರುತ್ತಿದ್ದರು. ಶಾಲೆಯ ಬಳಿ ಇರುವ ಕೆಲವು ಮಕ್ಕಳು ಊಟಕ್ಕೆ ಮನೆಗೆ

ಹೋದರೆ, ಇನ್ನು ಕೆಲವರು ಊಟವನ್ನೇ ತರುತ್ತಿರಲಿಲ್ಲ. ನಾವು ಎಲ್ಲರಿಗೂ ಶಾಲೆಗೆ ಟಿಫಿನ್ ತರಲು ಹೇಳಿದೆವು. ಊಟ ತರಲು ಸಾಧ್ಯವಾಗದ ಮಕ್ಕಳ ಪೋಷಕರೊಂದಿಗೆ ಮಾತನಾಡಿದೆವು ಆದರೆ ಪ್ರಯೋಜನವಾಗಿಲ್ಲ. ನಾನು ಮಕ್ಕಳೊಂದಿಗೆ ಊಟವನ್ನು ಮಾಡಲು ಪ್ರಾರಂಭಿಸಿದೆ. ನಾವು ಆಹಾರವನ್ನು ಹಂಚಿಕೊಳ್ಳಲು ಪ್ರಾರಂಭಿಸಿದೆವು. ನಾನು ಪ್ರತಿಯೊಬ್ಬರ ಟಿಫಿನ್ನಿಂದ ಒಂದು ತುತ್ತು ಆಹಾರವನ್ನು ತಿನ್ನಲು ನಿರ್ಧರಿಸಿದೆ. ನನ್ನ ಹೊಟ್ಟೆ ಇದರಿಂದಲೇ ತುಂಬುತ್ತಿತ್ತು, ಊಟ ತರಲಾಗದ ಮಕ್ಕಳಿಗೆ ನಾನು ನನ್ನ ಟಿಫಿನ್ ಕೊಡುತ್ತಿದ್ದೆ. ಇದನ್ನು ನೋಡಿದ ಕೆಲವು ಮಕ್ಕಳು ಹೆಚ್ಚುವರಿ ರೊಟ್ಟಿಗಳನ್ನು ತರಲು ಪ್ರಾರಂಭಿಸಿದರು. ಈ ರೀತಿಯಾಗಿ, ಊಟವನ್ನು ಒಟ್ಟಿಗೆ ತಿನ್ನುವುದು ಮತ್ತು ಹಂಚಿಕೊಳ್ಳುವುದು ವಿವಿಧ ಸಮಾಜಗಳಿಂದ ಬರುವ ಮಕ್ಕಳ ನಡುವೆ ಹೊಂದಾಣಿಕೆಗೆ ಕಾರಣವಾಯಿತು.

ಈ ಸಮಯದಲ್ಲಿ, ನಾವು ಕ್ರೀಡೆಗಳನ್ನು ಕ್ರಮಬದ್ಧಗೊಳಿಸುವುದ-ರೊಂದಿಗೆ ಕೈತೋಟ (ಕಿಚನ್ ಗಾರ್ಡನ್‌ಗಳು) ಮತ್ತು ಅಡುಗೆ ಕ್ಲಬ್‌ಗಳನ್ನು ಪ್ರಾರಂಭಿಸಿದೆವು. ಶಾಲೆಯ ಖಾಲಿ ಜಾಗದಲ್ಲಿ ಕೈತೋಟ (ಕಿಚನ್ ಗಾರ್ಡನ್) ಮಾಡಲು ಮಕ್ಕಳು ತಮ್ಮ ಮನೆಯಿಂದ ಗೊಬ್ಬರ, ಬೀಜ, ಔಷಧಿ, ಉಪಕರಣಗಳು ಇತ್ಯಾದಿಗಳನ್ನು ತಂದು ಎಲ್ಲರೂ ಸೇರಿ ಸಿದ್ಧಪಡಿಸುತ್ತಿದ್ದರು. ತೋಟದ ಹಣ್ಣುಗಳು ಮತ್ತು ತರಕಾರಿಗಳು ಎಲ್ಲರಿಗೂ ಲಭ್ಯ. ಇಳುವರಿ ಹೆಚ್ಚಿದ್ದರೆ ಮಕ್ಕಳು ಮನೆಗೆ ಕೂಡ ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲಿಂದ ಅವರ ಆಹಾರ ಪದ್ಧತಿಯ ಮೇಲೆ ಕೆಲಸ ಮಾಡುತ್ತಾ ನಾವು ಅಡುಗೆ ಕ್ಲಬ್ ಅನ್ನು ಆರಂಭಿಸಿದೆವು. ಮಕ್ಕಳು ಅಡುಗೆ ಮಾಡುವುದು, ಸೌದೆ ಒಲೆ, ಪಾತ್ರೆಗಳು, ಕೋಸಂಬರಿ ಮಾಡುವುದು ಮುಂತಾದವುಗಳನ್ನು ಹಾಗೂ ಹೇಗೆ ಬಳಸಬೇಕೆಂದು ಕಲಿಯುವ ಕೆಲಸವನ್ನು ಕೈಗೆತ್ತಿಕೊಂಡ ಸಮಯ ಇದು.

ಊಟ ಬಡಿಸುವ, ತಿನ್ನುವ ಮತ್ತು ಪಾತ್ರೆಗಳನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ಜಾತಿ-ವರ್ಗದ ಭೇದಗಳು ಯಾವಾಗ ಕೊನೆಗೊಂಡವು ಎಂಬುದು ಮಕ್ಕಳಿಗೂ ತಿಳಿಯಲಿಲ್ಲ. ಮಕ್ಕಳು ಆರಾಮ-ವಾಗಿರುವುದನ್ನು ನೋಡಿ ಪಾಲಕರೂ ಬೈಯುವುದನ್ನು ನಿಲ್ಲಿಸಿದರು. ಕೆಲವೊಮ್ಮೆ ಪೋಷಕರು ನಮಗೆ ದೂರು ನೀಡುತ್ತಾರೆ, ಆದರೆ ಅವರ ದೂರುಗಳು ಯಾವುದೇ ವಿಷಯ ವಸ್ತುವಿನ ಬದಲು ಕೇವಲ ಔಪಚಾರಿಕ-ವಾಗಿರುತ್ತವೆ. ನಾವು ಅವರಿಗೆ ಕಾಲ ಬದಲಾಗುತ್ತಿದೆ ಎಂದು ಹೇಳುತ್ತೇವೆ, ನೀವು ನಿಮ್ಮ ಜೀವನವನ್ನು ನಡೆಸಿದ್ದೀರಿ, ಆದರೆ ಮಕ್ಕಳು ಇನ್ನು ಮುಂದೆ ಬಹಳ ದೂರ ಹೋಗಲು ಇದೆ ಎಂದು ತಿಳಿಸುತ್ತೇವೆ.

ಪೋಷಕರು ಶಾಲಾ ವ್ಯವಸ್ಥೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಯಿತು. ಆದರೆ ಅವರ ಮನೆಗಳಲ್ಲಿ ನಿಯಮಗಳು ಹಾಗೆಯೇ ಮುಂದುವರಿ-ದಿದ್ದವು. ತಮ್ಮ ಮನೆಗಳಲ್ಲಿ ಬದಲಾವಣೆಗೆ ಪೋಷಕರು ಸಿದ್ಧರಿಲ್ಲ. ಇದು ನಮ್ಮ ವ್ಯಾಪ್ತಿಯನ್ನು ಮೀರಿದ ಕಾರಣ, ನಾವು ಶಾಲೆಯ ಮೂಲಕ ಹೊಸ ಪಿ.ಟಿ.ಗಳೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸಿದೆವು.

> **ಸಮನ್ವಯತೆಯು ನನ್ನಿಂದಲೇ ಪ್ರಾರಂಭವಾಗಬೇಕು ಮತ್ತು ನನ್ನ ಸಹ ಶಿಕ್ಷಕರು ಕೂಡ ಇದರಲ್ಲಿ ಒಳಗೊಳ್ಳಬೇಕು ಎಂದು ನನಗೆ ಅರಿವಾಯಿತು. ಅಸೆಂಬ್ಲಿಯನ್ನು ವಿಭಿನ್ನವಾಗಿ ಮಾಡಬೇಕು ಎಂದು ಯೋಚಿಸಿದೆ.**

## ಕೆಲವು ಇತರ ಪ್ರಯತ್ನಗಳು

ಓದುವುದು, ತಿನ್ನುವುದು ಮತ್ತು ಒಟ್ಟಿಗೆ ಆಟವಾಡುವುದು ದೈನಂದಿನ ಚಟುವಟಿಕೆಗಳ ಸಾಮಾನ್ಯ ಭಾಗವಾಯಿತು. ಮಕ್ಕಳು ಮಕ್ಕಳಾಗಿರಲಿಲ್ಲ, ಅವರು ಹದಿಹರೆಯದತ್ತ ಸಾಗುತ್ತಿದ್ದರು. ಅವರು ತಮ್ಮ ವಯಸ್ಸಿನ ಗುಂಪು ಮತ್ತು ಲಿಂಗವನ್ನು ಆಧರಿಸಿ ವಿವಿಧ ಕ್ರೀಡಾ ವೇದಿಕೆಗಳು ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಆದಾಗ್ಯೂ, ಈ ಸ್ಪರ್ಧೆಗಳಿಗೆ ಮಿಶ್ರ ತಂಡವನ್ನು ಕಳುಹಿಸಲು ನಮಗೆ ಸಾಧ್ಯವಾಗಲಿಲ್ಲ.

ಸಮನ್ವಯ ಶಿಕ್ಷಣದ ವಿಷಯದಲ್ಲಿ, ಈ ಶಾಲೆಗಳಲ್ಲಿ ಕೆಲವು ಸುಧಾರಣೆ ತರಲು ಸಾಧ್ಯವಾಯಿತು ಏಕೆಂದರೆ ನಾವು ನಿಯಮಿತ ಅನುಭವಗಳನ್ನು ಸರಿಹೊಂದಿಸುವ ಮತ್ತು ವಿಶ್ಲೇಷಿಸುವ ಮೂಲಕ ಅಗತ್ಯ ಬದಲಾವಣೆಗಳನ್ನು ಮಾಡುತ್ತಲೇ ಇದ್ದೇವೆ. ಶಾಲೆಯ ಉತ್ತಮ ಫಲಿತಾಂಶದಿಂದಾಗಿ ಶಾಲೆಯಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗಲು ಪ್ರಾರಂಭಿಸಿದಾಗ ಅಂತಹ ಬದಲಾವಣೆಯನ್ನು ಮಾಡಲಾಯಿತು. ಪ್ರಭಾವಿ ವ್ಯಕ್ತಿಗಳು ತಮ್ಮ ಪ್ರಭಾವವನ್ನು ಬಳಸಿಕೊಂಡು ತಮ್ಮ ಮಕ್ಕಳಿಗೆ ಶಾಲೆಯಲ್ಲಿ ಪ್ರವೇಶ ಪಡೆಯಲು ಪ್ರಾರಂಭಿಸಿದರು. ನಂತರ ನಾವು ಶಾಲಾ ಆಡಳಿತ ಸಮಿತಿ ಮತ್ತು ಸಮುದಾಯದ ಸಭೆಗಳನ್ನು ಆಯೋಜಿಸಿದೆವು ಹಾಗೂ ಎಲ್ಲರ ಒಪ್ಪಿಗೆಯೊಂದಿಗೆ ನಾವು ಶಾಲೆಯಲ್ಲಿ 50 ಪ್ರತಿಶತದಷ್ಟು ಸೀಟುಗಳನ್ನು ಹೆಣ್ಣುಮಕ್ಕಳಿಗೆ ಮೀಸಲಿಟ್ಟೆವು. ಅಷ್ಟೇ ಅಲ್ಲ, 500 ಮೀಟರ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಹುಡುಗ-ಹುಡುಗಿಯರನ್ನು ದಾಖಲು ಮಾಡಿಕೊಳ್ಳಲು ನಿರ್ಧರಿಸಿದೆವು. ಇದರಿಂದಾಗಿ ಶಾಲೆಯ ಸಮೀಪವಿರುವ ಬಡಾವಣೆಗಳ ಮುಸ್ಲಿಂ, ಅಲೆಮಾರಿ ಮತ್ತು ದಲಿತ ಸಮುದಾಯಗಳ ಮಕ್ಕಳ ಶೇ 100 ದಾಖಲಾತಿ ಮಾಡಲು ಸಾಧ್ಯವಾಯಿತು.

ಪೀರ್ ಲರ್ನಿಂಗ್ (ಸಹವರ್ತಿಗಳೊಂದಿಗೆ ಕಲಿಕೆ) ಮತ್ತು ಮಲ್ಟಿ-ಗ್ರೇಡ್, (ಬಹು ತರಗತಿ) ಬಹು-ಹಂತದ ಬೋಧನಾ ವಿಧಾನಗಳನ್ನು ಬಳಸುವ ಮೂಲಕ, ಮಕ್ಕಳು ಪರಸ್ಪರ ಸಹಾಯ ಪಡೆಯಲು, ಕಲಿಯಲು ಮತ್ತು ಹೊಂದಾಣಿಕೆ ಮಾಡಿಕೊಳ್ಳಲು, ಒಟ್ಟಿಗೆ ಕೆಲಸ ಮಾಡಲು ನಾವು ಅವಕಾಶಗಳನ್ನು ಉತ್ತೇಜಿಸಲು ಪ್ರಯತ್ನಿಸಿದ್ದೇವೆ. ಇದರಿಂದ ಶಿಕ್ಷಕರ ಮೇಲಿನ ಮಕ್ಕಳ ಅವಲಂಬನೆ ಕಡಿಮೆಯಾಗುತ್ತ ಹೋಯಿತು.



ಚಿತ್ರ 4: ಎಲ್ಲಾ ತಾರತಮ್ಯವನ್ನು ಮರೆತು ಕ್ರೀಡೆಯಲ್ಲಿ ತಲ್ಲೀನರಾಗಿರುವ ಮಕ್ಕಳು

ಅವರು ಪರಸ್ಪರ ಬೆಂಬಲವನ್ನು ತೆಗೆದುಕೊಳ್ಳುವ ಮೂಲಕ ಉತ್ತಮ ತಿಳುವಳಿಕೆ ಮತ್ತು ಸಂಪರ್ಕವನ್ನು ಸ್ಥಾಪಿಸಲು ಸಾಧ್ಯವಾಯಿತು. ಸಾಮೂಹಿಕ ಚರ್ಚೆಯ ಮೂಲಕ ಪರಸ್ಪರ ವಿವಾದಗಳನ್ನು ಪರಿಹರಿಸಲು ವಿದ್ಯಾರ್ಥಿ ಪಂಚಾಯತ್ ಅನ್ನು ಸಹ ರಚಿಸಲಾಗಿದೆ. ಈ ಕಾರಣದಿಂದಾಗಿ, ಮಕ್ಕಳು ತಮ್ಮದೇ ಆದ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಮಾಡುವ ಮತ್ತು ನಡೆಸುವ ಪ್ರಾಯೋಗಿಕ ಅನುಭವವನ್ನು ಪಡೆಯಲಾರಂಭಿಸಿದರು.

---



**ವಿಷ್ಣು ಗೋಪಾಲ್** ಗ್ರಾಮೀಣ ಶಿಕ್ಷಣ ಕೇಂದ್ರದ ನಿರ್ದೇಶಕರು. ಶಾಲಾ ನಿರ್ವಹಣೆ ಮತ್ತು ಶಾಲೆಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವುದರಲ್ಲಿ ಇವರಿಗೆ ಅಪಾರ ಅನುಭವವಿದೆ. ಇವರು ಕ್ರೀಡೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದಾರೆ, ಅದು ಅವರ ಕೆಲಸದೊಂದಿಗೆ ಉತ್ತಮವಾಗಿ ಸಂಪರ್ಕಗೊಳ್ಳುತ್ತದೆ.
ಸಂಪರ್ಕ: vishnu.gopal@graminshiksha.org.in

ಅನುವಾದ: ಅನುರೂಪಾ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಹೆಚ್ಚಿನ ಆರೈಕೆ ಮತ್ತು ಅವಕಾಶಗಳ ಅಗತ್ಯ ಇರುವಂತಹ ಮಕ್ಕಳು

ಸುಜಾತಾ ರಾವಿ ಮತ್ತು ದಸನ್ನಾ ಮರೆಡ್ಡಿ

೩ ರಿಂದ 6 ವರ್ಷದೊಳಗಿನ ಮಕ್ಕಳು ಬೇರೆ ಬೇರೆ ಸ್ಥಳಗಳಲ್ಲಿ, ಮುಖ್ಯವಾಗಿ ಪ್ರಿ-ಸ್ಕೂಲ್ ಗಳಲ್ಲಿ ಮತ್ತು ತಮ್ಮ ತಮ್ಮ ನೆರೆಹೊರೆಯಲ್ಲಿ ಒಟ್ಟಿಗೆ ಆಟವಾಡುವ ಮೂಲಕ ಕಲಿಯುತ್ತಾರೆ. ಅವರು ಪರಸ್ಪರರ ನಡುವಿನ ವ್ಯತ್ಯಾಸವನ್ನು ಸಕಾರಾತ್ಮಕ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಸಮಯ ಇದಾಗಿರುತ್ತದೆ.

ನಾವು ಮೊದಲ ಬಾರಿಗೆ ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಅಂಗನವಾಡಿಗಳೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದಾಗ, ಅಲ್ಲಿನ ತರಗತಿಯಲ್ಲಿ ಪ್ರತ್ಯೇಕಗೊಂಡಿದ್ದ ಮಕ್ಕಳ ಅನೇಕ ಉದಾ-ಹರಣೆಗಳನ್ನು ಗಮನಿಸಿದೆವು. ವಿಶೇಷವಾಗಿ, ಆ ಮಕ್ಕಳ ಕಲಿಕೆ ಮತ್ತು ಪ್ರಗತಿಯು ತುಂಬ ನಿಧಾನಗತಿಯಲ್ಲಿ ಇರುತ್ತಿತ್ತು. ಈ ಮಕ್ಕಳು ಯಾವಾಗಲೂ ಒಂಟಿಯಾಗಿ ಕುಳಿತುಕೊಳ್ಳುತ್ತಿದ್ದರು, ಅವರಿಗೆ ತಮಗೆ ವಹಿಸಿದ ಕೆಲಸವನ್ನು ಪೂರ್ಣಗೊಳಿಸಲು ತೊಂದರೆ ಇರುತ್ತಿತ್ತು, ಅವರ ಗಮನವು ಸುಲಭವಾಗಿ ವಿಚಲಿತವಾಗುತ್ತಿತ್ತು ಮತ್ತು ಅವರು ಅಲ್ಲಿ ಇಲ್ಲಿ ಅಲೆದಾಡುವ ಪ್ರವೃತ್ತಿಯನ್ನು ಹೊಂದಿದ್ದರು. ತರಗತಿಯ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳಲು ಹೆಚ್ಚು ಸಮಯ ಮತ್ತು ಶ್ರಮವನ್ನು ವಿನಿಯೋಗಿಸುವ ಅವಶ್ಯಕತೆ ಇದ್ದುದರಿಂದ ಅಂಗನವಾಡಿ ಶಿಕ್ಷಕರಿಗೆ ಕಷ್ಟವಾಗುತ್ತಿತ್ತು. ಬೇರೆ ಮಕ್ಕಳು ಕೂಡ ಅವರೊಂದಿಗೆ ಆಟವಾಡುವುದಕ್ಕೆ ಆಸಕ್ತಿ ತೋರುತ್ತಿರಲಿಲ್ಲ. ಇದರಿಂದಾಗಿ ಈ ಮಕ್ಕಳು ನಿಯಮಿತವಾಗಿ ಅಂಗನವಾಡಿಗೆ ಹಾಜರಾಗಲು ಹಾಗೂ ಕಲಿಕೆಯಲ್ಲಿ ಆಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ತೊಂದರೆ ಆಗುತ್ತಿತ್ತು. ಹೆಚ್ಚುವರಿ ಸಹಾಯದ ಅಗತ್ಯವಿದ್ದ ಮಕ್ಕಳ ಸಂಖ್ಯೆ ಬಹಳ ಕಡಿಮೆ ಇದ್ದರೂ, ತಮ್ಮನ್ನು ಪ್ರತ್ಯೇಕವಾಗಿ ಇರುವಂತೆ ಮಾಡಿರುವುದರಿಂದ ಅವರಿಗೆ ತಮ್ಮ ಬಗ್ಗೆಯೇ ಕೆಟ್ಟ ಭಾವನೆಯುಂಟಾಗುತ್ತಿತ್ತು, ಅದು ಅವರ ಸ್ವಾಭಿಮಾನಕ್ಕೂ ಧಕ್ಕೆ ತರುತ್ತಿತ್ತು ಹಾಗೂ ಕಲಿಕೆಯಲ್ಲಿ ಅವರ ಆಸಕ್ತಿಯನ್ನು ಕಡಿಮೆಯಾಗುವಂತೆ ಮಾಡುತ್ತಿತ್ತು. ಅವರು ಕೆಲವೊಮ್ಮೆ ಇತರರ ಗಮನವನ್ನು ಬೇರೆಡೆಗೆ ಸೆಳೆಯುವ ಮೂಲಕ ಇಲ್ಲವೇ ಅವರ ಮೇಲೆ ಹಲ್ಲೆ ಮಾಡುವ ಮೂಲಕ ಗಮನ ಸೆಳೆಯಲು ಯತ್ನಿಸುತ್ತಿದ್ದರು. ನಿರ್ಲಕ್ಷ್ಯ ಮತ್ತು ಒಂಟಿತನದ ಭಾವನೆಯು ಮಗುವಿಗೆ ಸಮಸ್ಯೆಯಾಗಿ ಕಾಡುತ್ತಿತ್ತಲ್ಲದೆ, ತರಗತಿಯನ್ನು ನಿರ್ವಹಿಸಲು ಶಿಕ್ಷಕರಿಗೂ ಕಷ್ಟವಾಗುವ ಪರಿಸ್ಥಿತಿ ಬರುತ್ತಿತ್ತು.

## ಬೆಳವಣಿಗೆಯ ಸಿದ್ಧಾಂತಗಳ ಕುರಿತು ಜಾಗೃತಿ

ಈ ಸಮಸ್ಯೆಯನ್ನು ನಿಭಾಯಿಸುವ ಸಲುವಾಗಿ, ಮಕ್ಕಳ ವರ್ತನೆಗಳು ಹೇಗಿರುತ್ತದೆ; ತರಗತಿಯಲ್ಲಿ ಎಲ್ಲರನ್ನೂ ಸಮನ್ವಯಗೊಳಿಸುವುದು ಎಷ್ಟು ಮುಖ್ಯವಾಗಿದೆ; ಹಾಗೂ ಪೋಷಕರು ಕೂಡ ಈ ವಿಷಯಗಳ ಕುರಿತಂತೆ ಏಕೆ ಕಲಿಯಬೇಕಿದೆ ಎಂಬಿತ್ಯಾದಿಗಳ ಬಗ್ಗೆ ನಾವು ನಮ್ಮ ಅಂಗನವಾಡಿ ಶಿಕ್ಷಕಿಯರಿಗೆ ಜಾಗೃತಿ ಮೂಡಿಸಲು ಪ್ರಾರಂಭಿಸಿದೆವು. ಈ ಕುರಿತಂತೆ ಕಾರ್ಯಾಗಾರಗಳನ್ನು ಆಯೋಜಿಸಿದೆವು. ಇಲ್ಲಿ ನಾವು ನಿರ್ದಿಷ್ಟ ಪ್ರಕರಣಗಳು ಮತ್ತು ಸನ್ನಿವೇಶಗಳ ಉದಾಹರಣೆಗಳನ್ನು ನೀಡಿದೆವು ಹಾಗೂ, ವಿಶೇಷವಾಗಿ ಹೆಚ್ಚುವರಿ ಸಹಾಯದ ಅಗತ್ಯ-ವಿರುವವರ ಸಹಿತ ಎಲ್ಲಾ ಮಕ್ಕಳನ್ನು ತೊಡಗಿಸಿಕೊಳ್ಳುವುದನ್ನು ಅವರು ಹೇಗೆ ಖಾತರಿಪಡಿಸಿಕೊಳ್ಳಬಹುದು ಎಂದು ಶಿಕ್ಷಕರನ್ನು ಕೇಳಿದೆವು. ನಾವು ಅಂಗನವಾಡಿಗಳಿಗೆ ಹೋದಾಗ, ಎಲ್ಲಾ ಮಕ್ಕಳನ್ನು ತಮ್ಮ ತರಗತಿಗಳಲ್ಲಿ ಸಮನ್ವಯಗೊಳ್ಳುವಂತೆ ಕೆಲಸ ಮಾಡುತ್ತಿದ್ದ ಶಿಕ್ಷಕಿಯರಿಗೆ ನಾವು ಸಹಾಯ ಮಾಡಿದ್ದೇವೆ. ತಮ್ಮ ತರಗತಿಗಳಲ್ಲಿ ತೊಡಗಿಸಿಕೊಳ್ಳುವುದರ ಅರ್ಥವನ್ನು ಮನವರಿಕೆ ಮಾಡಿಕೊಳ್ಳುವುದಕ್ಕೆ ಹಾಗೂ ಅದನ್ನು ಕಾರ್ಯಗತಗೊಳಿಸುವುದಕ್ಕೆ ಶಿಕ್ಷಕಿಯರು ಸ್ವಲ್ಪ ಸಮಯ ತೆಗೆದುಕೊಂಡರು.

> ಮಕ್ಕಳ ಬೆಳವಣಿಗೆಯ ಸಿದ್ಧಾಂತಗಳ ಬಗ್ಗೆ ತಿಳಿದುಕೊಂಡಾಗ, ಪ್ರತಿ ಮಗುವೂ ತನ್ನದೇ ಆದ ವೇಗದಲ್ಲಿ ಬೆಳವಣಿಗೆ ಹೊಂದುತ್ತದೆ ಮತ್ತು ಕಲಿಯುತ್ತದೆ ಎಂಬುದನ್ನು ಶಿಕ್ಷಕಿಯರು ಅರಿತುಕೊಂಡರು. ಹಾಗೆ ನೋಡಿದರೆ, ಮನೆಯ ವಾತಾವರಣವು ಮಗುವಿನ ಕಲಿಕೆಯ ವಿಧಾನದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಕೂಡ ಅವರು ಅರಿತುಕೊಂಡರು. ಯಾವುದೇ ಮಗುವನ್ನು "ತುಂಬ ನಿಧಾನವಾಗಿ ಕಲಿಯುವವನು" ಎಂದು ಹಣೆಪಟ್ಟಿ ಹಚ್ಚುವ ಬದಲಿಗೆ, ಅವನಿಗೆ ಅಥವಾ ಅವಳ ನೆರವಿಗೆ ನಿಲ್ಲುವುದು ಯಾವಾಗಲೂ ಉತ್ತಮವಾದ ವಿಧಾನವಾಗಿದೆ. ಇದನ್ನು ಮಾಡಬೇಕಾದರೆ, ಶಿಕ್ಷಕಿಯರು ಅದರ ಕಾರಣಗಳನ್ನು ವಿಶ್ಲೇಷಿಸಬೇಕಾಗುತ್ತದೆ ಮತ್ತು ಆ ಮಗುವಿನ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಮಕ್ಕಳ ಬೆಳವಣಿಗೆಯ ಹಂತಗಳು (ವಿಕಾಸದ ಮೈಲಿಗಲ್ಲುಗಳು) ಮತ್ತು ವಯಸ್ಸಿನ ಕುರಿತಾದ ತಮ್ಮ ಅರಿವನ್ನು ಹೆಚ್ಚಿಸಿಕೊಂಡ ಶಿಕ್ಷಕಿಯರು, ಪ್ರತಿ ಮಗುವಿನ ವಿಕಾಸಾತ್ಮಕ ಬೆಳವಣಿಗೆಯನ್ನು ಅರಿತುಕೊಳ್ಳಲು ಸಹಾಯ ಮಾಡಬಲ್ಲ, ಮಕ್ಕಳ ಬೆಳವಣಿಗೆಗೆ ಸೂಕ್ತವಾದ ಅವಕಾಶಗಳನ್ನು ಸಹ ಅರ್ಥಮಾಡಿಕೊಂಡರು. ಈ

ಅರಿವಿನೊಂದಿಗೆ, ಕಲಿಯಲು ಮತ್ತು ಬೆಳೆಯಲು ಹೆಚ್ಚು ಸಮಯ ಮತ್ತು ಅವಕಾಶಗಳ ಅಗತ್ಯವಿರುವ ಮಕ್ಕಳನ್ನು ಶಿಕ್ಷಕಿಯರು ಗುರುತಿಸಬಲ್ಲರು. ಇದರಿಂದ ಶಿಕ್ಷಕಿಯರು ತಮ್ಮ ಬೋಧನಾ ವಿಧಾನಗಳನ್ನು ಸುಧಾರಿಸಿಕೊಂಡರು ಹಾಗೂ ಅದೇ ವೇಳೆ ಈ ಮಕ್ಕಳಿಗೆ ಎಲ್ಲಾ ಚಟುವಟಿಕೆಗಳಿಂದ ಕಲಿಯಲು ಸಾಕಷ್ಟು ಅವಕಾಶಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಂಡರು. ಉದಾಹರಣೆಗೆ, ಸಂವಹನ ಚಟುವಟಿಕೆಯಲ್ಲಿ, ಮಗುವು ಒಬ್ಬಂಟಿಯಾಗಿ ಕುಳಿತಿದ್ದರೆ, ಮತ್ತು ಗುಂಪು ಚಟುವಟಿಕೆಯ ಸಮಯದಲ್ಲಿ ಮಾತನಾಡದೆ ಸುಮ್ಮನಿದ್ದರೆ, ಶಿಕ್ಷಕಿಯರು ಮಗುವಿನ ಮೇಲೆ ಒಂದು ಕಣ್ಣಿಡುತ್ತಾರೆ ಮತ್ತು ಮಗು ಬೇರೆ ಮಕ್ಕಳ ಪ್ರತಿಕ್ರಿಯೆಗಳನ್ನು ಕೇಳಿಸಿಕೊಳ್ಳುತ್ತಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ನಿಮಗೇನಾದರೂ ಪ್ರಶ್ನೆ ಕೇಳುವುದಿದೆಯೇ ಅಥವಾ ನಿಮಗೇನಾದರೂ ಹೇಳಲಿಕ್ಕಿದೆಯೇ ಎಂದು ಕೆಲವೊಮ್ಮೆ ಶಿಕ್ಷಕಿಯು ಈ ಮಕ್ಕಳನ್ನು ಕೇಳುತ್ತಾರೆ. ಬಳಿಕ ಆಕೆ ಆ ಮಗುವಿಗೆ ಪ್ರತಿಕ್ರಿಯಿಸಲು ಸ್ವಲ್ಪ ಸಮಯವನ್ನು ನೀಡುತ್ತಾರೆ. ಯಾವುದೇ ಒತ್ತಡವಿಲ್ಲದೆ, ಅವರು ಮಗುವಿಗೆ ಅಂತಹ ಅವಕಾಶಗಳನ್ನು ನೀಡುತ್ತಲೇ ಇರುತ್ತಾರೆ. ಕ್ರಮೇಣ ಆ ಮಗು ಗುಂಪಿನೊಂದಿಗೆ ಕುಳಿತು ಸಂಭಾಷಣೆಯಲ್ಲಿ ಭಾಗವಹಿಸಲು ಪ್ರಾರಂಭಿಸುತ್ತದೆ.

ಮಕ್ಕಳ ಮನೆಗಳಿಗೆ ಭೇಟಿ ನೀಡಿದಾಗ ಇಲ್ಲವೇ ಪ್ರತಿ ತಿಂಗಳು ಇಸಿಸಿಇ (ECCE) ದಿನದಂದು ಪೋಷಕರೊಂದಿಗೆ ಸಭೆಗಳನ್ನು ನಡೆಸಿದಾಗ ಶಿಕ್ಷಕರು, ಮನೆಯ ವಾತಾವರಣವನ್ನು ಸ್ಫೂರ್ತಿದಾಯಕವಾಗಿಸಲು ಹಾಗೂ ಮಗು ಕಲಿಯಲು ಮತ್ತು ಬೆಳೆಯಲು ಸಹಾಯ ಮಾಡುವ ನಿಟ್ಟಿನಲ್ಲಿ ಅವರು ಮನೆಯಲ್ಲಿ ಮಾಡಬೇಕಾದ ಬದಲಾವಣೆಗಳ ಬಗ್ಗೆ ತಿಳಿಸಿಕೊಡುತ್ತಾರೆ.



ಚಿತ್ರ 1: ಶಿಕ್ಷಕಿಯ ಸಹಾಯದಿಂದ ಪುಸ್ತಕ ಓದಲು ಪ್ರಯತ್ನಿಸುವ ಮಕ್ಕಳು

ಹೆಚ್ಚಿನ ಸಹಾಯದ ಅಗತ್ಯವಿರುವ ಮಕ್ಕಳನ್ನೂ ಎಲ್ಲರೊಂದಿಗೆ ಸಮನ್ವಯಗೊಳ್ಳುವಂತೆ ಮಾಡುವ ವಿಧಾನಗಳನ್ನು ಅಂಗನವಾಡಿ ಶಿಕ್ಷಕಿಯರು ಬಳಸಿರುವ ಎರಡು ಪ್ರಕರಣ ಅಧ್ಯಯನಗಳನ್ನು (ಕೇಸ್ ಸ್ಟಡಿ) ಈ ಲೇಖನದಲ್ಲಿ ನಾವು ಪ್ರಸ್ತುತಪಡಿಸುತ್ತೇವೆ.



ಚಿತ್ರ 2: ಆಟದ ವೇಳೆ ತಮ್ಮ ಸರದಿಯ ನಿರೀಕ್ಷೆಯಲ್ಲಿ ಮಕ್ಕಳು

## ಪ್ರಕರಣ ಅಧ್ಯಯನ 1

ತಮ್ಮ ಮಗುವಿಗೆ ವಿಶೇಷ ಗಮನ ಮತ್ತು ಅವಕಾಶಗಳ ಅಗತ್ಯವಿರುವುದನ್ನು 2 ವರ್ಷದ ಮಗುವಿನ ಪೋಷಕರು ಅರಿತುಕೊಂಡರು. ಏಕೆಂದರೆ ಆ ಮಗುವಿನ ಪ್ರತಿವರ್ತನೆಗಳನ್ನು ಮತ್ತು ತನಗನ್ನಿಸಿದ್ದನ್ನು ಹೇಳಲು, ತನ್ನ ಅಭಿವ್ಯಕ್ತ ಸಂವಹನವನ್ನು (expressive communication) ನಿಯಂತ್ರಿಸಲು, ಹಾಗೂ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಕಷ್ಟವಾಗುತ್ತಿತ್ತು. ಆ ಮಗು ಇತರರ ವಸ್ತುಗಳನ್ನು ಕಸಿದುಕೊಳ್ಳುತ್ತಿತ್ತು ಮತ್ತು ಅವರನ್ನು ತಳ್ಳುತ್ತಿತ್ತು. ಆ ಪೋಷಕರು ತಮ್ಮ ಮಗುವನ್ನು ಯಾವುದಾದರೂ ಪ್ರಿ–ಸ್ಕೂಲ್‌ಗೆ ದಾಖಲಿಸಲು ಬಯಸಿದ್ದರು. ಅಲ್ಲಿ ಅದು ಬೇರೆ ಮಕ್ಕಳೊಂದಿಗೆ ಆಟವಾಡಬಹುದು ಹಾಗೂ ಸಂವಹನ ನಡೆಸಬಹುದು ಎನ್ನುವುದು ಅವರ ಉದ್ದೇಶವಾಗಿತ್ತು. ಆದರೆ ಆ ಮಗುವಿನ ಸ್ಥಿತಿಯ ಬಗ್ಗೆ ಅರಿತುಕೊಂಡ ನಂತರ ಯಾವುದೇ ಖಾಸಗಿ ಪ್ರಿ–ಸ್ಕೂಲ್ ಅವನನ್ನು ಸೇರಿಸಿಕೊಳ್ಳಲು ಸಿದ್ಧವಿರಲಿಲ್ಲ. ಆ ಮಗುವಿನ ತಾಯಿಯು ಸ್ವತಃ ಶಾಲೆಯಲ್ಲಿ ಶಿಕ್ಷಕಿಯೊಂದಿಗೆ ಉಳಿಯಲು ಸಿದ್ಧರಾದರೂ ಉಪಯೋಗವಾಗಲಿಲ್ಲ. ಕೊನೆಗೆ ಆ ತಾಯಿ ಹತ್ತಿರದ ಅಂಗನವಾಡಿ ಶಿಕ್ಷಕಿಯನ್ನು ಸಂಪರ್ಕಿಸಿ, ತಮ್ಮ ಮಗು ಬೇರೆ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಆಗ ಆ ಶಿಕ್ಷಕಿಯು, ಸಮಗ್ರ ಶಿಶು ಅಭಿವೃದ್ಧಿ ಸೇವಾ ಮೇಲ್ವಿಚಾರಕರೊಂದಿಗೆ ಮಾತನಾಡಿದರು. ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು ಮತ್ತು ಬೇರೆ ಮಕ್ಕಳೊಂದಿಗೆ ಆಟವಾಡಲು ಮತ್ತು ಕಲಿಯಲು ಸಾಧ್ಯವಾಗುವಂತೆ ಮಾಡಲು ಅಲ್ಲಿಗೆ ದಾಖಲಿಸಿಕೊಂಡರು.

ಆರಂಭದಲ್ಲಿ, ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಈ ಮಗುವನ್ನು ತೊಡಗಿಸಿಕೊಳ್ಳಲು ಶಿಕ್ಷಕಿ ಮತ್ತು ಅನ್ಯ ಮಕ್ಕಳಿಗೆ ಕಷ್ಟವಾಗಿತ್ತು. ಆದರೆ ನಂತರ ಅವರು ಮಗುವಿನ ನಡವಳಿಕೆಯನ್ನು ಗಮನಿಸಿದರು ಹಾಗೂ ಅಂಗನವಾಡಿ ಸಹಾಯಕಿ ಮತ್ತು ಮಗುವಿನ ತಾಯಿಯ ನೆರವಿನಿಂದ ಪ್ರತಿ ಚಟುವಟಿಕೆಯಲ್ಲೂ ಈ ಮಗುವನ್ನು ತಾಳ್ಮೆಯಿಂದ ತೊಡಗಿಸಿಕೊಳ್ಳಲು ಪ್ರಾರಂಭಿಸಿದರು. ಆರಂಭದಲ್ಲಿ ಮಗುವಿನ ತಾಯಿಯು ಯಾವಾಗಲೂ ಅದರ ಕೈ ಹಿಡಿಯಬೇಕಾಗಿತ್ತು. ಕ್ರಮೇಣ, ಬೇರೆ ಮಕ್ಕಳನ್ನು ನೋಡಿ, ಈ ಮಗುವೂ ಅವರೊಂದಿಗೆ ಆಟವಾಡಲು ಮತ್ತು ಮಾತನಾಡಲು ಪ್ರಾರಂಭಿಸಿತು. ಅನ್ಯ ಮಕ್ಕಳೊಂದಿಗೆ ಕಾರ್ನರ್ ಪ್ಲೇ ಆಟದಲ್ಲಿ ಭಾಗವಹಿಸಲಾರಂಭಿಸಿತು, ಅಲ್ಲದೆ ಆಕೃತಿಗಳು ಮತ್ತು ಬಣ್ಣಗಳನ್ನು ಗುರುತಿಸಲಾರಂಭಿಸಿತು, ತನಗೆ ಬೇಕಾಗಿದ್ದನ್ನು ಕೇಳಲಾರಂಭಿಸಿತು ಹಾಗೂ ಬೇರೆ ಮಕ್ಕಳನ್ನು ಅವರ ಹೆಸರಿನಿಂದ ಗುರುತಿಸಲಾರಂಭಿಸಿತು.


ಮೇಲಿನ ಉದಾಹರಣೆಯಲ್ಲಿ, ವಿಭಿನ್ನವಾಗಿ ವರ್ತಿಸುವ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಶಿಕ್ಷಕಿಯು ಪರಿಣತರಲ್ಲದಿದ್ದರೂ, ಅವರು ಬೇರೆ ತಜ್ಞರ ಸಲಹೆಯೊಂದಿಗೆ ತಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡಿದರು. ಅವರು ಮೊದಲು ಈ ಮಗುವನ್ನು ಬೇರೆ ಮಕ್ಕಳೊಂದಿಗೆ ತೊಡಗಿಸಿಕೊಳ್ಳಲು ಪ್ರಯತ್ನಿಸಿದರು, ಆದರೆ ಮಗುವಿಗೆ ಹೆಚ್ಚುವರಿ ಗಮನ ನೀಡುವ ಅಗತ್ಯವಿರುವುದರಿಂದ ಅದಕ್ಕೆ ಇನ್ನಷ್ಟು ಸಮಯವನ್ನು ನೀಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಅವರು ಅರಿತುಕೊಂಡರು. ಈ ರೀತಿಯ ಸನ್ನಿವೇಶದಲ್ಲಿ, ಆ ಮಗುವನ್ನು ಕಾರ್ಯ ನಿರತರಾಗಿರಿಸಲು ಹಾಗೂ ಚಟುವಟಿಕೆಗಳಲ್ಲಿ ತೊಡಗಿಸಿ–ಕೊಳ್ಳಲು ಅವರಿಗೆ ಸಾಕಷ್ಟು ತಾಳ್ಮೆ ಇರಬೇಕಾಗುತ್ತದೆ. ಆದ್ದರಿಂದ ಅವರು ತಮ್ಮ ಚಟುವಟಿಕೆಗಳು ಮತ್ತು ಸಮಯವನ್ನು ಮಗುವಿಗೆ ಸಾಕಷ್ಟು ಗಮನ ನೀಡುವ ರೀತಿಯಲ್ಲಿ ಯೋಜಿಸಲು ಪ್ರಾರಂಭಿಸಿದರು. ಅನ್ಯ ಮಕ್ಕಳೂ ಕೂಡ ತಮ್ಮ ಸರದಿಗಾಗಿ ಕಾಯಲು ಮತ್ತು ತಮ್ಮ ಸ್ನೇಹಿತನನ್ನು ಹುರಿದುಂಬಿಸುವುದನ್ನು ಕಲಿತರು. ತನ್ನನ್ನು ಎಲ್ಲರೂ ಸ್ವೀಕರಿಸುತ್ತಿರುವರೆಂದೂ, ಗೌರವಿಸುತ್ತಿರುವರೆಂದೂ ಹಾಗೂ ತಾನು ಅವರಿಗೆಲ್ಲ ಮುಖ್ಯವೆಂದು ಭಾವಿಸುವ ವಾತಾವರಣವನ್ನು ಮಗುವಿಗಾಗಿ ಅವರು ಸೃಷ್ಟಿಸಿದರು. ಮಗುವನ್ನು ಮುಖ್ಯವಾಹಿನಿಗೆ ತರುವ ಈ ಪ್ರಕ್ರಿಯೆಯಲ್ಲಿ ಆ ಮಗುವಿನ ತಾಯಿಯ ಪಾತ್ರವೂ ನಿರ್ಣಾಯಕವಾಗಿತ್ತು. ಆಕೆ ತಮ್ಮ ಮನೆಯಲ್ಲಿ ವಿಭಿನ್ನ ವಸ್ತುಗಳನ್ನು ಬಳಸಿಕೊಂಡು ಬೇರೆ ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಆ ಮಗುವನ್ನು ಪ್ರೇರೇಪಿಸುತ್ತಿದ್ದರು ಹಾಗೂ ಮಗುವಿಗೆ ಸಹಾಯ ಮಾಡಲು ಬೋಧನಾ ತಂತ್ರಗಳನ್ನು ಕಲಿಯುವುದನ್ನು ಮುಂದುವರಿಸುತ್ತಾ ಸಾಗಿದರು.

## ಪ್ರಕರಣ ಅಧ್ಯಯನ 2

4 ವರ್ಷದ ಮಗುವೊಂದು ಎಲ್ಲಾ ಚಟುವಟಿಕೆಗಳಲ್ಲೂ ನಿರಾಸಕ್ತಿ ತೋರಿಸುತ್ತಿದ್ದುದರಿಂದ ಅವನನ್ನು ತರಗತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅಂಗನವಾಡಿ ಶಿಕ್ಷಕಿಯೊಬ್ಬರಿಗೆ ತುಂಬ ಕಷ್ಟವಾಯಿತು. ಅವನು ತುಂಬಾ ದುಃಖಿತನಾಗಿದ್ದು, ಖಿನ್ನತೆಗೆ ಒಳಗಾದಂತೆ ಕಾಣುತ್ತಿದ್ದನು. ಸರ್ಕಲ್ ಟೈಂ ಮತ್ತು ಗುಂಪು ಚಟುವಟಿಕೆಗಳ ಸಂದರ್ಭದಲ್ಲೂ ವಿಷಯಗಳನ್ನು ಗ್ರಹಿಸಲು ಅವನಿಗೆ ಬಹಳ ಸಮಯ ಹಿಡಿಯುತ್ತಿತ್ತು ಹಾಗೂ ಅವನು ಬೇರೆ ಮಕ್ಕಳೊಂದಿಗೆ ಬಹಳ ಅಪರೂಪಕ್ಕಷ್ಟೇ ಆಟವಾಡುತ್ತಿದ್ದನು. ತರಗತಿಯ ಸಮಯದಲ್ಲಿ ಮಗುವಿನ ಕಲಿಕೆಯ ಮಾದರಿಗಳು, ನಡವಳಿಕೆಗಳು ಮತ್ತು ಪ್ರತಿಕ್ರಿಯೆಗಳನ್ನು ಎಚ್ಚರಿಕೆಯಿಂದ ಗಮನಿಸುವುದರ ಮೂಲಕ, ಅದಕ್ಕೆ ಹೆಚ್ಚಿನ ಗಮನದ ಅಗತ್ಯವಿದೆ ಎಂಬುದನ್ನು ಆ ಶಿಕ್ಷಕಿಯು ಅರ್ಥಮಾಡಿಕೊಂಡರು. ನಂತರ ಶಿಕ್ಷಕಿಯು ತರಗತಿಯ ಚಟುವಟಿಕೆಗಳಲ್ಲಿ ದೊಡ್ಡ, ಸಣ್ಣ ಮತ್ತು ವೈಯಕ್ತಿಕ ಬೋಧನಾ ಚಟುವಟಿಕೆಗಳ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವತ್ತ ಗಮನ ಹರಿಸಲು ಪ್ರಾರಂಭಿಸಿದರು.

ಇದು ಶಿಕ್ಷಕರಿಗೆ ಮಗುವಿನೊಂದಿಗೆ ಹೆಚ್ಚಾಗಿ ಸಂವಹನ ನಡೆಸಲು, ಸಹಾಯ ಮಾಡಲು ಮತ್ತು ಮಾರ್ಗದರ್ಶನ ಮಾಡಲು ಅವಕಾಶಗಳನ್ನು ಒದಗಿಸಿತು. ಸಣ್ಣ ಗುಂಪು ಚಟುವಟಿಕೆಗಳ ಸಮಯದಲ್ಲಿ, ಅವರು ಪರಸ್ಪರ ಸಹಕರಿಸುವ ಮೂಲಕ ಕಾರ್ಯಗಳನ್ನು ಪೂರ್ಣಗೊಳಸಲು ಮಕ್ಕಳನ್ನು ಪ್ರೋತ್ಸಾಹಿಸಿದರು. ಉಳಿದ ಮಕ್ಕಳೊಂದಿಗೆ ತಾನೂ ಸಹ ಸಣ್ಣಪುಟ್ಟ ಯಶಸ್ಸನ್ನು ಸಾಧಿಸಿರುವುದಕ್ಕೆ ಆ ಮಗುವಿಗೆ ತುಂಬ ಖುಷಿಯಾಯಿತು.  ಶಿಕ್ಷಕಿಯು ಸರ್ಕಲ್ ಟೈಂನಲ್ಲಿ 'ಉತ್ತರಿಸುವ ಮೊದಲು ಒಂದು ಕ್ಷಣ ಕಾಯುವ' ವಿಧಾನವನ್ನು ಅಳವಡಿಸಿಕೊಳ್ಳಲು ಪ್ರಾರಂಭಿಸಿದರು. ಇದು ಮಗುವಿಗೆ ಯೋಚಿಸಲು ಮತ್ತು ಪ್ರತಿಕ್ರಿಯಿಸಲು ಸಮಯವನ್ನು ಒದಗಿಸಿತು. ಅವರು ಮಗುವಿನ ಪ್ರಗತಿಯ ಮೇಲೆ ಗಮನ ಹರಿಸಲು ಪ್ರಾರಂಭಿಸಿದರು ಹಾಗೂ ಹೆಚ್ಚಿನ ಗಮನ ಅವಶ್ಯಕತೆಯಿರುವ ಕ್ಷೇತ್ರಗಳನ್ನು ಗುರುತಿಸಿದರು. ಅದೇ ವೇಳೆ, ಮನೆಯಲ್ಲಿ ಆ ಮಗುವಿನ ಕಲಿಕೆಯ ಅಭ್ಯಾಸದ ಬಗ್ಗೆ ಒಳನೋಟವನ್ನು ಪಡೆಯಲು ಅದರ ಪೋಷಕರ ಜೊತೆ ಸಂವಹನವನ್ನು ಮುಂದುವರಿಸಿದರಲ್ಲದೆ, ಅದರ ಆಸಕ್ತಿಗಳಿಗೆ ಅನುಗುಣವಾಗಿ ಬೋಧನಾ ತಂತ್ರಗಳನ್ನು ಸರಿಹೊಂದಿಸಿದರು. ಅದರ ಸಣ್ಣ ಪುಟ್ಟ ಸಾಧನೆಗಳನ್ನೂ ಗುರುತಿಸಿ ಶ್ಲಾಘಿಸುವ ಕೆಲಸವನ್ನೂ ಶಿಕ್ಷಕಿ ಮಾಡಿದರು.  ಇದು ಮಗುವಿನ ಸ್ವಾಭಿಮಾನವನ್ನು ಹೆಚ್ಚುವಂತೆ ಮಾಡಿತು ಹಾಗೂ ಕಲಿಕೆಯನ್ನು ಮುಂದುವರಿಸಲು ಪ್ರೇರೇಪಣೆಯನ್ನೂ ನೀಡಿತು. ಈ ಎಲ್ಲಾ ಪ್ರಯತ್ನಗಳಿಂದಾಗಿ, ಆತ ಈಗೀಗ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಉತ್ಸುಕನಾಗಿರುತ್ತಾನೆ, ಗೆಳೆಯರೊಂದಿಗೆ ಖುಷಿಖುಷಿಯಾಗಿ ಮಾತನಾಡುತ್ತಾನೆ ಮತ್ತು ಆಟವನ್ನೂ ಆಡುತ್ತಾನೆ.

ಕಲಿಕೆಯ ತೊಂದರೆಗಳನ್ನು ಹೊಂದಿರುವ ಮಕ್ಕಳ ಆರಂಭದ ವರ್ಷಗಳಲ್ಲಿ ಅವರನ್ನು ತಮ್ಮ ಶಿಕ್ಷಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಹಾಗೂ ಅವರ ಪಾಲನೆ ಪೋಷಣೆ ಮಾಡಲು ಸಂವೇದನಾಶೀಲತೆ, ತಾಳ್ಮೆ ಮತ್ತು ಸಮರ್ಪಣೆಯ ಮನೋಭಾವದ ಅಗತ್ಯವಿರುತ್ತದೆ. ಪ್ರತಿ ಮಗುವಿನ ಪ್ರಯಾಣವೂ ವಿಭಿನ್ನ ಮತ್ತು ವಿಶಿಷ್ಟವಾಗಿರುತ್ತದೆ. ಸವಾಲುಗಳನ್ನು ಎದುರಿಸಲು ಮತ್ತು ತಮ್ಮ ಸಾಮರ್ಥ್ಯವನ್ನು ಸಾಬೀತುಮಾಡಲು ಅವರಿಗೆ ವೈಯಕ್ತಿಕ ಮಾರ್ಗದರ್ಶನ ಮತ್ತು ಪ್ರೋತ್ಸಾಹದ ಅವಶ್ಯಕತೆ ಇರುತ್ತದೆ. ಅಸಲಿಗೆ, ಇದು ಶಿಕ್ಷಕರಿಗೆ ದೊಡ್ಡ ಸವಾಲಾಗಿದೆ. ಏಕೆಂದರೆ ಆ ಮಕ್ಕಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸುವಂತೆ ಅವರನ್ನು ಪ್ರೇರೇಪಿಸುತ್ತಿರಲು ಅವರಿಗೆ ನಿರಂತರ ನೆರವಿನ ಅಗತ್ಯವಿರುತ್ತದೆ.



**ಸುಜಾತಾ ರಾವಿ** ಅವರು ತೆಲಂಗಾಣದ ಸಂಗಾರೆಡ್ಡಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಬ್ಲಾಕ್ ಸಂಯೋಜಕರಾಗಿದ್ದಾರೆ. ಅಂಗನವಾಡಿ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ, ಮಕ್ಕಳ ಮೌಲ್ಯಮಾಪನ ಹಾಗೂ ಇತರ ರಾಜ್ಯಗಳಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ (ಇಸಿಇ) ವಿಸ್ತರಣೆಗಾಗಿ ಪಠ್ಯಕ್ರಮ ಮತ್ತು ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸುವ ತಂಡದಲ್ಲಿ ಅವರು ಕಾರ್ಯನಿರತರಾಗಿದ್ದಾರೆ.
ಸಂಪರ್ಕ: raavi.sujatha@azimpremjifoundation.org



**ದಸನ್ನಾ ಮರೆಡ್ಡಿ** ಅವರು ತೆಲಂಗಾಣದ ಸಂಗಾರೆಡ್ಡಿಯ ಪಟನ್ ಚೇರು ಬ್ಲಾಕಿನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕ್ಷೇತ್ರ ಕಾರ್ಯದ ಸಮನ್ವಯವನ್ನು ಮಾಡುತ್ತಾರೆ. ಮೊದಲ 2 ವರ್ಷಗಳ ಕಾಲ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡಿದ ನಂತರ, ಅವರು ಕಳೆದ 10 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ.
ಸಂಪರ್ಕ: dasanna.mareddy@azimpremjifoundation.org

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಕಲೆಯಲ್ಲಿ ಸಮನ್ವಯಗೊಳ್ಳುವಿಕೆ- ಶಿಕ್ಷಕರ ಪಾತ್ರ

ದೀಪಿಕಾ ಶರ್ಮಾ

ಕಲೆಯನ್ನು ರಚಿಸುವಲ್ಲಿ (ಅಥವಾ ರಚಿಸದೆ ಇರುವಲ್ಲಿ) ಸಂಬಂಧಿಸಿದ ಭಯವನ್ನು ನಾವು ತಿಳಿದೋ ತಿಳಿಯದೆಯೋ ನಮ್ಮ ಮಕ್ಕಳಿಗೆ ದಾಟಿಸಿಬಿಡುತ್ತೇವೆ. ಶಿಕ್ಷಕರಾಗಿ ಕಲೆಗಳ ಬಗ್ಗೆ ನಮ್ಮ ಮುಕ್ತತೆ ಮತ್ತು ನಂಬಿಕೆಗಳು ನಮ್ಮ ತರಗತಿಯಲ್ಲಿ ಮಕ್ಕಳು ಹೇಗೆ ಕಲಾ ಪ್ರಕಾರಗಳೊಂದಿಗೆ ತೊಡಗಿಸಿಕೊಳ್ಳುತ್ತಾರೆ ಎಂಬುದನ್ನು ನಿರ್ಧರಿಸುತ್ತದೆ. ಕಲೆಗಳ ಕಡೆಗೆ ಸಕಾರಾತ್ಮಕ ಮತ್ತು ಮುಕ್ತ ಮನೋಭಾವ ಅಳವಡಿಸಿಕೊಳ್ಳುವುದು ಸಮನ್ವಯಗೊಳ್ಳುವಿಕೆಯ ವಾತಾವರಣವನ್ನು ಬೆಳೆಸುತ್ತದೆ. ಅಲ್ಲಿ ಪ್ರತಿ ಮಗುವೂ ತನ್ನನ್ನು ತಾನು ಸೃಜನಾತ್ಮಕವಾಗಿ ಅನ್ವೇಷಿಸಲು ಮತ್ತು ವ್ಯಕ್ತಪಡಿಸಲು ಪ್ರೋತ್ಸಾಹ ಪಡೆಯುತ್ತದೆ

**"ನಾನು ಹಾಡಲು ಸಾಧ್ಯವಿಲ್ಲ"**
**"ನಾನು ಚಿತ್ರ ಬಿಡಿಸಲು ಸಾಧ್ಯವಿಲ್ಲ"**
**"ನನಗೆ ಚೆನ್ನಾಗಿ ನಟಿಸಲು ಬರುವುದಿಲ್ಲ"**
**"ನಾನು ಕಲಾವಿದನಲ್ಲ"**

ನಮ್ಮಲ್ಲಿ ಎಷ್ಟು ಮಂದಿ ಈ ಮೇಲಿನ ಯಾವುದಾದರೂ ಹೇಳಿಕೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬಹುದು? ನಾವು ಮಕ್ಕಳಾಗಿದ್ದಾಗ ನಮ್ಮ ಹಾಡುಗಳನ್ನು ಸುಧಾರಿಸಿ ಸರಿಯಾದ ತಾಳ ಮತ್ತು ಲಯದಲ್ಲಿ ಹಾಡಲು ಹೇಳಲಾಗುತ್ತಿತ್ತು. ಇದರಿಂದ ಸಂಗೀತ ಮತ್ತು ಹಾಡುವ ವಿಚಾರಗಳು ಸೃಷ್ಟಿಯಾಗುತ್ತಿತ್ತು. ನಮ್ಮಲ್ಲಿ ಹೆಚ್ಚಿನ ಜನ ಅಂತ್ಯಾಕ್ಷರಿಯನ್ನು ಎಲ್ಲರ ಜೊತೆ ಹಾಡಿ ತಪ್ಪಿಸಿಕೊಳ್ಳುತ್ತಿದ್ದೆವು ಮತ್ತು ಹೆಚ್ಚೆಂದರೆ ನಮ್ಮ ಗಾಯನವನ್ನು ಬಾತ್ ರೂಮ್ ಇಂಡಿಯನ್ ಐಡಲ್ ಗೆ ಸೀಮಿತಗೊಳಿಸಿಕೊಂಡಿದ್ದೆವು. ಹಾಡಲು ವೇದಿಕೆ ಅಥವಾ ಮೈಕ್ ಸಿಕ್ಕಾಗ , ಹಾಡುವ ನಮ್ಮ ಅಸಮರ್ಥತೆ ಇನ್ನಷ್ಟು ಸ್ಪಷ್ಟವಾಗಿ ಗೋಚರವಾಗಿ ನಾವು ಭಾಗವಹಿಸುವುದಕ್ಕೇ ನಿರಾಕರಿಸುತ್ತಿದ್ದೆವು. ಇದರಿಂದ ಮುಂದೆ ಸಂಗೀತ ಕಲಿಯುವ ಅವಕಾಶ ಇನ್ನಷ್ಟು ಕ್ಷೀಣಿಸುತ್ತಿತ್ತು.

ನಮ್ಮಲ್ಲಿ ಹೆಚ್ಚಿನವರಿಗೆ ಸಂಗೀತ, ನೃತ್ಯ, ಚಿತ್ರಕಲೆ ಅಥವಾ ನಟನೆಯಂತಹ ಚಟುವಟಿಕೆಗಳಲ್ಲಿ ತಪ್ಪು ಮಾಡುವ ಭಯವು , ಕಲೆ ನಮಗೆ ಅಲ್ಲ ಎಂಬ ನಂಬಿಕೆಯನ್ನು ರೂಪಿಸಿದೆ. ಈ ಕಲ್ಪನೆಯು ಕಲೆಯನ್ನು ಸರಿ ಅಥವಾ ತಪ್ಪು ಎಂದು ನಿರ್ಣಯಿಸುವ ಸಾಂಪ್ರದಾಯಿಕ ದೃಷ್ಟಿಕೋನದಿಂದ ಬಂದಿದೆ. ಉದಾಹರಣೆಗೆ ವರ್ಣಚಿತ್ರವು ವಾಸ್ತವವನ್ನು ನಿಖರವಾಗಿ ಪ್ರತಿನಿಧಿಸಿದರೆ ಮಾತ್ರ ಅದನ್ನು ಸುಂದರವೆಂದು ಪರಿಗಣಿಸಲಾಗುತ್ತದೆ. ಆದರೂ ವಿನ್ಸೆಂಟ್ ವ್ಯಾನ್ ಗಾಗ್ ಮತ್ತು ಪಾಬ್ಲೊ ಪಿಕಾಸೋ ಅವರಂತಹ ಕೆಲವು ಪ್ರಸಿದ್ಧ ಅಂತಾರಾಷ್ಟ್ರೀಯ ಕಲಾವಿದರು ಅವರ ಕೃತಿಗಳು ಶುದ್ಧತೆ ಮತ್ತು ಪರಿಪೂರ್ಣತೆಯ ಸಾಂಪ್ರದಾಯಿಕ ಮಾನದಂಡಗಳನ್ನು ನಿರಾಕರಿಸಿಯೂ ಪ್ರಸಿದ್ಧರಾಗಿದ್ದಾರೆ. ನಮ್ಮಲ್ಲಿ ಅನೇಕರಂತೆ ಅವರು ಕಲೆಗಳಿಗೆ ಹೆದರುತ್ತಿದ್ದರೆ ಜಗತ್ತು ಅವರ ಅತ್ಯುತ್ತಮ ಸೃಷ್ಟಿಗಳಿಂದ ವಂಚಿತವಾಗುತ್ತಿತ್ತು.



ಚಿತ್ರ 1: ಕಲೆಗಳು ಮಕ್ಕಳಿಗೆ ಮುಕ್ತವಾಗಿ ಅಭಿವ್ಯಕ್ತಿಸಲು ಸಂದರ್ಭವನ್ನು ಸೃಷ್ಟಿಸುತ್ತವೆ.

ಎನ್.ಇ.ಪಿ 2020 (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು), ಇದು ಅತ್ಯುತ್ತಮವಾಗಿ ರಚನಾತ್ಮಕವಾಗಿರುವ ಎನ್.ಸಿ.ಎಫ್ ಅನ್ನು ಆಧರಿಸಿದೆ. ಪ್ರತಿ ತರಗತಿಯಲ್ಲೂ ಕಲೆಗಳ ಸೇರ್ಪಡೆಗೆ ಒತ್ತು ನೀಡುತ್ತದೆ. ಈ ಸೇರ್ಪಡೆಯನ್ನು ಎರಡು ರೀತಿಯಲ್ಲಿ ಸಂಪರ್ಕಿಸಬಹುದು. ಪಠ್ಯಕ್ರಮದ ಒಂದು ಭಾಗವಾಗಿ ಮತ್ತು ಶಿಕ್ಷಣಶಾಸ್ತ್ರದ ಸಾಧನವಾಗಿ. ಎರಡೂ ವಿಧಾನಗಳು ತರಗತಿಯ ಪರಿಸರವನ್ನು ಉತ್ಕೃಷ್ಟಗೊಳಿಸುವಲ್ಲಿ ವಿಭಿನ್ನ ಆದರೆ ಪೂರಕ ಪಾತ್ರಗಳನ್ನು ನಿರ್ವಹಿಸುತ್ತವೆ.

ನಮ್ಮ ಬೋಧನೆಯಲ್ಲಿ ಕಲೆಗಳನ್ನು ಏಕೆ ಮತ್ತು ಹೇಗೆ ಸಮನ್ವಯಗೊಳಿಸಬೇಕು ಎಂಬುದರ ಕುರಿತು ಈಗ ಮಾತನಾಡೋಣ. ಮಕ್ಕಳು ಮತ್ತು ಶಿಕ್ಷಕರೊಂದಿಗೆ ವಿವಿಧ ಸಂದರ್ಭಗಳಲ್ಲಿ ಮತ್ತು ಕಲಿಕೆಯ ಪರಿಸರದಲ್ಲಿ ಕೆಲಸ ಮಾಡಿದ ನನ್ನ ಅನುಭವದಿಂದ ಬಂದ ಒಳನೋಟಗಳನ್ನು ಹಂಚಿಕೊಳ್ಳುತ್ತೇನೆ. ನಿಮ್ಮ ಮುಂದಿನ ತರಗತಿಗೆ ಇದು ನಿಮಗೆ ಕೆಲವು ಉಪಯುಕ್ತ ವಿಚಾರಗಳನ್ನು ನೀಡುತ್ತದೆ ಎಂದು ಭಾವಿಸುತ್ತೇನೆ.

## ಪಠ್ಯಕ್ರಮದ ಭಾಗವಾಗಿ ಕಲೆ

ಪ್ರತಿ ಮಗುವಿಗೆ ಭಾಗವಹಿಸಲು ಅವರ ಆಸಕ್ತಿಗಳು ಅಥವಾ ಕೌಶಲಗಳನ್ನು ಹಂಚಿಕೊಳ್ಳಲು ಮತ್ತು ಕಲಾತ್ಮಕ ಯೋಜನೆಗಳಲ್ಲಿ ಸಹಯೋಗಿಸಲು ಸ್ಥಳವನ್ನು ರಚಿಸುವ ಮೂಲಕ ನಾವು ನಿಜವಾದ ಸಮನ್ವಯಗೊಳ್ಳುವಿಕೆಯ ವಾತಾವರಣವನ್ನು ಬೆಳೆಸುತ್ತೇವೆ. ನಾವು ವೈಯಕ್ತಿಕ ಅಭಿವ್ಯಕ್ತಿ ಮತ್ತು ಸೃಜನಾತ್ಮಕ ಕೊಡುಗೆಗಳನ್ನು ಪ್ರೋತ್ಸಾಹಿಸುವವರೆಗೆ ಈ ವಿಧಾನವು ಎಲ್ಲ ವರ್ಗದ ಜನರಿಗೆ ಕೆಲಸ ಮಾಡುತ್ತದೆ.

## ಸಹಯೋಗ ಹೇಗೆ ಕೆಲಸ ಮಾಡುತ್ತದೆ?

ನನ್ನ ನೆಚ್ಚಿನ ಚಟುವಟಿಕೆಗಳಲ್ಲಿ ಒಂದು ಸಾಮೂಹಿಕ ಕೊಲಾಜ್ ಕಲೆ. ಇದನ್ನು ಶಿಶುವಿಹಾರದಿಂದ 12ನೇ ತರಗತಿಯ ಮಕ್ಕಳಿಗೆ ಅಳವಡಿಸಿಕೊಳ್ಳಬಹುದು ಮತ್ತು ಬಳಸಬಹುದು. ಒಮ್ಮೆ ಈ ಸಹಯೋಗದ ಕಲಾಕೃತಿಗಳನ್ನು ಗೋಡೆ, ಸೂಚನಾ ಫಲಕ ಇತ್ಯಾದಿಗಳ ಮೇಲೆ ಇರಿಸಿದರೆ ಅವು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತಿರುತ್ತವೆ. ಮತ್ತು ಶಾಲಾ ಸಮುದಾಯದಲ್ಲಿ ಅವರ ಸ್ಥಾನದ ಬಗ್ಗೆ ಭರವಸೆ ಮೂಡಿಸುತ್ತವೆ.

ನಾವು ಕಲೆ ಆಧಾರಿತ ಸಹಯೋಗದ ಯೋಜನೆಗಳನ್ನು ನಮ್ಮ ಬೋಧನಾ ವಿಧಾನದಲ್ಲಿ ಸಂಯೋಜಿಸಿದಾಗ ಸಹಪಾಠಿಗಳ ನಡುವಿನ ಪರಸ್ಪರ ಕ್ರಿಯೆಗಳು ಸಕಾರಾತ್ಮಕ ದಿಕ್ಕಿನಲ್ಲಿ ನಾಟಕೀಯ ತಿರುವು ಪಡೆದುಕೊಳ್ಳುತ್ತವೆ. ಹದಿಹರೆಯದ ಮಕ್ಕಳಿಗಾಗಿ ನಡೆದ ಕಾರ್ಯಾ-ಗಾರದಲ್ಲಿ ಕೆಲವು ಮಕ್ಕಳು ಇತರ ಮಕ್ಕಳ ಮೇಲೆ ಪ್ರಾಬಲ್ಯ ಸ್ಥಾಪಿಸಲು ಪ್ರಯತ್ನಿಸುತ್ತಿರುವುದನ್ನು ನಾನು ಗಮನಿಸಿದೆ. ಆದರೆ ನಿಯಮಿತ ಕಲಾ-ಆಧಾರಿತ ಚಟುವಟಿಕೆಗಳ ಮೂಲಕ ಈ ವಿದ್ಯಾರ್ಥಿಗಳು ಅಧಿಕಾರದ ಹೋರಾಟವನ್ನು ಬದಿಗಿಟ್ಟು, ತಮ್ಮ ಸಾಮೂಹಿಕ ಕಲಾಕೃತಿಯನ್ನು ರಚಿಸಲು ಮತ್ತು ಪ್ರಸ್ತುತಪಡಿಸಲು ಒಟ್ಟಾಗಿ ಮತ್ತು ಸಹಯೋಗದೊಂದಿಗೆ ಕೆಲಸ ಮಾಡಲು ಸಾಧ್ಯವಾಯಿತು. ನನ್ನ ಮನಸ್ಸಿನಲ್ಲಿ ಅಚ್ಚೊತ್ತಿರುವ ಮತ್ತೊಂದು ಶಕ್ತಿಯುತ ಸ್ಮರಣೆಯೆಂದರೆ ಕಲಿಕೆಯಲ್ಲಿ ತೊಂದರೆಗಳನ್ನು ಹೊಂದಿರುವ ಮಕ್ಕಳನ್ನು ಒಳಗೊಂಡಂತೆ ಮಕ್ಕಳ ಗುಂಪು ಒಟ್ಟಾಗಿ ಕೋರಸ್ ಹಾಡುವುದನ್ನು ನೋಡುವುದು. ಅವರ ಗುಂಪಿನ ಚಟುವಟಿಕೆಯಲ್ಲಿ ಏಕತೆಯ ಆಳವಾದ ಅರ್ಥ ಮತ್ತು ಹಂಚಿಕೆಯ ಉದ್ದೇಶವು ತೀವ್ರವಾಗಿತ್ತು ಮತ್ತು ಹೆಚ್ಚಿನ ತರಗತಿಯಲ್ಲಿ ಇದನ್ನು ಸಾಧಿಸುವುದು ಬಹಳ ಕಷ್ಟಕರವಾಗಿತ್ತು.

## ನಿರ್ಣಯಿಸದಿರುವುದು ಏಕೆ ಮುಖ್ಯ?

ಕಲೆಗಳು ಮಕ್ಕಳಿಗೆ ತಮ್ಮನ್ನು ತಾವು ವ್ಯಕ್ತಪಡಿಸಲು ವಿಶಿಷ್ಟವಾದ , ನಿರ್ಣಯಿಸಲಾಗದ ಅವಕಾಶ ದೊರಕಿಸಿಕೊಡುತ್ತವೆ. ಶಿಕ್ಷಕ ಪ್ರತಿ ಮಗುವಿನ ರಚನೆಯನ್ನು ನಿರ್ಣಯ ನೀಡದೆ ಪ್ರತಿಕ್ರಿಯಿಸುವುದು ತುಂಬಾ ಮುಖ್ಯ. ಈ ಪ್ರತಿಕ್ರಿಯೆಗಳು ವಿವರಣಾತ್ಮಕವಾಗಿರಬೇಕು ಮತ್ತು ವರ್ಣನಾತ್ಮಕವಾಗಿರಬೇಕು. "ಈ ತುಣುಕನ್ನು ರಚಿಸುವಲ್ಲಿ ನೀನು ಸಾಕಷ್ಟು ವಿವರಗಳನ್ನು ಹಾಕಿರುವುದನ್ನು ನಾನು ನೋಡಬಹುದು." "ಇದನ್ನು ಬರೆಯುವಾಗ ನೀನು ನಿನ್ನ ಸ್ವಂತ ಜೀವನದಿಂದ ಸ್ಫೂರ್ತಿ ಪಡೆದಿದ್ದೀಯಾ ಎಂದು ತೋರುತ್ತದೆ." ಇತ್ಯಾದಿ." ವಾವ್ ! ಅವಳು ಎಷ್ಟು ಸುಂದರವಾಗಿದ್ದಾಳೆ." ಇತ್ಯಾದಿ ವೈಯಕ್ತಿಕ ಅಥವಾ ಅನಿಯಂತ್ರಿತ ಪ್ರತಿಕ್ರಿಯೆಗಳು ಇರಬಾರದು. ಈ ಸ್ಥಳದಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದೇನೂ ಇಲ್ಲ. ಸರಿ ಅಥವಾ ತಪ್ಪು ಎಂಬುದಿಲ್ಲ.



ಚಿತ್ರ 2: ಮಕ್ಕಳು ತಮ್ಮನ್ನು ತಾವು ಅಭಿವ್ಯಕ್ತಗೊಳಿಸಿಕೊಳ್ಳಲು ಕಲೆಗಳು ನ್ಯಾಯಾತೀತವಾದ ಅವಕಾಶಗಳನ್ನು ಒದಗಿಸಬೇಕು

ಹೆಚ್ಚು ರಚನಾತ್ಮಕ ಅಥವಾ ಶೈಕ್ಷಣಿಕ ಚಟುವಟಿಕೆಗಳಿಗಿಂತ ಭಿನ್ನವಾಗಿ ಕಲಾತ್ಮಕ ಅಭಿವ್ಯಕ್ತಿ ತಪ್ಪು ಎಂಬ ಭಯವಿಲ್ಲದೆ ಪರಿಶೋಧನೆಗೆ ಇದು ಆಹ್ವಾನ ನೀಡುತ್ತದೆ. ಅದು ಚಿತ್ರಕಲೆ, ಸಂಗೀತ, ನೃತ್ಯ ಅಥವಾ ಕತೆ ಹೇಳುವಿಕೆ ಆಗಿರಲಿ. ಮಕ್ಕಳು ತಮ್ಮ ಭಾವನೆಗಳು, ಆಲೋಚನೆಗಳು ಮತ್ತು ವೀಕ್ಷಣೆಗಳನ್ನು ಆಳವಾದ ವೈಯಕ್ತಿಕ ಮತ್ತು ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ವ್ಯಕ್ತಪಡಿಸಬಹುದು. ಈ ಮುಕ್ತ ವಿಧಾನವು ಮಕ್ಕಳಿಗೆ ತಮ್ಮ ಪ್ರಯತ್ನಗಳಿಗೆ ಬೆಲೆ ಕೊಡುವ ಅವಕಾಶವನ್ನು ನೀಡುತ್ತದೆ. ಅವರ ಸೃಷ್ಟಿಯ ಗುಣಮಟ್ಟ ಮತ್ತು ನಿಖರತೆಗಾಗಿ ಅವರು ನಿರ್ಣಯಿಸಲ್ಪಡುತ್ತಾರೆ ಎಂದು ಅವರು ಭಾವಿಸಬಾರದು. ಕಲಾ ಪ್ರಪಂಚಕ್ಕೆ ಪ್ರತಿಯೊಂದು ಕೊಡುಗೆಯೂ ತನ್ನದೇ ಆದ ಅರ್ಥವನ್ನು ಹೊಂದಿದೆ ಮತ್ತು ಮಗುವಿನ ಆತ್ಮವಿಶ್ವಾಸ ಮತ್ತು ಸಂಪರ್ಕದ ಪ್ರಜ್ಞೆಯನ್ನು ಬೆಳೆಸುತ್ತದೆ. ಸಮತಟ್ಟಾದ ಪರ್ವತ ಅಥವಾ ಗುಲಾಬಿ ಆಕಾಶದ ಚಿತ್ರವನ್ನು ಸೆಳೆಯುವ ಪ್ರತಿ ಮಗುವಿಗೆ ಕಲಾ ಕನ್ನಡಕವು ಸ್ಥಳಾವಕಾಶವನ್ನು ನೀಡುತ್ತದೆ.

## ಪ್ರಕ್ರಿಯೆಯು ಮುಖ್ಯವಾಗಿದೆ ಫಲಿತಾಂಶವಲ್ಲ.

ಅಂತಿಮ ಕಲಾಕೃತಿಗಿಂತ ಕಲೆಯನ್ನು ರಚಿಸುವ ಪ್ರಕ್ರಿಯೆಯು ಹೆಚ್ಚು ಮುಖ್ಯವಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕಲಾತ್ಮಕ ಅಭಿವ್ಯಕ್ತಿಯ ನಿಜವಾದ ಮೌಲ್ಯವು ಸಂಪೂರ್ಣ ಪ್ರಕ್ರಿಯೆಯಲ್ಲಿ ಮಗುವಿನ ಸಮನ್ವಯಗೊಳ್ಳುವಿಕೆಯಲ್ಲಿದೆ. ಅವನ ಪೆನ್ಸಿಲ್ / ಬ್ರಶ್ ನಿಂದ ಮಾಡಿದ ಪ್ರತಿಯೊಂದು ಗುರುತು ಹಿಂದಿನ ಕಥೆ, ವೈಯಕ್ತಿಕ ಅನುಭವಗಳ ಮೂಲಕ ಸ್ಕ್ರಿಪ್ಟ್ ಆಕಾರವನ್ನು ಪಡೆಯುವ ವಿಧಾನ ಮತ್ತು ಪ್ರತಿ ನೃತ್ಯದ ಸ್ವಂತಿಕೆಯನ್ನು ಪ್ರತಿಬಿಂಬಿಸುತ್ತದೆ.

ಶಿಕ್ಷಕರಾಗಿ ನಾವು ಕಲಾಕೃತಿಯನ್ನು ಹೇಗೆ ರಚಿಸಿದ್ದೇವೆ ಎಂಬುದರ ಕುರಿತು ನಮ್ಮ ಗಮನವನ್ನು ಕೇಂದ್ರೀಕರಿಸಿದಾಗ – ಭಾಗವಹಿಸುವಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಕಲಾಕೃತಿಯ ಅಂತಿಮ ರೂಪವನ್ನು ರೂಪಿಸುವ ಪ್ರಯತ್ನ – ನಂತರ ನಾವು ಪ್ರತಿ ಮಗುವಿನ ಪ್ರಯಾಣವನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳುತ್ತೇವೆ. ಪ್ರತಿ ಮಗುವಿನ ಸಂದರ್ಭ, ಸಾಮರ್ಥ್ಯ ಮತ್ತು ಬೆಳವಣಿಗೆಯನ್ನು ನೋಡುವ ಮೂಲಕ ಕಲೆಯು ಅವರಿಗೆ ಸ್ವಯಂ ಅಭಿವ್ಯಕ್ತಿಗೆ ಹೇಗೆ ಜಾಗವನ್ನು ಒದಗಿಸಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಬನ್ನಿ ಶಿಕ್ಷಕಿಯಾಗಿ ನನ್ನ ಒಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಕಲಾಕೃತಿ ರಚಿಸಲು ಕೊಟ್ಟ ಸುಳುಹು ಸರಳವಾಗಿತ್ತು: ಒಂದು ಭೂ ದೃಶ್ಯವನ್ನು ರಚಿಸುವುದು. ನಾನು ಮಕ್ಕಳನ್ನು ಹಾದು ಹೋಗುವಾಗ ಅವರಲ್ಲಿ ಹೆಚ್ಚಿನವರು ಬಹಳ ಆಕರ್ಷಕವಾದ ದೃಶ್ಯಗಳನ್ನು ಚಿತ್ರಿಸಿದ್ದಾರೆ ಎಂದು ನಾನು ಗಮನಿಸಿದೆ. ಪರ್ವತಗಳ ಮೂಲಕ ಹರಿಯುವ ನದಿ ಮತ್ತು ಮುಂದೆ ಬಾವಿಯ ಪಕ್ಕದಲ್ಲಿ ನಿರ್ಮಿಸಲಾದ ಸಣ್ಣ ಗುಡಿಸಲು ಇದೆಲ್ಲವೂ ನೋಡಿದೆ. ಇವೆಲ್ಲ ಎಲ್ಲೋ ನೋಡಿದ ಹಾಗೆ ಎಂದು ಊಹಿಸಬಹುದಾಗಿದೆ. ಆದರೆ ಒಬ್ಬಳು ಹುಡುಗಿ ರಚಿಸಿದ ಚಿತ್ರ ಬಹಳ ವಿಭಿನ್ನವಾಗಿತ್ತು. ಅರ್ಧ ಕಾಣುವ ಒಂದು ಮರ, ಖಾಲಿ ಆಕಾಶ, ದೂರದಲ್ಲಿ ಇನ್ನೊಂದು ಮರದಲ್ಲಿ ಕಟ್ಟಿದ ಉಯ್ಯಾಲೆ. ನನಗೆ ಕುತೂಹಲವಿತ್ತು. ನಾನು ಅವಳ ಪಕ್ಕದಲ್ಲಿ ಕುಳಿತು ಅವಳ ಚಿತ್ರಕಲೆಯ ಬಗ್ಗೆ ಹೇಳಲು ಕೇಳಿದೆ. ಅವಳು ಸ್ವಲ್ಪ ಸಮಯದ ಹಿಂದೆ ಬೇರೆ ರಾಜ್ಯದಿಂದ ಇಲ್ಲಿ ವಾಸಿಸಲು ಬಂದಿದ್ದಾಳೆಂದು ನನಗೆ ತಿಳಿದಿತ್ತು. ಇದು ಅವರ ಹಳ್ಳಿ ಮನೆಯ ನೋಟ ಎಂದು ಆಕೆ ನನಗೆ ಹೇಳಿದಳು. ನಾನು ಆ ಜಾಗ ನಿನಗೆ ನೆನಪಾಗುತ್ತದೆಯೇ ಎಂದು ಕೇಳಿದೆ. ಆಕೆ ತಲೆಯಾಡಿಸಿದಳು. ಆ ಕ್ಷಣದಲ್ಲಿ ಅವಳ ಕಲಾಕೃತಿ ಕೇವಲ ಚಿತ್ರಕ್ಕಿಂತ ಹೆಚ್ಚಾಯಿತು. ಅದು ಅವಳ ಭಾವನೆಗಳು, ನೆನಪುಗಳು ಮತ್ತು ನಷ್ಟದ ಪ್ರಜ್ಞೆಯ ಕಿಟಕಿಯಾಗಿತ್ತು. ಆಕೆಗೆ ತನ್ನನ್ನು ಅಭಿವ್ಯಕ್ತ ಪಡಿಸಲು ಅವಕಾಶ ನೀಡುವ ಮೂಲಕ ನಮಗೆ ಕಲ್ಪನೆಯೇ ಇಲ್ಲದ ಕತೆಯೊಂದು ನಮ್ಮೆದುರು ತೆರೆದುಕೊಂಡಿತು. ಈ ಅನುಭವವು ನನಗೆ ಒಂದು ಕಲಾಕೃತಿಯನ್ನು ರಚಿಸುವ ಪ್ರಕ್ರಿಯೆಯು ಮತ್ತದರ ಬಗ್ಗೆ ಯೋಚಿಸುವುದಕ್ಕೆ ಅವಕಾಶ ಕಲ್ಪಿಸಿತು. ಇದು ಹೇಗೆ ಹೇಳಲಾಗದ ಭಾವನೆಗಳ ಪದರಗಳನ್ನು ತೆರೆದಿಡಬಲ್ಲುದು ಅದರಲ್ಲೂ ವಿಶೇಷವಾಗಿ ಬದಲಾವಣೆಯ ಹಾದಿಯಲ್ಲಿರುವ ಅಥವಾ ನೋವಿನಲ್ಲಿರುವ ಮಕ್ಕಳಲ್ಲಿ ಎಂದು ಗಮನಿಸಲು ಸಾಧ್ಯವಾಯಿತು.

ಕಲೆಗಳ ಮೂಲಕ ಚಿಕಿತ್ಸೆಯು ಜೀವನದ ಯಾವುದೇ ಹಂತದಲ್ಲಿ ಯಾರಿಗಾದರೂ ಪ್ರಯೋಜನವನ್ನು ನೀಡುತ್ತದೆ. ಅದು ಭಾವನಾತ್ಮಕ ಯಾತನೆಯಿಂದ ಬಳಲುತ್ತಿರುವ ಮಗುವಾಗಿರಲಿ, ಹದಿಹರೆಯದವರು ತನ್ನ ಐಡೆಂಟಿಟಿ ( ಅಸ್ಮಿತೆ) ಹುಡುಕುತ್ತಿರುವುದಿರಲಿ, ಅಥವಾ ವಯಸ್ಕರು ಆತಂಕದಿಂದ ಹೋರಾಡುತ್ತಿರಲಿ, ಗೋಚರ ಗಾಯಗಳು ಮತ್ತು ಆಘಾತ ಹೊಂದಿರುವ ಜನರು ಮಾತ್ರವಲ್ಲದೆ ಒತ್ತಡ, ಅನಿಶ್ಚಿತತೆ ಅಥವಾ ದೈನಂದಿನ ಜೀವನದ ಒತ್ತಡವನ್ನು ಅನುಭವಿಸುವ ಯಾರಾದರೂ ಕಲೆಯನ್ನು ರಚಿಸುವ ಪ್ರಕ್ರಿಯೆಯಿಂದ ಪ್ರಯೋಜನ ಪಡೆಯಬಹುದು. ಕಲೆಯ ಶಾಸ್ತ್ರೀಯ ತಂತ್ರಗಳಲ್ಲಿ ಒಂದಾದ ವೆಟ್ ಆನ್ ವೆಟ್ ಪೇಂಟಿಂಗ್, ಕಲೆಯ ಈ ಚಿಕಿತ್ಸಕ ಸ್ವರೂಪವನ್ನು ನೋಡುವಲ್ಲಿ ನನಗೆ ದೊಡ್ಡ ಸ್ಫೂರ್ತಿಯಾಗಿದೆ.

### ವೆಟ್-ಆನ್-ವೆಟ್ ಪೇಂಟಿಂಗ್

ಈ ವಿಧಾನದಲ್ಲಿ ಕಾಗದವನ್ನು ನೀರಿನಲ್ಲಿ ನೆನೆಸಲಾಗುತ್ತದೆ. ಮತ್ತು ಅದು ಇನ್ನೂ ಒದ್ದೆಯಾಗಿರುವಾಗ ಮಕ್ಕಳು ಅದರ ಮೇಲೆ ತಿಳಿ ಅರೆ ಪಾರದರ್ಶಕ ಬಣ್ಣಗಳನ್ನು ಅನ್ವಯಿಸುತ್ತಾರೆ. ಈ ಬಣ್ಣಗಳು ನಂತರ ಮಿಶ್ರಣವಾಗಿ ಒಟ್ಟಿಗೆ ಹರಿಯಲು ಪ್ರಾರಂಭಿಸುತ್ತವೆ. ಕ್ರಮೇಣ ರೂಪಾಂತರಗಳು ಮತ್ತು ಸೂಕ್ಷ್ಮ ಪರಿಣಾಮಗಳನ್ನು ಸೃಷ್ಟಿಸುತ್ತವೆ. ಈ ತಂತ್ರವು ನಿಖರತೆಗಿಂತ ಹೆಚ್ಚಾಗಿ ಪ್ರಕ್ರಿಯೆಯನ್ನು ಒತ್ತಿ ಹೇಳುತ್ತದೆ. ಮತ್ತು ವಿವರವಾದ ಅಥವಾ ಸ್ಥಿರವಾದ ಫಲಿತಾಂಶವನ್ನು ಸಾಧಿಸುವುದಕ್ಕಿಂತ ಹೆಚ್ಚಾಗಿ ಬಣ್ಣಗಳ ದ್ರವತೆ ಮತ್ತು ಆಟವನ್ನು ಅನುಭವಿಸಲು ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಹರಿಯುವ ಬಣ್ಣಗಳು ಶಾಂತಿ ಮತ್ತು ನೆಮ್ಮದಿಯ ಭಾವನೆಯನ್ನು ಹೆಚ್ಚಿಸುತ್ತವೆ. ಮತ್ತು ಕಾಗದದ ಮೇಲೆ ಬಣ್ಣದ ಶಾಂತಿಯುತ ಲಯದಲ್ಲಿ ಮಗು ಕಳೆದುಹೋಗುತ್ತದೆ. ಈ ತಂತ್ರವು ದೋಷ ರಹಿತ ಸೃಷ್ಟಿಗಿಂತ ಸಂವೇದನಾ ಅನುಭವದ ಮೇಲೆ ಒತ್ತು ನೀಡುವುದು, ಭಾವನಾತ್ಮಕ ಸಮತೋಲನ, ಆತ್ಮಸ್ವೀಕೃತಿ ಮತ್ತು ಸೃಜನಶೀಲತೆಗೆ ಸಹಾಯ ಮಾಡುತ್ತದೆ.

## ಬೋಧನಾ ವಿಧಾನವಾಗಿ ಕಲೆ

ತರಗತಿಯಲ್ಲಿ ಪರಿಕಲ್ಪನೆಯನ್ನು ವಿವರಿಸಲು ಕಲಾ ಶಿಕ್ಷಣ ಅಥವಾ ಕಲೆ ಆಧಾರಿತ ಪ್ರಕ್ರಿಯೆಗಳ ಬಳಕೆಯನ್ನು ದೀರ್ಘಕಾಲದಿಂದ ಶಿಫಾರಸು ಮಾಡಲಾಗುತ್ತಿದೆ ಮತ್ತು ಪ್ರತಿಪಾದಿಸಲಾಗುತ್ತಿದೆ. ಆದರೆ ಶಿಕ್ಷಣ ಶಾಸ್ತ್ರದಲ್ಲಿ ಕಲೆಗಳ ಸೇರ್ಪಡೆಯ ಸವಾಲುಗಳು ಸಂಪನ್ಮೂಲಗಳ ಕೊರತೆ, ನಿರ್ದಿಷ್ಟ ಕಲಾ ಪ್ರಕಾರಗಳೊಂದಿಗೆ ಶಿಕ್ಷಕರ ಸೌಕರ್ಯ ಮತ್ತು ಸಮಯಕ್ಕೆ ಶೈಕ್ಷಣಿಕ ಗುರಿಗಳನ್ನು ಪೂರೈಸಲು ಒತ್ತಡದ ರೂಪದಲ್ಲಿ ಬರುತ್ತವೆ.

## ಸಂಪನ್ಮೂಲಗಳು ಅಡೆ ತಡೆಗಳಾಗಬಾರದು.

ಸಂಪನ್ಮೂಲಗಳ ಲಭ್ಯತೆಯು ಶಿಕ್ಷಕರು ಎದುರಿಸುತ್ತಿರುವ ದೊಡ್ಡ ಅಡೆತಡೆಗಳಲ್ಲಿ ಒಂದಾಗಿದೆ. ಕಲೆಯನ್ನು ರಚಿಸಲು ಅನೇಕ ಸಾಮಗ್ರಿಗಳ ಅವಶ್ಯಕತೆ ಮತ್ತು ಸಂಗ್ರಹಣೆಯ ಕಲ್ಪನೆಯು, ಕಲೆಯ ಸಂಯೋಜಿತ ಪಾಠವನ್ನು ಯೋಜಿಸುವುದರಿಂದ ಶಿಕ್ಷಕರನ್ನು ನಿರುತ್ಸಾಹಗೊಳಿಸುತ್ತದೆ. ವಾಸ್ತವವಾಗಿ, ಕಲೆ ಆಧಾರಿತ ತರಗತಿಯ ಅಧಿವೇಶನದಲ್ಲಿ ಪ್ರಮುಖ ಸಾಧನವೆಂದರೆ ವೀಕ್ಷಣೆ. ನಮ್ಮ ಸುತ್ತಲಿನ ವಸ್ತುಗಳಿಂದ ನಾವು ಸಾಕಷ್ಟು ಸ್ಫೂರ್ತಿ ಪಡೆಯಬಹುದು. ಉದಾಹರಣೆಗೆ, ಪಠ್ಯ ಪುಸ್ತಕದಿಂದ ಸರಳವಾದ ಕವಿತೆಯನ್ನು ತೆಗೆದುಕೊಳ್ಳಿ. ಮತ್ತು ಪೆನ್ಸಿಲ್, ಡಸ್ಟರ್, ಚಪ್ಪಾಳೆ ಅಥವಾ ಗುನುಗುವಿಕೆಯನ್ನು ಬಳಸಿಕೊಂಡು ಲಯಬದ್ಧ ಶಬ್ದಗಳನ್ನು ಮಾಡುವ ಮೂಲಕ ಕವಿತೆಯ ಸಂಗೀತ ಆವೃತ್ತಿಯನ್ನು ರಚಿಸಿ. ಇದರ ನಂತರ ಈ ಕವಿತೆಯನ್ನು ಹಾಡುವುದನ್ನು ಚಟುವಟಿಕೆಯಾಗಿ ಮಾಡಿ. ಇದರಿಂದ ಮಕ್ಕಳು ಕವಿತೆಯ ಬಗ್ಗೆ ಪರಿಚಿತರಾಗುತ್ತಾರೆ. ಮತ್ತು ತರಗತಿಯಲ್ಲಿ ಸಂತೋಷದ ವಾತಾವರಣವನ್ನು ಸೃಷ್ಟಿಸುತ್ತಾರೆ. ಸಂಗೀತದ ಮೂಲಕ ಪರಿಕಲ್ಪನಾ ಗ್ರಹಿಕೆಯನ್ನು ಉತ್ತೇಜಿಸಲು ಈ ಚಟುವಟಿಕೆಗಳನ್ನು ತರಗತಿಗಳಲ್ಲಿ ಬಳಸಬಹುದು. ರಂಗಭೂಮಿ ಮತ್ತು ಪಾತ್ರ ಆಧಾರಿತ ಚಟುವಟಿಕೆಗಳು ಕಡಿಮೆ ಸಂಪನ್ಮೂಲಗಳನ್ನು ಬಯಸುತ್ತವೆ. ಬೊಂಬೆಯಾಟದಂತಹ ತಂತ್ರಗಳು ಕೂಡ ಕಡಿಮೆ ಅಥವಾ ಯಾವುದೇ ವೆಚ್ಚವನ್ನು ಒಳಗೊಂಡಿರುವುದಿಲ್ಲ.



ಚಿತ್ರ 3: ಶಿಕ್ಷಕರು ತರಗತಿಕೋಣೆಯಲ್ಲಿ ಬಳಸುವ ಕಡಿಮೆ ವೆಚ್ಚದ, ಸುಲಭದಲ್ಲಿ ಮಾಡಬಹುದಾದ ಬೊಂಬೆಗಳು.

ಇಲ್ಲಿ ಶಿಕ್ಷಕರು ಕೈಯಿಂದ ಬೊಂಬೆಗಳನ್ನು ನಿಯಂತ್ರಿಸುವ ಒಂದು ನೋಟ ನೀಡಲಾಗಿದೆ. ಅವರು ಪರಸ್ಪರ ಸಂವಹನ ನಡೆಸಲು ಈ ಬೊಂಬೆಯನ್ನು ಸ್ವತಃ ಸಿದ್ಧಪಡಿಸಿದ್ದರು. ನಾವು ಈ ರಂಗಭೂಮಿ ಆಧಾರಿತ ವಿಧಾನಗಳನ್ನು ಕತೆ ಹೇಳಲು, ಮಕ್ಕಳಿಗೆ ಪರಿಕಲ್ಪನೆಯನ್ನು ಪರಿಚಯಿಸಲು ಮತ್ತು ತರಗತಿಯಲ್ಲಿ ಚರ್ಚೆಯನ್ನು ನಡೆಸಲು ಬಳಸಬಹುದು.

## ಕಲಿಕೆಯಲ್ಲಿ ಆನಂದದಾಯಕ ಅನುಭವಗಳು ಏಕೆ ಮಹತ್ವ-ಪೂರ್ಣವಾಗಿವೆ?

ಕಲೆಯು ಬೋಧನಾ ವಿಧಾನವಾಗಿ ಕೇವಲ ಶೈಕ್ಷಣಿಕ ಕಲಿಕೆಯನ್ನಷ್ಟೇ ಉತ್ತೇಜಿಸದೆ ಮಕ್ಕಳ ಸಾಮಾಜಿಕ–ಭಾವನಾತ್ಮಕ ಬೆಳವಣಿಗೆಯನ್ನೂ ಬೆಂಬಲಿಸುತ್ತದೆ. ಮಕ್ಕಳು ತಮ್ಮನ್ನು ತಾವು ವ್ಯಕ್ತಪಡಿಸಲು, ಅವರ ಭಾವನೆಗಳನ್ನು ನಿರ್ವಹಿಸಲು ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಸಂತೋಷವನ್ನು ಕಂಡುಕೊಳ್ಳಲು ಬೇಕಾದ ಅಗತ್ಯ ವಾತಾವರಣವನ್ನು ಇದು ಸೃಷ್ಟಿಸುತ್ತದೆ. ಸಂತೋಷದಿಂದಿರುವ ಮಗು ಸಾಮಾನ್ಯವಾಗಿ ಹೆಚ್ಚು ತೊಡಗಿಸಿಕೊಂಡಿರುತ್ತದೆ. ಕುತೂಹಲದಿಂದ ಮತ್ತಷ್ಟು ಕಲಿಕೆಗೆ ತೆರೆದುಕೊಂಡಿರುತ್ತದೆ. ಸಕಾರಾತ್ಮಕ ಭಾವನೆಗಳು, ಸೃಜನಶೀಲತೆ, ಸತ್ಯಗಳನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಮತ್ತು ಸಾಮಾಜಿಕ–ಭಾವನಾತ್ಮಕ ಕೌಶಲಗಳನ್ನು ಇದು ಹೆಚ್ಚಿಸಬಹುದು. ಇವೆಲ್ಲವೂ ಉತ್ತಮ ಕಲಿಕೆಯ ಫಲಿತಾಂಶಗಳಿಗೆ ಕೊಡುಗೆ ನೀಡುತ್ತವೆ.

ನಿಮ್ಮ ದೈನಂದಿನ ತರಗತಿಯ ಅವಧಿಗಳಲ್ಲಿ ಕಲೆಯನ್ನು ಸಮನ್ವಯಗೊಳಿಸಲು ಸುಲಭವಾದ ಮಾರ್ಗವೆಂದರೆ ಪೂರ್ವಸಿದ್ಧತಾ ಚಟುವಟಿಕೆಗಳನ್ನು ರಚಿಸುವುದು. ಈ ತ್ವರಿತ, ರಚನಾತ್ಮಕ ಅಭ್ಯಾಸಗಳಿಂದ ನಿಮ್ಮ ದೈನಂದಿನ ಕಾರ್ಯಗಳಲ್ಲಿ ಕಲೆಯನ್ನು ಮನಬಂದಂತೆ ಸೇರಿಸಿಕೊಳ್ಳಬಹುದು. ಮತ್ತು ಸಕಾರಾತ್ಮಕ ಮನಸ್ಥಿತಿಯನ್ನು ತುಂಬಬಹುದು. ಚಟುವಟಿಕೆಯೊಂದಕ್ಕೆ ಮಕ್ಕಳ ಪ್ರತಿಕ್ರಿಯೆಗಳು ಶಿಕ್ಷಕರು ಮಕ್ಕಳನ್ನು ಪ್ರೇರೇಪಿಸುತ್ತಿದ್ದಾರೆಯೇ ಎಂಬ ಸೂಚನೆಯನ್ನು ನೀಡಬಹುದು. ದಿನದ ಪ್ರಾರಂಭದಲ್ಲಿ ಐದು ನಿಮಿಷಗಳ ಕಲಾ ಆಧಾರಿತ ಚಟುವಟಿಕೆಯು ಮಕ್ಕಳನ್ನು ಕಲಿಯಲು ಮತ್ತು ಮಾಹಿತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಈ ಚಟುವಟಿಕೆಗಳನ್ನು ಶೈಕ್ಷಣಿಕ ಪರಿಕಲ್ಪನೆಗಳಿಗೆ ಹೊಂದಿಸುವ ಮೂಲಕ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಮೊದಲಿನಿಂದಲೂ ಆಳಗೊಳಿಸ-ಬಹುದು. ಮತ್ತು ಅವರಲ್ಲಿ ಕುತೂಹಲವನ್ನು ಕೆರಳಿಸಬಹುದು. ಕೈಗೊಂಬೆಯನ್ನು ಬಳಸುತ್ತ, ಐತಿಹಾಸಿಕ ವ್ಯಕ್ತಿಯ ಕುರಿತಾದ 2–3 ನಿಮಿಷಗಳ ಕಥೆಯೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸುವುದನ್ನು ಕಲ್ಪಿಸಿಕೊಳ್ಳಿ.



**ದೀಪಿಕಾ ಶರ್ಮಾ** ಅವರು ಸಲಹೆಗಾರರಾಗಿದ್ದಾರೆ. ಅವರು ಬಾಲ್ಯದ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಕಲೆಗಳ ಮೂಲಕ ಗುಣಪಡಿಸುವಲ್ಲಿ ಪರಿಣತಿ ಹೊಂದಿದ್ದಾರೆ. ಅವರು ಸ್ವರಾಹೀಲ್ಸ್ ಫೌಂಡೇಷನ್‌ನ ಸಹ–ಸಂಸ್ಥಾಪಕ ನಿರ್ದೇಶಕರಾಗಿದ್ದಾರೆ. ಮಾನಸಿಕ ಆರೋಗ್ಯ ನಿವಾರಕವನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗಾಗಿ ಆಟ ಆಧಾರಿತ, ಕಲಾ ಆಧಾರಿತ ಮಾಧ್ಯಮಗಳ ಮೂಲಕ ತಮ್ಮನ್ನು ಅಭಿವ್ಯಕ್ತಪಡಿಸಲು ಹಾಗೂ ಸುರಕ್ಷಿತ ಸ್ಥಾನ ನಿರ್ಮಿಸುವ ನಿಟ್ಟಿನಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಪ್ರೀತಿ ಮತ್ತು ಸಮಾನತೆಯಿಂದ ಮಕ್ಕಳ ಕಲಿಕೆಯು ಸುಗಮಗೊಳ್ಳುತ್ತದೆ

ಮಮತಾ ಸಿಂಗ್

ನಾವು ನಮ್ಮ ಜಾತಿ, ಧರ್ಮ, ಲಿಂಗ, ಪ್ರದೇಶ, ಭಾಷೆ, ನೋಟ, ಎತ್ತರ ಇತ್ಯಾದಿಗಳ ಬಗ್ಗೆ ಮಾತ್ರ ಹೆಮ್ಮೆ ಪಡುತ್ತಿದ್ದರೆ ಈ ಅಹಂಕಾರವು ಅನೇಕ ಜನರನ್ನು ನೋಯಿಸುತ್ತದೆ. ವಾಸ್ತವವಾಗಿ ನಾವು ಹೆಮ್ಮೆ ಪಡುವ ಈ ಅಂಶಗಳಲ್ಲಿ ನಮ್ಮ ಯಾವುದೇ ಪಾತ್ರ ಇರುವುದಿಲ್ಲ. ಯಾವುದೇ ಶಾಲೆಯಲ್ಲಿ ಮಕ್ಕಳಲ್ಲಿ ಇಂತಹ ತಾರತಮ್ಯಗಳಿದ್ದರೆ ಆರೋಗ್ಯವಂತ ಮತ್ತು ನ್ಯಾಯಯುತ ಸಮಾಜವನ್ನು ನಿರ್ಮಿಸುವುದು ಸ್ವಲ್ಪ ಕಷ್ಟ.

ಶಾಲೆಯು ಸಮಾಜದ ಒಂದು ಸಣ್ಣ ಆದರೆ ಬಹಳ ಮುಖ್ಯವಾದ ಘಟಕವಾಗಿದೆ. ಅಂದರೆ, ನಮ್ಮ ಸಮಾಜ ಹೇಗಿದೆ, ಅಲ್ಲಿ ವಾಸಿಸುವ ಜನ, ಅವರ ಜೀವನ ಮೌಲ್ಯ ಮತ್ತು ಆದರ್ಶಗಳನ್ನು ನಾವು ತಿಳಿದುಕೊಳ್ಳಬೇಕಾದರೆ, ಶಾಲೆಯ ಆಂತರಿಕ ಪರಿಸರವನ್ನು ಅಧ್ಯಯನ ಮಾಡುವುದು ಅವಶ್ಯಕ. ಏಕೆಂದರೆ ಮಕ್ಕಳು ಶಾಲೆ ಮತ್ತು ಸಮಾಜವನ್ನು ಸಂಪರ್ಕಿಸುವ ಕೊಂಡಿಯಾಗಿರುತ್ತಾರೆ. ಮಕ್ಕಳು ಸಮಾಜ ಮತ್ತು ಕುಟುಂಬದಿಂದ ಏನು ಕಲಿಯುತ್ತಾರೆ ಮತ್ತು ನೋಡುತ್ತಾರೆ ಎಂಬುದು ಶಾಲೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಶಾಲೆಯಿಂದ ಅವರು ಕಲಿತದ್ದು ಕುಟುಂಬ ಮತ್ತು ಸಮಾಜದ ಮೇಲೆ ಪರಿಣಾಮ ಬೀರುತ್ತದೆ.



ಚಿತ್ರ 1: ಕಂಪ್ಯೂಟರ್ ಪರದೆಯ ಮೇಲೆ ಕುತೂಹಲದ ಕಣ್ಣುಗಳು

ನಾನು ವಾಸಿಸುವ, ನಾನು ಕೆಲಸ ಮಾಡುವ ಉತ್ತರ ಪ್ರದೇಶದ ಹಳ್ಳಿಯು ಒಂದು ವಿಶಿಷ್ಟವಾದ ಹಿಂದಿ ಮಾತನಾಡುವ, ಊಳಿಗಮಾನ್ಯ ಚಿಂತನೆಯ ಪ್ರದೇಶವಾಗಿದೆ. ಸಾಮಾನ್ಯವಾಗಿ, ಇಲ್ಲಿನ ನಿವಾಸಿಗಳು ಜಾತಿ, ಧರ್ಮ, ಲಿಂಗ, ಪ್ರದೇಶ ಇತ್ಯಾದಿಗಳಲ್ಲಿ ಹೆಮ್ಮೆಪಡುತ್ತಾರೆ. ಆದ್ದರಿಂದ, ಅಂತಹ ಸಮಾಜದಿಂದ ಬರುವ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಹ ಇದೇ ಮಾನಸಿಕತೆಯೊಡನೆ ಶಾಲೆಗೆ ಬರುತ್ತಾರೆ. ಸ್ಥಳೀಯ ಮೇಲ್ಜಾತಿ ಶಿಕ್ಷಕಿಯಾಗಿರುವ ನಾನು ಇದನ್ನು ಸ್ಪಷ್ಟವಾಗಿ ನೋಡುತ್ತೇನೆ, ಅನುಭವಿಸುತ್ತೇನೆ ಮತ್ತು ಹೇಳುತ್ತೇನೆ. ಇಲ್ಲದಿದ್ದರೆ ಅನೇಕ ಬಾರಿ ಜನರು ಇದನ್ನು ತುಂಬಾ ಸಾಮಾನ್ಯ ಸಂಗತಿ ಎಂದು ಪರಿಗಣಿಸುತ್ತಾರೆ, ಅದರ ಬಗ್ಗೆ ಗಮನ ಹರಿಸುವುದು ಸೂಕ್ತವೆಂದು ಅವರು ಪರಿಗಣಿಸುವುದಿಲ್ಲ.

ಈಗ ಜಾತಿ ವ್ಯವಸ್ಥೆಯ ವಿಷಯ ಬಂದಿದೆ. ಉತ್ತರ ಪ್ರದೇಶದ ಮೂಲಭೂತ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ಸಾಮಾನ್ಯವಾಗಿ ಜಾತಿಗಿಂತ ವರ್ಗವು ಹೆಚ್ಚು ಪ್ರಾಬಲ್ಯ ಹೊಂದಿದೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸುವುದು ಮುಖ್ಯವಾಗಿದೆ. ಅಂದರೆ ಇಲ್ಲಿ ಉನ್ನತ ಜಾತಿಯ ಮಗು ಪ್ರವೇಶ ಪಡೆದರೂ ಪಡೆಯಬಹುದು, ಆದರೆ ಹೆಚ್ಚಿನ ಆದಾಯವುಳ್ಳ ವರ್ಗದ ಮಗು ಕೆಳವರ್ಗದ (ಸಮಾಜದಿಂದ ಕೆಳಗಿರುವ ಎಂದು ಭಾವಿಸಲಾಗುವ) ಜಾತಿಗೆ ಸೇರಿದ್ದರೂ ಸಹ ಈ ಶಾಲೆಗಳಲ್ಲಿ ಓದಲು ಬರುವುದಿಲ್ಲ.

ಇಂತಹ ವಾತಾವರಣದಲ್ಲಿ ಇನ್ನೊಂದು ಶಾಲೆಯಲ್ಲಿ ಐದನೇ ತರಗತಿಯವರೆಗೆ ಓದಿದ ಮಗು ನಮ್ಮ ಊರಿಗೆ ಬಂದಾಗ ಈ ಗ್ರಾಮದಲ್ಲಿ ಜಾತಿ, ಧರ್ಮ, ಲಿಂಗ ಭೇದವಿಲ್ಲದ ಒಂದು ಶಾಲೆ ಇದೆ ಎಂದು ಒಪ್ಪಿಕೊಳ್ಳಲು ದಿನಗಟ್ಟಲೆ ಅಲ್ಲ ತಿಂಗಳುಗಳೇ ಬೇಕು. ನಾನು ಒಂದು ಘಟನೆಯನ್ನು ಉಲ್ಲೇಖಿಸಲು ಬಯಸುತ್ತೇನೆ. ನಮ್ಮ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮುಸಾಹರ್ (ಅರಣ್ಯವಾಸಿ) ಕುಟುಂಬವೊಂದು ಗ್ರಾಮದ ಹೊರಭಾಗದ ದಿಬ್ಬದ ಮೇಲೆ ವಾಸಿಸುತ್ತಿದೆ. ಅವರ ಕುಟುಂಬದ ಹುಡುಗಿಯೊಬ್ಬಳು ನಮ್ಮ ಶಾಲೆಗೆ ಪ್ರವೇಶ ಪಡೆದಳು. ಐದನೇ ತರಗತಿಯ ನಂತರ ಮುಂದೆ ಓದಲು ಒಪ್ಪಿಕೊಂಡ ಕುಟುಂಬದ ಮೊದಲ ಹುಡುಗಿ ಅವಳು, ಇಲ್ಲದಿದ್ದರೆ ಎಷ್ಟೇ ಪ್ರಯತ್ನಿಸಿದರೂ ಅವಳ ಕುಟುಂಬದ ಹುಡುಗ ಹುಡುಗಿಯರು ಮುಂದೆ ಓದಲು ಹೋಗುತ್ತಿರಲಿಲ್ಲ. ನಮ್ಮ ಪ್ರಯತ್ನದಿಂದಾಗಿ ಹುಡುಗಿ ಏಪ್ರಿಲ್‌ನಲ್ಲಿ ಅಡ್ಮಿಷನ್ ತೆಗೆದುಕೊಂಡಳು, ಆದರೆ ಅವಳು



ಚಿತ್ರ 2: ಬಟ್ಟೆ ಹೊಲಿಯುವ ಕೆಲಸದಲ್ಲಿ ಆನಂದ ಪಡೆಯುತ್ತಿರುವ ಮಕ್ಕಳು

ಎಲ್ಲರೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಮೊದಲೆಲ್ಲ ಮಧ್ಯಾಹ್ನದ ಊಟಕ್ಕೆ ಮನೆಯಿಂದ ತಟ್ಟೆ ತರುತ್ತಿದ್ದಳು, ಏಕೆಂದರೆ ಹಿಂದಿನ ಶಾಲೆಯಲ್ಲಿ ಮಕ್ಕಳು ಶಾಲೆಯ ಪಾತ್ರೆಗಳಲ್ಲಿ ತಿನ್ನುತ್ತಿರಲಿಲ್ಲ. ಶಾಲೆಯ ಪಾತ್ರೆಗಳನ್ನು ಎಲ್ಲಾ ಜಾತಿಯ ಮಕ್ಕಳು ಬಳಸುತ್ತಿದ್ದರು, ಆದ್ದರಿಂದ ಪ್ರತಿ ಮಗುವೂ ತನ್ನದೇ ಆದ ಪಾತ್ರೆಗಳನ್ನು ತರುತ್ತಿತ್ತು ಎಂಬುದು ಇದರ ಹಿಂದಿನ ಕಾರಣ.

## ನಮ್ಮ ಶಾಲೆ ಯಾವತ್ತೂ ಮುಚ್ಚುವುದಿಲ್ಲ

ನಮ್ಮ ಶಾಲೆಯ ಬಹುತೇಕ ಮಕ್ಕಳು ಇತರ ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿಗೆ ಸೇರಿದವರು. ಅವರಿಗೆ ಬುಡಕಟ್ಟು ಜನಾಂಗದ ಹುಡುಗಿ ಶಾಲೆಯಲ್ಲಿರುವುದು ಹೊಸ ವಿಷಯ ಹೌದು. ಈ ಶಾಲೆಯಲ್ಲಿ ಮಕ್ಕಳಷ್ಟೇ ಅಲ್ಲ, ಶಿಕ್ಷಕರೂ ಕೂಡ ಬೇರೆ ಪಾತ್ರೆಗಳನ್ನು ಬಳಸುವುದಿಲ್ಲ ಮತ್ತು ಆ ಮಗು ಈ ಶಾಲೆ ಅಥವಾ ಶಿಕ್ಷಕರಿಗಿಂತ ಯಾವುದೇ ರೀತಿಯಲ್ಲಿ ಕಡಿಮೆಯಲ್ಲ ಅಥವಾ ಭಿನ್ನವಾಗಿಲ್ಲ ಎನ್ನುವುದನ್ನು ಆಕೆಗೆ ಮನವರಿಕೆ ಮಾಡುವುದೇ ದೊಡ್ಡ ಸಮಸ್ಯೆಯಾಗಿತ್ತು. ನಾವು ಒಳ್ಳೆಯದನ್ನು ಸುಲಭವಾಗಿ ಹೇಳುತ್ತೇವೆ, ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರುವುದು ತುಂಬಾ ಕಷ್ಟ.

ಹೊಸ ಶಾಲೆಯ ಬದಲಾದ ವಾತಾವರಣವನ್ನು ಒಪ್ಪಿಕೊಳ್ಳಲು ಕುಸುಮಳಿಗೆ ವಾರಗಳು ಬೇಕಾದವು. ಅವಳು ಸ್ವಲ್ಪ ಕೋಪಿಷ್ಠೆ ಮತ್ತು ಹಠಮಾರಿ ಮಗು. ಅವಳು ಆರನೇ ತರಗತಿಗೇನೋ ಬಂದಿದ್ದಳು, ಆದರೆ ಅವಳಿಗೆ ಅಕ್ಷರ ಕೂಡ ತಿಳಿದಿರಲಿಲ್ಲ. ಅವಳು ಎಂದಿಗೂ ನಗುತ್ತಿರಲಿಲ್ಲ. ತರಗತಿಯ ಆಸನವಾಗಲಿ ಅಥವಾ ಮಧ್ಯಾಹ್ನದ ಊಟದ ಪಂಕ್ತಿಯಾಗಲಿ, ಅವಳು ಒಬ್ಬಂಟಿಯಾಗಿ ಕುಳಿತುಕೊಳ್ಳಲು ಆದ್ಯತೆ ನೀಡುತ್ತಿದ್ದಳು, ಅಥವಾ ಸಾಧ್ಯವಾದಾಗಲೆಲ್ಲಾ ಅವಳು ಯಾವುದಾದರೂ ಹುಡುಗಿಯ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದಳು. ಒಂದು ಒಳ್ಳೆಯ ವಿಷಯವೆಂದರೆ ಅವಳು ಹೊಸ ಶಾಲೆಯನ್ನು ಸ್ವಲ್ಪಮಟ್ಟಿಗೆ ಇಷ್ಟಪಟ್ಟಳು ಏಕೆಂದರೆ ಅವಳು ಒಂದು ದಿನವೂ ಶಾಲೆಗೆ ಗೈರುಹಾಜರಾಗಿರಲಿಲ್ಲ, ಆದರೆ ಅವಳ ಈ ಹಿಂದಿನ ಶಾಲೆಗೆ ಹೋಗುವುದು ಸಾಕಷ್ಟು ಅನಿಯಮಿತವಾಗಿತ್ತು. ಸರಿ, ಏಪ್ರಿಲ್ ಕಳೆದು ಮೇ ತಿಂಗಳಲ್ಲಿ ಶಾಲಾ ರಜೆಗಳು ಪ್ರಾರಂಭವಾದವು. ಚಳಿಗಾಲದಲ್ಲಾಗಲೀ ಅಥವಾ ಬೇಸಿಗೆ ರಜೆಯಲ್ಲಾಗಲೀ ನನ್ನ ಶಾಲೆಯನ್ನು ಎಂದಿಗೂ ಮುಚ್ಚುವುದಿಲ್ಲ ಎಂದು ನಾನು ನಿಮಗೆ ಇಲ್ಲಿ ಹೇಳುತ್ತೇನೆ. ಇದರ ಹಿಂದೆ ಎರಡು ಕಾರಣಗಳಿವೆ. ಮೊದಲ ಕಾರಣ ಶಿಕ್ಷಕರ ಕೊರತೆ. ಮೂರು ತರಗತಿಗಳಿಗೆ ಮತ್ತು ಹತ್ತು ವಿಷಯಗಳಿಗೆ ನಾನೊಬ್ಬಳೇ ಶಿಕ್ಷಕಿಯಾಗಿದ್ದೆ. ಎರಡನೆಯ ಕಾರಣವೆಂದರೆ, ಶಾಲೆ ಮುಗಿದ ನಂತರ ಮಕ್ಕಳು ಓದಿನಿಂದ ದೂರ ಉಳಿದು ಮನೆ, ಬಂಧು-ಬಳಗ, ಹೊಲ-ಗದ್ದೆಗಳಲ್ಲಿ ನಿರತರಾದಾಗ ಮತ್ತೆ ಶಾಲೆಗೆ ಬರಲು, ಇಲ್ಲಿ ಹೊಂದಿಕೊಳ್ಳಲು ಕಷ್ಟಪಡುತ್ತಾರೆ. ಅದಕ್ಕಾಗಿಯೇ ನಮ್ಮ ಶಾಲೆಯು ನಿರಂತರವಾಗಿ ತೆರೆದಿರುತ್ತದೆ. ಹೌದು, ಎಲ್ಲಾ ಮಕ್ಕಳು ಶಾಲೆಗೆ ಬರುವುದು ಕಡ್ಡಾಯವಲ್ಲ ನಿಜ. ರಜೆಯಲ್ಲಿ ಶಾಲೆಗೆ ಬರಬೇಕೋ ಬೇಡವೋ ಎಂಬುದು ಅವರವರ ಆಯ್ಕೆ. ಸುಮಾರು ೮೦ ರಷ್ಟು ಮಕ್ಕಳು ರಜೆಯಲ್ಲೂ ಶಾಲೆಗೆ ಬರುತ್ತಿದ್ದು, ಮಕ್ಕಳು ಶಾಲೆಗೆ ಬರುವುದನ್ನು ತುಂಬಾ ಆನಂದಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ರಜೆಯಲ್ಲಿ ಕುಸುಮ ಕೂಡ ಶಾಲೆಗೆ ಬರುತ್ತಾಳೆ ಎಂದು ನಾವು ನಿರೀಕ್ಷಿಸಿರಲಿಲ್ಲ. ಆದರೆ ಬಂದಿದ್ದಳು.

ರಜಾ ದಿನಗಳಲ್ಲಿ ಮಧ್ಯಾಹ್ನದ ಊಟ ಇಲ್ಲದಿರುವುದರಿಂದ ಮಕ್ಕಳು ತಾವೇ ಊಟ ತರುತ್ತಾರೆ. ತದನಂತರ ತಮ್ಮ ಶಿಕ್ಷಕರಿಗೆ ತಿನ್ನಿಸದೇ ತಾವು ಒಂದು ತುತ್ತನ್ನೂ ತಿನ್ನುವುದಿಲ್ಲ. ಈ ವ್ಯವಸ್ಥೆಯಿಂದ ಮಕ್ಕಳು ಮನೆಯಲ್ಲಿ ಏನನ್ನು ಮತ್ತು ಹೇಗೆ ತಿನ್ನುತ್ತಾರೆ ಎಂಬುದು ತಿಳಿಯುತ್ತದೆ. ಆದರೆ, ಇದು ಶಿಕ್ಷಕರಿಗೆ ಸ್ವಲ್ಪ ತೊಂದರೆಯನ್ನುಂಟು-ಮಾಡುತ್ತದೆ, ಒಂದು ಬಾಯಿಯಲ್ಲಿ ಪರೋಟಾ-ಉಪ್ಪಿನಕಾಯಿಯನ್ನು ತುಂಬಿದ ತಕ್ಷಣ, ಎರಡನೆಯದು ಸಕ್ಕರೆ-ರೊಟ್ಟಿ, ಮೂರನೆಯದು ಅನ್ನ ಮತ್ತು ನಾಲ್ಕನೆಯದು ಬಿಸ್ಕತ್ತಾಗುವ ಸಾಧ್ಯತೆ ಇರುತ್ತದೆ. ಎಲ್ಲ ಮಕ್ಕಳೂ ತಾವೇ ಮೊದಲು ತಿನ್ನಿಸಬೇಕೆಂದು ಗಲಾಟೆ ಮಾಡುತ್ತಾರೆ. ಆದರೆ ನಾನು ನೋಡಿದೆ, ಕುಸುಮ ತನ್ನ ಊಟದ ಪಕ್ಕದಲ್ಲಿ

ಮೌನವಾಗಿ ಕುಳಿತಿದ್ದಳು, ಅವಳು ಯಾರಿಗೂ ತಿನ್ನಿಸಲಿಲ್ಲ ಅಥವಾ ಅವಳಿಗೆ ಯಾರೂ ತಿನ್ನಿಸಲಿಲ್ಲ. ನಾನು ಎದ್ದು ಅವಳ ಬಳಿಗೆ ಹೋಗಿ "ಕುಸುಮ ನೀನು ಒಬ್ಬಳೇ ಊಟ ಮಾಡ್ತಿದಿಯಾ. ನನಗೆ ತಿನ್ನಿಸುವುದಿಲ್ಲವಾ?" ಅವಳು ಅಪನಂಬಿಕೆಯಿಂದ ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ಅವಧಿ ಭಾಷೆಯಲ್ಲಿ ಹೇಳಿದಳು, "ನೀವು ನಮ್ಮ ಆಹಾರವನ್ನು ತಿನ್ನಲು ಬಯಸುವಿರಾ?" (ನನ್ನ ತಿಂಡಿ ತಿನ್ನುತ್ತೀಯಾ?) ಎಂದಳು, ನಾನು, "ಇನ್ನೇನು! ನನಗೆ ಹಸಿವಾಗಿದೆ, ನನಗೆ ತಿನ್ನಿಸು", ಅವಳು ಮತ್ತೆ ಕಣ್ಣನ್ನು ಮೇಲಕ್ಕೆ ಮಾಡಿ ಹೇಳಿದಳು "ನಾನು ರಾತ್ರಿಯ ರೊಟ್ಟಿ ಮತ್ತು ಉಪ್ಪಿನಕಾಯಿ ತಂದಿದ್ದೇನೆ." ನಾನು, "ಆದರೇನಾಯ್ತು! ಸುಮ್ಮನೆ ನೆವ ಹೇಳಬೇಡ, ನನಗೆ ತಿನ್ನಿಸು!"

ಕುಸುಮಳ ಬಳಿ ಬಹುಶಃ ಟಿಫಿನ್ ಬಾಕ್ಸ್ ಇರಲಿಲ್ಲ. ಅದಕ್ಕೆ ಕಪ್ಪು ಪಾಲಿಥಿನ್ ನಲ್ಲಿ ರೊಟ್ಟಿ, ಉಪ್ಪಿನಕಾಯಿ ತಂದಿದ್ದಳು, ಬಹುಶಃ ಈ ಕಾರಣಕ್ಕಾಗಿಯೇ ಯಾರಿಗೂ ಊಟ ಕೊಡಲು ಹಿಂದೇಟು ಹಾಕುತ್ತಿದ್ದಳು. ನನ್ನ ಒತ್ತಾಯದ ಮೇರೆಗೆ ಅವಳು ನನಗೆ ಮೊದಲ ತುತ್ತು ತಿನ್ನಿಸಿದಾಗ, ಆ ಕ್ಷಣದಲ್ಲಿಯೇ ಮಕ್ಕಳ ನಡುವಿನ ದೊಡ್ಡ ತಡೆಗೋಡೆ ಮುರಿದುಹೋಯಿತು, ಮತ್ತು ಅದು ಜಾತಿಯ ತಡೆಗೋಡೆಯಾಗಿತ್ತು. ಈ ಶಾಲೆಯಲ್ಲಿ ಜಾತಿ ಎಂಬುದೇ ಇಲ್ಲ ಎಂದು ಪ್ರತಿ ಹೊಸ ಮಗುವಿಗೆ ಅರ್ಥವಾಯಿತು. ಈಗ ಆ ಕುಟುಂಬದ ನಾಲ್ವರು ಮಕ್ಕಳು ನಮ್ಮ ಶಾಲೆಯಲ್ಲಿ ಓದುತ್ತಿರುವುದು ನನಗೆ ಅತೀವ ಸಂತಸ ಮತ್ತು ಸಮಾಧಾನದ ವಿಷಯವಾಗಿದೆ. ಕುಸುಮ ಈಗ ಏಳನೇ ತರಗತಿಗೆ ತಲುಪಿದ್ದಾಳೆ. ಆಕೆ ಹಿಂದಿ ಓದಲು ಮತ್ತು ಬರೆಯಲು ಕಲಿತಿದ್ದಾಳೆ. ಒಮ್ಮೆ ಆಕೆ ನನಗೆ ಪತ್ರವನ್ನೂ ಬರೆದಳು. ಆಕೆ ಭವಿಷ್ಯದಲ್ಲಿ ವೈದ್ಯೆಯಾಗಲು ಬಯಸುತ್ತಾಳೆ. ಮತ್ತು ಇದು ಖಂಡಿತವಾಗಿಯೂ ಸಂಭವಿಸುತ್ತದೆ ಎಂದು ನಮಗೆಲ್ಲರಿಗೂ ಖಚಿತ ಭರವಸೆಯಿದೆ.

## ಪ್ರೀತಿ ಮತ್ತು ಸಮಾನತೆ: ಎರಡು ಮಾಂತ್ರಿಕ ವಿಷಯಗಳು

ನನ್ನ ಇಪ್ಪತ್ತೆರಡು ವರ್ಷಗಳ ಶಿಕ್ಷಕ ವೃತ್ತಿಯ ಅನುಭವಗಳ ಆಧಾರದ ಮೇಲೆ, ಪ್ರೀತಿ ಮತ್ತು ಸಮಾನತೆ ಅಂತಹ ಎರಡು ಮಾಂತ್ರಿಕ ವಿಷಯಗಳು ಎಂದು ನಾನು ಹೇಳಬಲ್ಲೆ, ಅದು ಏನನ್ನೂ ಹೇಳದೆ ಮಕ್ಕಳಿಗೆ ಬಹಳಷ್ಟು ಕಲಿಸುತ್ತದೆ.

ಆದರೆ ದುಃಖಕರ ವಿಷಯವೆಂದರೆ, ಹೆಚ್ಚಿನ ಶಾಲೆಗಳಲ್ಲಿ ಇದು ವಿರುದ್ಧವಾಗಿದೆ. ಓದುವುದು, ಮಾತನಾಡುವುದು ಮತ್ತು ನೋಡುವುದರಲ್ಲಿ ಉತ್ತಮವಾದ ಮಗು ಎಲ್ಲೆಡೆ ಗಮನ ಸೆಳೆಯುತ್ತದೆ, ಆದರೆ ಹಾಗಲ್ಲದ ಮಕ್ಕಳು ಅನಾಮಧೇಯರಾಗಿ ಶಾಲೆಗೆ ಬಂದು ಅನಾಮಧೇಯರಾಗಿ ಶಾಲೆ ಬಿಡುತ್ತಾರೆ. ಮಕ್ಕಳ ಅಂಕಗಳು, ಅವರ ನಡೆವಳಿಕೆಯ ಕೌಶಲಗಳು, ಅವರ ಕೌಟುಂಬಿಕ–ಸಾಮಾಜಿಕ ಹಿನ್ನೆಲೆಗಳು ಮಾತ್ರವೇ ಅವರ ಜನಪ್ರಿಯತೆ, ಗೌರವ ಮತ್ತು ಪ್ರತಿಫಲಗಳಿಗೆ ಮಾನದಂಡ–ವಾಗಬಾರದು ಎಂಬುದೇ ಸದಾ ನನ್ನ ಪ್ರಯತ್ನವಾಗಿರುತ್ತದೆ. ಬದಲಿಗೆ ಅವರ ಓದಿನ ಪಯಣ ಎಲ್ಲಿಂದ ಆರಂಭವಾಯಿತು ಮತ್ತು ಈ ಪಯಣದಲ್ಲಿ ಅವರು ಹೇಗೆ ಪಯಣಿಗರಾಗಿದ್ದರು ಎಂಬುದಕ್ಕೆ ಗಮನ ನೀಡಬೇಕು. ಕೆಲವು ಮಕ್ಕಳು 5ನೇ ತರಗತಿಯವರೆಗೆ ಐದು ವರ್ಷದಲ್ಲಿ ಒಟ್ಟು ನೂರು ದಿನ ಶಾಲೆಗೆ ಹೋಗಿಲ್ಲ, ಆದರೆ ನಮ್ಮ ಶಾಲೆಗೆ ಸೇರಿದ ನಂತರ 6ನೇ ತರಗತಿಯಲ್ಲಿ ಮಾತ್ರ 'ಕ.ಕ.ಹ.ರ' ಕಲಿತರೂ ಒಂದು ದಿನವೂ ಗೈರು ಹಾಜರಾಗಿಲ್ಲ. . ಅಂಕಿ–ಅಂಶಗಳ ದೃಷ್ಟಿಯಿಂದ ಅವರ ಪಯಣ ಚೆನ್ನಾಗಿದೆ ಎಂದು ಹೇಳಲಾಗದಿದ್ದರೂ, ಅವರ ಕಲಿಯುವ ಉತ್ಸಾಹ, ಶಾಲೆಯಲ್ಲಿರುವುದು, ಮಕ್ಕಳೆಲ್ಲ ಸೇರಿ ಕಲಿಯುವುದು ನಮಗೆ ತೃಪ್ತಿ ತಂದಿದೆ.

ಈ ಹಿನ್ನೆಲೆಯಲ್ಲಿ ಶಾಲೆಯ ವಾರ್ಷಿಕ ಸಮಾರಂಭದಲ್ಲಿ ಸಾಮಾನ್ಯವಾಗಿ ನಿರ್ಲಕ್ಷಿಸಲ್ಪಟ್ಟ ಮಕ್ಕಳನ್ನು ಕ್ಷೇತ್ರ ಶಿಕ್ಷಣಾಧಿ–ಕಾರಿಗಳಿಂದ ಪುರಸ್ಕರಿಸಿದ್ದೇವೆ. ನಾವು ಪ್ರಶಸ್ತಿಗಳಿಗಾಗಿ ವಿವಿಧ ವಿಭಾಗಗಳನ್ನು ರಚಿಸಿದ್ದೇವೆ. ಶಾಲೆಯಲ್ಲಿ ಅತ್ಯಂತ ಸಂತೋಷ–ದಾಯಕ ಮಗು, ಅತ್ಯುತ್ತಮ ನಗುವಿನ ಮಗು, ಎಲ್ಲರಿಗೂ ಸಹಾಯ ಮಾಡುವ ಮಗು, ಆರನೇ ತರಗತಿಯಲ್ಲಿ ವರ್ಣಮಾಲೆಯನ್ನು ಕಲಿತರೂ ಐಚ್ಛಿಕ ಪರೀಕ್ಷೆ ತೆಗೆದುಕೊಳ್ಳುವ ಮಗು, ಗ್ರಂಥಾಲಯದಿಂದ ಹೆಚ್ಚು ಪುಸ್ತಕಗಳನ್ನು ಎರವಲು ಪಡೆಯುವ ಮಗು, ಹೆಚ್ಚು ಓಡುವ ಮಗು ಇತ್ಯಾದಿ. ಇದರಿಂದ ಏನಾಯಿತು ಎಂದರೆ ಟಾಪರ್ ಆಗದ ಅಥವಾ ನೃತ್ಯ, ಗಾಯನ, ಭಾಷಣ ಇತ್ಯಾದಿಗಳಲ್ಲಿ ಪ್ರಾವೀಣ್ಯತೆ ಇರದ ಮಕ್ಕಳೂ ಪ್ರಶಸ್ತಿ ಪಡೆದರು. ಅವರ ಸ್ಥೈರ್ಯವು ಪ್ರೀತಿ, ಪ್ರೋತ್ಸಾಹ ಮತ್ತು ಸಮಾನ ಪರಿಗಣಿಸುವಿಕೆಯಿಂದ ಹೆಚ್ಚು ಹೆಚ್ಚಾಯಿತು. ಇದರ ಫಲಿತಾಂಶವೆಂದರೆ ಆ ಮಕ್ಕಳಲ್ಲಿ ಒಂದು ಮಗು 9 ನೇ ತರಗತಿಯ ಸೈನಿಕ ಶಾಲೆಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣವಾಯಿತು ಮತ್ತು ಅವನೀಗ ರಾಷ್ಟ್ರೀಯ ಮೀನ್ಸ್–ಕಮ್–ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ವಸತಿ ಶಾಲೆಯಲ್ಲಿ ಓದುತ್ತಿದ್ದಾನೆ.

ನಮ್ಮ ಸಮಾಜದಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ದೈಹಿಕ ರೂಪ, ಎತ್ತರ, ತೂಕ ಇತ್ಯಾದಿಗಳ ಬಗ್ಗೆ ನಿರಾಶೆಗೊಂಡ ಮನಸ್ಥಿತಿ. ಹುಡುಗಿಯರು ಹೆಚ್ಚಾಗಿ ಇದರ ಬಲಿಪಶುಗಳಾಗುತ್ತಾರೆ. ತನ್ನ ವಯಸ್ಸಿನ ಇತರ ಹುಡುಗಿಯರಿಗಿಂತ ಎತ್ತರ ಮತ್ತು ತೂಕ ಹೆಚ್ಚಿರುವ ಹುಡುಗಿಯ ಜೀವನವು ಕಷ್ಟಕರವಾಗಿದೆ. ಐದನೇ ತರಗತಿಯ ನಂತರವೇ ಅಂತಹ ಹುಡುಗಿಯರನ್ನು 'ಬೆಳೆದಿದ್ದಾಳೆ' ಎಂದು ಕರೆಯಲಾಗುತ್ತದೆ ಮತ್ತು ಆಟವಾಡಲು, ಜಿಗಿಯಲು ಮತ್ತು ಹೊರಗೆ ಹೋಗುವುದನ್ನು ನಿಷೇಧಿಸಲಾಗುತ್ತದೆ. ಈ ಕೆಟ್ಟ ಚಾಳಿಯು ಮನೆಯಿಂದ ಪ್ರಾರಂಭವಾಗಿ ಶಾಲೆಯನ್ನು ತಲುಪುತ್ತದೆ.

> **ಮಕ್ಕಳ ಅಂಕಗಳು, ಅವರ ವರ್ತನೆಗಳು ಮತ್ತು ಅವರ ಕುಟುಂಬಗಳ ಸಾಮಾಜಿಕ ಹಿನ್ನೆಲೆಗಳು ಎಂದಿಗೂ ಅವರ ಜನಪ್ರಿಯತೆ ಗೌರವ ಬಹುಮಾನಗಳಿಗೆ ಮಾನದಂಡ ವಾಗಬಾರದು ಎಂಬುದರತ್ತ, ನನ್ನ ಪ್ರಯತ್ನ ಸಾಗುತ್ತದೆ.**

ಅಂತಹ ಇಬ್ಬರು ಹುಡುಗಿಯರು ನನ್ನ ಶಾಲೆಗೆ ಬಂದರು. ಅವರ ಎತ್ತರ ಮತ್ತು ತೂಕ ಅವಳ ತರಗತಿಯ ಇತರ ಹುಡುಗರು ಮತ್ತು ಹುಡುಗಿಯರಿಗಿಂತ ಹೆಚ್ಚು. ಇದರಿಂದಾಗಿ ಇಬ್ಬರೂ ಆರನೇ ತರಗತಿಯಲ್ಲಿಯೇ ದೊಡ್ಡವರಂತೆ ಮೌನವಾಗಿ, ಭಯಭೀತರಾಗಿ ಕುಳಿತುಕೊಳ್ಳುತ್ತಿದ್ದರು. ಊಟದ ನಂತರ ಮಕ್ಕಳೆಲ್ಲ ಓಡಿ ಆಟವಾಡುತ್ತಿದ್ದರೂ ಇಬ್ಬರೂ ಕುಳಿತೇ ಇರುತ್ತಿದ್ದರು. ತರಗತಿಯಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ ಅಥವಾ ಉತ್ತರಿಸುತ್ತಿರಲಿಲ್ಲ. ಸದ್ದಿಲ್ಲದೆ ಶಾಲೆಗೆ ಬಂದು ಹೋಗುವುದು ಅವರ ಕೆಲಸವಾಗಿತ್ತು. ಅವರ ಹೆಸರನ್ನು ಕೇಳಿದರೇನೇ ಅವರ ಗಂಟಲು ಒಣಗುತ್ತಿತ್ತು, ಇನ್ನೇನಾದರೂ ಕೇಳಿದರೆ ಅವರ ಕಣ್ಣುಗಳು ಕಣ್ಣೀರಿನಿಂದ ತುಂಬುತ್ತಿದ್ದವು. ಕ್ರಮೇಣ, ಊಟದ ವಿರಾಮದ ಸಮಯದಲ್ಲಿ, ಹಳ್ಳಿಯ ಕೆಲವು ಯುವಕರನ್ನು ಒಳಗೊಂಡಿರುವ ನನ್ನ ತಂಡವು ಇಬ್ಬರೂ ಹುಡುಗಿಯರಿಗೆ ಒಳಾಂಗಣ ಆಟಗಳನ್ನು ಆಡಲು ಅವಕಾಶ ಮಾಡಿಕೊಟ್ಟಿತು, ಆದರೆ ಅವರು ಕುಳಿತು ಕೇರಂ, ಚೆಸ್ ಆಟಗಳ ಕಡೆ ಕಣ್ಣೆತ್ತಿಯೂ ನೋಡಲಿಲ್ಲ ಅವರು ಶಾಲೆಗೆ ಸೇರಿ ಎರಡು–ಮೂರು ತಿಂಗಳಾಗಿತ್ತು, ಆದರೂ ನಾವು ಅವರನ್ನು ಸಮನ್ವಯಗೊಳಿಸಲು ವಿಫಲರಾಗಿದ್ದೆವು.

ಒಂದು ದಿನ ಒಂದು ವಿಚಿತ್ರ ಘಟನೆ ನಡೆಯಿತು. ಸಾಮಾನ್ಯವಾಗಿ, ಮಕ್ಕಳು ಆಟವಾಡುವಾಗ ನಾನು ಪುಸ್ತಕವನ್ನು ತೆಗೆದುಕೊಂಡು ಓದಲು ಪ್ರಾರಂಭಿಸುತ್ತೇನೆ, ಹಾಗಾಗಿ ಅವರು ಜಗಳವಾಡದಂತೆ, ಗಾಯಗೊಳ್ಳದಂತೆ ಅಥವಾ ಎಲ್ಲಿಂದಲೋ ಬೀಳದಂತೆ ನಾನು ಸಹ ಅವರ ಮೇಲೆ ಕಣ್ಣಿಡಲು ಬಯಸುತ್ತೇನೆ. ಅದೇ ಕ್ಷಣದಲ್ಲಿ, ಈ ಇಬ್ಬರು ಹುಡುಗಿಯರು ನನ್ನ ಬಳಿಗೆ ಬಂದು, "ನೀವು ಏನು ಓದುತ್ತಿದ್ದೀರಿ?" ಎಂದು ಕೇಳಿದರು.

ಅವರು ಮಾತಾಡಿದಾಗ ನನಗೆ ಸಂತೋಷ ಮತ್ತು ಆಶ್ಚರ್ಯ ಎರಡೂ ಆಯಿತು. ನಾನು ಅವರಿಗೆ, "ಇದು ಗಜಲ್ ಸಂಗ್ರಹ" ಎಂದು ಹೇಳಿದೆ. ಅವರು ನನಗೆ ಗಜಲ್ ಓದಲು ವಿನಂತಿಸಿದರು. ನಾನು ಅವರನ್ನು ನನ್ನ ಪಕ್ಕದಲ್ಲಿ ಕೂರಿಸಿಕೊಂಡು ಎರಡು–ಮೂರು ಗಜಲ್‌ಗಳನ್ನು ಬೇಗನೆ ಓದಿದೆ. ಈಗ ಅದು ವಾಡಿಕೆಯಾಗಿಬಿಟ್ಟಿದೆ. ಇಬ್ಬರೂ ಊಟದ ವಿರಾಮದ ಸಮಯದಲ್ಲಿ ನನ್ನ ಬಳಿಗೆ ಬಂದು ನನ್ನ ಕೈಯಲ್ಲಿ ಕವನ, ಗಜಲ್ ಅಥವಾ ಯಾವುದಾದರೂ ಪುಸ್ತಕವನ್ನು ಓದಲು ಹೇಳುತ್ತಿದ್ದರು. ಒಂದು ದಿನ ನಾನು ಅವರಿಗೆ ಹೇಳಿದೆ, "ಇಂದು ನೀವು ನನಗೆ ಓದಿ ಹೇಳುತ್ತೀರಿ." ಇಬ್ಬರೂ ತಲೆಬಾಗಿ ಮತ್ತೆ ಮೌನವಾದರು. ಹಲವಾರು ದಿನಗಳ ಒಡನಾಟದಲ್ಲಿ, ಅವರು ಕಾವ್ಯದಲ್ಲಿ ಆಸಕ್ತಿ ಹೊಂದಿದ್ದಾರೆಂದು ನನಗೆ ತಿಳಿದಿತ್ತು, ಆದರೆ ಆಳವಾದ ಕೀಳರಿಮೆ ಮತ್ತು ಹಿಂಜರಿಕೆಯಿಂದ ಅವರು ಮಾತನಾಡುತ್ತಿರಲಿಲ್ಲ. ಅಂದ ಹಾಗೆ ಆ ದಿನವಲ್ಲ, ಮರುದಿನದಿಂದಲೇ ಮೊದಲು ಒಂದು ಕವನ, ನಂತರ ಎರಡು–ಮೂರು ಕವನಗಳನ್ನು ಹೇಳುತ್ತಾ ಶುರುವಾದ ಪಯಣ ಇಂದು ಆ ಇಬ್ಬರಿಗಿಂತ ಚೆನ್ನಾಗಿ ಕವನ ವಾಚನ ಮಾಡುವವರಿಲ್ಲ ಎನ್ನುವ ಹಂತ ತಲುಪಿದೆ.

ತರಗತಿಯಲ್ಲಿ ಓದು, ಬರಹ, ಮಾತನಾಡುವುದರಲ್ಲಿ ಹುಷಾರಾಗಿ ಇರುವ ಮಕ್ಕಳಿಗೆ ಮಾತ್ರ ಗಮನ ನೀಡಲಾಗುತ್ತದೆ, ಆದರೆ ಸರಾಸರಿ ಅಥವಾ ಅದಕ್ಕಿಂತ ಕಡಿಮೆ ಓದುವ, ಬರೆಯುವ ಮತ್ತು ಮಾತನಾಡುವ ಕೌಶಲ ಹೊಂದಿರುವ ಮಕ್ಕಳಿಗೆ ಪ್ರತ್ಯೇಕ ಗಮನ ನೀಡಿದರೆ, ಆಶ್ಚರ್ಯಕರ ಫಲಿತಾಂಶಗಳು ಸಿಗುತ್ತವೆ. ಈಗ ನನ್ನ ತರಗತಿಯಲ್ಲಿ ಓದುವ ಮತ್ತು ಬರೆಯುವ ಮಕ್ಕಳನ್ನು ನೋಡುವುದು ತುಂಬಾ ಆಹ್ಲಾದಕರವಾಗಿರುತ್ತದೆ.



**ಮಮತಾ ಸಿಂಗ್** ಉತ್ತರ ಪ್ರದೇಶದ ಅಮೇಠಿ ಜಿಲ್ಲೆಯ ಒಂದು ಹಿಂದುಳಿದ ಗ್ರಾಮ ಅಗ್ರೇಸರದಲ್ಲಿ ಬೇಸಿಕ್ ಶಿಕ್ಷಾ ಪರಿಷತ್ ನಡೆಸುವ ಜೂನಿಯರ್ ಹೈಸ್ಕೂಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಹೊಸ ಪ್ರಯೋಗಗಳನ್ನು ನಡೆಸುವ ನಿಟ್ಟಿನಲ್ಲಿ ಸಾವಿತ್ರಿ ಬಾಯಿ ಫುಲೆ ಗ್ರಂಥಾಲಯವನ್ನು ನಿರ್ಮಿಸಿದ ಕಾರಣ ಅವರು ದೇಶಾದ್ಯಂತ ಗುರುತಿಸಲ್ಪಟ್ಟರು.
ಸಂಪರ್ಕ: mamtathinks@gmail.com

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಹುಡುಗಿಯರಲ್ಲಿ ಮುಟ್ಟು ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ

ರೂಬಿನಾ ಖಾನ್

ಕಲಿಯುವ ಮತ್ತು ಕಲಿಯಲಾಗದಿರುವುದರ ನಡುವೆ ಒಂದು ಸೂಕ್ಷ್ಮವಾದ ಗೆರೆಯಿದೆ. ಎಲ್ಲಾ ಕ್ರಮಗಳನ್ನು ತೆಗೆದುಕೊಂಡ ನಂತರವೂ ಮಕ್ಕಳೇಕೆ ಕಲಿಯುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಯಾವಾಗಲೂ ಕಷ್ಟವಾಗಿರುತ್ತದೆ. ಆದರೆ ನಾವು ಕಲಿಯಲಾಗದಿರುವುದರ ಪದರಗಳನ್ನು ಒಂದೊಂದಾಗಿ ಬಿಚ್ಚಿಡಲು ಪ್ರಾರಂಭಿಸಿದಾಗ, ಅನೇಕ ಕಾರಣಗಳು ಒಂದೊಂದಾಗಿ ಹೊರಹೊಮ್ಮುತ್ತವೆ. ತರಗತಿಯಲ್ಲಿ ಗಮನ ಕೇಂದ್ರೀಕರಿಸಲು ಮತ್ತು ಕಲಿಯಲು ಸಾಧ್ಯವಾಗದಿರುವುದಕ್ಕೆ ಸಿಗುವ ಕಾರಣಗಳ ಪೈಕಿ ಹೆಣ್ಣುಮಕ್ಕಳ ಮುಟ್ಟಿನ ಅವಧಿಯೂ ಒಂದು ಪ್ರಮುಖ ಕಾರಣವಾಗಿದೆ. ಈ ಸಾಮಾನ್ಯ ದೈಹಿಕ ಬದಲಾವಣೆ ಮತ್ತು ಕಲಿಕೆಯ ನಡುವಿನ ಸಂಬಂಧದ ಕುರಿತಾಗಿ ದಾಖಲಿಸಲಾದ ಕೆಲವು ಅನುಭವಗಳನ್ನುಈ ಲೇಖನವು ಪ್ರಸ್ತುತಪಡಿಸುತ್ತದೆ.

ಶಾಲೆಗೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಮುಟ್ಟಿನಂಥ ಸಾಮಾನ್ಯ (ಇದು ಸಾಮಾನ್ಯ ದೈಹಿಕ ಬದಲಾವಣೆಯಾಗಿರುವ ಕಾರಣದಿಂದ), ಆದರೆ ವಿಶೇಷ ಪರಿಸ್ಥಿತಿಯ (ಇದರ ಬಗ್ಗೆ ಮಾತನಾಡುವುದು ಸೂಕ್ತವೆಂದು ಪರಿಗಣಿಸಲಾಗಿರುವುದರ ಕಾರಣದಿಂದ) ಸಂದರ್ಭದಲ್ಲಿ ಯಾವ ರೀತಿಯಲ್ಲಿ ಸಮನ್ವಯಗೊಳ್ಳುವಂತೆ ಮಾಡುವುದು ಸೂಕ್ತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ. ಇದರ ಪರಿಣಾಮವಾಗಿ, ಹೆಣ್ಣುಮಕ್ಕಳಿಗೆ ನಿಯಮಿತವಾಗಿ ಶಾಲೆಗೆ ಹಾಜರಾಗುವುದಕ್ಕೂ ಕಲಿಕೆಗೂ ಅಡ್ಡಿಯಾಗುತ್ತದೆ. ನನಗಿದು ಅರ್ಥವಾದ ನಂತರ, ಈ ದಿನಗಳಲ್ಲಿ ಹೆಣ್ಣುಮಕ್ಕಳು ಹೇಗೆ ತೊಡಗಿಸಿಕೊಳ್ಳಬೇಕು, ಅವರು ಶಾಲೆಗೆ ಹಾಜರಾಗುವುದಲ್ಲದೆ ಅವರ ಕಲಿಯುವಿಕೆಯನ್ನು ಹೇಗೆ ಖಾತರಿಪಡಿಸಿಕೊಳ್ಳಬೇಕು ಎಂಬಿತ್ಯಾದಿ ಮಾರ್ಗೋಪಾಯಗಳನ್ನು ನಾನು ಕಂಡುಕೊಂಡೆ.

ಈ ಲೇಖನದ ಮೂಲಕ, ನಾನು ಮುಟ್ಟು ಮತ್ತು ಹೆಣ್ಣು ಮಕ್ಕಳ ಕಲಿಕೆಗೆ ಸಂಬಂಧಿಸಿದ ನನ್ನ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಭೋಪಾಲ್‌ನ ಬೈರಾಸಿಯಾ ಬ್ಲಾಕಿನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಅವರ ಬೋಧನಾ ಪ್ರಕ್ರಿಯೆಯಲ್ಲಿ ಇನ್ನಷ್ಟು ಸುಧಾರಣೆ ತರಲು ಸಹಕರಿಸುವುದು ನನ್ನ ಕೆಲಸದ ಪ್ರಮುಖ ಭಾಗವಾಗಿದೆ. ಮಕ್ಕಳು ತರಗತಿಯಲ್ಲಿ ಕಲಿಯದಿರುವುದಕ್ಕೆ ಕಾರಣ ಅಡೆತಡೆಗಳಾಗಿ ಕಾರ್ಯನಿರ್ವಹಿಸುವ ಕಲಿಕೆಯ ಪ್ರಕ್ರಿಯೆಗಳು ಮತ್ತು ಆ ಮಕ್ಕಳು ಎಂದು ನಾವು ಆಗಾಗ್ಗೆ ನೋಡಿದ್ದೇವೆ. ಬೋಧನಾ ಪ್ರಕ್ರಿಯೆಗಳೇ ಅಡಚಣೆಯಾಗಿ ಕಾಡುವುದರಿಂದ ಮಗು ತರಗತಿಯಲ್ಲಿ ಕಲಿಯದೇ ಇರಲು ಕಾರಣವಾಗುವುದನ್ನು ಹಾಗೂ ಅವು ಮಗುವಿನ ಅಗತ್ಯವನ್ನು ಮೀರಿ ಹೋಗಿರುವುದನ್ನು ನಾವು ಸಾಮಾನ್ಯವಾಗಿ ಆಗಾಗ್ಗೆ ನೋಡುತ್ತಿರುತ್ತೇವೆ. ಇವುಗಳ ಜೊತೆಜೊತೆಗೆ, ಅಧ್ಯಯನದ ಸಮಯದಲ್ಲಿ ಅಡಚಣೆಯಾಗಿ ಕಾರ್ಯನಿರ್ವಹಿಸುವ ಕೆಲವು ನಡೆವಳಿಕೆಯ ಮತ್ತು ದೈಹಿಕ ತೊಂದರೆಗಳೂ ಇವೆ ಮತ್ತು ಇವೆಲ್ಲವೂ ಕಲಿಕೆಯಿಂದ ಭಿನ್ನವಾದ ಅಡಚಣೆಗಳೆಂದು ಪರಿಗಣಿಸಲಾಗುತ್ತದೆ.



ಚಿತ್ರ 1: ಮುಟ್ಟಿನ ಕಾರಣದಿಂದ ಕಲಿಕೆಯಲ್ಲಿ ಬರುವ ಸಮಸ್ಯೆಗಳ ಕುರಿತು ಚರ್ಚೆ

## ಮುಟ್ಟಿನ ಕಾರಣದಿಂದಾಗಿ ಸಮವಸ್ತ್ರದ ಬದಲಾವಣೆ

ಈ ವಿಷಯವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಇದೇ ವಿಷಯದ ಸುತ್ತಮುತ್ತ ಸುತ್ತುವಂಥ ಕ್ರಿಯಾ ಯೋಜನೆಯನ್ನು ನಾನು ರೂಪಿಸಿದೆ. ಇದಕ್ಕಾಗಿ ನಾನು ಆರು ತಿಂಗಳ ಅವಧಿಯನ್ನು ನಿಗದಿಪಡಿಸಿದೆ ಮತ್ತು ಬೈರಾಸಿಯಾ ಬ್ಲಾಕಿನಲ್ಲಿರುವ 3 ಬಾಲಕಿಯರ ಶಾಲೆಗಳು ಮತ್ತು 2 ಬಾಲಕಿಯರ ವಸತಿ ನಿಲಯಗಳಿಗೆ ಭೇಟಿ ನೀಡಲು ನಿರ್ಧರಿಸಿದೆ. ಅಲ್ಲದೆ ಪ್ರಜನನ ಆರೋಗ್ಯ ವಿಷಯಗಳ ಕುರಿತು ಈ ಶಾಲೆಗಳ ಪ್ರೌಢಶಾಲೆಗಳ ವಿದ್ಯಾರ್ಥಿನಿಯರೊಂದಿಗೆ ಸರಣಿ ಸಂವಾದಗಳನ್ನು ನಡೆಸಬೇಕು ಎಂದು ಕೂಡ ನಿರ್ಧರಿಸಿದೆ. ನಮ್ಮ ಮೊದಲ ಗೋಷ್ಠಿಯಲ್ಲೇ, ಮುಟ್ಟಿನ ಬಗ್ಗೆ ಮಾತನಾಡುತ್ತಿದ್ದಾಗ ವಿದ್ಯಾರ್ಥಿನಿಯರಿಂದ ಈ ಕುರಿತಂತೆ ಹಲವಾರು ಪ್ರಶ್ನೆಗಳು ಮತ್ತು ಸಮಸ್ಯೆಗಳು ತೂರಿಬಂದವು. ಇವುಗಳಲ್ಲಿ ಕೆಲವು ಸಮಸ್ಯೆಗಳು ಮುಟ್ಟಿನ ದಿನಗಳ ಹಿನ್ನೆಲೆಯಿಂದಾಗಿ ಅವರ ಕಲಿಕೆಯ ಮೇಲೆ ಪ್ರಭಾವ ಬೀರುವಂತಿದ್ದವು. ತಮ್ಮ ಸಮವಸ್ತ್ರವಾದ ಬಿಳಿ ಬಣ್ಣದ ಸಲ್ವಾರ್, ದುಪಟ್ಟ ಮತ್ತು ತಿಳಿ ಆಕಾಶ ಬಣ್ಣದ ಕುರ್ತಾದ ಮೇಲೆ ಕಲೆಗಳಾಗುವ ಆತಂಕವಿರುವುದರಿಂದ ಈ ದಿನಗಳಲ್ಲಿ ತಾವು ಶಾಲೆಗೆ ಹೋಗುವುದಿಲ್ಲ ಎಂದು ಕೆಲವು ವಿದ್ಯಾರ್ಥಿನಿಯರು ಹೇಳಿದರು. ಹಾಗಂತ ತಾವು ಸಮವಸ್ತ್ರದ ಬದಲು ಬೇರೆ ಯಾವುದೇ ಉಡುಪಿನಲ್ಲಿ ಶಾಲೆಗೆ ಹೋದರೆ ದಂಡವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ನಮಗೆ ಇಷ್ಟವಿಲ್ಲದಿದ್ದರೂ ಸಹ, ನಾವು ಪ್ರತಿ ತಿಂಗಳು ನಮ್ಮ 3–5 ದಿನಗಳ ಕಲಿಕೆಯನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ ಹಾಗೂ ಇದರಿಂದಾಗಿ ನಮ್ಮ ಹೋಂವರ್ಕ್‌ಹೊರೆಯೂ ಹೆಚ್ಚಾಗುತ್ತದೆ ಎಂದು ಅವರು ಮುಂದೆ ವಿವರಿಸಿದರು. ಇದೆಲ್ಲ ಸಮಸ್ಯೆಗಳು ಈ ವಿದ್ಯಾರ್ಥಿನಿಯರಿಗೆ ಚಿಂತೆ ಮೂಡಿಸುವ ವಿಷಯವಾಗಿದ್ದವು.

8ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ಮುಟ್ಟಿಗೆ ಸಂಬಂಧಿಸಿದ ತನ್ನ ಅನುಭವವನ್ನು ವಿವರಿಸುವಾಗ ಭಾವುಕಳಾದಳು. ಆಕೆಯ ಅನುಭವವು ಈ ರೀತಿ ಇತ್ತು, "ನಾನು ಒಮ್ಮೆ ನನ್ನ ಮುಟ್ಟಿನ ಸಂದರ್ಭದಲ್ಲಿ ನನ್ನ ಮನೆಯ ಉಡುಪಿನಲ್ಲೇ ಶಾಲೆಗೆ ಬಂದಿದ್ದೆ. ತರಗತಿಯ ಒಬ್ಬ ಹುಡುಗನು ನನ್ನನ್ನು ಈ ಬಟ್ಟೆಗಳಲ್ಲಿ ನೋಡಿದ ನಂತರ ಪ್ರತಿದಿನ ನನ್ನ ಬಗ್ಗೆ ಛೇಡಿಸಲು ಪ್ರಾರಂಭಿಸಿದನು. ಅವನು ತನ್ನ ಸ್ನೇಹಿತನನ್ನು ಉದ್ದೇಶಿಸಿ ಮಾತನಾಡುತ್ತಾ, 'ನೀನೇನು ಇವತ್ತು ಬೇರೆ ಬಣ್ಣದ ಪ್ಯಾಂಟ್ ಧರಿಸಿ ಬಂದಿದ್ದೀಯಾ? ನಿನ್ನ ಪ್ಯಾಂಟಿನ ಮೇಲೂ ಕಲೆ ಆಗಿದೆಯಾ?' ಎಂದುಬಿಟ್ಟ. ಆತ ಇದನ್ನೆಲ್ಲಾ ಹೇಳುತ್ತಿದ್ದಾಗ ನನಗೆ ತುಂಬ ಮುಜುಗರವಾಯಿತು" ಎಂದು ಆಕೆ ಹೇಳಿದಳು. ಈ ರೀತಿ ಪ್ರತಿ ತಿಂಗಳೂ ಈ ಸಂಕಷ್ಟದಿಂದ ಪಾರಾಗಲು, ನಮ್ಮ ಶಾಲಾ ಸಮವಸ್ತ್ರದ ಬಣ್ಣವು ಗಾಢವಾಗಿರಬೇಕು, ಹಾಗಾದಾಗ ಕಲೆಗಳು ಕಾಣಿಸಿಕೊಳ್ಳುವ ಯಾವುದೇ ಅವಕಾಶ ಇರುವುದಿಲ್ಲ. ನಮಗಾಗಿ ಸಮವಸ್ತ್ರಗಳನ್ನು ತಯಾರಿಸುವಾಗ ನಮ್ಮ ಅಭಿಪ್ರಾಯಗಳು, ಅನುಕೂಲತೆಗಳು ಇತ್ಯಾದಿಗಳನ್ನು ಯಾರೂ ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ವಿದ್ಯಾರ್ಥಿನಿಯರು ಹೇಳಿದರು. ಕೆಲವು ವಿದ್ಯಾರ್ಥಿನಿಯರು ತಮ್ಮ ಈ ಸಮಸ್ಯೆಯನ್ನು ಶಿಕ್ಷಕಿಯ ಮುಂದಿಟ್ಟಾಗ, ಅವರಿಗೂ ವಿಷಯ ಗಂಭೀರವಾಗಿದೆ ಎನ್ನಿಸಿತು.

ಅವರು ಈ ಸಮಸ್ಯೆಯನ್ನು ಹಿರಿಯ ಶಿಕ್ಷಕಿಯ ಮುಂದಿಟ್ಟರು, ಆದರೆ ಅದು ಅಲ್ಲಿ ಕೇವಲ ಚರ್ಚೆಯ ವಿಷಯವಾಗಿ ಉಳಿಯಿತು. ವಿದ್ಯಾರ್ಥಿನಿಯರು ಪ್ಯಾಡ್ ಬದಲಿಗೆ ಬಟ್ಟೆಯನ್ನು ಬಳಸುತ್ತಿರಬಹುದು, ಇಲ್ಲವೇ ಸಮಯಕ್ಕೆ ಸರಿಯಾಗಿ ಪ್ಯಾಡುಗಳನ್ನು ಬದಲಾಯಿಸದೇ ಇರಬಹುದು, ಹೀಗಾಗಿ ಈ ಸಮಸ್ಯೆ ಎದುರಾಗಿರಬಹುದು ಎಂದು ಕೆಲವು ಶಿಕ್ಷಕರು ವಾದಿಸಿದರು. ಮುಟ್ಟಿನ ಸಮಯದಲ್ಲಿ ಮನೆಗೆ ಹೋಗಲು ಅರ್ಧ ದಿನದ ರಜೆಯನ್ನು ತೆಗೆದುಕೊಳ್ಳುವ ಪ್ರಶ್ನೆ ಬಂದಾಗ, ಆ ಸಮಯದಲ್ಲಿ ಯಾವುದೇ ರೀತಿಯ ನೋವನ್ನು ಅನುಭವಿಸುವುದು ಸಾಮಾನ್ಯ ವಿಷಯವಾಗಿದೆ ಮತ್ತು ನಮಗಂತೂ ಆ ಥರ ಆಗಿದ್ದೇ ಇಲ್ಲ. ಈಗಿನ ಮಕ್ಕಳು ಸ್ವಲ್ಪ ಹೆಚ್ಚೇ ಇರುವುದನ್ನು ದೊಡ್ಡದು ಮಾಡಿ ಮಾತನಾಡುತ್ತಾರೆ ಎಂದರು. ಆಗ, ಈ ವಿಷಯದ ಬಗ್ಗೆ ಸೂಕ್ಷ್ಮಗ್ರಾಹಿತ್ವ ಹೊಂದಿದ್ದ ಶಿಕ್ಷಕಿಯೊಬ್ಬರು, ತಮ್ಮ ಕಡೆಯಿಂದ ಸಾಧ್ಯವಾದಷ್ಟು ಸಹಾಯ ಮಾಡುವುದಾಗಿ ಹೇಳಿದರಲ್ಲದೆ, ಸಮವಸ್ತ್ರದ ಬಣ್ಣವನ್ನು ಬದಲಾಯಿಸುವುದು ದೊಡ್ಡ ಮಟ್ಟದಲ್ಲಿ ನಡೆಯಬೇಕಾದ ವಿಷಯವಾಗಿದೆ ಎಂದರು.



ಚಿತ್ರ 2: ಮಾತಾಡುವುದರಿಂದ ದಾರಿಗಳು ತಾನಾಗಿ ತೆರೆದುಕೊಳ್ಳುತ್ತವೆ

## ಸಮಸ್ಯೆಗಳಿನ್ನೂ ಇದ್ದವು


ನನ್ನ ಮತ್ತೊಂದು ಅನುಭವವು ಕೂಡ ಇದೇ ರೀತಿಯದ್ದಾಗಿತ್ತು. ಪ್ರಿನ್ಸಿಪಾಲ್ ಅವರಿಗೆ, "ಇನ್ನೂ ಮುಟ್ಟಾಗದ ವಿದ್ಯಾರ್ಥಿನಿಯ-ರೊಂದಿಗೆ ಋತುಸ್ರಾವದ ಕುರಿತಂತೆ ಒಂದು ಗೋಷ್ಠಿಯನ್ನು ನಡೆಸಲು ಉದ್ದೇಶಿಸಿದ್ದೇನೆ" ಎಂದು ನಾನು ಹೇಳಿದಾಗ. "ಈ ವಿದ್ಯಾರ್ಥಿನಿಯರಲ್ಲಿ ಹೆಚ್ಚಿನವರು 5 ಮತ್ತು 6ನೇ ತರಗತಿಯಲ್ಲಿರುವವರು. "ಅವರಿಗೆ ಈಗಲೇ ಅದನ್ನೆಲ್ಲ ಹೇಳಿ ಅದೇಕೆ ಗೊಂದಲಗೊಳಿಸಬೇಕು? ನಮಗೆ ಯಾರು, ಯಾವಾಗ ಇದ್ದನ್ನೆಲ್ಲ ಹೇಳಿದ್ದರು, ಆದರೆ ನಾವು ಕೂಡ ನಿರ್ವಹಿಸಿರಲಿಲ್ಲವೇ?".

ಹಾಗಿದ್ದರೂ, ಈ ಘಟನೆಯ ಕೆಲವೇ ದಿನಗಳ ನಂತರ ಕಾಕತಾಳೀಯವೆಂಬಂತೆ, 6ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳಿಗೆ ಮೊದಲ ಬಾರಿಗೆ ಋತುಸ್ರಾವ ಉಂಟಾಗಿದ್ದರಿಂದ ಭಾರಿ ತೊಂದರೆ ಎದುರಾಯಿತು. ಆಕೆಗೆ ಈ ವಿಷಯದ ಕುರಿತು ಮೊದಲೇ ಮಾಹಿತಿ ಇರಲಿಲ್ಲ. ತನ್ನ ಬಟ್ಟೆಗಳು ಹಾಳಾಗಿದ್ದನ್ನು ಕಂಡು ಆಕೆ ಭಯಭೀತಳಾಗಿ ಅಳಲು ಪ್ರಾರಂಭಿಸಿದಳು. ಹೇಗೋ ಆಕೆಯನ್ನು ಸಮಾಧಾನ ಪಡಿಸಿದ ಶಿಕ್ಷಕಿ, ಆಕೆಯನ್ನು ಆಕೆಯ ಮನೆಗೆ ಕರೆದೊಯ್ದರು. ಇದಾದ ನಂತರ, ಪ್ರಿನ್ಸಿಪಾಲ್ ಅವರು ಆ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಲು ನನಗೆ ಅನುಮತಿ ನೀಡಿದರು. ಇತರ ಗೋಷ್ಠಿಗಳಲ್ಲಿ ಇಂಥ ಇನ್ನೂ ಅನೇಕ ಸಮಸ್ಯೆಗಳು ನನ್ನ ಗಮನಕ್ಕೆ ಬಂದವು. ಅವುಗಳಲ್ಲಿ ಮುಖ್ಯವಾದುದೆಂದರೆ ಶಾಲೆಯಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸದೇ ಇರುವುದು, ಶೌಚಾಲಯಗಳನ್ನು ಸ್ವಚ್ಛಗೊಳಿಸದೇ ಇರುವುದು, ನೀರಿನ ಲಭ್ಯತೆ ಇಲ್ಲದಿರುವುದು, ಕಸದ ಬುಟ್ಟಿಗಳ ಕೊರತೆ ಇರುವುದು, ಶಾಲೆಯಲ್ಲಿ ಶೌಚಾಲಯಗಳಿಲ್ಲದೇ ಇರುವುದು ಇತ್ಯಾದಿಗಳು ಸೇರಿವೆ. ಮೇಲೆ ತಿಳಿಸಿದಂತೆ, ಈ ಸಮಯದಲ್ಲಿನ ನಡೆವಳಿಕೆಯಲ್ಲಿನ ಬದಲಾವಣೆಗಳು, ಋತುಸ್ರಾವ ಉಂಟಾಗುವುದಕ್ಕೆ ಕಾರಣಗಳು, ಅವರ ಆರೈಕೆ ಇತ್ಯಾದಿಗಳ ಬಗ್ಗೆ ಈ ಶಾಲೆಗಳಲ್ಲಿ ಯಾವುದೇ ರೀತಿಯ ವಿಚಾರ ವಿಮರ್ಶೆಗಳಾಗಲಿ ಅಥವಾ ಚರ್ಚೆಗಳಾಗಲಿ ನಡೆದೇ ಇರಲಿಲ್ಲ. ಆತಂಕಕಾರಿ ವಿಷಯವೆಂದರೆ, ಈ ಸಮಸ್ಯೆಯನ್ನು ಕಲಿಕೆಯ ತೊಂದರೆಗಳಿಂದ ಪ್ರತ್ಯೇಕವಾಗಿ ನೋಡಲಾಗುತ್ತದೆ, ಆದರೆ ಇದು ವಿದ್ಯಾರ್ಥಿನಿಯರ ಕಲಿಕೆಯ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮ ಬೀರುತ್ತಿದೆ. ಈ ಹುಡುಗಿಯರು ಶಾಲೆಯ ಜೊತೆಗೆ ಹೊಂದಿರುವ ನಂಟಿನಿಂದಾಗಿ ಈ ಸಮಸ್ಯೆಯು ಅವರ ಕಲಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದು ಸಹಜವೇ ಆಗಿದೆ. ನೋವು ಅನುಭವಿಸುವ ಸಂದರ್ಭದಲ್ಲಿ, ಅನೇಕ ಬಾರಿ ಅವರಿಗೆ ಎಲ್ಲಾ ಸಮಯದಲ್ಲೂ ತರಗತಿಯಲ್ಲಿ ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಅಂತೆಯೇ, ಒಂಟಿತನ, ಕಿರಿಕಿರಿ ಸಹ ಅವರ ನಡೆವಳಿಕೆಯಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತದೆ. ಈ ಕುರಿತಂತೆ ಮಾತನಾಡಲು ಮತ್ತು ಅವರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬಲ್ಲ ಶಿಕ್ಷಕರು ಶಾಲೆಯಲ್ಲಿ ಅವರಿಗೆ ಸಿಗುವುದು ಬಹಳ ವಿರಳವಾಗಿರುತ್ತದೆ.

ಶಾಲೆಯ ಹೊರತಾಗಿ, ಈ ಸಂವಾದಗಳನ್ನು ನಡೆಸಲು ನಾನು ವಿದ್ಯಾರ್ಥಿನಿಯರ ಹಾಸ್ಟೆಲ್ ಗಳಿಗೂ ಭೇಟಿ ನೀಡಬೇಕಾಯಿತು. ಈ ವಿದ್ಯಾರ್ಥಿನಿಯರು ಮನೆ ಮತ್ತು ಕುಟುಂಬದಿಂದ ದೂರ ಉಳಿದುಕೊಂಡೇ ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸುದೀರ್ಘ ಪ್ರಯತ್ನದ ನಂತರ, ಈ ವಿದ್ಯಾರ್ಥಿನಿಯರು ಮತ್ತು ಅವರ ವಾರ್ಡನ್ ಆಗಿರುವ ಶಿಕ್ಷಕಿಯರೊಂದಿಗೆ ಈ ಸಮಸ್ಯೆಗಳ ಕುರಿತಾದ ಜಂಟಿ ಸಂವಾದವನ್ನು ಆಯೋಜಿಸಲಾಯಿತು. ವಿದ್ಯಾರ್ಥಿನಿಯರ ನಿರಂತರ ಪ್ರಯತ್ನದ ಫಲವಾಗಿ, ಪ್ರತಿ ತಿಂಗಳ ಕೊನೆಯ ದಿನದಂದು ಪ್ರಜನನ ಆರೋಗ್ಯ, ಮುಟ್ಟಿನಂತಹ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳನ್ನು ಹಾಸ್ಟೆಲ್‌ಗಳಲ್ಲಿ ನಿಯಮಿತವಾಗಿ ಪ್ರಾರಂಭಿಸ-ಲಾಯಿತು. ಸ್ಯಾನಿಟರಿ ಪ್ಯಾಡುಗಳ ಸೂಕ್ತ ವ್ಯವಸ್ಥೆಯೂ ಅಲ್ಲಿ ಕಂಡು-ಬರಲಾರಂಭಿಸಿತು. ವಿದ್ಯಾರ್ಥಿನಿಯರು ಹೇಳುತ್ತಾರೆ, "ಈಗ ನಾವು ಚೆನ್ನಾಗಿದ್ದೇವೆ ಅನ್ನಿಸುತ್ತದೆ. ಈ ಹಿಂದೆ, ನಾವು ಶಿಕ್ಷಕರೊಂದಿಗೆ ಕೇವಲ ಕಲಿಕೆಯ ಬಗೆಗಷ್ಟೇ ಮಾತನಾಡುತ್ತಿದ್ದೆವು, ಆದರೆ ನಾವೀಗ ಈ ರೀತಿಯ ವಿಷಯದ ಬಗೆಗೂ ಅವರೊಂದಿಗೆ ಚರ್ಚಿಸಬಲ್ಲೆವು".

ಹಾಸ್ಟೆಲುಗಳಲ್ಲಿ ಈ ರೀತಿಯ ವಿಷಯಗಳ ಅವಶ್ಯಕತೆಯನ್ನು ಪರಿಗಣಿಸಿ, ಅವುಗಳ ಬಗ್ಗೆ ಒಂದು ಹಂತದ ಕೆಲಸ ಮಾಡಿದ ನಂತರ ಈ ವಿದ್ಯಾರ್ಥಿನಿಯರಿಗೆ ಈ ವಿಚಾರದ ಅರಿವು ಮೂಡಿರುವ ಜೊತೆಗೆ ಅವರು ಗುಂಪುಗಳಲ್ಲಿ ಮುಕ್ತವಾಗಿ ಮಾತನಾಡುವ ಮತ್ತು ಪರಸ್ಪರರ ಪ್ರಶ್ನೆಗಳನ್ನು ಒಂದೇ ವೇದಿಕೆಗೆ ತರಲು ಪ್ರಯತ್ನಿಸುತ್ತಿರುವುದು ಗಮನಕ್ಕೆ ಬರುತ್ತಿದೆ. ಸೂಕ್ಷ್ಮವಾಗಿ ಗಮನಿಸಿದಾಗ, ಇದರಿಂದ ತಿಳಿದು ಬರುವ ಅಂಶವೆಂದರೆ, ಒಂದು ಮಗುವಿನ ಕಲಿಕೆಯ ಮೇಲೆ ಪರಿಣಾಮ ಬೀರುವ ಅನೇಕ ಅಂಶಗಳಿವೆ, ಅವು ಪ್ರಕಟವಾಗದೇ ಇರಬಹುದು, ಆದರೆ ಆ ಕುರಿತಂತೆ, ಸಮಗ್ರವಾಗಿ ಚಿಂತನೆ ನಡೆಸುವ ಅವಶ್ಯಕತೆಯಂತೂ ಇದ್ದೇ ಇರುತ್ತದೆ.

ಸುದೀರ್ಘ ಕಾಲದಿಂದ ಕಾಡುತ್ತಿರುವ ಈ ಸಮಸ್ಯೆಯನ್ನು ಪರಿಹರಿಸಲು, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2023 ರಲ್ಲಿ, ಹಿಂದುಳಿದ ಸಮುದಾಯಗಳ ಸಹಿತ ಎಲ್ಲಾ ವಿದ್ಯಾರ್ಥಿನಿಯರ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ಸಮನ್ವಯ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸಲು ಆದ್ಯತೆ ನೀಡುವ ಸಾಧ್ಯತೆಯಿದೆ. ಅಸಲಿಗೆ ಒಂದು ತರಗತಿಯು ಹೇಗಿರಬೇಕೆಂದರೆ, ಅದು ಎಲ್ಲರನ್ನೂ ಪರಿಣಾಮ-ಕಾರಿಯಾಗಿ ಸಮನ್ವಯಗೊಳ್ಳುವಂತಿರಬೇಕು, ಸಕ್ರಿಯವಾಗಿರಬೇಕು, ಪ್ರತಿ ಮಗುವಿಗೆ ಸ್ವಾತಂತ್ರ್ಯ, ಮುಕ್ತತೆ, ಸ್ವೀಕರಿಸುವಿಕೆ, ಅರ್ಥಪೂರ್ಣತೆ ಮತ್ತು ಸ್ವಂತಿಕೆಯಿಂದ ಕಲಿಕೆಯ ವಾತಾವರಣವನ್ನು ಹೊಂದಿರಬೇಕು



**ರುಬಿನಾ ಖಾನ್** ಅವರು ಒಂದು ದಶಕಕ್ಕೂ ಹೆಚ್ಚು ಕಾಲ ಮುಸ್ಕಾನ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. ಈ ಸಮಯದಲ್ಲಿ, ಅವರು ಸಂಸ್ಥೆ ನಡೆಸುತ್ತಿರುವ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. ಇದಲ್ಲದೆ, ಅವರು ಯೂನಿಸೆಫ್ ಮತ್ತು ಮುಸ್ಕಾನ್ ಸಂಸ್ಥೆಯ ಸಹಯೋಗದೊಂದಿಗೆ ಸಮುದಾಯ ಮತ್ತು ಇಲಾಖೆ ಮಟ್ಟದಲ್ಲಿ ಮಕ್ಕಳ ಸುರಕ್ಷತೆಯ ವಿಷಯಗಳ ಕುರಿತಂತೆ ಹೋರಾಡುತ್ತಿದ್ದಾರೆ. ಪ್ರಸ್ತುತ, ಅವರು ಭೋಪಾಲ್‌ನ ಬೈರಾಸಿಯಾ ಬ್ಲಾಕಿನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ
ಸಂಪರ್ಕ: rubina.khan@azimpremjifoundation.org

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ರಾಘವೇಂದ್ರ ಹೇರ್ಳೆ ಜಿ.

# ಒಂದು ವಿಶೇಷ ಶಾಲೆಯನ್ನು ಸಮನ್ವಯದ ಶಾಲೆಯನ್ನಾಗಿ ಮಾಡುವುದು

ಆರ್ ಲಾಲ್‌ಮಛುವಾನಿ

ಯಾವುದೇ ಮಗುವನ್ನು ನಿಧಾನವಾಗಿ ಕಲಿಯುವ ಮಗು ಅಥವಾ ಹಠಮಾರಿ ಎಂದು ಕರೆಯುವುದು ಸರಿಯಲ್ಲ. ಜೊತೆಗೆ ಒಂದೇ ಬೋಧನಾ ವಿಧಾನವನ್ನು ಅವಲಂಬಿಸುವ ಬದಲಿಗೆ ಮಕ್ಕಳು ಹೊಂದಿಕೊಳ್ಳುವ ಬೋಧನಾ ಪ್ರಕ್ರಿಯೆಗಳನ್ನು ಬಳಸುವುದು ಹೆಚ್ಚು ಅರ್ಥಪೂರ್ಣ. ಇದು ಕಷ್ಟಕರವೆಂದು ತೋರುತ್ತದೆ, ಆದರೆ ಸ್ವಲ್ಪ ಹೆಚ್ಚು ಪ್ರಯತ್ನ ಮತ್ತು ತಾಳ್ಮೆಯಿಂದ, ಇದು ಸುಲಭವಾಗುತ್ತದೆ ಮತ್ತು ಕಲಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಮಗುವಿನ ಆತ್ಮವಿಶ್ವಾಸವನ್ನು ನಾವು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

ಭಾರತದಲ್ಲಿ ಮಿಜೋರಾಂ ರಾಜ್ಯದ ಸಾಕ್ಷರತೆ ಪ್ರಮಾಣವು ಕೇರಳದ ನಂತರ ಎರಡನೆಯದು. ಮಿಜೋ ಸಮಾಜವು 'ತ್ಲಾವ್ಮಂಗ್‌ಈಹ್ಲಾ' ಎಂಬ ನೀತಿ ಸಂಹಿತೆಯನ್ನು ಆಧರಿಸಿದೆ, ಅಲ್ಲಿ ಪ್ರತಿಯೊಬ್ಬರೂ ಆತಿಥ್ಯ, ದಯೆ, ನಿಸ್ವಾರ್ಥತೆಯನ್ನು ತೋರಿಸಲು ಮತ್ತು ಇತರರಿಗೆ ಸಹಾಯ ಮಾಡುವುದನ್ನು ನಿರೀಕ್ಷಿಸಲಾಗುತ್ತದೆ.

ನಾನು 2018 ರಲ್ಲಿ ಶ್ರವಣ ದೋಷ ಹೊಂದಿರುವ ಮಕ್ಕಳಿಗಾಗಿ ವಿಶೇಷ ಶಾಲೆಯನ್ನು ಪ್ರಾರಂಭಿಸಿದೆ. ಮೊದಲ ಬ್ಯಾಚ್‌ನಲ್ಲಿ 2.5 ರಿಂದ 6 ವರ್ಷದೊಳಗಿನ 10 ವಿದ್ಯಾರ್ಥಿಗಳು ಮಾತ್ರ ಇದ್ದರು ಮತ್ತು ಈ ಮಕ್ಕಳು ಶಾಲಾಪೂರ್ವ ವಿದ್ಯಾರ್ಥಿಗಳಾಗಿದ್ದರು. ನಾನು ಸ್ಪೀಚ್ ಥೆರಪಿ ನೀಡುತ್ತಿರುವ ಶ್ರವಣದೋಷವುಳ್ಳ ಮಕ್ಕಳ ಪೋಷಕರಿಗೆ ಇಂತಹ ಶಾಲೆಯ ಅಗತ್ಯ ಇತ್ತು. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಇತರ ಮಕ್ಕಳಿಂದ ದೂರವಿಡುವ ಶೈಕ್ಷಣಿಕ ಮತ್ತು ಭಾವನಾತ್ಮಕ ತೊಂದರೆಗಳಿಂದಾಗಿ ಈ ಮಕ್ಕಳು ಇತರ ಮಕ್ಕಳ ಜೊತೆ ಅಧ್ಯಯನ ಮಾಡಬೇಕಾದ ಶಾಲೆಗಳನ್ನು ತೊರೆಯುತ್ತಿದ್ದರು.

5 ವರ್ಷದ ಸೋಮ ಅಂತಹ ಮಗುವಾಗಿದ್ದನು.

ಸೋಮನಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಮತ್ತು ಕಲಿಯಲೂ ಕಷ್ಟ ಪಡುತ್ತಾನೆ. ಅವನು 2.5 ವರ್ಷಗಳಿಂದ ಶ್ರವಣ ಸಾಧನಗಳನ್ನು ಧರಿಸುತ್ತಿದ್ದಾನೆ ಮತ್ತು ನಿಯಮಿತವಾಗಿ ಸ್ಪೀಚ್ ಥೆರಪಿಯನ್ನು ತೆಗೆದುಕೊಳ್ಳುತ್ತಿದ್ದಾನೆ, ಇದರಿಂದ ಅವನ ಭಾಷಾ ಕೌಶಲ ಸುಧಾರಿಸಿದೆ. ಸೋಮನ ಪಾಲಕರು ಈತನ ಮೇಲೆ ಅಪಾರ ನಿರೀಕ್ಷೆ ಇಟ್ಟುಕೊಂಡು 4 ವರ್ಷ ತುಂಬಿದಾಗ ಮತ್ತೆ ಅದೇ ಶಾಲೆಗೆ ಸೇರಿಸಿದರು. ಸೋಮ ಅಲ್ಲಿಗೆ ಹೋಗಲು ತುಂಬಾ ಉತ್ಸುಕನಾಗಿದ್ದನು



ಚಿತ್ರ 1: ತಮಗೆ ಇಷ್ಟವಾದ ದೊಡ್ಡ ಚಿತ್ರಗಳುಳ್ಳ ಪುಸ್ತಕಗಳನ್ನು ನೋಡುತ್ತಿರುವ ಮಕ್ಕಳು

ಮತ್ತು ಸಂತೋಷದಿಂದ ಇದ್ದನು. ಆದರೆ ಅವನಿಗೆ ಹೋಮ್ ವರ್ಕ್ ಮಾಡಲು ಮತ್ತು ಮೌಖಿಕವಾಗಿ ತನ್ನ ಮಾತುಗಳನ್ನು ವ್ಯಕ್ತಪಡಿಸಲು ನೆರವಿನ ಅಗತ್ಯವಿತ್ತು. ಆದರೆ ಅವನ ಶಿಕ್ಷಕರಿಗೆ ಅದನ್ನು ಒದಗಿಸಲು ಸಾಧ್ಯವಾಗಲಿಲ್ಲ. ಇದು ಸೋಮನ ಪ್ರಗತಿಗೆ ಅಡ್ಡಿಯಾಯಿತು. ಆತನ ಶಿಕ್ಷಕರು ಶಾಲೆಯ ನಂತರ ಪರಿಹಾರ ತರಗತಿಗಳನ್ನು ಸೂಚಿಸಿದರು, ಆದರೆ ಮುಖ್ಯವಾಹಿನಿಯ ಶಾಲೆಯಲ್ಲಿ ಅವನು ಸರಿಯಾಗಿ ಹೊಂದಿಕೊಳ್ಳುತ್ತಿಲ್ಲ ಎಂದು ಅವನ ಹೆತ್ತವರು ಭಾವಿಸಿದರು ಮತ್ತು ಆದ್ದರಿಂದ ಅವರು ಅವನನ್ನು ನಮ್ಮ ವಿಶೇಷ ಶಾಲೆಗೆ ಸೇರಿಸಲು ನಿರ್ಧರಿಸಿದರು. ನಿರಂತರ ವಾಕ್ ಚಿಕಿತ್ಸೆ ಮತ್ತು ಬೆಂಬಲದೊಂದಿಗೆ, ಸೋಮ ತನ್ನ ಕಳೆದುಹೋದ ಆತ್ಮವಿಶ್ವಾಸವನ್ನು ಮರಳಿ ಪಡೆದ.

ಪ್ರಿ–ಸ್ಕೂಲ್ ನ 10 ವಿದ್ಯಾರ್ಥಿಗಳ ಮೊದಲ ಬ್ಯಾಚ್ ಗಮನಾರ್ಹ ಪ್ರಗತಿಯನ್ನು ಸಾಧಿಸಿತು, ಅವರೆಲ್ಲರೂ ಶ್ರವಣ ಸಾಧನಗಳನ್ನು ಧರಿಸಿದ್ದರು ಮತ್ತು ದೈನಂದಿನ ಮಾತಿನ ಚಿಕಿತ್ಸೆಯನ್ನು ಪಡೆದರು. ಅದೇ ಸಮಯದಲ್ಲಿ, ಶಾಲೆಯಾಗಿ 'ಸಮನ್ವಯಗೊಳ್ಳುವಿಕೆ'ಯ ಬಗ್ಗೆ ನಮ್ಮ ತಿಳುವಳಿಕೆಯೂ ಬೆಳೆಯುತ್ತಿತ್ತು. 'ಸಮನ್ವಯಗೊಳ್ಳುವ' ಎಂಬ ಪದವು ನಿಯಮಿತ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರನ್ನು ಎಚ್ಚರಗೊಳಿಸುತ್ತದೆ, ಏಕೆಂದರೆ ಅದನ್ನು ಕಾರ್ಯಗತಗೊಳಿಸಲು ಅಸಾಧ್ಯವೆಂದು ತೋರುತ್ತದೆ. ಸಮನ್ವಯ ಶಿಕ್ಷಣ ಎಂದು ಹೇಳಿಕೊಳ್ಳುವ ಶಾಲೆಗಳಲ್ಲಿ ಅದನ್ನು ಹೇಗೆ ಎಷ್ಟು ಪರಿಣಾಮಕಾರಿಯಾಗಿ ಅಭ್ಯಾಸ ಮಾಡಲಾಗುತ್ತದೆ ಎಂದು ಯೋಚಿಸಿ ನಾವು ಆಶ್ಚರ್ಯ ಪಡುತ್ತೇವೆ. ಆರಂಭದಲ್ಲಿ ನಾವು ವಿಕಲಾಂಗ ಮಕ್ಕಳನ್ನು ಸೇರಿಸುವುದರೊಂದಿಗೆ ಪ್ರಾಥಮಿಕವಾಗಿ ಒಳಗೊಳ್ಳುವಿಕೆ ಸಾಧಿಸಿದ್ದೇವೆ ಎಂದು ಭಾವಿಸಿದ್ದೆವು, ಆದರೆ ನಂತರ ನಾವು ಎಲ್ಲಾ ಮಕ್ಕಳನ್ನು ಸೇರಿಸುವುದು ಎಂದರೆ ಅವರ ಕುಟುಂಬದ ಹಿನ್ನೆಲೆ, ದೈಹಿಕ ಅಥವಾ ಬೌದ್ಧಿಕ ಸಾಮರ್ಥ್ಯಗಳು, ಭಾವನಾತ್ಮಕ ಆರೋಗ್ಯ, ಆರ್ಥಿಕ ಸ್ಥಿತಿ ಇತ್ಯಾದಿಗಳನ್ನು ಲೆಕ್ಕಿಸದೆಯೇ ಸಮನ್ವಯಗೊಳ್ಳುವುದು ಎಂಬುದನ್ನು ಕಲಿತಿದ್ದೇವೆ. ಅನೇಕ ಶಿಕ್ಷಕರು ಈಗಾಗಲೇ ಅರಿವಿಲ್ಲದೆ ಸಮನ್ವಯಗೊಳ್ಳುವಿಕೆ ಅಭ್ಯಾಸ ಮಾಡುತ್ತಿರುತ್ತಾರೆ ಎಂದು ನಾವು ಅರಿತುಕೊಂಡಿದ್ದೇವೆ. ಉದಾಹರಣೆಗೆ, ಮಕ್ಕಳಿಗೆ ಕಪ್ಪು ಹಲಗೆಯನ್ನು ಸ್ಪಷ್ಟವಾಗಿ ನೋಡುವ ರೀತಿಯಲ್ಲಿ ತರಗತಿಯಲ್ಲಿ ಬೆಳಕನ್ನು ಹೊಂದಿಸುವುದು. ಶಿಕ್ಷಕರಿಂದ ಇದನ್ನು ಮಾಡುವುದು ಒಳಗೊಳ್ಳುವಿಕೆಯ ಅಂಶವೇ.

ಈ ಬೆಳೆಯುತ್ತಿರುವ ತಿಳುವಳಿಕೆಯೊಂದಿಗೆ, ನಾವು ಏಪ್ರಿಲ್ 2024 ರಲ್ಲಿ ಎಲ್ಲಾ ಮಕ್ಕಳಿಗೆ ನಮ್ಮ ಶಾಲೆಯ ಬಾಗಿಲು ತೆರೆದಿದ್ದೇವೆ. ಹದಿಮೂರು ವಿದ್ಯಾರ್ಥಿಗಳನ್ನು ಪ್ರಿ–ಸ್ಕೂಲ್‌ಗೆ ದಾಖಲಿಸಲಾಗಿದೆ, ಅದರಲ್ಲಿ ಒಬ್ಬರು ಶ್ರವಣದೋಷವುಳ್ಳವರು, ಒಬ್ಬರು ಸೀಳು ತುಟಿ ಮತ್ತು ಸೀಳು ನಾಲಗೆಯನ್ನು ಹೊಂದಿರುವವರು ಮತ್ತು ಒಬ್ಬರು ಗುದ ಅಟ್ರೆಸಿಯಾ ಹೊಂದಿರುವವರು. ಮೂವರು ವಿದ್ಯಾರ್ಥಿಗಳು ಕಡಿಮೆ ಸಾಮಾಜಿಕ ಬುದ್ಧಿಮತ್ತೆಯನ್ನು ಹೊಂದಿದ್ದರು ಮತ್ತು ಏಳು ಮಂದಿ ಸಾಮಾನ್ಯರಾಗಿದ್ದರು. ಸಮಾಜದಲ್ಲಿ ಅಂಗವೈಕಲ್ಯಕ್ಕೆ ಸಂಬಂಧಿಸಿದ ಭಾವನಾತ್ಮಕ ಅಡೆತಡೆಗಳು ಮತ್ತು ಕಳಂಕದಿಂದಾಗಿ ಸಮನ್ವಯಗೊಳ್ಳುವಿಕೆಯ ಪ್ರಿ–ಸ್ಕೂಲನ್ನು ತೆರೆಯುವುದು ಮಹತ್ವದ ಮತ್ತು ಸವಾಲಿನ ಪ್ರಯತ್ನವಾಗಿತ್ತು.

ನಮ್ಮ ಪ್ರಿ–ಸ್ಕೂಲ್ ಅನ್ನು ಹೆಚ್ಚು ಒಳಗೊಳ್ಳುವಂತೆ ಮಾಡಲು ಮೂರು 'ಪರಿಕರಗಳು' ವಿಶೇಷವಾಗಿ ಸಹಾಯಕವಾಗಿವೆ.

### 1. ಯೂನಿವರ್ಸಲ್ ಡಿಸೈನ್ ಫಾರ್ ಲರ್ನಿಂಗ್ (ಯುಡಿಎಲ್):

ಯುಡಿಎಲ್, ಶಿಕ್ಷಾರ್ಥಿಗೆ ಒಳಗೊಳ್ಳುವಿಕೆಯ, ಸಮಾನ ಮತ್ತು ಸವಾಲಿನ ಕಲಿಕಾ ಪರಿಸರದ ವಿನ್ಯಾಸವನ್ನು ಮಾರ್ಗದರ್ಶನ ಮಾಡುವ ಒಂದು ಚೌಕಟ್ಟಾಗಿದೆ. UDL ನ ತತ್ತ್ವವೇನೆಂದರೆ ಕಲಿಯುವವರು ಗ್ರಹಿಸಿದ ಕೊರತೆಗಳನ್ನು ಸಮಸ್ಯೆಯಾಗಿ ನೋಡುವುದಕ್ಕಿಂತ ಹೆಚ್ಚಾಗಿ ಪರಿಸರದ ವಿನ್ಯಾಸ ಬದಲಾಗಬೇಕು. 6 ವರ್ಷದ ತಿಮೊಥಿಯ ಉದಾಹರಣೆಯೊಂದಿಗೆ ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳೋಣ. ತಿಮೋಥಿ ತನ್ನ ಸಹಪಾಠಿಗಳು 15 ನಿಮಿಷಗಳಲ್ಲಿ ಪೂರ್ಣಗೊಳಿಸಬಹುದಾದ ಕಾರ್ಯಗಳನ್ನು ಪೂರ್ಣಗೊಳಿಸಲು ಒಂದು ಗಂಟೆ ತೆಗೆದುಕೊಳ್ಳುತ್ತಿದ್ದ. ಅವನು ಓದುವುದನ್ನು ತಪ್ಪಿಸಿಕೊಳ್ಳಲು ನೆವ ಹುಡುಕುತ್ತಿರುತ್ತಿದ್ದ ಮತ್ತು ಬರೆಯಲು ಕೆಲವು ನಿಮಿಷಗಳ ಕಾಲ ಕುಳಿತುಕೊಳ್ಳಲೂ ಅವನಿಗೆ ಸಾಧ್ಯವಾಗುತ್ತಿರಲಿಲ್ಲ.




ಚಿತ್ರ 2: ತಾನೇ ಮಾಡಿದ ರೊಟ್ಟಿಯನ್ನು ನೋಡುತ್ತಿರುವ ಮಗು

ತಿಮೋಥಿಯ ಶಿಕ್ಷಕರು ಶಾಲೆಯಲ್ಲಿ ಅವನ ಪೋಷಕರನ್ನು ಕರೆದು ಈ ವಿಷಯಗಳ ಬಗ್ಗೆ ತಿಳಿಸಿದರು, ತಿಮೋಥಿಗೆ ಇನ್ನೂ ಅಕ್ಷರಗಳು ಮತ್ತು ಸಂಖ್ಯೆಗಳನ್ನು ಹೇಗೆ ಗುರುತಿಸಲು ಸಾಧ್ಯವಾಗಲಿಲ್ಲ ಮತ್ತು ಕೈಬರಹ

ಎಷ್ಟು ಕಳಪೆಯಿದೆ ಇತ್ಯಾದಿ. ಮಜಾ ಎಂದರೆ ಆತನ ಪೋಷಕರು ತಿಮೋಥಿಯು ಯಾವಾಗಲೂ ಮನೆಯಲ್ಲಿ ತುಂಬಾ ಕಾರ್ಯ–ನಿರತನಾಗಿರುತ್ತಾನೆ, ಆಟಿಕೆ ಮನೆಗಳು ಮತ್ತು ಖಾಲಿ ಬಾಟಲಿಗಳು ಮತ್ತು ರಟ್ಟಿನ ಪೆಟ್ಟಿಗೆಗಳಂತಹ ಸ್ಕ್ರ್ಯಾಪ್ ವಸ್ತುಗಳನ್ನು ಬಳಸಿ ಇತರ ವಸ್ತುಗಳನ್ನು ನಿರ್ಮಿಸುತ್ತಾನೆ ಎಂದು ಹೇಳಿದರು. ಈ ಸಂಭಾಷಣೆ–ಯಿಂದ ಶಿಕ್ಷಕರು ಆಶ್ಚರ್ಯಚಕಿತರಾದರು ಮತ್ತು ನಂತರ ಅವರು ತಮ್ಮ ಕಾರ್ಯಯೋಜನೆಯನ್ನು ಬದಲಾಯಿಸಿದರು. ಅವರು ಪೆನ್ ಮತ್ತು ಪೇಪರ್ ಕಾರ್ಯಗಳನ್ನು ಕಡಿಮೆ ಮಾಡಿದರು ಮತ್ತು ಫೋಮ್ ಶೀಟ್‌ಗಳನ್ನು ಬಳಸಿಕೊಂಡು ಅಕ್ಷರಗಳು ಮತ್ತು ಸಂಖ್ಯೆಗಳನ್ನು ಕತ್ತರಿಸುವುದು ಮತ್ತು ಅಂಟಿಸುವುದು ಮುಂತಾದ ಆಟದ ಚಟುವಟಿಕೆಗಳ ಮೇಲೆ ಹೆಚ್ಚು ಗಮನಹರಿಸಲು ಪ್ರಾರಂಭಿಸಿದರು. ಅವನು ಹೊರಗೆ ಹೋದಾಗಲೆಲ್ಲಾ ಜಾಹೀ–ರಾತುಗಳು ಮತ್ತು ಸೈನ್‌ಬೋರ್ಡ್‌ಗಳಲ್ಲಿ ಬರೆದ ಅಕ್ಷರಗಳಿಗೆ ಗಮನ ಕೊಡುವಂತೆ ತಿಮೋಥಿಗೆ ಹೇಳಿದರು. ವಿಧಾನದಲ್ಲಿನ ಬದಲಾವಣೆಯು ಅಕ್ಷರಗಳು ಮತ್ತು ಸಂಖ್ಯೆಗಳಲ್ಲಿ ಅವನ ಆಸಕ್ತಿಯನ್ನು ಹೆಚ್ಚಿಸಿದೆ ಎಂದು ತಿಮೋಥಿಯ ಪೋಷಕರು ಮತ್ತು ಶಿಕ್ಷಕರು ಗಮನಿಸಿದರು.

## 2. ಬುನಾದಿ ಹಂತ ಶಿಕ್ಷಣಕ್ಕೆ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (NCF-FS) 2022:

ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಈ ರೀತಿಯಲ್ಲಿ ಮೊದಲನೆಯದು ಮತ್ತು ಇದನ್ನು ಸಮಾನತೆ ಮತ್ತು ಸಮನ್ವಯಗೊಳ್ಳುವಿಕೆಯ ತತ್ವಗಳ ಮೇಲೆ ನಿರ್ಮಿಸಲಾಗಿದೆ. ಇದು ಸಮನ್ವಯ ವಿಷಯದ ಆಯ್ಕೆ, ಬೋಧನೆ, ಮೌಲ್ಯಮಾಪನ ಮತ್ತು ಕಲಿಕೆಯ ಪರಿಸರಗಳಿಗೆ ಮಾರ್ಗಸೂಚಿಗಳನ್ನು ಒಳಗೊಂಡಿದೆ. ಇದು ಬಾಲ್ಯದ ಶಿಕ್ಷಣದಲ್ಲಿ ಸಮನ್ವಯಗೊಳ್ಳುವಿಕೆಗೆ ದಾರಿ ಮಾಡಿಕೊಡುವ ಅಭಿವೃದ್ಧಿಯ ವಿವಿಧ ಕ್ಷೇತ್ರಗಳಲ್ಲಿ ಕಲಿಕೆಯ ಫಲಿತಾಂಶಗಳಿಗೆ ಸೂಚಿಸಲಾದ ವಿಧಾನಗಳನ್ನು ಒಳಗೊಂಡಿದೆ.

ಲೋಮಾ ಗೆ 4 ವರ್ಷ ವಯಸ್ಸಾಗಿತ್ತು ಮತ್ತು ಅವನಿಗೆ ಜಂಕ್ ಫುಡ್ ಅಂದರೆ ಪ್ರೀತಿ. ಆದರೆ ಅವನು ಮನೆಯಲ್ಲಿ ಬೇಯಿಸಿದ ಪೌಷ್ಟಿಕಾಂಶದ ಆಹಾರವನ್ನು ಇಷ್ಟಪಡುತ್ತಿರಲಿಲ್ಲ. ಪರಿಸ್ಥಿತಿಯ ಗಂಭೀರತೆಯಿಂದಾಗಿ, ಲೋಮಾ ಪೋಷಕರು ಚಿಕಿತ್ಸಕರಿಂದ ಸಹಾಯವನ್ನು ಕೋರಿದರು. ಅಲ್ಲಿ ಅವರು ಲೋಮಾಗೆ ಮನೆಯಲ್ಲಿ ತಯಾರಿಸುವ ಅಡುಗೆಯ ಕುರಿತು ಆತನನ್ನು ಕೇಳದೇ ಇರುವುದು ಲೋಮಾಗೆ ಇಷ್ಟವಾಗುವುದಿಲ್ಲ ಎಂದು ತೀರ್ಮಾನಿಸಿದರು.


ಲೋಮಾ ನ ಶಿಕ್ಷಕರು ಶಾಲೆಯಲ್ಲಿ 'ಪೌಷ್ಟಿಕ ಆಹಾರದ ಬಗ್ಗೆ ಆಸಕ್ತಿ ಮತ್ತು ತಿಳುವಳಿಕೆಯನ್ನು ಪ್ರದರ್ಶಿಸುವುದು ಮತ್ತು ಆಹಾರವನ್ನು ವ್ಯರ್ಥ ಮಾಡದಿರುವುದು' ಎಂಬ ಕಲಿಕೆಯ ಮೇಲೆ ಪಾಠವನ್ನು ಕೇಂದ್ರಿಕರಿಸಿದರು. ಅವರು ವಾರದ ಟಿಫಿನ್ ಪಟ್ಟಿಯನ್ನು ಮಾಡಲು ಮಕ್ಕಳ ಸಹಾಯ ಪಡೆದರು. ಊಟದ ಸಮಯದಲ್ಲಿ, ಮಕ್ಕಳು ಒಟ್ಟಿಗೆ ಕುಳಿತು ತಮ್ಮ ಟಿಫಿನ್‌ಗಳನ್ನು ಪರಸ್ಪರ ಹಂಚಿಕೊಳ್ಳಲು ಪ್ರೋತ್ಸಾಹಿಸಲಾಯಿತು. ಇದನ್ನು ಮಾಡುವುದರಿಂದ ಲೋಮಾ ಮಾತ್ರವಲ್ಲ,ಎಲ್ಲಾ ಇತರ ವಿದ್ಯಾರ್ಥಿಗಳು ಹೊಸ ರೀತಿಯ ಪೌಷ್ಟಿಕ ಆಹಾರದ ರುಚಿಯನ್ನು ಪಡೆದರು ಮತ್ತು ಅದನ್ನು ತಿನ್ನುವ ಉತ್ಸಾಹ ತೋರಿದರು. ಇದು ಅವರಿಗೂ ಪ್ರಯೋಜನವನ್ನು ನೀಡಿತು.

## 3. ಚೈಲ್ಡ್ ಆಕ್ಟಿವಿಟಿ ಮ್ಯಾಟ್ರಿಕ್ಸ್:

ಮಕ್ಕಳ ಚಟುವಟಿಕೆ ಮ್ಯಾಟ್ರಿಕ್ಸ್ ಒಂದು ದೃಶ್ಯ ಸಾಧನವಾಗಿದ್ದು ಅದು ಶಾಲಾ ವರ್ಷದುದ್ದಕ್ಕೂ ಬೋಧನಾ ಕಲಿಕೆಯ ಅವಕಾಶಗಳನ್ನು ಸಂಘಟಿಸಲು ಸಹಾಯ ಮಾಡುತ್ತದೆ. ತರಗತಿಯ ದಿನಚರಿಯನ್ನು ಮೊದಲ ಕಾಲಂನಲ್ಲಿ ಪಟ್ಟಿಮಾಡಲಾಗಿದೆ ಮತ್ತು ನಿರ್ದಿಷ್ಟ ಸಹಾಯದ ಅಗತ್ಯವಿರುವ ವಿದ್ಯಾರ್ಥಿಗಳ ಹೆಸರುಗಳು ಮೇಲಿನ ಸಾಲಿನಲ್ಲಿವೆ. ಪ್ರತಿ ಮಗುವಿಗೆ ನಿರ್ದಿಷ್ಟ ಗುರಿಗಳನ್ನು ಪಟ್ಟಿ ಮಾಡಲು ಪೂರಕವಾಗಿ ಮ್ಯಾಟ್ರಿಕ್ಸ್ ಅನ್ನು ಬಳಸಲಾಗುತ್ತದೆ. ಮಗುವಿಗೆ ಎಲ್ಲಿ ಮತ್ತು ಯಾವ ಬೆಂಬಲ ಬೇಕು ಮತ್ತು ಯಾವಾಗ ಮತ್ತು ಹೇಗೆ ಈ ಬೆಂಬಲವನ್ನು ನೀಡಬೇಕು ಎಂಬುದನ್ನು ಗುರುತಿಸಲು ಶಿಕ್ಷಕರು ಮತ್ತು ಪೋಷಕರು ಇಬ್ಬರೂ ಈ ಉಪಕರಣವನ್ನು ಬಳಸಬಹುದು.

| ಚಟುವಟಿಕೆ | ಸೋಮಾ (5 ವರ್ಷ) | ತಿಮೋಥಿ (6 ವರ್ಷ) | ಲೋಮಾ (4 ವರ್ಷ) |
|---|---|---|---|
| ಬೆಳಗಿನ ಸಭೆ | ಸಹಪಾಠಿಗಳಿಗೆ ಮತ್ತು ಶಿಕ್ಷಕರಿಗೆ ಶುಭಾಶಯಗಳನ್ನು ಕೋರುವುದು | ಶಾಂತವಾಗಿ ಕುಳಿತುಕೊಳ್ಳುವ ಸಮಯದಲ್ಲಿ ಮೂರು ನಿಮಿಷಗಳ ಕಾಲ ಸ್ಥಿರವಾಗಿ ಕುಳಿತುಕೊಳ್ಳುವುದು. | ಮುಂದಿನ ವಾರದ ಟಿಫನ್ ಯೋಜನೆಗೆ ಹೆಚ್ಚಿನ ಆಹಾರ ಪದಾರ್ಥಗಳನ್ನು ಸೂಚಿಸುವುದು. |
| ಸರ್ಕಲ್ ಸಮಯ | ಸಂಚಾರ ಫಲಕದ ಉಪಯೋಗ ಪಡೆಯುವುದು | ಸಹಪಾಠಿಗಳೊಂದಿಗೆ ಸೇರಿ ಹೊಸ ಮಾದರಿ/ಹೊಸ ಸಂರಚನೆಯನ್ನು ಹಂಚಿಕೊಳ್ಳುವುದು. | |
| ಕಥಾ ಸಮಯ | ಕತೆ ಹೇಳುವ ಸಮಯದಲ್ಲಿ ಬಳಸಿದ ಚಿತ್ರಗಳ ಕಡೆ ಗಮನ ಕೊಡುವುದು. | | ತಿಂಡಿತೀರ್ಥಗಳ ಪದ್ಧತಿಯ ಕುರಿತ ಕತೆಗಳನ್ನು ಆಧರಿಸಿದ ಚಿಂತನಶೀಲ ಪ್ರಶ್ನೆಗಳಿಗೆ ಉತ್ತರಿಸುವುದು. |
| ಹೊರಗಡೆಯ ಚಟುವಟಿಕೆಗಳು | ದೈಹಿಕ ಸೂಚನೆಗಳನ್ನು ಬಳಸಿಕೊಂಡು ಜೊತೆಯಾಗಿ ಆಡುವುದು. | ಮರಳಿನ ರಾಶಿಯಲ್ಲಿ ಅಕ್ಷರಗಳನ್ನು ಪತ್ತೆ ಹಚ್ಚುವುದು. | |
| ತಿಂಡಿಯ ಸಮಯ | ಬುನಾದಿ ಸಂಜ್ಞೆಗಳನ್ನು ಬಳಸಿಕೊಂಡು ವಿಷಯಗಳನ್ನು ವಿನಂತಿಸುವುದು. | | ಸ್ನೇಹಿತರೊಂದಿಗೆ ಟಿಫಿನ್ ಹಂಚುವುದು. |
| ಸಾಕ್ಷರತೆಯ ಹೊರ ಹೊಮ್ಮುವಿಕೆ | ಮೂರು ಪ್ಯಾನೆಲ್ ಸ್ಟೋರಿ ಕಾರ್ಡ್‌ಗಳನ್ನು ವಿಂಗಡಿಸಲಾಗುತ್ತದೆ. | ಫೋಮ್ ಶೀಟ್ ನಿಂದ ಅಕ್ಷರಗಳನ್ನು ಕತ್ತರಿಸಿ ಗೋಡೆಯ ಮೇಲೆ ಅನುಕ್ರಮವಾಗಿ ಅಂಟಿಸುವುದು. | |
| ಸಂವೇದಿ ಆಟ | ವಿಭಿನ್ನ ವಸ್ತುಗಳ (ಸಂಗೀತ ವಾದ್ಯ ಯಂತ್ರ ಸಹಿತ) ನ್ನು ಉಪಯೋಗಿಸಿ ಕಂಪನವನ್ನು ಪತ್ತೆ ಹಚ್ಚುವುದು. | ಅಕ್ಷರ ಮತ್ತು ಸಂಖ್ಯೆ ಇನ್ ಸೆಟ್ ಒಗಟುಗಳೊಂದಿಗೆ ಆಟವಾಡುವುದು. ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಹೊಸ ವಸ್ತು ತಯಾರಿಸಲು ಬಳಸುವುದು. | |
| ರಜಾ ಸಮಯ | ಸಹಪಾಠಿಗಳಿಗೆ ವಿದಾಯ ಹೇಳುವುದು. | | |

[1] https://www.cast.org/impact-universal-design-for-learning-udl ಯೂನಿವರ್ಸಲ್ ಡಿಸೈನ್ ಫಾರ್ ಲರ್ನಿಂಗ್ ಮತ್ತು ಇದರ ಸಿದ್ಧಾಂತಗಳಿಗಾಗಿ ಇಲ್ಲಿ ನೋಡಿ




**ಆರ್. ಲಾಲ್‌ಮಛುವಾನಿ** ಒಬ್ಬ ಶ್ರವಣ ಶಾಸ್ತ್ರಜ್ಞೆ ಮತ್ತು ವಾಕ್ ಚಿಕಿತ್ಸಕಿ. ಅಲ್ಲದೆ ಆಕೆ ಮಿಜೋರಾಂನ ಐಜೋಲ್‌ನಲ್ಲಿರುವ ರಿಡೀಮ್ ಗಾರ್ಡನ್ ಖಾಸಗಿ ಶಾಲೆಯಲ್ಲಿ ಪ್ರಿನ್ಸಿಪಾಲ್ ಆಗಿದ್ದಾರೆ.
ಸಂಪರ್ಕ: teichhuantei@gmail.com

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ದಿನೇಶ್ ಮಡಗಾಂವ್ಕರ್ ಮತ್ತು ರಾಘವೇಂದ್ರ ಹೇರ್ಳೆ ಜಿ.

# ಕಲಿಕೆಯ ಹಂತಗಳಲ್ಲಿ ವಿವಿಧತೆಯನ್ನು ನಿರ್ವಹಿಸುವುದು: ಕೆಲವು ತಂತ್ರಗಳು

ಅಕ್ಷತಾ ಎಸ್ ಬೆಳ್ಳುಡಿ

ಮಕ್ಕಳು ಕಲಬುರಗಿಯ ಅಜೀಂ ಪ್ರೇಮ್‌ಜಿ ಶಾಲೆಗೆ ಸೇರಿದ ಕ್ಷಣದಿಂದ ಅವರ ವಿವಿಧತೆಯ ಬಗ್ಗೆ ಕಾಳಜಿ ವಹಿಸಲು ಜಾಗೃತ ಪ್ರಯತ್ನಗಳನ್ನು ಮಾಡಲಾಗುತ್ತದೆ. ಎಲ್ಲ ಮಕ್ಕಳೂ ತಮ್ಮದೇ ವೇಗದಲ್ಲಿ ಕಲಿಯುವ ಸಾಮರ್ಥ್ಯವನ್ನು ಖಾತ್ರಿ ಪಡಿಸುವುದು ಪ್ರಾಥಮಿಕ ತರಗತಿಯ ಶಿಕ್ಷಕರಿಗೆ ಸುಲಭದ ಕೆಲಸವಲ್ಲ.

ವಿವಿಧ ಸಾಮಾಜಿಕ–ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಯ ಮಕ್ಕಳು ಶಾಲೆಗೆ ಬರುತ್ತಾರೆ. ಇವರಲ್ಲಿ ಕೃಷಿ ಕಾರ್ಮಿಕರ ಮಕ್ಕಳು ಮತ್ತು ವಿಶ್ವವಿದ್ಯಾಲಯದ ಸದಸ್ಯರ ಮಕ್ಕಳೂ ಸೇರಿದ್ದಾರೆ. ಶಾಲೆಯು ಗ್ರಾಮೀಣ ಮತ್ತು ನಗರ ಹಿನ್ನೆಲೆಯ ಬಹುತೇಕ ಸಮಾನ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ವಲಸೆ ಕಾರ್ಮಿಕರು ಹಾಗೂ ಒಂಟಿ ಪೋಷಕರನ್ನು ಹೊಂದಿದೆ. ಬಾಲ್ಯದ ಉತ್ತಮ ಅನುಭವವನ್ನು ಪಡೆದ ಕೆಲವು ವಿದ್ಯಾರ್ಥಿಗಳಿದ್ದರೆ, ಈ ಶಾಲೆಗೆ ಬರುವ ಮೊದಲು ಯಾವುದೇ ಶಾಲೆಗೆ ಹೋಗದವರೂ ಇದ್ದಾರೆ. ನಿರಂತರ ದೌರ್ಜನ್ಯಕ್ಕೆ ಒಳಗಾದ ಕೆಲವು ಮಕ್ಕಳಿದ್ದಾರೆ. ಇದೆಲ್ಲದರ ಹೊರತಾಗಿ, ನಮ್ಮ ಶಾಲೆಯಲ್ಲಿ ವಿಭಿನ್ನ ಮನೆ ಭಾಷೆಯ ಮಕ್ಕಳಿದ್ದಾರೆ– ಉರ್ದು, ಮರಾಠಿ, ಲಂಬಾಣಿ, ಕನ್ನಡ ಇತ್ಯಾದಿ. ಅಷ್ಟೇ ಅಲ್ಲ, ಕೆಲವು ಮಕ್ಕಳು ಒಂದೇ ಭಾಷೆಯಲ್ಲಿ ಬರುವ ಬೇರೆ ಬೇರೆ ಉಪಭಾಷೆಗಳನ್ನೂ ಮಾತನಾಡುತ್ತಾರೆ.

ಇಂತಹ ವಿವಿಧತೆಯಿಂದಾಗಿ ವಿದ್ಯಾರ್ಥಿಗಳ ಕಲಿಕೆಯ ಮಟ್ಟದಲ್ಲಿ ಗಣನೀಯ ವ್ಯತ್ಯಾಸವಿದೆ. ಇದೀಗ, ಒಂದನೇ ತರಗತಿಯಲ್ಲಿ, ನಾನು ಮೂರನೇ ತರಗತಿಯ ಹಂತದ ಪಠ್ಯವನ್ನು ಸುಲಭವಾಗಿ ಓದಬಲ್ಲ ಕೆಲವು ವಿದ್ಯಾರ್ಥಿಗಳನ್ನು ಹೊಂದಿದ್ದೇನೆ, ಆದರೆ ಬುನಾದಿ ಶಬ್ದಗಳ ಬಗ್ಗೆ ಜ್ಞಾನವಿಲ್ಲದ ಕೆಲವರನ್ನೂ ನಾನು ಹೊಂದಿದ್ದೇನೆ; ಒಂದೆಡೆ ಎರಡಂಕಿಯ ಸಂಕಲನ ಮತ್ತು ವ್ಯವಕಲನ ಮಾಡುವ ವಿದ್ಯಾರ್ಥಿಗಳಿದ್ದರೆ ಇನ್ನೊಂದೆಡೆ ಬುನಾದಿ ಸಂಖ್ಯಾಜ್ಞಾನದ ಅರಿವೇ ಇಲ್ಲದ ಮಕ್ಕಳಿದ್ದಾರೆ.

ಶೈಕ್ಷಣಿಕ ವರ್ಷದ ಅಂತ್ಯದ ವೇಳೆಗೆ ಎಲ್ಲಾ ಮಕ್ಕಳು ಅಗತ್ಯ ಸಾಮರ್ಥ್ಯಗಳನ್ನು ಪಡೆದುಕೊಳ್ಳುವುದನ್ನು ನಾವು ಖಾತ್ರಿಪಡಿಸಿ–ಕೊಳ್ಳಬೇಕು. ವಿಭಿನ್ನ ಕಲಿಕೆಯ ಶೈಲಿಗಳೊಂದಿಗೆ ೩೦ ವಿಭಿನ್ನ



ಚಿತ್ರ 1: ಎಲ್ಲಾ ಮಕ್ಕಳನ್ನು ಆಟದಲ್ಲಿ ಸೇರಿಸಿಕೊಳ್ಳುವುದು ಅತಿ ಅಗತ್ಯ



ಚಿತ್ರ 2: ಹಕ್ಕಿ ಗೂಡಿನ ಕುರಿತು ಮಕ್ಕಳೊಂದಿಗೆ ಮಾತುಕತೆ

ಮಕ್ಕಳೊಂದಿಗೆ ಕೆಲಸ ಮಾಡುವುದು, ಅದೂ ಒಬ್ಬ ಶಿಕ್ಷಕರಾಗಿ, ಪ್ರತಿದಿನ ಹೊಸ ಸವಾಲನ್ನು ಹೊತ್ತು ತರುತ್ತದೆ. ನನ್ನ ವಿದ್ಯಾರ್ಥಿಗಳಿಗೆ ಕಲಿಸಲು ಸಹಾಯ ಮಾಡಿದ ಅಂತಹ ಕೆಲವು ತಂತ್ರಗಳನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ.

## ಬಹುಭಾಷಾ ಸಭೆ (ಅಸೆಂಬ್ಲಿ)

ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬನಾದ ಫೈಜಾನ್‌ನ ಶಾಲೆ ಮತ್ತು ತರಗತಿಯಲ್ಲಿನ ಭಾಗವಹಿಸುವಿಕೆಯ ಬಗ್ಗೆ ನಾನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ. ಫೈಜಾನ್ ಆಗಾಗ್ಗೆ ಅನಾರೋಗ್ಯಕ್ಕೆ ಒಳಗಾಗುತ್ತಿದ್ದ ಮತ್ತು ನಿಯಮಿತವಾಗಿ ಶಾಲೆಗೆ ಬರುವುದು ಸಾಧ್ಯವಾಗುತ್ತಿರಲಿಲ್ಲ. ಈ ಮಗುವು ತನ್ನ ಆಸಕ್ತಿಗಳು ಮತ್ತು ಅಸ್ಮಿತೆಯನ್ನು ಹುಡುಕಲು ತುಂಬಾ ಕಷ್ಟಪಡುತ್ತಿದ್ದನು. ಅವನ ಸುತ್ತಲಿದ್ದವರೆಲ್ಲ ಅವನಿಗೆ ಅರ್ಥವಾಗದ ಕನ್ನಡದಲ್ಲಿ ಮಾತನಾಡುತ್ತಿದ್ದರು ಎಂಬುದು ಸಹ ಅವನ ಮತ್ತೊಂದು ಸಮಸ್ಯೆಯಾಗಿತ್ತು.

ಈ ಸಮಸ್ಯೆಯನ್ನು ಪರಿಹರಿಸಲು, ನಾವು ನಮ್ಮ ಬುನಾದಿ ಹಂತದ ತರಗತಿಗಳಿಗೆ (ಪೂರ್ವ–ಪ್ರಾಥಮಿಕ / ಎಲ್‌ಕೆಜಿಯಿಂದ 2 ನೇ ತರಗತಿಯವರೆಗೆ) ವಾರಕ್ಕೊಮ್ಮೆ ಹಿಂದಿಯಲ್ಲಿ ಸ್ಕೂಲ್ ಅಸೆಂಬ್ಲಿಯನ್ನು ಪ್ರಾರಂಭಿಸಿದ್ದೇವೆ. ಒಮ್ಮೆ ಹಿಂದಿಯಲ್ಲಿ ಪ್ರಶ್ನೆಗೆ ಉತ್ತರಿಸಲು ಫೈಜಾನ್‌ನನ್ನು ಕೇಳಿದಾಗ, ಅವನ ಕಣ್ಣುಗಳಲ್ಲಿ ಪ್ರತಿಫಲಿಸಿದ ಸಂತೋಷವನ್ನು ನಾವು ಸ್ಪಷ್ಟವಾಗಿ ನೋಡಿದ್ದೇವೆ. ನಾವು ಈಗ ಎಲ್ಲಾ ಮೂರು ಭಾಷೆಗಳಲ್ಲಿ ವಾರದಲ್ಲಿ ನಾಲ್ಕು ದಿನ ಬೆಳಗ್ಗೆ ಸಭೆಗಳನ್ನು ನಡೆಸುತ್ತೇವೆ – ಎರಡು ದಿನ ಇಂಗ್ಲಿಷ್ನಲ್ಲಿ ಮತ್ತು ಒಂದು ದಿನ ಹಿಂದಿ ಮತ್ತು ಕನ್ನಡದಲ್ಲಿ. ಅಸೆಂಬ್ಲಿ ಚಟುವಟಿಕೆಗಳಲ್ಲಿ ಎಲ್ಲಾ ಹಂತದ ಕಲಿಯುವವರಿಗೆ ಹಾಡುಗಾರಿಕೆ, ನೃತ್ಯ, ಕಥೆ ಓದುವಿಕೆ, ವೃತ್ತಪತ್ರಿಕೆ ಓದುವುದು, ಮತ್ತು ಒಗಟುಗಳು ಮತ್ತು ಎಲ್ಲಾ ಮಕ್ಕಳ ದೈಹಿಕ ಬೆಳವಣಿಗೆಗೆ ಯೋಗ, ವ್ಯಾಯಾಮಗಳು ಮತ್ತು ವರ್ಕ್ ಔಟ್ ಸೇರಿವೆ. ಈ ವಯಸ್ಸಿನ ಮಕ್ಕಳಿಗೆ ಆಸಕ್ತಿದಾಯಕ ಮತ್ತು ಸಂಬಂಧಿಸಬಹುದಾದ ಸುದ್ದಿಗಳನ್ನು ನಾವು ಪತ್ರಿಕೆಗಳಿಂದ ಆಯ್ಕೆ ಮಾಡುತ್ತೇವೆ. ಹಾಗೆ– ಹುಲಿ ಸೆರೆಹಿಡಿಯುವಿಕೆ, ಮಳೆ ಮತ್ತು ಪ್ರವಾಹ, ಪಂದ್ಯವನ್ನು ಗೆಲ್ಲುವ ಭಾರತೀಯ ಕ್ರೀಡಾ ತಂಡಗಳು ಇತ್ಯಾದಿ. ಮಕ್ಕಳು ಯೋಚಿಸಲು, ಊಹಿಸಲು ಮತ್ತು ಎಚ್ಚರಿಕೆಯಿಂದ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವ ರೀತಿಯಲ್ಲಿ ನಾವು ಸುದ್ದಿಗಳ ಕುರಿತು ಚರ್ಚೆ ನಡೆಸುತ್ತೇವೆ. ಪ್ರತಿ ದಿನ ಮಕ್ಕಳು ಶಿಕ್ಷಕರ ಕನಿಷ್ಠ ಸಹಾಯದಿಂದ ಅಸೆಂಬ್ಲಿಯನ್ನು ಆಯೋಜಿಸುತ್ತಾರೆ. ಫೈಜಾನ್ ಈಗ ನಿಯಮಿತವಾಗಿ ಶಾಲೆಗೆ ಬರಲು ಪ್ರಾರಂಭಿಸಿದ್ದಾನೆ.

> **"ನನ್ನ ದೃಷ್ಟಿಯಲ್ಲಿ ಸಮನ್ವಯ ಎಂದರೆ ನನ್ನ ಎಲ್ಲಾ ವಿದ್ಯಾರ್ಥಿಗಳು ಯಶಸ್ಸಿನ ಭಾವನೆಯಿಂದ ತಮ್ಮ ಮನೆಗಳಿಗೆ ಹಿಂತಿರುಗುವುದು ಅವರೆಲ್ಲರೂ ತಮ್ಮನ್ನು ಕಲಿಕೆಯ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡು ಆ ಕಲಿಕೆಯನ್ನು ಆಸ್ವಾದಿಸುವಂತೆ ಮಾಡುವುದು."**

## ಯೋಚಿಸುವ ಸಮಯ

ನಮ್ಮ ತರಗತಿಯ ಪ್ರತಿ ಮಗುವಿನ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು, ಪ್ರಶ್ನೆ ಕೇಳುವುದನ್ನು ಬಿಟ್ಟು ಬೇರೆ ಯಾವುದಕ್ಕೂ ಕೈ ಎತ್ತದಂತೆ ನಾವು ನಿಯಮವನ್ನು ಮಾಡಿದ್ದೇವೆ. ಉತ್ತಮ ಅವಕಾಶಗಳು, ಉತ್ತಮ ಬೆಂಬಲ ಮತ್ತು ಉತ್ತಮ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ಇಸಿಸಿಇ) ಅನುಭವಗಳನ್ನು ಹೊಂದಿರುವ ಮಕ್ಕಳು ನಾನು ಪ್ರಶ್ನೆಯನ್ನು ಕೇಳಿದಾಗ ಪ್ರತಿಕ್ರಿಯಿಸುವ ಸಾಧ್ಯತೆ ಇದೆ ಎಂಬುದನ್ನು ಅರಿತುಕೊಂಡೆ. ಹಾಗಾಗಿ ಈ ನಿಯಮವನ್ನು ರಚಿಸಿದೆ. ನಾನು ಪ್ರಶ್ನೆ ಕೇಳಿದಾಗ ಎಲ್ಲ ಮಕ್ಕಳಿಗೂ ಒಂದು ನಿಮಿಷ ಯೋಚಿಸಲು ಸಮಯ ನೀಡಲಾಗುತ್ತದೆ. ಆರಂಭದಲ್ಲಿ ಇದನ್ನು ಮಾದರಿಯಾಗಿ ಸ್ವೀಕರಿಸಲಾಯಿತು. ಆದರೀಗ ಅದು ನಮ್ಮ ಪ್ರಕ್ರಿಯೆಯ ಭಾಗವಾಗಿದೆ. ನಾನು ಮೊದಲು ಮಕ್ಕಳು ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿದ್ದಾರೆಯೇ ಎಂದು ಖಾತ್ರಿಪಡಿಸಿಕೊಳ್ಳುತ್ತೇನೆ. ಹಾಗಾಗಿ ನಾನು ಅವರಲ್ಲಿ ಒಬ್ಬರಿಗೆ ಪ್ರಶ್ನೆಯನ್ನು ಅರ್ಥ ಮಾಡಿಸುವಂತೆ ಹೇಳುತ್ತೇನೆ.

ವಿದ್ಯಾರ್ಥಿಗಳ ಹೆಸರನ್ನು ಬರೆದಿರುವ ಐಸ್ ಕ್ರೀಂ ಸ್ಟಿಕ್ ಗಳನ್ನು ನಾನು ಬಳಸುತ್ತೇನೆ. ಇದರಿಂದಾಗಿ ಪ್ರಶ್ನೆಗೆ ಉತ್ತರಿಸಲು ವಿದ್ಯಾರ್ಥಿಗಳು ಯಾದೃಚ್ಛಿಕವಾಗಿ ಆಯ್ಕೆಯಾಗುತ್ತಾರೆ ಮತ್ತು ಎಲ್ಲರಿಗೂ ಉತ್ತರಿಸಲು ಅವಕಾಶ ಸಿಗುತ್ತದೆ. ತಮ್ಮ ಹೆಸರನ್ನು ಯಾವುದೇ ಸಮಯದಲ್ಲಿ ಕರೆಯಬಹುದು ಎಂದು ತಿಳಿದಿರುವ ಕಾರಣ ಅವರು ಎಚ್ಚರಿಕೆಯಿಂದ ಆಲಿಸುತ್ತಾರೆ. ಎಲ್ಲ ಮಕ್ಕಳೂ ಆಲೋಚಿಸಿ ನಂತರ ವಿಭಿನ್ನ ವಿಚಾರಗಳನ್ನು ವ್ಯಕ್ತಪಡಿಸುವುದನ್ನು ನೋಡುವುದೇ ಒಂದು ಕುತೂಹಲಕಾರಿ ಅನುಭವ.

## ಸಹಪಾಠಿಗಳಿಗೆ ಸಹಾಯ ಮತ್ತು ಬೆಂಬಲವನ್ನು ಒದಗಿಸುವುದು

ಶೈಕ್ಷಣಿಕ ವರ್ಷದ ಆರಂಭದಲ್ಲಿ, ನನ್ನ ತರಗತಿಯಲ್ಲಿ ಉನ್ನತ ಮಟ್ಟದ ಕಲಿಕೆಯ ಮಕ್ಕಳೂ ಇದ್ದರು, ಜೊತೆಗೆ ಕಲಿಕೆಯಲ್ಲಿ ಅನುಭವವಿಲ್ಲದ ಮಕ್ಕಳೂ ಇದ್ದರು. ಅವರ ನಡುವೆ ಕಾಳಜಿ ಅಥವಾ

ಹಂಚಿಕೊಳ್ಳುವಿಕೆಯ ಭಾವನೆ ಬಹಳ ಕಡಿಮೆ ಇತ್ತು. ಆದ್ದರಿಂದ ನಾನು ಈ ಬಗ್ಗೆ ಅವರೊಂದಿಗೆ ಮಾತನಾಡಿದೆ, ಅವರು ಪರಸ್ಪರ ಏಕೆ ಸಹಾಯ ಮಾಡಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು. ಮನೆಯಲ್ಲಿ ಅವರಿಗೆ ಸಹಾಯ ಮಾಡುವವರ ಬಗ್ಗೆ ನಾವು ಮಾತನಾಡಿದ್ದೇವೆ; ನಮಗೆಲ್ಲರಿಗೂ ಏಕೆ ಸಹಾಯ ಬೇಕು, ಅವರ ಕೆಲವು ಸ್ನೇಹಿತರಿಗೆ ಹೇಗೆ ಮನೆಯಲ್ಲಿ ಸಹಾಯ ಸಿಗುವುದಿಲ್ಲ; ಅವರು ಪರಸ್ಪರ ಹೇಗೆ ಸಹಾಯ ಮಾಡಬಹುದು; ಮತ್ತು ಅವರು ಇತರರಿಗೆ ಸಹಾಯ ಮಾಡಿದಾಗ ಅವರ ಸ್ವಂತ ಕಲಿಕೆಯು ಹೇಗೆ ಸುಧಾರಿಸುತ್ತದೆ ಮುಂತಾದ ಅಂಶಗಳನ್ನು ಚರ್ಚಿಸಿದೆ.

ಮಕ್ಕಳು ಕೂಡ ಅನೇಕ ವಿಷಯಗಳನ್ನು ಹಂಚಿಕೊಳ್ಳಲು ಬಯಸುತ್ತಾರೆ. ಆದರೆ ಸರ್ಕಲ್ ಸಮಯದಲ್ಲಿ ಅವೆಲ್ಲವನ್ನೂ ಸೇರಿಸಲಾಗುವುದಿಲ್ಲ. ಆದ್ದರಿಂದ, ನಾವು 'ಜೋಡಿ–ಮತ್ತು–ಹಂಚಿಕೆ' ಎಂಬ ಚಟುವಟಿಕೆಯನ್ನು ಪ್ರಾರಂಭಿಸಿದ್ದೇವೆ, ಅಲ್ಲಿ ಅವರು ಪರಸ್ಪರರ ವೈವಿಧ್ಯಮಯ ಆಲೋಚನೆಗಳನ್ನು ಆಲಿಸುತ್ತಾರೆ ಮತ್ತು ಹಂಚಿಕೊಳ್ಳುತ್ತಾರೆ.

## ಮಕ್ಕಳ ಸಂದರ್ಭಕ್ಕೆ ತಕ್ಕಂತೆ ಬೋಧನೆಯನ್ನು ಹೊಂದಿಸುವುದು.

### ಹಸೀನಾಳ ನೆಚ್ಚಿನ ಸಾಕುಪ್ರಾಣಿ

ಹಸೀನಾ ಕಡಿಮೆ ಶೈಕ್ಷಣಿಕ ಅನುಭವ ಹೊಂದಿರುವ ಹೊಸ ವಿದ್ಯಾರ್ಥಿನಿ. ತರಗತಿಯಲ್ಲಿ ಕುಳಿತು ಕಲಿಯಲು ಒಂದು ವಾರಕ್ಕೂ ಹೆಚ್ಚು ಸಮಯ ತೆಗೆದುಕೊಂಡಳು. ಅವಳು ಈಗ ಸ್ವಲ್ಪ ಇಂಗ್ಲಿಷ್ ಮಾತನಾಡುತ್ತಾಳೆ, ಆದರೂ ಅವಳು ಇನ್ನೂ ಬುನಾದಿ ಧ್ವನಿಗಳನ್ನು ಗುರುತಿಸಲು ಸ್ವಲ್ಪ ಕಷ್ಟ ಪಡುತ್ತಾಳೆ. ಹಸೀನಾ ತನ್ನ ಅನುಭವಗಳನ್ನು ತನ್ನ ಸ್ನೇಹಿತರೊಂದಿಗೆ ಮಾತಿನಲ್ಲಿ ಹಂಚಿಕೊಳ್ಳಲು ಇಷ್ಟಪಡುತ್ತಾಳೆ. ನಿರ್ದಿಷ್ಟವಾಗಿ ಹೇಳುವುದಾದರೆ, ಅವಳು ತನ್ನ ಸಾಕುಪ್ರಾಣಿಗಳ ಬಗ್ಗೆ ಮಾತನಾಡಲು ಇಷ್ಟಪಡುತ್ತಾಳೆ (ಅವಳ ನಾಯಿಮರಿಗಳು ಮತ್ತು ಬೆಕ್ಕಿನಮರಿಗಳು). ಹಾಗಾಗಿ ಅವಳಿಗೆ ಸಹಾಯ ಮಾಡಲು ನಾನು ಅವಳ ಸಾಕುಪ್ರಾಣಿಗಳ ಬಗ್ಗೆ ಪಾಠವನ್ನು ಸಿದ್ಧಪಡಿಸಿದೆ. ಹಸೀನಾಳ ಸಾಕುಪ್ರಾಣಿಗಳ ಮಾಹಿತಿ ಪಡೆದು ಮಕ್ಕಳು ಖುಷಿಪಟ್ಟರು. ಹಸೀನಾ ತುಂಬಾ ಆತ್ಮವಿಶ್ವಾಸವನ್ನು ತೋರಿಸಿದಳು ಮತ್ತು ಅದರ ಬಗ್ಗೆ ಬಹಳ ಉತ್ಸಾಹದಿಂದ ವಿಷಯಗಳನ್ನು ಹಂಚಿಕೊಂಡಳು. ಆ ದಿನ ಅವಳು ಎರಡು ಹೊಸ ಧ್ವನಿಗಳನ್ನು ಕಲಿತಳು.

### ನಮ್ಮ ಗ್ರಾಮವನ್ನು ಅಧ್ಯಯನ ಮಾಡೋಣ

ಮಕ್ಕಳು ಪರಸ್ಪರರ ಬಗ್ಗೆ ಅರಿತುಕೊಳ್ಳಲು ಸಹಾಯಕವಾಗಲು ಎಲ್ಲ ಮಕ್ಕಳ ಊರಿನ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೇವೆ. ದೂರದ ಹಳ್ಳಿಗಳಿಂದ ಬರುವ ಮಕ್ಕಳು ತಮ್ಮ ಗ್ರಾಮಗಳ ಪ್ರಮುಖ ಸ್ಥಳಗಳ ಬಗ್ಗೆ ತರಗತಿಯಲ್ಲಿ ಮಾತನಾಡಿದರು, ನಂತರ ಉಳಿದ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವ ಮೂಲಕ ಅವರಿಂದ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಪ್ರಯತ್ನಿಸಿದರು. ಇದು ನನ್ನ ವಿದ್ಯಾರ್ಥಿಗಳು ಪರಸ್ಪರ ಕಲಿಯಲು ಮತ್ತು ಪರಸ್ಪರ ಉತ್ತಮ ಸಂಬಂಧವನ್ನು ನಿರ್ಮಿಸಲು ಸಹಾಯ ಮಾಡಿದೆ.



ಚಿತ್ರ 3: ಗೋಡೆಯ ಮೇಲೆ ಏನಿದೆ ಎಂದು ವೀಕ್ಷಿಸುತ್ತಿರುವ ಮಗು

### ಪೋಷಕರ ದಿನಾಚರಣೆ

ಪ್ರತಿ ಶನಿವಾರ ನಮ್ಮ ಮಕ್ಕಳಲ್ಲಿ ಒಬ್ಬರ ಪೋಷಕರು ನಮ್ಮ ತರಗತಿಗೆ ಬರುತ್ತಾರೆ. ಮತ್ತು ಒಂದು ಗಂಟೆ ಯಾವುದಾದರೂ ವಿಶೇಷ ಕೌಶಲ ಕಲಿಸುತ್ತಾರೆ. ನೇಯ್ಗೆ, ಯಾವುದೇ ಕರಕುಶಲ ಅಥವಾ ಹೂವಿನ ತಯಾರಿಕೆ, ಇತ್ಯಾದಿ. ಇದು ಮಕ್ಕಳಲ್ಲಿ ತಮ್ಮ ಪೋಷಕರ ವೃತ್ತಿ ಅಥವಾ ಕೌಶಲಗಳ ಬಗ್ಗೆ ಹೆಮ್ಮೆಯ ಭಾವನೆಯನ್ನು ಉಂಟುಮಾಡುತ್ತದೆ. ಕಲಿಯಲು ಅನೇಕ ವಿಷಯಗಳಿವೆ ಎಂದು ಮಕ್ಕಳು ಅರ್ಥಮಾಡಿಕೊಳ್ಳುತ್ತಾರೆ, ಅದು ಅವರ ಪಾಠದ ಭಾಗವಾಗಿರುವುದಿಲ್ಲ, ಆದರೆ ಅವರ ಜೀವನ ಮತ್ತು ಕಲಿಕೆಗೆ ಸಂಬಂಧಿಸಿದೆ. ಈ ಅವಧಿಗಳಲ್ಲಿ, ಉತ್ತಮ ಕ್ರಿಯಾತ್ಮಕ ಕೌಶಲ ಹೊಂದಿರುವ ಮಕ್ಕಳು ಕಾರ್ಯಗಳನ್ನು ಪೂರ್ಣಗೊಳಿಸಲು ಇತರ ಮಕ್ಕಳಿಗೆ ಸಹಾಯ ಮಾಡುತ್ತಾರೆ.





ಚಿತ್ರ 4: ತರಗತಿಯ ಮಕ್ಕಳ ಹೆಸರುಗಳಿರುವ ಕಡ್ಡಿಗಳು

## ಸುತ್ತಮುತ್ತಲಿನ ಪರಿಸರದ ಅನ್ವೇಷಣೆ

ನಮ್ಮ ಮೊದಲ ತರಗತಿಯ ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಪ್ರಕೃತಿಯನ್ನು ಅನ್ವೇಷಿಸುತ್ತಾರೆ. ಸಿಂಪಿಗೆ ಹಕ್ಕಿ ತನ್ನ ಗೂಡು ಕಟ್ಟುವುದನ್ನು ಅವರು ವೀಕ್ಷಿಸುತ್ತಾರೆ, ಶತಪದಿಗಳು ಮತ್ತು ಇರುವೆಗಳನ್ನು ನೀರಿನಲ್ಲಿ ಮುಳುಗಿಸುವುದರಿಂದ ಮತ್ತು ಬಸವನ ಹುಳುವನ್ನು ತುಳಿತದಿಂದ ರಕ್ಷಿಸುತ್ತಾರೆ. ಇದರಿಂದಾಗಿ ಅವರಲ್ಲಿ ನಿಸರ್ಗದೆಡೆಗಿನ ಕುತೂಹಲ, ಕಾಳಜಿ ವಹಿಸುವ ಭಾವನೆ ಬೆಳೆದಿದೆ.

ನನಗೆ, ಸಮನ್ವಯ ಎಂದರೆ ನನ್ನ ಎಲ್ಲಾ ವಿದ್ಯಾರ್ಥಿಗಳು ಸಫಲತೆಯ ಭಾವನೆಯಿಂದ ಮನೆಗೆ ಮರಳುವುದು, ತಮ್ಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅವರ ಕಲಿಕೆಯನ್ನು ಆನಂದಿಸಲು ಸಾಧ್ಯವಾಗುವುದು. ನಾನು ಪ್ರತಿದಿನ ಇದನ್ನು ಮಾಡಲು ಪ್ರಯತ್ನಿಸುತ್ತೇನೆ. ನನ್ನ ತರಗತಿಯು ಸಂಪೂರ್ಣವಾಗಿ ಸಮನ್ವಯಯನ್ನು ಸಾಧಿಸಿದೆ ಎಂದು ನಾನು ಹೇಳಲಾರೆ. ನಮ್ಮನ್ನು ಮತ್ತು ನಮ್ಮ ವಿದ್ಯಾರ್ಥಿಗಳ ಸಹಾನುಭೂತಿ ಮತ್ತು ಆಲಿಸುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ದಾರಿ ಇನ್ನೂ ಬಹಳ ದೂರವಿದೆ. ಇದು ಪಾಲ್ಗೊಳ್ಳುವಿಕೆಯ ಅಡಿಪಾಯವಾಗಿದೆ, ಪ್ರಯತ್ನಗಳು ನಡೆಯುತ್ತಿವೆ.



**ಅಕ್ಷತಾ ಎಸ್ ಬೆಳ್ಳುಡಿ** ಪ್ರಸ್ತುತ ಕರ್ನಾಟಕದ ಕಲ್ಬುರ್ಗಿಯಲ್ಲಿರುವ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೊದಲು ಅವರು ಕೊಪ್ಪಳ ಜಿಲ್ಲೆಯ ಗಂಗಾವತಿ ಬ್ಲಾಕ್ ನಲ್ಲಿ ಶಿಕ್ಷಕಿಯಾಗಿದ್ದರು. ಅಲ್ಲಿ ಅವರು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅವರ ಕೆಲಸದಲ್ಲಿ ನೆರವಾದರು. ಅಜೀಂ ಪ್ರೇಮ್ ಜಿ ಫೌಂಡೇಷನ್ ಗೆ ಸೇರುವ ಮೊದಲು ಅವರು ಭಾರತೀಯ ಸ್ಟೇಟ್ ಬ್ಯಾಂಕ್ ನ ಯೂತ್ ಫಾರ್ ಇಂಡಿಯಾ ಕಾರ್ಯಕ್ರಮದ ಫೆಲೊ ಆಗಿದ್ದರು. ಸಾಫ್ಟವೇರ್ ಇಂಜಿನಿಯರ್ ಆಗಿ ಏಳು ವರುಷ ಕೆಲಸ ಮಾಡಿದ ಅನುಭವವೂ ಅವರಿಗಿದೆ.
ಸಂಪರ್ಕ: akshatha.belludi@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ದಿನೇಶ್ ಮಡಗಾಂವ್ಕರ್ ಮತ್ತು ರಾಘವೇಂದ್ರ ಹೇರ್ಳೆ ಜಿ

# ಎಲ್ಲರಿಗಾಗಿ ಸಂಗೀತ ಶಿಕ್ಷಣ

ಸಂತೋಷ ರಾಜ್ . ಕೆ

ನಾವು ಸರಿಯಾದ ಯೋಜನೆ ಮತ್ತು ಸಂದರ್ಭೋಚಿತ ಚರ್ಚೆಗಳೊಂದಿಗೆ ತರಗತಿಯಲ್ಲಿ ಸಂಗೀತವನ್ನು ಬಳಸಿದಾಗ, ಈ ಮಾಧ್ಯಮವು ವಿದ್ಯಾರ್ಥಿಗಳಿಗೆ ತಮ್ಮನ್ನು ಅಭಿವ್ಯಕ್ತಿಗೊಳಿಸಲು, ಕಲಿಯಲು ಮತ್ತು ಹೊಸತೇನಾದರೂ ಅನ್ವೇಷಿಸಲು ತುಂಬಾ ಸಹಕಾರಿಯಾಗುತ್ತದೆ. ಅಷ್ಟೇ ಅಲ್ಲ ಸಮನ್ವಯದ ಬಗ್ಗೆಯೂ ಅರಿವು ಮೂಡಿಸುತ್ತದೆ ಮತ್ತು ಅದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಅಪಾರ ಸಾಮರ್ಥ್ಯವನ್ನು ನೀಡುತ್ತದೆ. ಈ ಲೇಖನವು ವಿವಿಧ ಸಂದರ್ಭಗಳಲ್ಲಿ ಸಮನ್ವಯಗೊಳಿಸುವ ಮನಸ್ಥಿತಿಯನ್ನು ವಿಕಸಿಸುವ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅನ್ವೇಷಿಸುವ ಹಲವು ಉದಾಹರಣೆಗಳನ್ನು ಒಳಗೊಂಡಿದೆ.

## ಲಿಂಗ ಸಂಬಂಧಿತ ಪೂರ್ವಗ್ರಹಗಳನ್ನು ಸರಿಪಡಿಸುವುದು

ಜಾನಪದ ಸಂಗೀತ ಕಾರ್ಯಕ್ರಮಗಳಲ್ಲಿ (ಕನಿಷ್ಠ ರಾಜಸ್ಥಾನದಲ್ಲಿ) ಮಹಿಳೆಯರು ಸಂಗೀತ ವಾದ್ಯಗಳನ್ನು ನುಡಿಸುವುದಕ್ಕಿಂತ ಹೆಚ್ಚಾಗಿ ಹಾಡು ಮತ್ತು ನೃತ್ಯದಲ್ಲಿ ಭಾಗವಹಿಸಲು ಇಚ್ಛಿಸುತ್ತಾರೆ ಎಂಬುದನ್ನು ಗಮನಿಸಲಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ತಾಳವಾದ್ಯಗಳನ್ನು ನುಡಿಸುವ ವಿಷಯಕ್ಕೆ ಬಂದಾಗ (ಉದಾಹರಣೆಗೆ ಡ್ರಮ್ಸ್) ಹೆಚ್ಚಾಗಿ ಹುಡುಗರನ್ನೇ ಆಯ್ದುಕೊಳ್ಳಲಾಗುವ ತಾರತಮ್ಯವು ಹೆಚ್ಚಾಗಿ ಗಮನಕ್ಕೆ ಬರುವುದಿಲ್ಲ.

ಆದರೆ ಸಾಮಾನ್ಯ ತರಗತಿಗಳ ಅವಲೋಕನ ಮತ್ತು ಪ್ರದರ್ಶನದಲ್ಲಿ ಲಯ ಮತ್ತು ಸ್ವರದ ಗುರುತಿಸುವಿಕೆಯ ಕೌಶಲಗಳನ್ನು ನಿಯಮಿತವಾಗಿ ನಿರ್ಣಯಿಸಲಾಗುತ್ತದೆ ಮತ್ತು ಕ್ರೋಢೀಕರಿಸಲಾಗುತ್ತದೆ ಲಿಂಗ ಪ್ರಾತಿನಿಧ್ಯದ ದತ್ತಾಂಶವು ಉತ್ತಮ ಲಯದ ಪ್ರಜ್ಞೆಯನ್ನು ಹೊಂದಿರುವ ಹುಡುಗಿಯರಿದ್ದಾರೆ ಎಂಬುದನ್ನು ತೋರಿಸುತ್ತದೆ. ಮತ್ತು ಅವರು ತಾಳ ವಾದ್ಯಗಳನ್ನು (ತಬಲಾ, ಡೋಲು ಇತ್ಯಾದಿ) ನುಡಿಸುವಲ್ಲಿ ಅಸಾಧಾರಣವಾಗಿ ಉತ್ತಮರಾಗಿದ್ದಾರೆ.

ಸಾಕಷ್ಟು ಹುಡುಗಿಯರು ಡ್ರಮ್ ನುಡಿಸುವ ಆಸಕ್ತಿ ಹೊಂದಿರುವುದನ್ನು ನಾನು ಗಮನಿಸಿದ್ದೇನೆ. ಹಾಗಾಗಿ ಹುಡುಗರಂತೆ ಹುಡುಗಿಯರೂ ಸಹ ತಮ್ಮ ಕೌಶಲದ ಆಧಾರದ ಮೇಲೆ ಇದರಲ್ಲಿ ಭಾಗವಹಿಸುವುದನ್ನು ನಾವು ಖಚಿತಪಡಿಸಿದ್ದೇವೆ. ಇದರ ಬಗ್ಗೆ ತರಗತಿಯಲ್ಲೂ ಚರ್ಚೆ ನಡೆಸಿ, ಚೆನ್ನಾಗಿ ಅಭ್ಯಾಸ ಮಾಡಿದರೆ ಅವರ ಲಿಂಗ ಪರಿಗಣಿಸದೆ ಪ್ರದರ್ಶನ ನೀಡಲು ಅವಕಾಶ ನೀಡುವುದಾಗಿ ವಿದ್ಯಾರ್ಥಿಗಳಿಗೆ ಭರವಸೆ ನೀಡಲಾಯಿತು. ಸ್ವತಂತ್ರ ದಿನಾಚರಣೆಯ ಸಂದರ್ಭದಲ್ಲಿ ಲಿಂಗ ಭೇದವಿಲ್ಲದೆ ಸಮೂಹದಿಂದ , ಸಮುದಾಯದ ಸದಸ್ಯರಿಗಾಗಿ ಒಂದು ಸಂಗೀತಮಯ ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು. ಇದರಿಂದ ಶಾಲೆಯ ಇತರ ಚಟುವಟಿಕೆಗಳಲ್ಲಿ ಲಿಂಗ




ಚಿತ್ರ 1: ಹುಡುಗಿ ಅಥವಾ ಹುಡುಗ ಯಾರು ಬೇರಾದರೂ ಡ್ರಮ್ ನುಡಿಸಬಹುದಾಗಿದೆ.

ಸಂಬಂಧಿ ಚರ್ಚೆಯನ್ನು ಹುಟ್ಟು ಹಾಕುವ, ಮತ್ತು ಸ್ವಲ್ಪ ಸ್ವಲ್ಪವೇ ಈ ಮಾನಸಿಕತೆಯನ್ನು ಬದಲಾಯಿಸುವ ಇಚ್ಛೆಗೂ ಸಹ ಬಲ ಸಿಕ್ಕಿತು.

## ಹಾಡಿನ ಗೋಡೆ

ನಮ್ಮ ತರಗತಿಗಳು ವಿದ್ಯಾರ್ಥಿಗಳು ಹಾಡುಗಾರಿಕೆಗೆ ಒಡ್ಡಿಕೊಳ್ಳುವುದನ್ನು ಮತ್ತು ವಿವಿಧ ಭಾಷೆಗಳಲ್ಲಿನ ಹಾಡುಗಳಿಗೆ ಒಡ್ಡಿಕೊಳ್ಳುವುದನ್ನು ಖಚಿತಪಡಿಸುತ್ತವೆ. ಇದಕ್ಕಾಗಿ ಇಲ್ಲಿ ನನ್ನ ತರಗತಿಯಲ್ಲಿ ಹಾಡಿನ ಗೋಡೆ ಯನ್ನು ಬಳಸುತ್ತೇನೆ. ಹಾಡುಗಳನ್ನು ಇಂಗ್ಲಿಷ್ , ಹಿಂದಿ, ಮಾರ್ವಾಡಿ, ಮಲಯಾಳಂ, ಮರಾಠಿ, ಗುಜರಾತಿ, ಪಂಜಾಬಿ ಮತ್ತು ತಮಿಳು ಭಾಷೆಗಳಲ್ಲಿ ಬರೆಯಲಾಗಿದೆ.

ಓದಲು ಮತ್ತು ಅರ್ಥಮಾಡಿಕೊಳ್ಳಲು ಸಹಾಯವಾಗುವಂತೆ ಅವುಗಳನ್ನು ಆಯಾ ಮಕ್ಕಳ ಭಾಷೆಯಲ್ಲಿಯೇ ಪ್ರದರ್ಶಿಸಲಾಗುತ್ತದೆ. ಹಾಡಿನ ಸಾಹಿತ್ಯವನ್ನು ಚಾರ್ಟ್‌ಗಳಲ್ಲಿ ದಪ್ಪ ಅಕ್ಷರದಲ್ಲಿ ಬರೆಯಲಾಗುತ್ತದೆ. ಇವುಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಪದ್ಯ, ಕೋರಸ್ ಇತ್ಯಾದಿ ಹಾಡಿನ ವಿಭಾಗಗಳ ಪ್ರಕಾರ ಬಣ್ಣ-ಕೋಡೆಡ್ ಮಾಡಲಾಗಿದೆ. ನಿಸ್ಸಂಶಯವಾಗಿ, ದೃಶ್ಯವಾದ್ದರಿಂದ ವಿದ್ಯಾರ್ಥಿಗಳು ಕಲಿಯಲು ಇದು ಸಹಾಯ ಮಾಡುತ್ತದೆ ಮತ್ತು ಮಕ್ಕಳು ಬಯಸಿದಾಗ ಅವುಗಳನ್ನು ಸುಲಭವಾಗಿ ವೀಕ್ಷಿಸಬಹುದಾದ್ದರಿಂದ , ಹಾಡಿನ ಗೋಡೆಯು ಅವರ ಸ್ವಂತ ವೇಗದಲ್ಲಿ ಕಲಿಯಲು ಸಹಾಯ ಮಾಡುತ್ತದೆ.

## ಗುಂಪು ಪ್ರದರ್ಶನ

ಹೆಚ್ಚಿನ ವಿದ್ಯಾರ್ಥಿಗಳಿಗೆ, ಹಾಡುವುದು ಮತ್ತು ವಾದ್ಯಗಳನ್ನು ನುಡಿಸುವುದು ಒಂದು ಮೋಜಿನ ಚಟುವಟಿಕೆಯಾಗಿದೆ. ಆದರೆ ಕೆಲವರಿಗೆ ಇದು ಇಷ್ಟವಿಲ್ಲದಿದ್ದರೆ ಅವರನ್ನು ಜೊತೆಗೆ ಸಹಾಯಕರನ್ನಾಗಿ ಸೇರಿಸಿಕೊಳ್ಳಲಾಗುತ್ತದೆ. ರಂಗ ಪರಿಕರ ಗಳನ್ನು (ಪ್ರಾಂಪ್ಟ್ಸ್ ) ಸಿದ್ಧಪಡಿಸುವುದು, ಅವುಗಳನ್ನು ನಿರ್ವಹಿಸುವುದು ಇತ್ಯಾದಿ.

ಸಂಗೀತ ನಾಟಕಕ್ಕಾಗಿ ನಾವು ಆರಿಸಿಕೊಂಡ ಮುಖ್ಯ ವಿಷಯವೆಂದರೆ ಭಾರತವು ತನ್ನ ಎಲ್ಲಾ ಭಾಷೆಗಳಲ್ಲಿ ಹೊಂದಿರುವ ಜ್ಞಾನದಿಂದಾಗಿ ಶ್ರೀಮಂತವಾಗಿದೆ. ನಾವು ತಮಿಳು, ಮರಾಠಿ, ಮಾರ್ವಾಡಿ ಮತ್ತು ಸಂಸ್ಕೃತದಂತಹ ಕೆಲವು ಭಾಷೆಗಳಿಂದ ದ್ವಿಪದಿಗಳು ಅಥವಾ ಸಾಲುಗಳನ್ನು ಆರಿಸಿಕೊಂಡಿದ್ದೇವೆ. ಅವುಗಳನ್ನು ಮೂಲ ಭಾಷೆಯಲ್ಲಿ ಬರೆದಿದ್ದೇವೆ ಹಾಗೂ ಎಲ್ಲಾ ವಿದ್ಯಾರ್ಥಿಗಳು ಓದಲು ಅನುಕೂಲವಾಗುವಂತೆ ದೇವನಾಗರಿ ಲಿಪಿಗೆ ಲಿಪ್ಯಂತರ-ಗೊಳಿಸಿದ್ದೇವೆ. ನಾವು ಸರಳ ರಾಗಗಳನ್ನು ಸಂಯೋಜಿಸಿ, ರಾಗಗಳು ಮತ್ತು ಕಿರುನಾಟಕದ ಮೂಲಕ ಅವುಗಳ ಅರ್ಥವನ್ನು ಪ್ರಸ್ತುತ ಪಡಿಸಿದೆವು.

## ನಮ್ಮ ಮೂಲದೊಂದಿಗೆ ಬೆರೆಯುವುದು

ರಾಜಸ್ಥಾನದ ಸಾಂಸ್ಕೃತಿಕ ಪರಂಪರೆಯು ಹಲವು ಮಜಲುಗಳನ್ನು ಹೊಂದಿದೆ. ಅದರಲ್ಲಿ ಇಲ್ಲಿಯ ಸಮೃದ್ಧ ಸಂಗೀತವೂ ಒಂದು. ಬಾಡ್ಮೇರ್ ಜಿಲ್ಲೆ ವಿಶಾಲವಾಗಿದ್ದು, ಇಲ್ಲಿ ವಿಭಿನ್ನ ಧಾರ್ಮಿಕ ಮತ್ತು ಸಂಪ್ರದಾಯವಾದಿ ಮತ್ತು ಕೋಮು ಹಿನ್ನೆಲೆಯ ಸಂಗೀತ-ಗಾರರಿದ್ದಾರೆ. ಹಾಗಾಗಿ ಈ ಸಂಗೀತದ ಗುರುತು ಇಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯುತ್ತದೆ.

ಜಾನಪದ ಸಂಗೀತ, ಅದರ ಬೇರುಗಳು, ವಿಷಯ ಮತ್ತು ಮಹತ್ವವನ್ನು ಚರ್ಚಿಸುವಾಗ ಅನೇಕ ವಿದ್ಯಾರ್ಥಿಗಳು ತಮ್ಮ ಹಳ್ಳಿಯಲ್ಲಿ, ಅವರ ಕುಟುಂಬ / ಸಮುದಾಯದ ನಡುವೆ ಕೇಳಿದ ಹಾಡುಗಳನ್ನು ಉಲ್ಲೇಖಿಸುತ್ತಾರೆ. ಅವರು ತಮ್ಮ ಸಂಗೀತವನ್ನು ಅಭ್ಯಾಸ ಮಾಡಲು ಮತ್ತು ಅದರ ಬಗ್ಗೆ ಜ್ಞಾನ ಪಡೆಯಲು ಈ ಹಾಡುಗಳನ್ನು ಪ್ರದರ್ಶಿಸಲು ಅವಕಾಶ ನೀಡಲಾಗುತ್ತದೆ.



ಚಿತ್ರ 2: ಮಕ್ಕಳ ಮೂಲಕ ಮಾಡಲ್ಪಟ್ಟ ಹಾಡಿನ ಗೋಡೆ

ನಾವು ಇತ್ತೀಚೆಗೆ ವಿದ್ಯಾರ್ಥಿಗಳಿಗೆ ಇಂಡಸ್ ಬ್ಲೂಸ್ ಸಾಕ್ಷ್ಯಚಿತ್ರವನ್ನು ತೋರಿಸಿದ್ದೇವೆ. ಇದು ರಾಜಸ್ಥಾನ ಮತ್ತು ಪಾಕಿಸ್ತಾನದಲ್ಲಿ ಹರಡಿರುವ ಸಿಂಧೂ ಪ್ರದೇಶದ ಅನೇಕ ಸಮುದಾಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಪ್ರದರ್ಶನದ ನಂತರ ವಿದ್ಯಾರ್ಥಿಯೊಬ್ಬನು ಜಾನಪದ ವಾದ್ಯವಾದ ಅಲ್ಗೋಜಾ ನುಡಿಸುವ ತನ್ನ ಅಜ್ಜನ ಬಗ್ಗೆ ಮಾತನಾಡಿದನು. ಇದರೊಂದಿಗೆ ಮನೆಯಲ್ಲಿ ಮತ್ತು ತನ್ನ ಸಮುದಾಯದ ಕಾರ್ಯಕ್ರಮಗಳಲ್ಲಿ ಅದನ್ನು ಆಲಿಸುವ ಅನುಭವಗಳನ್ನು ಹಂಚಿಕೊಂಡನು. ಮತ್ತೊಬ್ಬ ವಿದ್ಯಾರ್ಥಿ 'ಮುರಳಿ ಬೀನ್' ಎಂಬ ಸಂಗೀತ ವಾದ್ಯದ ಕುರಿತು ಮಾತನಾಡಿ ಹಬ್ಬ ಹರಿದಿನಗಳಲ್ಲಿ ತಮ್ಮ ಹಳ್ಳಿಯ ಬೀದಿಯಲ್ಲಿ ಇದರ ನಾದ ಕೇಳಬರುವುದರ ಬಗ್ಗೆ ತಿಳಿಸಿದನು.

ಈ ರೀತಿ ಸಾಮಾನ್ಯವಾದ ಮೂಲದ ಜೊತೆಗಿನ ಸಂಪರ್ಕ ಈ ಕೆಳಗಿನ ವಿಚಾರಗಳಲ್ಲಿ ಸಹಾಯ ಮಾಡುತ್ತದೆ:

* ವಿದ್ಯಾರ್ಥಿಗಳು ತಮ್ಮದೇ ಆದ ಮತ್ತು ಪರಸ್ಪರರ ಸಾಂಸ್ಕೃತಿಕ ಅಭ್ಯಾಸಗಳನ್ನು ಧನಾತ್ಮಕವಾಗಿ ಅರ್ಥ ಮಾಡಿಕೊಳ್ಳಲು ಮತ್ತು ಪ್ರಶಂಸಿಸಲು ಸಮರ್ಥರಾಗುತ್ತಾರೆ.
* ಶಿಕ್ಷಕರಿಗೆ ಸ್ಥಳೀಯ ಸಮುದಾಯಗಳಿಂದ ಸಂಗೀತಗಾರರನ್ನು ಆಹ್ವಾನಿಸಲು ಮತ್ತು ವಿದ್ಯಾರ್ಥಿಗಳು ಮತ್ತು ಕಲಾವಿದರ ನಡುವೆ ಸೃಜನಾತ್ಮಕ ಚರ್ಚೆಗಳನ್ನು ಸುಗಮಗೊಳಿಸಲು ಸಾಧ್ಯವಿದೆ.
* ಇದರಿಂದ ನಮ್ಮವರು ಎಂಬ ಭಾವ ಹುಟ್ಟುತ್ತದೆ ಹಾಗೂ ಪರಸ್ಪರ ಸಂಬಂಧಗಳನ್ನು ಬಲಪಡಿಸುತ್ತದೆ.

ಯಾವ ಕ್ಷೇತ್ರದಲ್ಲಿ ಹಿಂದಿನ ತಲೆಮಾರುಗಳು ಧರ್ಮ ಮತ್ತು ಜಾತಿಯ ಆಧಾರದ ಮೇಲೆ ನಿರಂತರವಾಗಿ ಕಳಂಕಿತರನ್ನಾಗಿ ಮಾಡಿ ಅಂಚಿಗೆ ತಳ್ಳಲ್ಪಡುತ್ತವೋ ಅಂತಹ ಕ್ಷೇತ್ರಗಳಲ್ಲಿ ಈ ಬಗೆಯ ಅಂತಃಕ್ರಿಯೆ-ಯಿಂದ ವಿದ್ಯಾರ್ಥಿಗಳಿಗೆ ಸಿಗುವ ತಿಳುವಳಿಕೆಯು ಸಮನ್ವಯದ ದಿಕ್ಕಿನಲ್ಲಿ ಮುಂದುವರಿಯಲು ಸಹಾಯ ಮಾಡುತ್ತದೆ. ಈ ಮಾತಿಗೆ ಸಾಕಷ್ಟು ಉದಾಹರಣೆಗಳು ಸುತ್ತಮುತ್ತಲೂ ನೋಡಲು ಸಿಗುತ್ತವೆ. ಸಮಾಜದಲ್ಲಿ ಎಷ್ಟೇ ಬಗೆಯ ತಾರತಮ್ಯಗಳಿದ್ದರೂ, ಕಲೆ ಮತ್ತು ಸಂಗೀತ ಯಾವಾಗಲೂ ಎಲ್ಲರನ್ನೂ ಒಗ್ಗೂಡಿಸಿವೆ. ಇದರಲ್ಲಿ ಸಾಂಸ್ಕೃತಿಕ ಪರಂಪರೆಯ ಪಾತ್ರ ಮಹತ್ವದ್ದು.

ಈ ಅವಲೋಕನವು ಮಹತ್ವಪೂರ್ಣದ್ದಾಗಿದೆ ಏಕೆಂದರೆ ಇದರಿಂದ ನಮಗೆ ನಿತ್ಯದ ಚಟುವಟಿಕೆಗಳಲ್ಲಿ ಮತ್ತು ಕಲಿಕೆಯಲ್ಲಿ ಎಲ್ಲ ಮಕ್ಕಳನ್ನು ಸಮನ್ವಯಗೊಳಿಸಲು ತರಗತಿ ಮತ್ತು ಬೋಧನಾ ವಿಧಾನ ವಿಕಸಿತಗೊಳಿಸಲು ಮಹತ್ವಪೂರ್ಣವಾದ ಮಾಹಿತಿ ದೊರಕುತ್ತದೆ. ಸಂಗೀತ ಶಿಕ್ಷಣದಲ್ಲಿ ಸಮನ್ವಯದ ವಿಧಾನಗಳನ್ನು ತರಲು ಸಾಧ್ಯವಿದೆ ಮತ್ತು ನಮ್ಮ ತರಗತಿಗಳಲ್ಲಿ ನಾವು ಇದರ ಮಹತ್ವವನ್ನು ಅರಿಯಬೇಕಿದೆ.


## ಯಾರೂ ಹಿಂದೆ ಬೀಳದಿರಲಿ.

ಕಲಿಕೆಯಲ್ಲಿ ತೊಂದರೆ ಅಥವಾ ಯಾವುದೇ ದೈಹಿಕ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ಸಂಗೀತ ತರಗತಿಯಲ್ಲಿ ಸುಲಭವಾಗಿ ಭಾಗವಹಿಸಬಹುದು ಮತ್ತು ಒಟ್ಟಿಗೆ ಕಲಿಯಬಹುದು. ಇತರ ವಿಷಯಗಳಂತೆ ಅವರ ಅಗತ್ಯಗಳು ಬೇರೆ ಇರಬಹುದು. ಆದರೆ ಯಾವ ಶಿಕ್ಷಕ ಇವುಗಳ ಕುರಿತು ಸಂವೇದನಾಶೀಲ ಮತ್ತು ಜಾಗರೂಕನಾಗಿರುವನೋ ಅವನು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವಂತೆ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಸಮನ್ವಯದಲ್ಲಿ ಕೆಲವು ಅಂಶಗಳು ಸಂಗೀತ ಶಿಕ್ಷಣದ ಮೂಲಕ ಸುಲಭಸಾಧ್ಯವಾಗಿಸಬಹುದಾದರೆ ಇನ್ನು ಕೆಲವು ಕಠಿಣಸಾಧ್ಯ. ಆದರೆ ಶಾಲೆಯ ಶಿಕ್ಷಕರ ನಡುವೆ ಪರಸ್ಪರ ಸಹಮತ ಮತ್ತು ತಿಳುವಳಿಕೆ ಇದ್ದರೆ ಮತ್ತು ಸರಿಯಾದ ಸಿದ್ಧತೆಯನ್ನು ನಡೆಸಿದರೆ ಇದು ಸಾಧ್ಯ.

**ಉದಾಹರಣೆ 1:** ನಾನು ನಡೆಸುವ ಚಟುವಟಿಕೆಯೊಂದರಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಕಣ್ಣು ಮುಚ್ಚಿ ಗಮನವಿಟ್ಟು ನೇರ ಪ್ರಸಾರದ ಅಥವಾ ರೆಕಾರ್ಡ್ ಆದ ಸಂಗೀತವನ್ನು ಆಲಿಸಲು ಹೇಳುತ್ತೇನೆ. ಆಲಿಸುತ್ತ ಸಂಗೀತದೊಂದಿಗೆ ಹೊಂದಿಕೊಳ್ಳುವ ಅವರಿಗಿಷ್ಟದ ಆಲೋಚನೆಯನ್ನು ಕಲ್ಪಿಸಿಕೊಳ್ಳಲು ಹೇಳುತ್ತೇನೆ. ಇದಾದ ಮೇಲೆ ಅವರಿಗೆ ತಮ್ಮ ವಿಚಾರ ಮತ್ತು ಕಲ್ಪನೆಗಳನ್ನು ಹಂಚಿಕೊಳ್ಳಲು ಸಮಯ ನೀಡಲಾಗುತ್ತದೆ. ಒಂದು ಗುಂಪಿನಲ್ಲಿ ಶ್ರವಣ ಸಾಧನವನ್ನು ಧರಿಸಿರುವ ಒಬ್ಬ ವಿದ್ಯಾರ್ಥಿ ಇದ್ದಾನೆ. ಈ ವಿದ್ಯಾರ್ಥಿಗೆ ಮಾತನಾಡಲೂ ಕೂಡ ತೊಂದರೆಯಿದೆ. ಆದರೂ ತುಂಬ ಸಕ್ರಿಯನಾಗಿದ್ದಾನೆ ಮತ್ತು ಆಸಕ್ತಿ ಹೊಂದಿದ್ದಾನೆ. ಆದ್ದರಿಂದ ಇತರ ವಿದ್ಯಾರ್ಥಿಗಳು ಆತನ ಉತ್ಸಾಹದ ಮಾತನ್ನು ಗಮನವಿಟ್ಟು ಕೇಳುತ್ತಾರೆ. ಆತನ ಶಬ್ದಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಒಂದು ವೇಳೆ ಶಿಕ್ಷಕರು ಇಂತಹ ಚಟುವಟಿಕೆಗಳನ್ನು ಸುಗಮವಾಗಿ ನಡೆಸಿಕೊಟ್ಟರೆ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿದರೆ ವಿದ್ಯಾರ್ಥಿಗಳು ಖುದ್ದು ತಾವೇ ನಮ್ಮ ನಿರೀಕ್ಷೆಗೂ ಮೀರಿದ ಸಮನ್ವಯಯನ್ನು ಸಾಧಿಸುತ್ತಾರೆ.

**ಉದಾಹರಣೆ 2:** ಹೈಪರ್ ಆಕ್ಟಿವಿಟಿ ಡಿಸ್ ಆರ್ಡರ್ ಅಥವಾ ಆಟಿಸಂ ಹೊಂದಿರುವ ವಿದ್ಯಾರ್ಥಿಗಳು ಸಾಮಾನ್ಯ ತರಗತಿಗಳಲ್ಲಿ ಹಲವು ಸವಾಲುಗಳನ್ನು ಎದುರಿಸಬೇಕಾಗಿ ಬರಬಹುದು. ನಮ್ಮ ಆರಂಭಿಕ ಅವಲೋಕನಗಳಲ್ಲಿಯೂ ಆಟಿಸಂನಿಂದ ಪೀಡಿತರಾದ ಬುನಾದಿ ಹಂತದ ಒಬ್ಬ ವಿದ್ಯಾರ್ಥಿ ಸಂಗೀತ ತರಗತಿಯಲ್ಲಿ ಬಹಳ ಹೊತ್ತು ಶಾಂತ ಚಿತ್ತನಾಗಿ ಕುಳಿತಿದ್ದನ್ನು ನೋಡಿದ್ದೇವೆ.



**ಸಂತೋಷ್ ರಾಜ್ ಕೆ** ಅವರು ಬಾಡ್‌ಮೇರ್‌ನ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಸಂಗೀತ ಮತ್ತು ಇಂಗ್ಲಿಷ್ ಅಧ್ಯಾಪಕರಾಗಿದ್ದಾರೆ. ಇವರು ತಮಿಳು ಮತ್ತು ತೆಲುಗು ಭಾಷೆಯ ಹಲವು ಸಿನೆಮಾಗಳಲ್ಲಿ ಸಹಾಯಕ ಸಂಗೀತ ಪ್ರೋಗ್ರಾಮರ್ / ಗಿಟಾರ್ ವಾದಕರಾಗಿ ಕೆಲಸ ಮಾಡಿದ್ದಾರೆ. ಜೊತೆಗೆ, 'ಮೇಕ್ ಎ ಡಿಫರೆನ್ಸ್' ಜಾಹೀರಾತು ಬೆಂಬಲ ತಂತ್ರಗಾರರಾಗಿ ಕೆಲಸ ಮಾಡಿದ್ದಾರೆ.

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ದಿನೇಶ್ ಮಡಗಾಂವ್ಕರ್

# ಕಿಶನ್ ಈಗ ಖುಷಿಯಾಗಿದ್ದಾನೆ

ಓಂ ಪ್ರಕಾಶ್ ಸಿಂಗ್

ಶಾಲೆಗಳಲ್ಲಿ ಹಿಂದುಳಿದ ಸಮುದಾಯಗಳ ವಿದ್ಯಾರ್ಥಿಗಳು ವಿವಿಧ ಕಾರಣಗಳಿಂದ ಪ್ರತ್ಯೇಕಗೊಳ್ಳುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇದರ ಕಾರಣಗಳನ್ನು ಹತ್ತಿರದಿಂದ ಗುರುತಿಸುವುದು ಮತ್ತು ಪರಕೀಯತೆಯನ್ನು ಗಂಭೀರವಾಗಿ ತೊಡೆದುಹಾಕುವುದು ಶಾಲೆಯ ಜವಾಬ್ದಾರಿಯಾಗಿದೆ. ಬಹಿಷ್ಕಾರವನ್ನು ಎದುರಿಸುತ್ತಿರುವ ಕಿಶನ್ ಅನ್ನು ಶಾಲೆಯ ಕ್ರೀಡೆಗಳಲ್ಲಿ ಮತ್ತು ಬೋಧನೆ–ಕಲಿಕೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಾಳೆ ಅನೇಕ ತೊಂದರೆಗಳ ನಡುವೆಯೂ ಶಾಲೆಯೊಂದರ ಜಾಗ್ರತೆವಹಿಸಿದ ಶಿಕ್ಷಕಿ ತನ್ನ ಸಹೋದ್ಯೋಗಿಯೊಂದಿಗೆ.

ಮಕ್ಕಳು ಏಕೆ ಶಾಂತವಾಗಿದ್ದಾರೆ? ನಾನು ಒಂದು ಪ್ರಾಥಮಿಕ ಶಾಲೆಗೆ ಹೋದಾಗ, ಶಾಲೆ ಮುಚ್ಚಿದೆಯೇ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಓಡುತ್ತಿತ್ತು. ಶಾಲೆಯ ವಾತಾವರಣ ಶಾಂತವಾಗಿತ್ತು. ಶಾಲೆಯಲ್ಲಿ ಮಕ್ಕಳೇ ಇಲ್ಲವೆಂಬಂತಿತ್ತು. ಈ ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಒಬ್ಬರು ಶಿಕ್ಷಕರು ಅನಾರೋಗ್ಯದಿಂದ ಬಳಲುತ್ತಿದ್ದು, ಒಬ್ಬ ಶಿಕ್ಷಕಿ ಮಾತ್ರ ಬೋಧನೆ ಮಾಡುತ್ತಿದ್ದಾರೆ. ಶಾಲೆಯ ಬಾಗಿಲು ತಲುಪಿದಾಗ ಅದು ಒಳಗಿನಿಂದ ಬೀಗ ಹಾಕಿರುವುದು ಕಂಡಿತು. ಒಬ್ಬರೇ ಶಿಕ್ಷಕಿ ಇರುವ ಕಾರಣ ಮಕ್ಕಳು ಹೊರಗೆ ಬಂದು ಗಲಾಟೆ ಮಾಡಬಾರದೆಂದು ಒಳಗಿನಿಂದ ಬಾಗಿಲು ಹಾಕಿದ್ದಾರೆ ಎಂದು ತಿಳಿದೆ. ನಾನು ಬಾಗಿಲು ತಟ್ಟಿದೆ. ಒಂದು ಮಗು ಅದನ್ನು ತೆರೆಯಿತು. ತರಗತಿಯಲ್ಲಿ ಶಿಕ್ಷಕರಿರಲಿಲ್ಲ, ಹಾಗೂ 29ರಲ್ಲಿ 22 ಮಕ್ಕಳು ಹಾಜರಿದ್ದರು. ಮಕ್ಕಳೆಲ್ಲ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ನಾನು ಕೇಳಿದೆ, "ನಿಮ್ಮ ಗುರುಗಳು ಎಲ್ಲಿದ್ದಾರೆ?" "ಅವರು ಹಳ್ಳಿಗೆ ಹೋಗಿದ್ದಾರೆ, ಇನ್ನೂ ಮಕ್ಕಳನ್ನು ಕರೆತರಲು" ಎಂದು ಮಕ್ಕಳು ಉತ್ತರಿಸಿದರು. ನಾನು ಕೇಳಿದೆ, "ನೀವು ಯಾಕೆ ಬಾಗಿಲು ಮುಚ್ಚಿದ್ದೀರಿ?" ಶಾಲೆಯಲ್ಲಿ ಶಿಕ್ಷಕರಿಲ್ಲದ ಕಾರಣ ಬಾಗಿಲು ಹಾಕಿಕೊಂಡು ಓದುತ್ತಿದ್ದೇವೆ ಎಂದು ಮಕ್ಕಳು ತಿಳಿಸಿದರು. ಈ ಅನುಭವ ನನಗೆ ಹೊಸತಾಗಿತ್ತು ಏಕೆಂದರೆ ಈ ವಯಸ್ಸಿನ ಮಕ್ಕಳು ಉತ್ಸಾಹದಿಂದ ಇರುತ್ತಾರೆ, ಗಲಾಟೆ ಮಾಡುತ್ತಾರೆ ಹಾಗೂ ತಮ್ಮ ತಮ್ಮಲ್ಲೇ ಜಗಳವಾಡುತ್ತಾರೆ ಆದರೆ ಈ ಶಾಲೆಯಲ್ಲಿ ಅವರು ಹೇಗೆ ಇಷ್ಟು ಶಿಸ್ತುಬದ್ಧರಾಗಿದ್ದಾರೆ? ನಾನು ಮಕ್ಕಳನ್ನು ಹೆಚ್ಚು ಪ್ರಶ್ನಿಸಲು ಬಯಸಲಿಲ್ಲ ಏಕೆಂದರೆ ಈಗ ಅವರು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ (ಎಫ್. ಎಲ್. ಎನ್) ವರ್ಕ್‌ಬುಕ್‌ನಲ್ಲಿ ತುಂಬಾ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದರು. ಮಕ್ಕಳು ಹೆದರಿದರು ಎಂದು ನಾನು ಹೇಳಲಾರೆ. ಮಕ್ಕಳಿಗೆ ವರ್ಕ್‌ಬುಕ್‌ನಲ್ಲಿ ಕೆಲಸ ಮಾಡಲು ಕಷ್ಟವಾದಾಗ, ಅವರು ನನ್ನ ಬಳಿಗೆ ಬಂದು ಪ್ರಶ್ನೆಗಳನ್ನು ಕೇಳಿದರು. ಶಿಕ್ಷಕಿ ತನ್ನೊಂದಿಗೆ ಒಂದು ಮಗುವನ್ನು ಕರೆತಂದರು. ಆಕೆ ನನ್ನನ್ನು ನೋಡಿ ಸಂತೋಷಪಟ್ಟರು. "ನಾನು ಸಮುದಾಯದ ಮಕ್ಕಳನ್ನು ಕರೆಯಲು ಹೋಗಿದ್ದೆ. ನಾನು ಈ ಶಾಲೆ ಗೆ ಮೊದಲು ಬಂದಾಗ ಕೇವಲ ಎರಡು ಮಕ್ಕಳಿದ್ದರು. ನನಗೆ ಈ 22 ಮಕ್ಕಳನ್ನು ಒಟ್ಟುಸೇರಿಸಲು ಪ್ರತಿಯೊಂದು ಮನೆಗೂ ಹೋಗ–ಬೇಕಾಯಿತು". ಎಂದರು. ನಾನು ಕೇಳಿದೆ "ನಿಮಗೆ ಪ್ರತಿದಿನವೂ ಎಲ್ಲಾ ಮಕ್ಕಳ ಮನೆಗೆ ಹೋಗಿ ಅವರನ್ನು ಕರೆತರಬೇಕಾಗುತ್ತದೆಯೇ?" ಅವರು ಹೇಳಿದರು," ಇಲ್ಲ, ಇವತ್ತು ಮಕ್ಕಳು ಸಮಯಕ್ಕೆ ಸರಿಯಾಗಿ ಬಂದರು. ನಾನು ಬರುವುದು ಸ್ವಲ್ಪ ತಡವಾಯಿತು, ಹೀಗಾಗಿ ಕೆಲವು ಮಕ್ಕಳು ಮನೆಗೆ ವಾಪಾಸು ಹೋಗಿದ್ದರು."

> **ನಿರಂತರವಾಗಿ ಯೋಚಿಸಿದ ನಂತರ, ತರಗತಿಯಲ್ಲಿ ಮಕ್ಕಳಿಗೆ ಪ್ರತಿದಿನ ಒಂದು ಕಥೆಯನ್ನು ಹೇಳಬೇಕೆಂದು ಮತ್ತು ಅದರ ಬಗ್ಗೆ ಚರ್ಚಿಸಲಾಗುವುದು ಎಂದು ನಾವು ನಿರ್ಧರಿಸಿದೆವು ಅವರ ಯೋಜನೆಯ ಪ್ರಕಾರ, ಶಿಕ್ಷಕಿಯು ಆಸಕ್ತಿದಾಯಕ ಕಥೆಗಳನ್ನು ಆರಿಸಿಕೊಂಡರು ಮತ್ತು ಮಕ್ಕಳಿಗೆ ಕಥೆಗಳನ್ನು ಹೇಳಿದರು ಹಾಗೂ ಅದರ ಬಗ್ಗೆ ಚರ್ಚಿಸಿದರು.**



ಚಿತ್ರ 1: ಮಕ್ಕಳ ಅಭಿವ್ಯಕ್ತಿಗಳ ಅವಲೋಕನ ಶಿಕ್ಷಕರ ಅಗತ್ಯ

ನಾನು ಈ ಸ್ಕೂಲಿಗೆ ಬಂದಾಗಲೆಲ್ಲ ಶಿಕ್ಷಕಿಯ ನಡೆವಳಿಕೆಯು ಮಕ್ಕಳೆಡೆಗೆ ತುಂಬಾ ಸೌಮ್ಯವಾಗಿ ಇರುವುದನ್ನು ಕಂಡಿದ್ದೇನೆ ಆದರೂ

ಕಿಶನ್‌ನನ್ನು ನೋಡಿದರೆ ಆತ ಹೆದರಿದಂತೆ ಕಂಡಿತು. ಆತ ಶಿಕ್ಷಕರೊಂದಿಗೆ ಚರ್ಚೆಯಲ್ಲಿ ಭಾಗವಹಿಸುತ್ತಿರಲಿಲ್ಲ. ತರಗತಿಯಲ್ಲಿ ನಡೆಯುತ್ತಿರುವ ಸಂಭಾಷಣೆಗೆ ನಾನು ಅವನನ್ನು ಸೇರಿಸಲು ಪ್ರಯತ್ನಿಸಿದೆ, ಆದರೆ ಅವನು ಅಸಮಾಧಾನದಿಂದ ಮತ್ತು ಅಹಿತಕರವಾಗಿ ಕಾಣಲಾರಂಭಿಸಿದನು. ಅವನು ತರಗತಿ ಚಟುವಟಿಕೆಗಳಲ್ಲಿ ಏಕೆ ಭಾಗವಹಿಸುತ್ತಿಲ್ಲ? ಅವನು ಇತರ ಮಕ್ಕಳೊಂದಿಗೆ ಬೆರೆಯಲು ಏಕೆ ಅನನುಕೂಲವನ್ನು ಅನುಭವಿಸುತ್ತಾನೆ? ಈ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಓಡುತ್ತಿದ್ದವು. ಶಿಕ್ಷಕರು ಹೇಳಿದರು, "ಈ ಮಗು ಮೂರನೇ ತರಗತಿಯಲ್ಲಿದೆ, ಆದರೆ ಏನೂ ಓದಲು ಅಥವಾ ಬರೆಯಲು ಬರುವುದಿಲ್ಲ, ಅವನು "ನಿಧಾನ ಕಲಿಕೆಯ ಹುಡುಗ". ನಿಧಾನ ಕಲಿಕೆಯ ವಿದ್ಯಾರ್ಥಿ ಪದವನ್ನು ಕೇಳಿ ನನಗೆ ಸ್ವಲ್ಪ ಅನನುಕೂಲವಾಯಿತು. ಮಗುವಿನ ನಿಧಾನ ಕಲಿಕೆಯನ್ನು ಆಕೆ ಹೇಗೆ ಕಂಡುಕೊಂಡಳು ಎಂದು ನಾನು ಶಿಕ್ಷಕರಿಂದ ತಿಳಿದುಕೊಳ್ಳಲು ಬಯಸಿದೆ. ಅವರ ಉತ್ತರ ಹೀಗಿತ್ತು, "ಅವನು ಎಲ್ಲಾ ಮಕ್ಕಳಿಂದ ದೂರ ಇರುತ್ತಾನೆ, ಮತ್ತು ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ." ನಾನು ಈ ಶಾಲೆಗೆ ಆಗಾಗ್ಗೆ ಹೋಗಿದ್ದೇನೆ ಮತ್ತು ಮಕ್ಕಳು ನನಗೆ ಪರಿಚಿತರಾಗಿದ್ದರು. ನಾನು ಕಿಶನ್‌ಗೆ ಹೇಳಿದೆ, "ಮಂಡಿ–ಎ–ಚ್ಛಾ" (ಕುಡುಖ್ ಭಾಷೆಯಲ್ಲಿ ಇದರರ್ಥ ಆಹಾರವನ್ನು ತಿನ್ನು ಎಂದು. ನನಗೆ ಕುಡುಖ್ ಭಾಷೆ ಬರುವುದಿಲ್ಲ, ಈ ಭಾಷೆಯ ಕೆಲವು ಪದಗಳನ್ನು ನಾನು ಮಕ್ಕಳಿಂದ ಮಾತ್ರ ಕಲಿತಿದ್ದೇನೆ.) ಅವನು "ಇಲ್ಲ, ನಾನು ನಂತರ ತಿನ್ನುತ್ತೇನೆ" ಎಂದು ಹೇಳಿದನು, ಅವನು ಸಾಮಾನ್ಯ ಮಗು ಎಂದು ನಾನು ಅರಿತುಕೊಂಡೆ.

## ಆದರೆ ಕಿಶನ್ ಇತರ ಮಕ್ಕಳೊಂದಿಗೆ ಏಕೆ ಬೆರೆಯುವುದಿಲ್ಲ?

ಶಾಲೆಯ ಉಳಿದ ಮಕ್ಕಳು ನನ್ನೊಂದಿಗೆ ಚೆನ್ನಾಗಿ ಬೆರೆತಿದ್ದರು. ನಾನು ಇತರ ಮಕ್ಕಳನ್ನು ಕೇಳಿದೆ, "ಯಾಕೆ ಕಿಶನ್ ನಿಮ್ಮೆಲ್ಲರೊಂದಿಗೆ ಬೆರೆಯುವುದಿಲ್ಲ?" ಮಕ್ಕಳ ಬೇರೆ–ಬೇರೆ ಉತ್ತರಗಳನ್ನು ಕೇಳಿ ನನಗೆ ತುಂಬಾ ಬೇಸರವಾಯಿತು. ಒಬ್ಬ ಹೇಳಿದ, "ಹಂದಿಮಾಂಸವನ್ನು ಅವನ ಮನೆಯಲ್ಲಿ ತಿನ್ನಲಾಗುತ್ತದೆ, ಆದ್ದರಿಂದ ನಾವು ಅವನೊಂದಿಗೆ ಮಾತನಾಡುವುದಿಲ್ಲ." ಮತ್ತೊಬ್ಬ, "ಅವನ ತಂದೆ ಪಕ್ಷಿಗಳನ್ನು ಕೊಂದು ತಿನ್ನುತ್ತಾನೆ" ಎಂದನು. ಮೂರನೆಯವನು ಹೇಳಿದ, "ಕಿಶನ್ ಅವರ ಕುಟುಂಬವು ಅಸುರ್ (ಜಾರ್ಖಂಡ್‌ನ ಒಂದು ರೀತಿಯ ಆದಿವಾಸಿ ಬುಡಕಟ್ಟು), ನಮಗೆ ಅವರ ಭಾಷೆ ತಿಳಿದಿಲ್ಲ, ನಾವು ಅವನೊಂದಿಗೆ ಹೇಗೆ ಮಾತನಾಡುವುದು!" ಒಬ್ಬ ಹುಡುಗಿ, "ಅವನನ್ನು ನೋಡಲು ನನಗೆ ಇಷ್ಟವಿಲ್ಲ, ಆದ್ದರಿಂದ ನಾನು ಅವನನ್ನು ತರಗತಿಯಲ್ಲಿ ನನ್ನ ಹತ್ತಿರ ಕುಳಿತುಕೊಳ್ಳಲು ಬಿಡುವುದಿಲ್ಲ." ನಾನು ಕೇಳಿದೆ, "ಏಕೆ ಹಾಗೆ ಮಾಡುತ್ತೀಯ?" ಅವಳು ತುಂಬಾ ಸಾಂದರ್ಭಿಕವಾಗಿ, "ಅಯ್ಯೋ, ನಿಮಗೆ ಗೊತ್ತಿಲ್ಲ! ಅವರು ತುಂಬಾ ಕೊಳಕು, ಅವರನ್ನು ಯಾರು ಮುಟ್ಟುತ್ತಾರೆ?"

ಈ ಬುಡಕಟ್ಟು ಪ್ರಾಬಲ್ಯವಿರುವ ಪ್ರದೇಶದಲ್ಲಿ ನನಗೆ ಇಂತಹ ಅನುಭವ ಸಂಪೂರ್ಣ ಹೊಸತು. ಈಗ ನನ್ನ ಮನಸ್ಸಿನಲ್ಲಿ ಕಿಶನ್ ಅನ್ನು ಈ ಪರಿಸ್ಥಿತಿಯಿಂದ ಹೊರತರುವುದು ಹೇಗೆ ಎಂಬ ಒಂದೇ ಆಲೋಚನೆಯಿತ್ತು. ಅವನು ಕೂಡ ನಿಮ್ಮಂತೆಯೇ ಎಂದು ಮಕ್ಕಳಿಗೆ ಹೇಗೆ ವಿವರಿಸುವುದು? ಟೀಚರ್ ಸ್ವಲ್ಪ ದೂರದಲ್ಲಿ ಕುಳಿತು ನಮ್ಮ ಸಂಭಾಷಣೆಗಳನ್ನು ಆಗಾಗ ಕೇಳುತ್ತಿದ್ದರು. ಅವರ ಮುಖ ನೋಡಿದರೆ ಅವರು ಮಕ್ಕಳ ಈ ರೀತಿಯ ಮಾತುಗಳನ್ನು ಕೇಳಿ ಬೇಸರಗೊಂಡಂತೆ ತೋರುತ್ತಿತ್ತು. ಕೊನೆಗೆ ಮಧ್ಯಾಹ್ನ ಊಟದ ಸಮಯದಲ್ಲಿ, ಕಿಶನ್ ಜೊತೆಗಿನ ಇತರ ಮಕ್ಕಳ ವರ್ತನೆಯ ಬಗ್ಗೆ ನಾನು ಶಿಕ್ಷಕರಿಗೆ ಹೇಳಿದೆ ಮತ್ತು ಇತರ ಮಕ್ಕಳಂತೆ ಕಿಶನ್‌ಗೆ ಕೂಡ ಒಂದು ಸಕಾರಾತ್ಮಕ ವಾತಾವರಣ ಸೃಷ್ಟಿಮಾಡಿದರೆ ಅವನ ಕಲಿಕೆಯು ಉತ್ತಮವಾಗಿರುತ್ತದೆ ಎಂದು ಅವರಿಗೆ ಭರವಸೆ ನೀಡಿದೆ. ಶಾಲೆಯ ವಾತಾವರಣವು ಕಿಶನ್‌ನನ್ನು ಶಾಂತ ಮತ್ತು ಮಾತನಾಡದೆ ಇರುವ ಹುಡುಗನನ್ನಾಗಿ ಮಾಡಿತ್ತು. ಅವನು ಇತರ ಮಕ್ಕಳೊಂದಿಗೆ ಮಾತನಾಡುತ್ತಿರಲಿಲ್ಲ ಹಾಗೂ ಮಧ್ಯಾಹ್ನದ ಊಟದ ಸಮಯದಲ್ಲಿ ಅವರೊಂದಿಗೆ ಊಟ ಮಾಡುತ್ತಿರಲಿಲ್ಲ. ಈ ಬಗ್ಗೆ ಶಿಕ್ಷಕರ ಗಮನ ಸೆಳೆದೆ. ಈಗ ಶಿಕ್ಷಕರ ಪ್ರಶ್ನೆ ಏನೆಂದರೆ, "ನಾನು ಕಿಶನ್ ಜೊತೆ ಪ್ರತ್ಯೇಕವಾಗಿ ಹೇಗೆ ಕೆಲಸ ಮಾಡಲು ಸಾಧ್ಯ? ಒಂದು ಮಗುವಿನ ಸಲುವಾಗಿ ನಾನು ಎಲ್ಲಾ ಮಕ್ಕಳನ್ನು ಬಿಟ್ಟು ಬಿಡಲಾರೆ." ನಾನು ಶಿಕ್ಷಕರ ಸಮಸ್ಯೆಯನ್ನು ಅರ್ಥಮಾಡಿಕೊಂಡೆ.

## ಕಿಶನ್ ಆಟ ಆಡಲು ತುಂಬಾ ಇಷ್ಟಪಡುತ್ತಾನೆ

ಮಕ್ಕಳು ಆಟವಾಡಲು ತುಂಬಾ ಇಷ್ಟಪಡುತ್ತಾರೆ. ಆಟವಾಡುವಾಗ ಯಾವ ಮಗು ಯಾವ ಧರ್ಮ, ಜಾತಿ ಅಥವಾ ಸಮುದಾಯಕ್ಕೆ ಸೇರಿದೆ ಎಂಬುದನ್ನು ಮರೆತುಬಿಡುತ್ತಾರೆ. ಇಂದು ಈ ಶಾಲೆಯಲ್ಲೂ ಹಾಗೆಯೇ ನಡೆಯಿತು. ಭಾಷೆ ಮತ್ತು ಗಣಿತದ ತರಗತಿಗಳು ಮುಗಿದ ನಂತರ, ನಾನು ಮತ್ತು ಶಿಕ್ಷಕಿಯು ಮಕ್ಕಳನ್ನು ತರಗತಿಯ ಹೊರಗೆ ಕರೆತಂದು ಬೆಕ್ಕು ಮತ್ತು ಇಲಿಯ ಆಟವನ್ನು ಪ್ರಾರಂಭಿಸಿದೆವು. ಆಟದಲ್ಲಿ ಕಿಶನ್ ಕೂಡ ಸಕ್ರಿಯವಾಗಿ ಭಾಗವಹಿಸಿದ.

ಅವನು ಇಲಿಯಾದಾಗ, ಯಾವ ಮಗುವೂ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಅವನು ತುಂಬಾ ವೇಗವಾಗಿ ಓಡುತ್ತಿದ್ದನು. 3 ನೇ ತರಗತಿಯ ಹುಡುಗನನ್ನು 5 ನೇ ತರಗತಿಯ ಮಕ್ಕಳು ಕೂಡ ಹಿಡಿಯಲು ಸಾಧ್ಯವಾಗಲಿಲ್ಲ. ಈಗ ಕಿಶನ್ ತುಂಬಾ ವೇಗವಾಗಿ ಓಡುತ್ತಾನೆ ಎಂದು ಶಾಲೆಯಲ್ಲಿ ಎಲ್ಲರಿಗೂ ತಿಳಿಯಿತು. ಅವನು ಒಬ್ಬ ಸಾಮಾನ್ಯ ಹುಡುಗ ಎಂದು ಶಿಕ್ಷಕರಿಗೂ ಅರ್ಥವಾಯಿತು. ಈಗ ತರಗತಿಯ ಮಕ್ಕಳಿಗೆ ಕಿಶನ್ ಅವರ ಗೆಳೆಯನೆಂಬ ಅರಿವು ಮೂಡಿಸಬೇಕಿತ್ತು, ಟೀಚರ್ ಗಮನವೂ ಕಿಶನ್ ಕಡೆಗೆ ಇತ್ತು. ತರಗತಿಯಲ್ಲಿ ಅವನ ನಡೆಗಳನ್ನು ಆಕೆಯು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು. ಇದುವರೆಗೆ ಬುದ್ಧಿಮಾಂದ್ಯ ಎಂದುಕೊಂಡಿದ್ದ ಹುಡುಗನು ಒಬ್ಬ ಸಾಮಾನ್ಯ ಹುಡುಗ ಎಂದು ಆಕೆಗೆ ನಂಬಲಾಗಲಿಲ್ಲ. ತರಗತಿಯಲ್ಲಿ ಇತರ ಮಕ್ಕಳಂತೆ ಕಲಿಯಲು ಸಾಧ್ಯವಾಗದೇ ಇರುವುದಕ್ಕೆ ಅಲ್ಲಿ ಅವನೆಡೆಗೆ ಸೃಷ್ಟಿಯಾದ ನಕಾರಾತ್ಮಕ ವಾತಾವರಣವೇ ಕಾರಣವಾಗಿತ್ತು. ಕಿಶನ್‌ನ ಕ್ರೀಡೆಯಲ್ಲಿನ ಕ್ರಿಯಾ–ಶೀಲತೆಯನ್ನು ಗಮನಿಸಿದ ಶಿಕ್ಷಕಿಗೆ ತರಗತಿಯಲ್ಲಿ ಅವನ ನಿರಂತರ ತೊಡಗುವಿಕೆಯ ಕೊರತೆಯ ಕಾರಣ ಅರ್ಥವಾಯಿತು. ಕಿಶನ್ ಪ್ರತಿ ದಿನ ಸಮಯಕ್ಕೆ ಸರಿಯಾಗಿ ಶಾಲೆಗೆ ಬರುವುದನ್ನು ಅವರು ಗಮನಿಸಿದರು, ಆದರೆ ಆತ ತನ್ನ ತರಗತಿಯ ಮಕ್ಕಳೊಂದಿಗೆ ಬೆರೆಯಲು ಸಾಧ್ಯವಾಗುತ್ತಿರಲಿಲ್ಲ. ಈ ಕಾರಣಕ್ಕಾಗಿ ಅವನು ಇಡೀ ದಿನ ತರಗತಿಯಲ್ಲಿ ದುಃಖಿತನಾಗಿ ಮತ್ತು ಪ್ರತ್ಯೇಕವಾಗಿರುತ್ತಾನೆ.

ಈಗ ಎಲ್ಲ ಮಕ್ಕಳ ಕಲಿಕೆಯ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಕಿಶನ್ ಜೊತೆ ಕೆಲಸ ಮಾಡುವುದು ಹೇಗೆ ಎಂಬ ಸವಾಲು ಶಿಕ್ಷಕಿಗೆ ಎದುರಾಗಿತ್ತು. ಮಕ್ಕಳು ಅವನೊಂದಿಗೆ ಹೊಂದಿಕೊಳ್ಳಲು ತರಗತಿಯಲ್ಲಿ ಏನು ಮಾಡಬೇಕು? ನಾವು ಸತತ ಆಲೋಚಿಸಿ, ತರಗತಿಯಲ್ಲಿ ಪ್ರತಿದಿನ ಮಕ್ಕಳಿಗೆ ಕಥೆ ಹೇಳುವುದು, ಚರ್ಚಿಸುವುದು ಎಂದು ನಿರ್ಧರಿಸಿದೆವು. ತನ್ನ ಯೋಜನೆಯ ಪ್ರಕಾರ, ಶಿಕ್ಷಕಿಯು ಆಸಕ್ತಿದಾಯಕ ಕಥೆಗಳನ್ನು ಆಯ್ಕೆ ಮಾಡಿದರು ಮತ್ತು ಅವುಗಳನ್ನು ಮಕ್ಕಳಿಗೆ ಹೇಳಿದರು ಮತ್ತು ಅದರ ಬಗ್ಗೆ ಮಾತನಾಡಿದರು. ಈ ಕಥೆಗಳಲ್ಲಿ 'ಮೊಂಡು ಹಸು', 'ಬುದ್ಧಿವಂತ ಮೊಲ', 'ಸ್ನೇಹಿತರ ಸಹಾಯ' ಇತ್ಯಾದಿ ಸೇರಿವೆ.

ಒಂದೋ ಎರಡೋ ಪಾತ್ರಗಳನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳು ಮಕ್ಕಳ ಸನ್ನಿವೇಶಕ್ಕೆ ಸಂಬಂಧಿಸಿದ್ದರಿಂದ ಮಕ್ಕಳು 'ಮೊಂಡು ಹಸು' ಕಥೆಯನ್ನು ಕೇಳಿ ಆನಂದಿಸುತ್ತಿದ್ದರು. ಹಾಲು ಕೊಡುವಾಗ ಮಾಲೀಕರಿಗೆ ತೊಂದರೆ ಕೊಡುವ ಇಂತಹ ಹಸುವನ್ನು ಮಕ್ಕಳು ಕೂಡ ತಮ್ಮ ಸುತ್ತಮುತ್ತ ನೋಡಿದ್ದಾರೆ. ಮಕ್ಕಳು ತಮ್ಮ ಅನುಭವದ ಆಧಾರದ ಮೇಲೆ ಹಸುವನ್ನು ರಸ್ತೆಯಿಂದ ಸರಿಸುವ ಮಾರ್ಗಗಳನ್ನು ಸೂಚಿಸುತ್ತಿದ್ದರು. ಬಾಲ ಹಿಡಿದು ಎಳೆದರೆ ಹಸು ತಕ್ಷಣ ಎದ್ದು ನಿಲ್ಲುತ್ತದೆ ಎಂದು ಬಹುತೇಕ ಮಕ್ಕಳು ಸೂಚಿಸಿದರು. ಎಲ್ಲರೂ ಸೇರಿ ಹಸುವಿನ ಹಗ್ಗವನ್ನು ಎಳೆಯಬೇಕು ಎಂದು ಮಗುವೊಂದು ಹೇಳಿತು. ತುಂಬಾ ಸಮಯ ಚರ್ಚೆ ಮಾಡಿದ ಮೇಲೂ ಹಸುವಿಗೆ ಪ್ರೀತಿಯಿಂದ ಹುಲ್ಲು ಕೊಟ್ಟರೆ ರಸ್ತೆಯಿಂದ ದೂರ ಸರಿಯಬಹುದು ಎಂಬ ಉತ್ತರ ಮಕ್ಕಳಿಗೆ ಹೊಳೆಯಲಿಲ್ಲ.

'ಬುದ್ಧಿವಂತ ಮೊಲ' ಕಥೆ ಮಕ್ಕಳಿಗೆ ಹೊಸದೇನಲ್ಲ. ಆದರೂ ಮಕ್ಕಳು ಈ ಕಥೆಯನ್ನು ಮೊದಲ ಬಾರಿಗೆ ಕೇಳಿದಂತೆ ಆನಂದಿಸುತ್ತಿದ್ದರು. ಆದರೆ, ಕಥೆಯನ್ನು ಅರ್ಧಕ್ಕೆ ನಿಲ್ಲಿಸಿ ಮುಂದೆ ಏನಾಯಿತು ಎಂದು ಊಹಿಸುವ ಚಟುವಟಿಕೆಯಲ್ಲಿ ಮಕ್ಕಳು ಹೆಚ್ಚು ಆಸಕ್ತಿ ವಹಿಸಲಿಲ್ಲ. ಕಥೆಯ ನಂತರ ಮಕ್ಕಳೊಂದಿಗೆ ಮಾತನಾಡಿದಾಗ ಅದರ ಕೆಲವು ಉದಾಹರಣೆಗಳು ಹೀಗಿವೆ:

ಮಕ್ಕಳಿಗೆ ಕೇಳಿದ ಮೊದಲ ಪ್ರಶ್ನೆ, "ಮೊಲ ಸಿಂಹವನ್ನು ಬಾವಿಗೆ ಹಾರಲು ಏಕೆ ಕೇಳಿರಬಹುದು?" ಮಕ್ಕಳು ಉತ್ತರಿಸಿದರು, "ಸಿಂಹವು ಕಾಡಿನಲ್ಲಿ ಪ್ರಾಣಿಗಳನ್ನು ಕೊಂದು ತಿನ್ನುತ್ತಿತ್ತು, ಮೊಲ ಎಲ್ಲ ಪ್ರಾಣಿಗಳನ್ನೂ ರಕ್ಷಿಸಲು ಹೀಗೆ ಮಾಡಿದೆ."

ಎರಡನೆಯ ಪ್ರಶ್ನೆ ಹೀಗಿತ್ತು, "ಕಾಡಿನ ಎಲ್ಲಾ ಪ್ರಾಣಿಗಳು ಸಿಂಹದೊಂದಿಗೆ ಒಪ್ಪಂದ ಮಾಡಿಕೊಂಡಾಗ, ಮೊಲ ಮಾಡಿದ್ದು ಸರಿಯೇ?" ಮಕ್ಕಳೆಲ್ಲ "ಮೊಲ ಮಾಡಿದ್ದು ಸರಿ" ಎಂದರು.

ಮೂರನೆಯ ಪ್ರಶ್ನೆ ಕೇಳಿದೆವು, "ಸಿಂಹಕ್ಕೂ ಮರಿಗಳಿರಬಹುದು, ಸಿಂಹವು ಸತ್ತ ನಂತರ ಅವು ಹಸಿವಿನಿಂದ ಸತ್ತಿರಬಹುದು! ಮೊಲವು ಒಪ್ಪಂದವನ್ನು ಮುರಿಯಬೇಕಿತ್ತೇ?" ಈ ಪ್ರಶ್ನೆಗೆ ಹೆಚ್ಚಿನ ಮಕ್ಕಳು ಮೌನವಾಗಿದ್ದರು.

ನಮ್ಮ ಅನುಭವದಲ್ಲಿ ಮಕ್ಕಳು ಕಥೆಯಲ್ಲಿ ದುರ್ಬಲ ಎಂದು ತೋರಿಸಲ್ಪಟ್ಟ ಪಾತ್ರಕ್ಕೆ ತಮ್ಮನ್ನು ತಾವು ಸಂಬಂಧಿಸಿಕೊಳ್ಳುತ್ತಾರೆ ಎಂದು ನಾವು ಅರಿತುಕೊಂಡಿದ್ದೇವೆ. 'ಮೊಂಡು ಹಸು'ಕಥೆಯ ಬಗ್ಗೆ ಹೇಳುವುದಾದರೆ, ಮಕ್ಕಳ ಸಹಾನುಭೂತಿ ಹಸುವಿನ ಮಾಲೀಕನ ಕಡೆಗೆ ಇತ್ತು, ಆದರೆ ಮಾಲೀಕನು ಹಸುವಿಗೆ ಕಡಿಮೆ ಮೇವು ಕೊಟ್ಟಿದ್ದಾನೆ ಎಂಬುದು ಮಕ್ಕಳಿಗೆ ತಿಳಿದಿತ್ತು. ಆದರೂ ಕೂಡ ಅವರು ಹಸುವಿಗೆ ಕೋಲಿನಿಂದ ಹೊಡೆದರೆ ಅದು ಎದ್ದು ಹೋಗುತ್ತದೆ ಎಂದು ಹೇಳುತ್ತಿದ್ದರು. ಎರಡನೆ ಕಥೆಯಲ್ಲೂ ಮಕ್ಕಳೊಂದಿಗೆ ಮಾತ–ನಾಡುವಾಗ ಮೊಲವು ಒಪ್ಪಂದವನ್ನು ಮುರಿದು ಒಳ್ಳೇದು ಮಾಡಿತೋ ಅಥವಾ ಕೆಟ್ಟದ್ದೋ ಎಂಬ ಪ್ರಶ್ನೆ ಕೇಳಿದಾಗ ಬಹುತೇಕ ಮಕ್ಕಳು ಒಳ್ಳೇದು ಮಾಡಿತು ಎಂದು ಉತ್ತರಿಸಿದರು. ಇದೆಲ್ಲವನ್ನೂ ಪರಿಗಣಿಸಿ, ಈ ಕಥೆಗಳ ಚರ್ಚೆಯಲ್ಲಿ ಕಿಶನ್ ಕೂಡ ಭಾಗವಹಿಸುತ್ತಿದ್ದ ಎಂದು ನಮಗೆ ತೃಪ್ತಿಯಾಯಿತು. ಅವನು ಕೂಡ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸಿದನು. ಕಥೆಯ ನಂತರ ಮಕ್ಕಳಿಗೆ ಚರ್ಚಿಸಲು ಅವಕಾಶ ನೀಡಿದರೆ, ಅವರ ತಿಳುವಳಿಕೆ ಸುಧಾರಿಸುತ್ತದೆ ಎಂದು ನಾವು ಅರಿತುಕೊಂಡೆವು.

ಮಕ್ಕಳೊಂದಿಗೆ ಕಥೆಯಲ್ಲಿ ಕೆಲಸ ಮಾಡುವಾಗ, ಮಕ್ಕಳು ಕಥೆಯಲ್ಲಿನ ದುರ್ಬಲ ಪಾತ್ರಗಳ ಬಗ್ಗೆ ಸಹಾನುಭೂತಿ ಹೊಂದಿದ್ದಾರೆಂದು ನಾವು ಅರ್ಥಮಾಡಿಕೊಂಡಿದ್ದೇವೆ, ಆದರೆ ಅವರು ಅದನ್ನು ದೈನಂದಿನ ಜೀವನದಲ್ಲಿ ಅನ್ವಯಿಸುತ್ತಿರಲಿಲ್ಲ. ಕಥೆ ಹೇಳುವುದರ ಜೊತೆಗೆ ತರಗತಿಯ ಇತರ ಪ್ರಕ್ರಿಯೆಗಳನ್ನೂ ಬದಲಾಯಿಸಬೇಕಾಗುತ್ತದೆ ಎಂದು ತಿಳಿಯಿತು.

## ಮಧ್ಯಾಹ್ನದ ಊಟದಲ್ಲಿ ಶಿಕ್ಷಕಿಯ ಭಾಗವಹಿಸುವಿಕೆ

ಮಕ್ಕಳೊಂದಿಗೆ ಕೆಲಸ ಮಾಡುವಾಗ, ಕಥೆ ಹೇಳುವುದರೊಂದಿಗೆ ನಾವು ಕೆಲವು ಪ್ರಯೋಗಗಳನ್ನು ಮಾಡಬೇಕು ಎಂದು ಅರಿತುಕೊಂಡಿದ್ದೇವೆ, ಇದರಿಂದಾಗಿ ಕಿಶನ್ ಕೂಡ ತಮ್ಮಂತೆಯೇ ಇದ್ದಾನೆ ಎಂದು ಮಕ್ಕಳಿಗೆ ಅರ್ಥವಾಗುವಂತೆ ಮತ್ತು ಅವನನ್ನೂ ಕೂಡ ತಮ್ಮ ಸ್ನೇಹಿತನನ್ನಾಗಿ ಸ್ವೀಕರಿಸುವಂತೆ ಮಾಡಬಹುದು ಎಂದು. ಇದಕ್ಕಾಗಿ ಶಿಕ್ಷಕಿಯು ಮಕ್ಕಳೊಂದಿಗೆ ಮಧ್ಯಾಹ್ನದ ಊಟ ಮಾಡಲು ಯೋಜಿಸಿದ್ದರು. ಶಾಲೆಯಲ್ಲಿ ಇದೇ ಮೊದಲ ಬಾರಿಗೆ ಶಿಕ್ಷಕಿಯು ಮಕ್ಕಳೊಂದಿಗೆ ಕುಳಿತು ಊಟ ಮಾಡುತ್ತಿದ್ದರು. ಆಕೆಯು ಕಿಶನ್ ನನ್ನು ತಮ್ಮ ಹತ್ತಿರ ಕೂರಿಸಿಕೊಂಡರು. ಮಕ್ಕಳೆಲ್ಲ ಟೀಚರ್ ಜೊತೆ ಕೂತು ಊಟ ಮಾಡುತ್ತಾ ಖುಷಿ ಪಡುತ್ತಿದ್ದರು. ಈ ರೀತಿ ಶಿಕ್ಷಕಿಯು ಮಕ್ಕಳೊಂದಿಗೆ ಕುಳಿತು ಮಧ್ಯಾಹ್ನದ ಊಟ ಮಾಡುವುದನ್ನು ಮುಂದುವರಿಸಿದರು. ಆಕೆ ಕಿಶನ್‌ನನ್ನು ತನ್ನ ಜೊತೆಯಲ್ಲೇ ಕೂರಿಸಿಕೊಳ್ಳುತ್ತಿದ್ದರು. ಈಗ ಕಿಶನ್ ಶಿಕ್ಷಕಿಯೊಂದಿಗೆ ಚೆನ್ನಾಗಿ ಹೊಂದಿಕೊಂಡಿದ್ದಾನೆ ಹಾಗೂ ಕ್ರಮೇಣ ಇತರ ಮಕ್ಕಳೂ ಸಹ ಅವನ ಜೊತೆಗೆ ಸೇರಲು ಪ್ರಾರಂಭಿಸಿದರು.

ಶಾಲೆಯಲ್ಲಿ ಎಲ್ಲವೂ ಸರಿಯಾಗಿ ನಡೆಯುತ್ತಿತ್ತು, ಆದರೆ ಶಿಕ್ಷಕಿಗೆ ಕೆಲವು ಸಮಸ್ಯೆಗಳು ಇನ್ನೂ ಬಗೆಹರಿದಿರಲಿಲ್ಲ. ಕಿಶನ್ ಶಿಕ್ಷಕಿಯ

ಜೊತೆ ಕೂತು ಊಟ ಮಾಡುವುದನ್ನು ಸಮುದಾಯ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಈ ವಿಚಾರವಾಗಿ ಕೆಲ ಮಕ್ಕಳ ಪಾಲಕರು ಶಿಕ್ಷಕರ ಬಳಿಯೂ ಮಾತನಾಡಿದ್ದರು. ಈ ಸವಾಲನ್ನು ಜಯಿಸಲು, ಶಿಕ್ಷಕಿಯು ಮಕ್ಕಳ ಕಲಿಕೆಯ ಪ್ರಗತಿಯನ್ನು ಪೋಷಕ–ಶಿಕ್ಷಕರ ಸಭೆಗಳಲ್ಲಿ ಹಂಚಿಕೊಳ್ಳಲು ಮತ್ತು ತರಗತಿಯ ಹೊರಗಿನ ಇತರ ಚಟುವಟಿಕೆಗಳಲ್ಲಿ ಪೋಷಕರನ್ನು ತೊಡಗಿಸಿಕೊಳ್ಳಲು ಪ್ರಾರಂಭಿಸಿದರು. ಕಿಶನ್‌ನ ಪ್ರಗತಿ ಮತ್ತು ಉತ್ಸಾಹವನ್ನು ನೋಡಿದ ಪೋಷಕರಿಗೆ ಕಿಶನ್ ಜೊತೆಗೆ ಇತರ ಮಕ್ಕಳು ಸಹ ಉತ್ತಮವಾಗಿ ಕಲಿಯಬಹುದು ಎಂಬ ಭರವಸೆ ಬಂತು.

> **“ಮಕ್ಕಳು ಕಥೆಯಲ್ಲಿ ದುರ್ಬಲ ಎಂದು ತೋರಿಸಲ್ಪಟ್ಟ ಪಾತ್ರಕ್ಕೆ ತಮ್ಮನ್ನು ಸಂಬಂಧೀಕರಿಸಿರುತ್ತಾರೆ ಎಂದು ನಾವು ಅರಿತುಕೊಂಡೆವು.”**

## ಪ್ರತಿದಿನ ಎಲ್ಲಾ ಮಕ್ಕಳನ್ನು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು

ಶಿಕ್ಷಕಿಯು ತನ್ನ ಶಾಲೆಯಲ್ಲಿ ಆಟಕ್ಕೆಂದು ಒಂದು ಗಂಟೆ ಇಟ್ಟುಕೊಂಡಿದ್ದರು. ಶಾಲೆಯಲ್ಲಿ ಮಕ್ಕಳನ್ನು ಜಾವೆಲಿನ್ ಎಸೆತ, ಗುರಿಯಿಟ್ಟು ಗುಂಡು ಎಸೆಯುವುದು, ಗೋಲಿ ಆಡುವುದು ಇತ್ಯಾದಿ ಕ್ರೀಡೆಗಳನ್ನು ಆಡಿಸಲು ಪ್ರಾರಂಭಿಸಿದರು. ಕಿಶನ್ ಈ ಕ್ರೀಡೆಗಳಲ್ಲಿ ಪ್ರವೀಣನಾಗಿದ್ದ. ಅವನು ಜಾವೆಲಿನ್ ಎಸೆತದಲ್ಲಿ ತನ್ನ ತರಗತಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದನು. ಶಾಲೆಯಲ್ಲಿ ಸ್ಥಳೀಯ ಕ್ರೀಡೆಗಳ ನಿರಂತರ ಆಯೋಜನೆ ಮತ್ತು ಕಿಶನ್‌ನ ಉತ್ತಮ ಪ್ರದರ್ಶನದಿಂದಾಗಿ ಶಾಲೆಯ ಇತರ ಮಕ್ಕಳು ಅವನೊಂದಿಗೆ ಬೆರೆಯಲು ಪ್ರಾರಂಭಿಸಿದರು.

ಇದರ ಜೊತೆಗೆ, ಶಿಕ್ಷಕಿಯು ಕುಡುಖ್ ಭಾಷೆಯಲ್ಲಿ ಮಾತ–ನಾಡುವುದನ್ನು ಮತ್ತು ತರಗತಿಯಲ್ಲಿ ಕಥೆಗಳನ್ನು ಹೇಳುವುದನ್ನು ಮುಂದುವರಿಸಿದರು. ಈಗ ಕಿಶನ್‌ನನ್ನು ಸ್ಕೂಲಿನಲ್ಲಿ ನೋಡುವುದಕ್ಕೆ ಸಂತೋಷವಾಗುತ್ತದೆ. ಅವನು ಎಲ್ಲಾ ಮಕ್ಕಳೊಂದಿಗೆ ಬೆರೆಯುತ್ತಿದ್ದಾನೆ, ಅವರೊಂದಿಗೆ ಆಟವಾಡುತ್ತಿದ್ದಾನೆ ಮತ್ತು ಇತರ ಮಕ್ಕಳು ಸಹ ಅವನೊಂದಿಗೆ ಮಾತನಾಡುತ್ತಿದ್ದಾರೆ.


ಕೊನೆ ಟಿಪ್ಪಣಿ: ಕುಡುಖ್ ಇದು ಉತ್ತರ ದ್ರಾವಿಡ ಭಾಷೆಯಾಗಿದ್ದು ಪೂರ್ವ ಭಾರತದ ಕುಡುಖ್ ಮತ್ತು ಕಿಸಾನ್ ಬುಡಕಟ್ಟು ಜನರು ಬಳಸುವ ಭಾಷೆಯಾಗಿದೆ.

---



**ಓಂ ಪ್ರಕಾಶ್ ಸಿಂಗ್** ವಿವಿಧ ಸಂಸ್ಥೆಗಳಲ್ಲಿ ಸುಮಾರು 3 ವರ್ಷಗಳ ಕಾಲ ಸಾಮಾಜಿಕ ಶೈಕ್ಷಣಿಕ ವಿಷಯಗಳ ಕುರಿತು ಶಿಕ್ಷಕರಾಗಿ ಹಾಗೂ ಸಮುದಾಯದೊಂದಿಗೆ ಕೆಲಸ ಮಾಡಿದ್ದಾರೆ. ಅವರು ಡಿಸೆಂಬರ್ 2022ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರಾಗಿದ್ದು, ಜಾರ್ಖಂಡ್ ರಾಜ್ಯದ ಗುಮ್ಲಾ ಜಿಲ್ಲೆಯ ಚೈನ್‌ಪುರ್ ಬ್ಲಾಕ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಶಾಲೆಯಲ್ಲಿ ಮಕ್ಕಳ ಬೋಧನೆ–ಕಲಿಕೆಯ ಪ್ರಕ್ರಿಯೆಗಳನ್ನು ಶಿಕ್ಷಕರ ಸಹಯೋಗದೊಂದಿಗೆ ಬೆಸೆದು ಅವರ ಅನುಭವಗಳನ್ನು ದಾಖಲಿಸುವಲ್ಲಿ ವಿಶೇಷ ಆಸಕ್ತಿ ಇದೆ.
ಸಂಪರ್ಕ: omprakash.singh@azimpremjifoundation.org

ಅನುವಾದ: ಅನುರೂಪಾ | ಪರಿಶೀಲನೆ: ದಿನೇಶ್ ಮಡಗಾಂವ್ಕರ್





# ಶಾಲೆಯ ಮೇಲಿನ ಪೋಷಕರ ನಂಬಿಕೆಯೇ ಮಕ್ಕಳ ಸಮನ್ವಯಕ್ಕೆ ಕಾರಣ

ಗಜಲಕ್ಷ್ಮಿ ಟಿ.



ನನ್ನ ತರಗತಿಯಲ್ಲಿನ ಕೆಲವು ವಿದ್ಯಾರ್ಥಿಗಳು ಬಹಳ ತುಂಟರಾಗಿದ್ದರು. ತರಗತಿಯಲ್ಲಿ ಮತ್ತು ಶಾಲೆಯಲ್ಲಿ ಅವರ ನಡೆವಳಿಕೆಯನ್ನು ಬದಲಾಯಿಸುವುದು ನನಗೆ ಸವಾಲಾಗಿ ಕಂಡಿತು. ಅದರಲ್ಲಿ ಶೇಕಡಾ 50 ರಷ್ಟು ಮಕ್ಕಳು ಇರುಳರ್ (ನಾರಿಕುರಾ ವರ್ಗಳ್) ಸಮುದಾಯಕ್ಕೆ ಸೇರಿದವರಾಗಿದ್ದರು. ಅವರ ಕಲಿಕೆಯ ಪ್ರಕ್ರಿಯೆಯ ಮೇಲೆ ಅವರಿರುವ ಸುತ್ತಮುತ್ತಲಿನ ಪರಿಸರದ ಪ್ರಭಾವವು ಹೆಚ್ಚಿನ ದಿತ್ತು. ಉದಾಹರಣೆಗೆ ನೋಡುವುದಾದರೆ, ಅವರು ಶಾಲೆಯಲ್ಲಿ ಉಗುಳುತ್ತಿದ್ದರು, ಚಾಕು ಅಥವಾ ಬ್ಲೇಡ್ ನಂತಹ ಹರಿತವಾದ ವಸ್ತುಗಳನ್ನು ತಮ್ಮೊಂದಿಗೆ ತರುತ್ತಿದ್ದರು, ಅಸಭ್ಯ ಭಾಷೆಯನ್ನು ಬಳಸುತ್ತಿದ್ದರು ಮುಂತಾದವು. ಆಗ ಅವರಿಗೆ ಬೇರೆಯದೇ ರೀತಿಯ ಕಲಿಕೆಯ ವಿಧಾನದ ಅಗತ್ಯವಿದೆ ಎಂಬುದನ್ನು ಗುರುತಿಸುತ್ತಾ.. ಕಲಿಕೆಯಲ್ಲಿ ಯಶಸ್ವಿಯಾಗುವಂತೆ ಅವರಿಗೆ ಅನುಕೂಲವಾದ ಸೂಕ್ತ ನೆರವನ್ನು ಒದಗಿಸುವತ್ತ ನಾನು ಗಮನ ಹರಿಸಿದೆ.

ಮೊದಲಿಗೆ, ನಾನು ಆ ಮಕ್ಕಳ ಪೋಷಕರೊಂದಿಗೆ ಅವರ ವರ್ತನೆಗಳ ಬಗ್ಗೆ ಮಾತನಾಡಿದೆ. ಮಕ್ಕಳು ಅಸಭ್ಯ ಭಾಷೆ ಬಳಸಿದಾಗ ಅವರಿಗೆ ಪ್ರೋತ್ಸಾಹಿಸದಂತೆ ಮತ್ತು ತಮ್ಮ ಮಕ್ಕಳ ಶಾಲಾ ಚೀಲಗಳಲ್ಲಿ ಹರಿತವಾದ ವಸ್ತುಗಳಿವೆಯೇ ಎಂದು ನಿಯತವಾಗಿ ಹುಡುಕುವಂತೆ ನಾನು ಪೋಷಕರಿಗೆ ಸೂಚಿಸಿದೆ. ನಂತರ ಮಕ್ಕಳ ಚಲನವಲನಗಳನ್ನು ಎಚ್ಚರಿಕೆಯಿಂದ ಗಮನಿಸಲು ಪ್ರಾರಂಭಿಸಿದೆನು. ಇಂತಹ ಮಕ್ಕಳಿಗಾಗಿ, ವಿಶೇಷವಾದ ಚಟುವಟಿಕೆಗಳನ್ನು ವಿನ್ಯಾಸ ಮಾಡಲಾಯಿತು; ಶಿಕ್ಷಣ ಪಡೆಯುವಲ್ಲಿನ ಅವರ ಶಕ್ತಿ-ಸಾಮರ್ಥ್ಯವು ಸಕಾರಾತ್ಮಕ ರೀತಿಯಲ್ಲಿ ಹೊಮ್ಮುವಂತೆ ಈ ಚಟುವಟಿಕೆಗಳನ್ನು ವಿನ್ಯಾಸ ಮಾಡಲಾಗಿತ್ತು. ಅವರಿಗೆ ಕೆಲವು ಜವಾಬ್ದಾರಿಗಳನ್ನು ನೀಡಲಾಯಿತು ಮತ್ತು ಅವರಿಗೆ ಆ ಕೆಲಸಗಳನ್ನು (ಕಲಿಕೆಗೆ ಸಂಬಂಧಿಸಿದ) ಪೂರ್ಣಗೊಳಿಸಲು ಸಹಕಾರ ನೀಡಲಾಯಿತು. ನಿಧಾನವಾಗಿ ಕಾಲಕ್ರಮೇಣ, ಅವರ ನಡೆವಳಿಕೆಯಲ್ಲಿ ಬದಲಾವಣೆಗಳು ಕಂಡುಬಂದವು. ಅವರ ನಡೆವಳಿಕೆ ಮತ್ತು ಭಾವನೆಗಳನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗುವಂತಹ ಕೆಲವು ತಂತ್ರಗಳನ್ನು ನಾನು ಅವರಿಗೆ ಕಲಿಸಿದೆ. ಉದಾಹರಣೆಗೆ, ಕೋಪ ಬಂದಾಗ ಉಸಿರನ್ನು ದೀರ್ಘವಾಗಿ ತೆಗೆದುಕೊಳ್ಳುವುದು ಅಥವಾ ಹತ್ತರವರೆಗೆ ಎಣಿಸುವುದು ಇತ್ಯಾದಿ. ಅತ್ಯಂತ ಪರಿಣಾಮಕಾರಿಯಾಗಿ ಈ ತಂತ್ರಗಳು ಫಲಿಸಿದವು. ಮಕ್ಕಳ ಈ ಸಕಾರಾತ್ಮಕ ನಡೆವಳಿಕೆಗಳಿಗೆ ಪ್ರಶಂಸೆ, ವಿಶೇಷ ಸವಲತ್ತುಗಳು ಅಥವಾ ಸಣ್ಣ ಪ್ರೋತ್ಸಾಹಗಳನ್ನು ಬಹುಮಾನದ ರೀತಿಯಲ್ಲಿ ನೀಡಲಾಯಿತು. ಇದು ಅವರನ್ನು ಮತ್ತಷ್ಟು ಉತ್ತಮವಾಗಿ ವರ್ತಿಸಲು ಪ್ರೇರೇಪಿಸಿತು.

ಇರುಳರ್ (ನಾರಿಕುರಾ ವರ್ಗಳ್) ಸಮುದಾಯದಿಂದ ಬಂದಂತಹ ಈ ಮಕ್ಕಳು ಶಿಕ್ಷಣ ಎಂಬುದನ್ನು ಪಡೆಯಲು, ತಮ್ಮ ವರ್ತನೆಗಳ ಆಯಾಮದ ಹೊರತಾಗಿ, ಇನ್ನೂ ಬಹಳಷ್ಟು ಬೇರೆ ರೀತಿಯ ಸವಾಲುಗಳನ್ನು ಎದುರಿಸಬೇಕಾಗುತ್ತಿತ್ತು. ಇವೆಲ್ಲವೂ ಅವರ ಕಲಿಕೆಯ ಅನುಭವಗಳ ಮೇಲೆ ಬಹಳ ಪ್ರಭಾವ ಬೀರಿದವು. ಇವುಗಳಲ್ಲಿನ ಕೆಲವು ಪ್ರಮುಖ ಸವಾಲುಗಳು ಈ ರೀತಿ ಇದ್ದವು :

- ಈ ಸಮುದಾಯದ ಅನೇಕ ವಿದ್ಯಾರ್ಥಿಗಳು ಕಡಿಮೆ ಆದಾಯದ ಕುಟುಂಬಗಳಿಂದ ಬಂದವರು. ಈ ಕಾರಣಗಳಿಂದಾಗಿ ಅವರಿಗೆ ಶಾಲಾ ಸಾಮಗ್ರಿಗಳು, ಸಾರಿಗೆ ವ್ಯವಸ್ಥೆ (ಮನೆಯಿಂದ ಶಾಲೆಗೆ ಹೋಗಿ-ಬರಲು) ಮತ್ತು ಇತರ ಕಲಿಕೆಗೆ ಸಂಬಂಧಪಟ್ಟ ವಸ್ತು-ಸಾಮಗ್ರಿಗಳ ಖರ್ಚನ್ನು ನಿಭಾಯಿಸಲು ದುಸ್ತರವಾಗುತ್ತಿತ್ತು.

- ಸ್ವಂತ ಮನೆ ಇಲ್ಲದ ಕಾರಣದ ಅಸ್ಥಿರತೆಯಿಂದಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಆಗಾಗ್ಗೆ ವಲಸೆ ಹೋಗುತ್ತಿದ್ದುದರಿಂದ, ಇದು ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗುತ್ತಿತ್ತು. ಇದು ಅವರ ಕಲಿಕೆಯ ವಿಧಾನಗಳನ್ನು ಭಂಗಗೊಳಿಸಿದಂತಾಗುತ್ತಿತ್ತು ಮತ್ತು ಇದರಿಂದ ಅವರಿಗೆ ತಮ್ಮ ಗೆಳೆಯರು ಮತ್ತು ಶಿಕ್ಷಕರೊಂದಿಗೆ ನಿರಂತರ ಸಂವಾದ ಅಥವಾ ಸಂಬಂಧವನ್ನು ಹೊಂದುವುದು ಕಷ್ಟಕರವಾಗಿತ್ತು.

- ವೈಯಕ್ತಿಕ ಅಥವಾ ಕೌಟುಂಬಿಕ ಕಾರಣಗಳಿಂದಾಗಿ ಅವರ ಶಾಲಾ ಹಾಜರಾತಿ ನಿರಂತರವಾಗಿರಲಿಲ್ಲ. ಇದರಿಂದಲೂ ಸಹ ಅವರ ಕಲಿಕೆಯ ಪ್ರಕ್ರಿಯೆಯಲ್ಲಿ ಗಮನಾರ್ಹ ಅಂತರ ಉಂಟಾಗುತ್ತಿತ್ತು. ಹೀಗಾಗಿ ಅವರಿಗೆ ತಮ್ಮ ಸಹಪಾಠಿಗಳೊಂದಿಗೆ ಓದಿನಲ್ಲಿ ಸರಿಸಮವಾಗುವುದರಲ್ಲಿ ಕಷ್ಟವಾಗುತ್ತಿತ್ತು.

- ಅವರ ಹಿನ್ನೆಲೆಯ ಕಾರಣದಿಂದಾಗಿ ಅವರು ಎದುರಿಸಿದ ಕಳಂಕ, ಅವಮಾನಕರ ನಡೆವಳಿಕೆ ಅಥವಾ ತಾರತಮ್ಯದ ವರ್ತನೆಗಳಿಂದ ಅವರಲ್ಲಿ ಪ್ರತ್ಯೇಕತೆಯ ಭಾವನೆ ಮೂಡಲು ಕಾರಣವಾಯಿತು. ಅದು ಅವರ ಸ್ವಾಭಿಮಾನ ಮತ್ತು ಉತ್ಸಾಹದ ಭಾವನೆಗಳ ಮೇಲೆ ತೀವ್ರವಾದ ನಕಾರಾತ್ಮಕ ಪರಿಣಾಮ ಬೀರುತ್ತಿತ್ತು.

- ಅಸ್ಥಿರತೆ, ಆಘಾತ ಅಥವಾ ಒತ್ತಡದ ಅನುಭವಗಳು ಅವರಲ್ಲಿ ಮಾನಸಿಕ ಆರೋಗ್ಯ ಸಂಬಂಧಿತ ಸವಾಲುಗಳಿಂದ ಉಂಟಾಗುತ್ತಿತ್ತು ಮತ್ತು ಇದರಿಂದಾಗಿ ಓದು–ಬರಹದಲ್ಲಿನ ಅವರ ಏಕಾಗ್ರತೆ, ಶಾಲಾ ಹಾಜರಾತಿ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿತ್ತು.

ಡಿಸ್ಲೆಕ್ಸಿಯಾ ಮತ್ತು ಕಲಿಕೆಯ ಇತರ ಅಸ್ಥಿರತೆಗಳಿಂದಾಗಿ ಕೆಲವು ವಿದ್ಯಾರ್ಥಿಗಳಿಗೆ ಓದುವಲ್ಲಿ ಕಷ್ಟವಾಗುತ್ತಿತ್ತು. ಇವುಗಳ ಕಾರಣದಿಂದಾಗಿ, ಪದಗಳನ್ನು ಅರ್ಥಮಾಡಿಕೊಳ್ಳಲು ಗೊಂದಲವಾಗುತ್ತಿತ್ತು. ಇದು ಅವರನ್ನು ಹತಾಶೆಗೆ ದೂಡುತ್ತಿತ್ತು ಮತ್ತು ಅವರ ಉತ್ಸಾಹ ಉಡುಗಿಹೋಗುತ್ತಿತ್ತು. ಅನೇಕ ವಿದ್ಯಾರ್ಥಿಗಳು ಮನೆಕೆಲಸ, ಇತರ ಚಟುವಟಿಕೆಗಳು ಮತ್ತು ಮನೆಕೆಲಸಗಳಿಂದ ತುಂಬಿದ, ಬಿಡುವಿಲ್ಲದ ದಿನಚರಿಗಳನ್ನು ಹೊಂದಿದ್ದರು. ಇದರಿಂದ ಅವರಿಗೆ ಓದಿಕೊಳ್ಳಲು ಸಮಯ ಕಡಿಮೆ ಒದಗುತ್ತಿತ್ತು. ಇದಿಷ್ಟೇ ಅಲ್ಲದೆ, ಗದ್ದಲದ ಸುತ್ತಮುತ್ತಲಿನ ಪ್ರದೇಶಗಳಿಂದಾಗಿ ಓದುವತ್ತ ಗಮನ ಹರಿಸಲು ಕಷ್ಟಕರವಾಗುತ್ತಿತ್ತು. ಕೆಲವು ವಿದ್ಯಾರ್ಥಿಗಳಿಗೆ ಓದಲು ಅನುಕೂಲಕರ ಸ್ಥಳವಿರಲಿಲ್ಲ ಅಥವಾ ಗೆಳೆಯರು ಮತ್ತು ಕುಟುಂಬದಿಂದ ಅವರಿಗೆ ಅಗತ್ಯವಾದ ಪ್ರೋತ್ಸಾಹ ಅಥವಾ ಬೆಂಬಲವಿರುತ್ತಿರಲಿಲ್ಲ.

ಈ ಸವಾಲುಗಳನ್ನು ಎದುರಿಸಲು ಶಿಕ್ಷಕರು, ಪೋಷಕರು ಮತ್ತು ಸಮುದಾಯವನ್ನು ಒಳಗೊಂಡ ಬಹುಮುಖಿ ವಿಧಾನದ ಅಗತ್ಯವಿದೆ. ಆಸಕ್ತಿದಾಯಕ ವಿಷಯವನ್ನು ಒದಗಿಸುವ ಮೂಲಕ, ಬೆಂಬಲ ನೀಡುವ ವಾತಾವರಣವನ್ನು ಬೆಳೆಸುವ ಮೂಲಕ ಮತ್ತು ಅಗತ್ಯವಿರುವಲ್ಲಿ ಪ್ರಜ್ಞಾಪೂರ್ವಕವಾಗಿ ನಡುವೆ ಪ್ರವೇಶಿಸುವ ಮೂಲಕ, ನಾವು ಶಿಕ್ಷಕರೆಲ್ಲ ವಿದ್ಯಾರ್ಥಿಗಳಿಗೆ ಓದುವ ಅಡೆತಡೆಗಳನ್ನು ನಿವಾರಿಸಲು ಸಹಾಯ ಮಾಡಿದ್ದೇವೆ. ಇದು ಅವರಲ್ಲಿ ಯಾವಾಗಲೂ ಓದುತ್ತಿರುವ ಮತ್ತು ಕಲಿಯುತ್ತಲೇ ಇರುವ ಆಸಕ್ತಿಯನ್ನು ಹುಟ್ಟುಹಾಕಿತು.

ನಿರಂತರ ಮಾತುಕತೆ ಮತ್ತು ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ, ನಾನು ಪೋಷಕರನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದೆನು. ಇದು ವಿದ್ಯಾರ್ಥಿಗಳಿಗಾಗಿ ಸಹಾಯಹಸ್ತದ ವ್ಯವಸ್ಥೆಯನ್ನು ಬಲಪಡಿಸಲು ನೆರವು ನೀಡಿ. ಪಾತ್ರಾಭಿನಯ, ಬೊಂಬೆಯಾಟದ ಆಟಗಳು, ನಾಟಕ ಇತ್ಯಾದಿಗಳ ಮೂಲಕ, ಪೀಡಿಸುವುದು (ಮಕ್ಕಳು ಪರಸ್ಪರ ಬೆದರಿಸುವುದು) ತರಹದ ಸಮಸ್ಯೆಗಳ ಬಗೆಗಿನ ಪರಿಹಾರ ಕಂಡುಹಿಡಿದೆವು ಹಾಗೂ ಜೊತೆಗೆ ಪರಸ್ಪರವಾಗಿ ಗೌರವಿಸುವುದಕ್ಕೆ ಪ್ರೋತ್ಸಾಹ ನೀಡಿದೆವು. ಇದು ವಿಷಯಗಳನ್ನು ಹಂಚಿಕೊಳ್ಳುವುದು, ಸರದಿಗಳನ್ನು ಪಾಲಿಸುತ್ತ ಕೆಲಸ ಮಾಡುವುದು ಮತ್ತು ಪರಿಣಾಮಕಾರಿಯಾಗಿ ಸಂವಹನ ನಡೆಸುವಂತಹ ಸಾಮಾಜಿಕ ಕೌಶಲಗಳನ್ನು ಅಭಿವೃದ್ಧಿಪಡಿಸಲು ಮಕ್ಕಳಿಗೆ ಸಹಾಯ ಮಾಡಿತು.

ಪರಿಣಾಮವಾಗಿ, ಈ ಮಕ್ಕಳ ಪೋಷಕರು ಶಾಲೆಯ ಮೇಲೆ ವಿಶ್ವಾಸವಿಡಲು ಶುರು ಮಾಡಿದರು ಮತ್ತು ಅಗತ್ಯವಿದ್ದಾಗ ಶಿಕ್ಷಕರನ್ನು ಭೇಟಿ ಮಾಡಲು ಪ್ರಾರಂಭಿಸಿದರು. ಮಕ್ಕಳ ನಡೆವಳಿಕೆಯ ಸಮಸ್ಯೆಗಳು ಬಹುತೇಕ ಸಂಪೂರ್ಣವಾಗಿ ಪರಿಹಾರವಾಗಿದ್ದವು ಮತ್ತು ಮಕ್ಕಳೆಲ್ಲ ಒಂದು ಸಮೂಹದ ರೀತಿಯಲ್ಲಿ ಒಟ್ಟಾಗಿಬಿಟ್ಟಿದ್ದರು. ಈಗ ಈ ಮಕ್ಕಳಿಗೆ ಜಗಳವಾಡಲು ಮತ್ತು ಅನಗತ್ಯವಾಗಿ ತಿರುಗಾಡಲು ಸಮಯವಿರುತ್ತಿರಲಿಲ್ಲ. ಅವರು ಕಥೆ ಪುಸ್ತಕಗಳನ್ನು ಓದುವುದು, ಚಿತ್ರಕಲೆ, ತೋಟಗಾರಿಕೆ, ಬಣ್ಣ ಮತ್ತು ಕರಕುಶಲತೆಯಂತಹ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು. ಅವರು ತರಗತಿ ಮತ್ತು ಶಾಲಾ ಮಟ್ಟದ ಚಟುವಟಿಕೆಗಳಲ್ಲಿ ಜವಾಬ್ದಾರಿಗಳನ್ನು ವಹಿಸಿಕೊಂಡರು. ಉದಾಹರಣೆಗೆ, ಬೆಳಗ್ಗಿನ ಸಭೆಗಳಲ್ಲಿ ಪಾಲ್ಗೊಳ್ಳುವುದು, ತರಗತಿಯನ್ನು ನಿರ್ವಹಿಸುವುದು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಇತ್ಯಾದಿ. ಇದರ ಜೊತೆಗೆ, ಅವರು ತಮ್ಮ ಶೈಕ್ಷಣಿಕ ಕೆಲಸದ ಬಗ್ಗೆ ಹೆಚ್ಚಿನ ಗಮನ ಹರಿಸಲು ಪ್ರಾರಂಭಿಸಿದರು.

ಗಜಲಕ್ಷ್ಮಿ ಟಿ., ಸವರಯಾಲು ನಾಯಗರ್, ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆ, ಪುದುಚೇರಿ.

# ಶಾಲೆ ಎಲ್ಲರದ್ದೂ ಆಗಿದೆ

**ಕುಸುಮ್ ಲತಾ ಶರ್ಮ**



ಇತರ ಶಾಲೆಗಳಂತೆ, ನಮ್ಮ ಶಾಲೆಯಲ್ಲಿಯೂ, ಎಲ್ಲಾ ಮಕ್ಕಳು ಮಧ್ಯಾಹ್ನದ ಊಟದ ಸಮಯದಲ್ಲಿ ಒಟ್ಟಿಗೆ ಕುಳಿತು ಊಟ ಮಾಡುವುದನ್ನು ಆನಂದಿಸುತ್ತಾರೆ. ಮಕ್ಕಳು ಮತ್ತು ನಾನು, ಇಬ್ಬರೂ ಈ ವ್ಯವಸ್ಥೆಯನ್ನು ನಿರ್ವಹಿಸುತ್ತೇವೆ. ಅಡುಗೆಯ ವ್ಯವಸ್ಥೆ, ಊಟದ ರುಚಿ ಇತ್ಯಾದಿಗಳನ್ನು ನಾನು ನೋಡಿಕೊಳ್ಳುತ್ತೇನೆ. ಎಲ್ಲಾ ಮಕ್ಕಳು ತಮ್ಮ ಕೈಗಳನ್ನು ತೊಳೆದುಕೊಂಡಿದ್ದಾರೆಯೇ ಇಲ್ಲವೇ, ಅಡುಗೆಯನ್ನು ಆರೋಗ್ಯಕರವಾಗಿ ತಯಾರಿಸಲಾಗುತ್ತಿದೆಯೇ ಅಥವಾ ಇಲ್ಲವೇ, ಕುಳಿತುಕೊಳ್ಳುವ ವ್ಯವಸ್ಥೆ ಸರಿಯಾಗಿದೆಯೇ ಇತ್ಯಾದಿಗಳನ್ನು ನೋಡುವುದು ಮಕ್ಕಳ ಕೆಲಸವಾಗಿದೆ. ಈ ಕಾರ್ಯಗಳ ನಿರ್ವಹಣೆಯನ್ನು ನೋಡಿಕೊಳ್ಳುವ ಮಕ್ಕಳ ಜವಾಬ್ದಾರಿಯು ಬದಲಾಗುತ್ತಿರುತ್ತದೆ.

ಒಂದು ದಿನ ನಾನು ಮಕ್ಕಳೊಂದಿಗೆ ವ್ಯವಸ್ಥೆಗಳನ್ನು ನೋಡುತ್ತಿದ್ದೆ ಮತ್ತು ಎಲ್ಲವೂ ಸರಿಯಾಗಿದೆ ಎಂದು ಸಂತೋಷವಾಗುತ್ತಿತ್ತು. ಸಾಮಾನ್ಯವಾಗಿ, ಎಲ್ಲಾ ವ್ಯವಸ್ಥೆಗಳು ಕ್ರಮಬದ್ಧವಾಗಿವೆ ಎಂದು ಕಂಡುಕೊಂಡ ನಂತರ, ನಾವೆಲ್ಲ ಸಹಶಿಕ್ಷಕಿಯರು ಒಟ್ಟಿಗೆ ಕುಳಿತು, ಸ್ವಲ್ಪ ಹೊತ್ತು ಮಾತನಾಡುತ್ತಿದ್ದೆವು ಮತ್ತು ಚಹಾ ಕುಡಿಯುತ್ತಿದ್ದೆವು. ಈ ಮಾತುಕತೆಯ ಸಮಯದಲ್ಲಿ, ನಾವು ಮಕ್ಕಳ ವಿದ್ಯಾಭ್ಯಾಸ, ಅವರ ನಡೆವಳಿಕೆ ಇತ್ಯಾದಿಗಳ ಬಗ್ಗೆಯೂ ಮಾತನಾಡುತ್ತಿದ್ದೆವು. ಮಾತನಾಡುವಾಗ, ಆ ದಿನ ಮಕ್ಕಳು ಕುಳಿತುಕೊಳ್ಳುವ ರೀತಿಯತ್ತ ನನ್ನ ಗಮನ ಹರಿಯಿತು. ಹಾವಾಡಿಗರ ವಸತಿ ಪ್ರದೇಶದಿಂದ ಬರುತ್ತಿದ್ದ ಎಲ್ಲ ಮಕ್ಕಳೂ ಒಂದೇ ಸಾಲಿನಲ್ಲಿ ಕುಳಿತಿರುವುದನ್ನು ನಾನು ನೋಡಿದೆ. ಮುಸ್ಲಿಂ ಕುಟುಂಬಗಳಿಂದ ಬರುವ ಎಲ್ಲಾ ಮಕ್ಕಳು ಒಟ್ಟಿಗೆ, ಮತ್ತು ಇತರ ಮಕ್ಕಳೂ ಬೇರೆಯಾಗಿ ಒಂದೊಂದು ಸಾಲಿನಲ್ಲಿ ಕುಳಿತಿದ್ದಾರೆ. ಮುಂದಿನ 4–5 ದಿನಗಳವರೆಗೆ ನಾನು ಅದನ್ನು ಗಮನಿಸಿದೆ ಮತ್ತು ಮಕ್ಕಳು ಪ್ರತ್ಯೇಕವಾಗಿ ಕುಳಿತುಕೊಳ್ಳುವುದನ್ನು ಕಂಡುಕೊಂಡೆ.

ಈಗ ನನಗೆ ಮಕ್ಕಳ ವರ್ತನೆ ಮತ್ತು ಅವರ ನಡುವಣ ಮಾತುಕತೆಯ ಮೇಲೆ ಹೆಚ್ಚು ಗಮನವಿತ್ತು. ಹೀಗೆ ಮಕ್ಕಳೊಂದಿಗೆ ಮಾತನಾಡುವಾಗ ಸುಮ್ಮನೆ ಅವರಲ್ಲಿ ಒಬ್ಬನನ್ನು ಕೇಳಿದೆ, "ನೀವು ಪ್ರತಿದಿನ, ಹಾವಾಡಿಗರ ಕಾಲೋನಿಯ ಮಕ್ಕಳಿಂದ ಏಕೆ ಪ್ರತ್ಯೇಕವಾಗಿ ಕೂತುಕೊಳ್ಳುತ್ತೀರಿ? ನಿಮ್ಮ ನಡುವೆ ಜಗಳವೇನಾದರೂ ಆಗಿದೆಯಾ?". ಆ ಹುಡುಗ ಹೇಳಿದ "ಇಲ್ಲ ಮೇಡಂ, ಆ ಮಕ್ಕಳು ಬೇರೆ ವರ್ಗಕ್ಕೆ ಸೇರಿದವರು ಮತ್ತು ಚಿಂದಿ ಆಯುವವರು, ಆದ್ದರಿಂದ ನಾವು ಅವರೊಂದಿಗೆ ಕುಳಿತುಕೊಳ್ಳುವುದಿಲ್ಲ". ಇದು ನನ್ನ ಮನಸ್ಸನ್ನು ಚುಚ್ಚಿತು. ನಾನು ಕೇಳಿದೆ, "ನೀವು ಸಮೀರ್ (ಮುಸ್ಲಿಂ ಹುಡುಗ)ನೊಂದಿಗೆ ಕೂಡ ಕುಳಿತುಕೊಳ್ಳುವುದಿಲ್ಲವಲ್ಲ?". ಅವನು ಹೇಳಿದ "ಇಲ್ಲ, ಮೇಡಂ, ನಾವು ಬೇರೆಯಾಗಿಯೇ ಕುಳಿತುಕೊಳ್ಳುತ್ತೇವೆ!". ಇವರೆಲ್ಲರೂ ಆಡುವಾಗ ಒಟ್ಟಿಗೆ ಆಡುತ್ತಾರೆ, ಆದರೆ ಊಟದ ಸಮಯದಲ್ಲಿ ಮಾತ್ರ ಬೇರೆಯಾಗಿ ಕೂರುತ್ತಾರಲ್ಲ ಎಂಬ ಬಗ್ಗೆ ನಾನು ಕೊಂಚ ಯೋಚಿಸಬೇಕಾಯಿತು. ನನಗೆ ಅದು ಸರಿಯೆನಿಸಲಿಲ್ಲ.

ಮರುದಿನ, ಊಟದ ಗಂಟೆ ಬಾರಿಸುತ್ತಿದ್ದಂತೆ, ನಾನು ಮಕ್ಕಳೊಂದಿಗೆ ಅವರು ಊಟಕ್ಕೆ ಹೋಗುತ್ತಿದ್ದ ಸ್ಥಳಕ್ಕೆ ಹೋದೆ. "ಇಂದಿನಿಂದ ನಾನು ನಿಮ್ಮೊಂದಿಗೆ ಊಟ ಮಾಡುತ್ತೇನೆ" ಎಂದು ನಾನು ಹೇಳಿದೆ. ಮಕ್ಕಳು ತುಂಬಾ ಸಂತಸಪಟ್ಟರು. ಆದರೆ ಸ್ವಲ್ಪವೇ ಸಮಯದಲ್ಲಿ ಕೆಲವು ಮಕ್ಕಳ ಮುಖದಲ್ಲಿನ ಸಂತೋಷವು ಸಪ್ಪೆಯಾದಂತಾಯಿತು, ಏಕೆಂದರೆ ನಾನು ಹಾವಾಡಿಗರ ಕಾಲೋನಿಯ ಮಕ್ಕಳ ಸಾಲಿನ ಮಧ್ಯದಲ್ಲಿ ಕುಳಿತಿರುವುದನ್ನು ನೋಡಿದರು. "ನಾನು ಪ್ರತಿದಿನ ಇಲ್ಲಿಯೇ ಊಟ ಮಾಡುತ್ತೇನೆ. ಆದರೆ ನಾಳೆ ನಾನು ಮತ್ತೊಂದು ಸಾಲಿನಲ್ಲಿ ಕುಳಿತುಕೊಳ್ಳುತ್ತೇನೆ" ಎಂದು ನಾನು ಹೇಳಿದೆ. ನಂತರ ನಾನು ನನಗೆ ಒಂದು ತಟ್ಟೆ ನೀಡುವಂತೆ ಅಡುಗೆ ಸಹಾಯಕರಲ್ಲಿ ಹೇಳಿದೆ. ಅವರು ಉಳಿದ ಮಕ್ಕಳಿಗೆ ನೀಡಿದಂತೆ ನನಗೆ ತಟ್ಟೆಯನ್ನು ನೀಡಿದರು ಮತ್ತು ಅವರಿಗೆ ಬಡಿಸಿದಂತೆಯೇ ಅದೇ ಊಟವನ್ನು ನನಗೂ ಬಡಿಸಿದರು. ಊಟದ ನಂತರ, ನಾನು ನನ್ನ ತಟ್ಟೆಯನ್ನು ಎತ್ತಿಕೊಂಡು ಹೋಗಿ, ಅದನ್ನು ತೊಳೆದು ನಿಗದಿತ ಜಾಗದಲ್ಲಿ ಇಟ್ಟೆನು. ಮರುದಿನ ನಾನು ಎರಡನೇ ಸಾಲಿನಲ್ಲಿ ಕುಳಿತೆ ಮತ್ತು ಈ ರೀತಿ ಒಂದು ವಾರದವರೆಗೆ ನಡೆಯಿತು. ಹಾಗೆ ಊಟ ಮಾಡುವಾಗ ನಾನು ಕೆಲವು ಸರಳವಾದ ಮಾತುಕತೆಗಳನ್ನು ನಡೆಸುತ್ತಿದ್ದೆ. ಉದಾಹರಣೆಗೆ, ನಿನ್ನೆ ಸಂಜೆ ಮನೆಯಲ್ಲಿ ಯಾರು ಏನೇನು ಮಾಡಿದರು; ಹೋಮ್ ವರ್ಕ್ ಮಾಡಿದರೋ ಇಲ್ಲವೋ ಮುಂತಾಗಿ.

ಕ್ರಮೇಣ, ಮಕ್ಕಳು ನನ್ನ ಪಕ್ಕದಲ್ಲಿ ಕುಳಿತುಕೊಳ್ಳುವ ಭರದಲ್ಲಿ ಅವರಲ್ಲೇ ಒಟ್ಟೊಟ್ಟಿಗೆ ಕುಳಿತುಕೊಳ್ಳಲು ಪ್ರಾರಂಭಿಸಿದರು. ಈಗ ನಾನು ನೋಡುತ್ತಿದ್ದೆ: ಮಕ್ಕಳು ಜಾತಿ, ಧರ್ಮ ಅಥವಾ ಪ್ರದೇಶಕ್ಕೆ ಅನುಗುಣವಾಗಿಲ್ಲದೆ, ಅವರು ಎಲ್ಲಿ ಸ್ಥಳಾವಕಾಶ ಸಿಕ್ಕರೂ ಕುಳಿತು ಪ್ರೀತಿಯಿಂದ ಊಟ ಮಾಡುತ್ತಿದ್ದರು. ಇದನ್ನು ನೋಡಿ ನನಗೆ ಸಮಾಧಾನವಾಯಿತು. ಅಲ್ಲಿ ಮಕ್ಕಳು ತಾವು ಯಾವ ಜಾತಿ ಅಥವಾ ಧರ್ಮಕ್ಕೆ ಸೇರಿದವರು ಎಂದು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಅಂತೆಯೇ ಅವರೆಲ್ಲರೂ ಒಟ್ಟಿಗೆ ಕಲೆತು ಊಟ ಮಾಡುತ್ತಿದ್ದರು.

ಹ್ಞಾಂ, ಇನ್ನೊಂದು ವಿಷಯ. ಏನೆಂದರೆ ಕೆಲವೊಮ್ಮೆ ಪುಟ್ಟ ಮಕ್ಕಳು ತಮ್ಮ ಮನೆಯಿಂದ ಆಹಾರವನ್ನು ತಂದು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಅವರು ತಮ್ಮ ಕೈಯಿಂದ ಒಂದು ತುತ್ತನ್ನು ನನ್ನ ಬಾಯಿಗೆ ಇಡುತ್ತಿದ್ದರು, ನಾನೂ ಸಂತೋಷದಿಂದ ತಿನ್ನುತ್ತಿದ್ದೆ ಮತ್ತು ನನ್ನ ಆಹಾರವನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದೆ.

ಒಂದು ವಾರದ ನಂತರ, ಎಲ್ಲರೂ ಈಗ ಒಟ್ಟಿಗೆ ಕುಳಿತಿದ್ದಾರೆ ಮತ್ತು ಕುಳಿತುಕೊಳ್ಳಲು ಪ್ರತ್ಯೇಕ ಸಾಲುಗಳಿಲ್ಲ ಎಂದು ನಾನು ಅರಿತುಕೊಂಡೆ. ಅದರ ನಂತರ, ನಾನು 5 ದಿನಗಳ ತರಬೇತಿಯಲ್ಲಿ ಪಾಲ್ಗೊಳ್ಳಲು ಹೊರಟುಹೋದೆ. ಹಿಂತಿರುಗಿದ ನಂತರವೂ, ಮಕ್ಕಳು ಯಾವುದೇ ತಾರತಮ್ಯವಿಲ್ಲದೆ ಒಟ್ಟಿಗೆ ತಿನ್ನುವುದನ್ನು ನೋಡಿ ನನಗೆ ಅತೀವ ಸಂತೋಷವಾಯಿತು.

ಈ ಘಟನೆಯ ಬಗ್ಗೆ ನಾನು ನನ್ನ ಸಹ ಶಿಕ್ಷಕರೊಂದಿಗೆ ಚರ್ಚಿಸಿದೆ. ಸೂಕ್ಷ್ಮ ರೀತಿಯಲ್ಲಿ ನಡೆಯುವ ಇಂತಹ ತಾರತಮ್ಯವನ್ನು ಗುರುತಿಸಲು ಮತ್ತು ಅದನ್ನು ಕಂಡಾಗ ಸಮಸ್ಯೆಯನ್ನಾಗಿ ಮಾಡುವ ಬದಲು, ಮಾತುಕತೆ ಹಾಗೂ ಇಂತಹ ಕ್ರಿಯಾಚಟುವಟಿಕೆಗಳ ಮೂಲಕ ಪರಿಹರಿಸಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಅವರಲ್ಲಿ ಮಾತನಾಡಿದೆನು.

ಕುಸುಮ್ ಲತಾ ಶರ್ಮಾ, ಸರ್ಕಾರಿ ಪ್ರಾಥಮಿಕ ಶಾಲೆ, ಅಜಬ್‌ಪುರ್, ಡೆಹರಾಡೂನ್, ಉತ್ತರಾಖಂಡ್.

---



# ಮಕ್ಕಳು ಹೇಗೆ ಕಲಿಯಲು ಬಯಸುವರೋ ಹಾಗೆ ಕಲಿಸಿ

**ಮಧುಮಾಲತಿ**

ನಾನು ಬೆಂಗಳೂರು ಜಿಲ್ಲಾ ಸಂಸ್ಥೆಯಲ್ಲಿದ್ದಾಗ, ಹಲವಾರು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡುತ್ತಿದ್ದೆ. ಅವುಗಳಲ್ಲೊಂದು, ಪುಟ್ಟೇನಹಳ್ಳಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ಈಗ ಬೆಂಗಳೂರು ಪಬ್ಲಿಕ್ ಶಾಲೆ) ಇದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ದೊಡ್ಡ ಶಾಲೆಯಾಗಿತ್ತು. 4ನೇ ತರಗತಿಯಲ್ಲಿ ಮಧುಮಾಲತಿ ಎಂಬ ಶಿಕ್ಷಕಿ ಕನ್ನಡ ಮಾಧ್ಯಮದಲ್ಲಿ ಎಲ್ಲಾ ವಿಷಯಗಳನ್ನು ಬೋಧಿಸುತ್ತಿದ್ದರು. ಅವರು ಬೋಧನಾ ಕ್ಷೇತ್ರದಲ್ಲಿ ಮೂರು ದಶಕಗಳ ಅನುಭವವನ್ನು ಹೊಂದಿದ್ದರು. ಯಾವ ಮಗುವಿನ ಅಗತ್ಯ ಏನು, ಅವರಿಗೆ ಯಾವ ರೀತಿಯ ಮಾರ್ಗದರ್ಶನದ ಅಗತ್ಯವಿದೆ ಎಂಬುದನ್ನು ಅವರು ಗುರುತಿಸುತ್ತಿದ್ದರು ಮತ್ತು ಅದಕ್ಕೆ ಅನುಗುಣವಾಗಿ ಕಲಿಸಲು ಯೋಜನೆ ತಯಾರು ಮಾಡುತ್ತಿದ್ದರು. ಪ್ರಭಾರ ಮುಖ್ಯ ಶಿಕ್ಷಕಿಯಾಗಿಯೂ ಕೆಲಸ ಮಾಡಿದ ಅನುಭವ ಅವರಿಗೆ ತುಂಬಾ ಸಹಕಾರಿಯಾಗಿತ್ತು.

ವಿದ್ಯಾರ್ಥಿಗಳಿಗೆ ಕಲಿಸುವ ಅತ್ಯಂತ ಉಪಯುಕ್ತ ಮಾರ್ಗಗಳಲ್ಲಿ ಒಂದೆಂದರೆ, ತರಗತಿಯನ್ನು ಮೂರು ಗುಂಪುಗಳಾಗಿ ವಿಂಗಡಿಸುವುದು. ಉದಾಹರಣೆಗೆ, ಬುನಾದಿ ಸಾಕ್ಷರತೆ ಮತ್ತು ಬುನಾದಿ ಸಂಖ್ಯಾಜ್ಞಾನ(ಎಫ್‌ಎಲ್‌ಎನ್) ಮಟ್ಟದಲ್ಲಿನ ವಿದ್ಯಾರ್ಥಿಗಳ ಗುಂಪು, ಮಧ್ಯಮ/ಸಾಮಾನ್ಯ ಮಟ್ಟದಲ್ಲಿನ ವವಿದ್ಯಾರ್ಥಿಗಳ ಗುಂಪು ಮತ್ತು ಹೆಚ್ಚಿನ ಸಾಧನೆ ಮಾಡಿದ ವಿದ್ಯಾರ್ಥಿಗಳ ಗುಂಪು ಹೀಗೆ ವಿಂಗಡನೆ ಮಾಡುತ್ತಿದ್ದರು. ಶಿಕ್ಷಕಿಯು ಕಲಿಸುವ ವಿಧಾನವು ಸುಲಭವಾಗಲೆಂದು ಮಾತ್ರ ಇದನ್ನು ಮಾಡುತ್ತಿದ್ದರು. ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ಕೂರಿಸುತ್ತಿರಲಿಲ್ಲ ಹಾಗೂ ಯಾವುದೇ ವಿದ್ಯಾರ್ಥಿಗಳನ್ನು ಉಳಿದವರಿಗಿಂತ ಕೀಳು ಅಥವಾ ಶ್ರೇಷ್ಠ ಎಂದು ಭಾವಿಸುವಂತೆ ಮಾಡುತ್ತಿರಲಿಲ್ಲ. ಇದರಿಂದ ಆ ಶಿಕ್ಷಕಿಯು ಮಕ್ಕಳ ಕಲಿಕೆಯ ವೇಗವು ಏಕೆ ಒಬ್ಬರಿಂದೊಬ್ಬರಿಗೆ ತೀರಾ ಭಿನ್ನವಾಗಿರುತ್ತದೆ ಎಂಬುದನ್ನು ಚೆನ್ನಾಗಿ ಬಲ್ಲವರಾಗಿದ್ದರು ಮತ್ತು ಅವರು ಮಕ್ಕಳಿಗೆ ಅಗತ್ಯವಿರುವ, ಸಕಾರಾತ್ಮಕವಾಗಿ ಸದೃಢವಾಗಲಿಕ್ಕೆ ಏನು ಅಗತ್ಯವಿದೆಯೋ ಅದಕ್ಕನುಗುಣವಾಗಿ ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಗಳಲ್ಲಿ ತೊಡಗಿಸುತ್ತಿದ್ದರು.

ತರಗತಿ ಬೋಧನೆಗಾಗಿ ಅವರು ಎರಡು ಪ್ರತ್ಯೇಕ ಮತ್ತು ಸರಳ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿದ್ದರು. ಶೈಕ್ಷಣಿಕ ಅವಧಿ ಶುರುವಾದಾಗ ವಿದ್ಯಾರ್ಥಿಗಳಿಗೆ ಮೊದಲ ಪ್ರಶ್ನಾವಳಿಯನ್ನು ನೀಡುತ್ತಿದ್ದರು ಮತ್ತು ಎರಡನೆಯದನ್ನು ಆ ವರ್ಷದ ಕೊನೆಯಲ್ಲಿ ನೀಡುತ್ತಿದ್ದರು. ಈ ಪ್ರಶ್ನಾವಳಿಗಳು ಅವರ ಸ್ವಂತ ಅಧ್ಯಯನಕ್ಕಾಗಿ ಮಾಡಿಕೊಳ್ಳಲ್ಪಟ್ಟಿದ್ದವು. ಇದರಿಂದ ಯಾವ ಮಗುವಿಗೆ ಅಭ್ಯಾಸ ಹಾಳೆಯ ಅಗತ್ಯವಿದೆ, ಯಾರಿಗೆ ಪರಿಹಾರ ಬೋಧನೆಯ (ಪರಿಹಾರ ಬೋಧನೆ ಎಂದರೆ: ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ವೇಗದಲ್ಲಿ ವಿಷಯಗಳನ್ನು ಅರ್ಥಮಾಡಿಕೊಳ್ಳಲು ವೈಯಕ್ತಿಕ ಬೆಂಬಲವನ್ನು ಒದಗಿಸುವುದು) ಅಗತ್ಯವಿದೆ, ಯಾರಿಗೆ ಮುದ್ರಿತ ಪಠ್ಯ ಸಾಮಗ್ರಿಯ ಅಗತ್ಯವಿದೆ ಮತ್ತು ಯಾವ ಮಗುವಿಗೆ ಪೂರಕವಾದ ಅಭ್ಯಾಸ ಹಾಳೆಗಳು ಬೇಕಾಗಿವೆ ಅಥವಾ ಯಾರಿಗೆ ಗ್ರಂಥಾಲಯ ಪುಸ್ತಕಗಳು ಬೇಕಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಇದರಿಂದ ಆ ಶಿಕ್ಷಕಿಗೆ ಸಹಾಯವಾಯಿತು. "ನಾವು ಮಕ್ಕಳಿಗೆ ಹೇಗೆ ಕಲಿಸಲು ಬಯಸುತ್ತೇವೆ ಎಂಬುದಕ್ಕಿಂತ ಅವರು ಹೇಗೆ ಕಲಿಯಲು ಬಯಸುತ್ತಾರೋ ಆ ರೀತಿಯಲ್ಲಿ ಅವರಿಗೆ ಕಲಿಸಬೇಕು. ಮಕ್ಕಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕಲಿಯುತ್ತಾರೆ. ಒಂದುವೇಳೆ ಅವರ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲವನ್ನೂ ನಾವೇ ನಿರ್ಣಯಿಸಿದರೆ, ಎಲ್ಲಾ ಪ್ರಯತ್ನಗಳು ವ್ಯರ್ಥ್ಯವಾಗುತ್ತವೆ" ಎಂದು ಶಿಕ್ಷಕಿಯವರು ಹೇಳುತ್ತಾರೆ.


ಶಿಕ್ಷಕಿಯ ಗ್ರಂಥಾಲಯ ಬಳಕೆಯ ಅವಧಿಯ ನಿಭಾಯಿಸುವಿಕೆ (ಗ್ರಂಥಾಲಯ ಪೀರಿಯಡ್) ಕೂಡಾ ನೋಡಲು ಯೋಗ್ಯವಾದುದಾಗಿತ್ತು. ಶಾಲೆಯಲ್ಲಿ ಒಂದು ದೊಡ್ಡ ಗ್ರಂಥಾಲಯವಿತ್ತು. ಈ ಲೈಬ್ರೆರಿಯು, ರೂಮ್ ಟು ರೀಡ್ ಸಂಸ್ಥೆಯ ಮೂಲಕ ಪ್ರಥಮ್ ಫೌಂಡೇಷನ್ ಪ್ರಕಟಿಸಿದ

ನಾಲ್ಕು ಸ್ತರಗಳ ಮಕ್ಕಳ ಪುಸ್ತಕಗಳನ್ನು ಹೊಂದಿತ್ತು. ಗ್ರಂಥಾಲಯದ ಪೀರಿಯಡ್ ಗಿಂತ ಮೊದಲು, ಶಿಕ್ಷಕಿ ಗ್ರಂಥಾಲಯಕ್ಕೆ ಹೋಗಿ ತನ್ನ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ತೆಗೆದುಕೊಂಡು ಬರುತ್ತಿದ್ದರು. ಅವುಗಳಲ್ಲಿ ಬರಿಯ ಚಿತ್ರಗಳೇ ಇರುವ ಪುಸ್ತಕಗಳು, ಕಡಿಮೆ-ಪಠ್ಯ ಇರುವ ಕಥೆ ಪುಸ್ತಕಗಳು, ಎರಡು ಭಾಷೆಗಳಿರುವ ಪುಸ್ತಕಗಳು, ಕಡಿಮೆ ಚಿತ್ರವಿದ್ದು ಹೆಚ್ಚು ಪಠ್ಯವಿರುವ ಪುಸ್ತಕಗಳು ಮತ್ತು ಚಿತ್ರಗಳೇ ಇರದ ಬರಿಯ ಪಠ್ಯವೇ ಇರುವ ಕಥೆ ಪುಸ್ತಕಗಳು ಹೀಗೆ ವಿಂಗಡಣೆ ಮಾಡಿ ತರುತ್ತಿದ್ದರು. ಗ್ರಂಥಾಲಯದ ಪೀರಿಯಡ್‌ಗಳಲ್ಲಿ, ಅವರು ಕಥೆಯನ್ನು ಗಟ್ಟಿಯಾಗಿ ಓದಿ ಹೇಳುತ್ತಿದ್ದರು. ಮಕ್ಕಳಿಗೆ ಕಥೆ ಅರ್ಥವಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಆ ಕಥೆಯ ಕುರಿತಾಗಿ ಚರ್ಚೆ ನಡೆಸುತ್ತಿದ್ದರು. ಮಕ್ಕಳು ಕಥೆಯನ್ನು ಮತ್ತೆ ಹೇಳಬಹುದಿತ್ತು. ಅಲ್ಲದೇ ಆ ಕಥೆಯ ಕುರಿತು ಚಿತ್ರಗಳನ್ನು ಬರೆದು ಗ್ರಂಥಾಲಯದಲ್ಲಿ ಪ್ರದರ್ಶಿಸಲೂ ಬಹುದಿತ್ತು. ಇದಾದ ನಂತರ, ಮಕ್ಕಳು ಓದಲು ತಮ್ಮ ಆಯ್ಕೆಯ ಯಾವುದೇ ಪುಸ್ತಕವನ್ನು ಆರಿಸಿಕೊಳ್ಳಬಹುದಿತ್ತು. ಗ್ರಂಥಾಲಯದಲ್ಲಿ 'ಬುಕ್ ಡೈರಿ' ಇಡಲು, ಅದರಲ್ಲಿ ತಾವು ಓದಿದ ಪುಸ್ತಕದ ಕುರಿತು ತಮ್ಮ ಆಲೋಚನೆಗಳನ್ನು ಬರೆಯಲು ಮತ್ತು ತಮಗಿಷ್ಟವಾದ ಕಥೆಗಳನ್ನು ಹೇಳಲು ಕೂಡಾ ಮಕ್ಕಳಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. ಈ ರೀತಿಯಾಗಿ, ಇಡೀ ತರಗತಿಯು ಓದುವುದರಲ್ಲಿ ಮಗ್ನವಾಗಿರುವುದನ್ನು ನೋಡುವುದು ಆಹ್ಲಾದಕರ ಅನುಭವವಾಗಿತ್ತು.

ಶಿಕ್ಷಕಿಯ ಪ್ರಕಾರ "ನಮ್ಮ ಶಾಲೆಯಲ್ಲಿ ಅನೇಕ ಉತ್ತಮ ಪುಸ್ತಕಗಳಿವೆ. ಅವುಗಳನ್ನು ಗಾಜಿನ ಕಪಾಟುಗಳಲ್ಲಿ ಬಂದ್ ಮಾಡಿ ಇಡುವುದರಿಂದ ಏನು ಪ್ರಯೋಜನ? ಮಗುವಿಗೆ ಯಾವ ರೀತಿಯ ಪುಸ್ತಕ ಬೇಕು ಎಂಬುದನ್ನು ನಾವು ಅರ್ಥಮಾಡಿಕೊಂಡು ಅವರಿಗೆ ಒದಗಿಸಿದರೆ, ಓದುವ ಆಸೆಯನ್ನು ಅವರಲ್ಲಿ ಬೆಳೆಸಬಹುದು. ಹೀಗೆ ಮಾಡದಿದ್ದಲ್ಲಿ, ಮನೆಯಲ್ಲಿ ಅಂತಹ ಸೌಲಭ್ಯವಿಲ್ಲದ ಮಕ್ಕಳಿಗೆ ನಾವು ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಬೇರೇನೂ ಅಲ್ಲದಿದ್ದರೂ, ಮಕ್ಕಳು ಕನಿಷ್ಠ ಆ ಪುಸ್ತಕಗಳ ಪುಟಗಳನ್ನು ತಿರುವಿಹಾಕಿಯಾದರೂ ನೋಡಲಿ. ಎಲ್ಲ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ. ಕೆಲವು ಮಕ್ಕಳು ಕಥೆಗಳನ್ನು ಕೇಳುತ್ತಾರೆ, ಕೆಲವರು ಚಿತ್ರಗಳನ್ನು ಬಿಡಿಸುತ್ತಾರೆ, ಇನ್ನಿತರರು ಕಥೆಗಳನ್ನು ಹೇಳುತ್ತಾರೆ. ಆದರೂ ಇವೆಲ್ಲವೂ ಅವರ ಕಲಿಕೆಯ ವಿಧಾನದ ಒಂದು ಭಾಗವಾಗಿದೆ. ಹಾಗಾಗಿ ಪ್ರತಿಯೊಬ್ಬರಿಗೂ ಮೇಲಿನವುಗಳಲ್ಲಿ ಕನಿಷ್ಠ ಒಂದರಲ್ಲಾದರೂ ಅವಕಾಶ ಸಿಗಬೇಕು."

ಮಧುಮಾಲತಿ ಸಹಶಿಕ್ಷಕಿ, ಸಾರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಪುಟ್ಟೇನಹಳ್ಳಿ, ಕೋಣನಕುಂಟೆ ಕ್ಲಸ್ಟರ್ ಬೆಂಗಳೂರು.
(ರಾಘವೇಂದ್ರ ಹೇರ್ಳೆ, ಕನ್ನಡ ಉಪಕ್ರಮ ತಂಡ, ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು
ಶಿಕ್ಷಕಿಯ ತರಗತಿ ಅವಲೋಕನ ಮತ್ತು ಅವರೊಂದಿಗೆ ಸಂಭಾಷಣೆ ನಡೆಸಿದ ಆಧಾರದ ಮೇಲೆ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

# ಶಿಕ್ಷಣದಲ್ಲಿ ಸಮನ್ವಯಗೊಳಿಸುವಿಕೆಯು ನಿರಂತರ ಪ್ರಯತ್ನದಿಂದ ಮಾತ್ರ ಸಾಧ್ಯ



**ಪೂನಮ್ ಭಾಟಿಯಾ**

7 ವರ್ಷದ ಒಬ್ಬ ಪುಟ್ಟ ಬಾಲಕಿ ಇದ್ದಳು. ಅವಳು ಎರಡನೇ ತರಗತಿಯಲ್ಲಿ ಓದುತ್ತಿದ್ದಳು ಮತ್ತು ತರಗತಿಯಲ್ಲಿ ಎಲ್ಲರಿಂದ ಪ್ರತ್ಯೇಕವಾಗಿರುತ್ತಿದ್ದಳು. ಅವಳು ಎಲ್ಲರಿಂದ ಅಡಗಿಕೊಳ್ಳಲು ಬಯಸುತ್ತಿದ್ದಂತೆ ಅನಿಸುತ್ತಿತ್ತು. ಏನನ್ನಾದರೂ ಕೇಳಿದಾಗ, ಅವಳು ತನ್ನೊಳಗೆ ಮುದುಡಿ ಹೋಗುತ್ತಿದ್ದಳು ಮತ್ತು ಅವಳ ಕಣ್ಣಾಲಿಗಳು ತುಂಬಿ ಬರುತ್ತಿದ್ದವು. ನಾನು ಶಾಲೆಗೆ ಆಗತಾನೆ ಸೇರಿದ ಹೊಸಬಳಾಗಿದ್ದೆ. ಆಕೆಯನ್ನು ಈ ಭಯಭೀತ ಮನಃಸ್ಥಿತಿಯಲ್ಲಿ ನೋಡುವುದು ನನ್ನಲ್ಲಿ ಚಿಂತೆಯನ್ನುಂಟು ಮಾಡಿತ್ತು.

ನಾನು ಈಗಾಗಲೇ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರೊಂದಿಗೆ ಆ ಮಗುವಿನ ಬಗ್ಗೆ ಮಾತನಾಡಿದೆ ಮತ್ತು ಅವಳೇಕೆ ಇಷ್ಟು ಮೌನಿ, ಗಂಭೀರೆ ಮತ್ತು ಏಕಾಂಗಿಯಾಗಿ ಎಲ್ಲರಿಂದ ಪ್ರತ್ಯೇಕವಾಗಿದ್ದಾಳೆ ಎಂದು ಕೇಳಿದೆ. ಈಕೆಗೇನಾದರೂ ಯಾವುದೇ ದೈಹಿಕ ಅಥವಾ ಮಾನಸಿಕ ಸಮಸ್ಯೆಗಳಿವೆಯೇ? ಎಂದು ಕೇಳಿದೆ. ಆಕೆ ಶಾಲೆಗೆ ಸೇರಿದ ಸಮಯದಿಂದಲೂ ಇದೇ ರೀತಿ ಇದ್ದಾಳೆ ಎಂದು ಮಾತುಕತೆಯಲ್ಲಿ ತಿಳಿದುಬಂದಿತು. ನಾನು ಆಕೆಯ ತಂದೆ-ತಾಯಿಯನ್ನು ಕರೆಸಿ ಅವರೊಂದಿಗೆ ಮಾತನಾಡಿದೆ. ಆ ತಾಯಿ ಸ್ವಲ್ಪ ತೊಂದರೆಯಲ್ಲಿದ್ದಂತೆ ಮತ್ತು ಸ್ವಲ್ಪ ಚಿಕ್ಕಟ್ಟಿನಲ್ಲಿರುವ ಭಾವನೆಯಲ್ಲಿರುವಂತೆ ಹೇಳಿದರು- "ನಾವು ಬಡವರು ಮತ್ತು ಅವಳ ಮೈಬಣ್ಣ ಹೆಚ್ಚು ಕಪ್ಪಾಗಿದೆ. ಯಾರಾದರೂ ಇವಳನ್ನು ಏಕೆ ಮದುವೆಯಾಗುತ್ತಾರೆ?". ನಾನು ಆಶ್ಚರ್ಯದಿಂದ "ನೀವು ಈಗಲೇ ಅವಳ ಮದುವೆಯನ್ನು ಮಾಡಿಬಿಡುತ್ತೀರಾ?" ಎಂದು ಕೇಳಿದೆ. ಅವರು ಹೇಳಿದರು- "ಇಲ್ಲ, ನಾವು ಈಗ ಅದನ್ನು ಮಾಡುವುದಿಲ್ಲ. ಆದರೆ ಯಾವಾಗ ಮಾಡುತ್ತೇವೋ, ಅಲ್ಲಿಯತನಕ ಬಡವರ ಮನೆಯ ಹುಡುಗಿ ಅದರಲ್ಲೂ ಕಪ್ಪುಬಣ್ಣದ ಹುಡುಗಿ, ಒಂದು ಹೊರೆಯೇ ಹೌದು". ಎಂದರು. ಆಗ ನಾನು ಪೋಷಕರಿಗೆ, ಇಂದಿನಿಂದ ನೀವು ನಿಮ್ಮ ಮಗಳ ಮುಂದೆ ಬಣ್ಣ-ರೂಪದ ಬಗ್ಗೆ ಮಾತಾಡಬೇಡಿರೆಂದು ಕೋರುತ್ತ ಅವರ ಮನವೊಲಿಸಿದೆ. ಇನ್ನು ಆಕೆಯ ಮದುವೆಯ ಬಗ್ಗೆ ಹೇಳುವುದಾದರೆ, ಅದು ನಡೆಯಬೇಕಾದಾಗ ನಡೆಯುತ್ತದೆ. ಸದ್ಯಕ್ಕೆ, ನೀವು ಇವಳ ವಿದ್ಯಾಭ್ಯಾಸದ ಬಗ್ಗೆ ಮಾತ್ರ ಗಮನ ಹರಿಸಿರಿ.ಪ್ರತಿ 15 ದಿನಗಳಿಗೊಮ್ಮೆ ಬಂದು ನನ್ನನ್ನು ಭೇಟಿ ಮಾಡುವಂತೆ ಹೇಳಿ ಆಕೆಯ ಪೋಷಕರನ್ನು ಕಳುಹಿಸಿಕೊಟ್ಟೆನು.

ಈಗ ನಾನು ಅವಳೊಂದಿಗೆ ಬೆರೆಯಲು ಶುರು ಮಾಡಿದೆ. ಅವಳ ಮೈಬಣ್ಣ ತುಂಬ ಗಾಢವಾಗಿತ್ತು. ಅವಳ ಮೈಬಣ್ಣದ ಪರಿಣಾಮವು ಆ ಪುಟ್ಟ ಹುಡುಗಿಯ ಮನಸ್ಸಿನಲ್ಲಿ ಈ ಪರಿಯಲ್ಲಿ ಇಷ್ಟೊಂದು ಇರುತ್ತದೆ ಮತ್ತು ಅವಳ ಇಡೀ ವ್ಯಕ್ತಿತ್ವವು ಇದರಿಂದ ಬಾಡಲು ಪ್ರಾರಂಭಿಸುತ್ತದೆ ಎಂದು ನಾನು ಊಹಿಸಿರಲೇ ಇಲ್ಲ. ಆದರೆ ಈ ಸಮಾಜ, ಅದರ ಸುತ್ತಲಿನ ಜನರು, ತಿಳಿದೋ ತಿಳಿಯದೆಯೋ ಈ ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಾರೆ. ಇರಲಿ.. ಆಕೆ ಮಾತನಾಡಲೂ ಸಹ ಬಾಯಿ ತೆರೆಯುತ್ತಿರಲಿಲ್ಲ. ಒಂದು ಮಾತನ್ನೂ ಆಡುತ್ತಿರಲಿಲ್ಲ. ಆಕೆಗೆ ಏನಾದರೂ ಕೇಳಿದರೆ, ಕೇವಲ ಸುಮ್ಮನೆ ಮೌನವಾಗಿ ನೋಡುತ್ತಿದ್ದಳು. ನಿಧಾನವಾಗಿ ನಾನು ಪ್ರತಿದಿನ ಅವಳೊಂದಿಗೆ ಮಾತನಾಡಲು ಪ್ರಾರಂಭಿಸಿದೆ ಮತ್ತು ಇತರ ಸಾಮಾನ್ಯ ಮಕ್ಕಳಂತೆ ಆಕೆಯೊಂದಿಗೂ ನಡೆದುಕೊಳ್ಳಬೇಕು, ಏಕೆಂದರೆ ಅವಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಸಂಪೂರ್ಣವಾಗಿ ಆರೋಗ್ಯಕರವಾಗಿದ್ದಾಳೆ ಎಂದು ಎಲ್ಲಾ ಶಿಕ್ಷಕರಿಗೆ ಹೇಳಿದೆನು. ನಾವು ಇಂತಹ ಮಕ್ಕಳೊಂದಿಗೆ ಸ್ವಲ್ಪ ತಾಳ್ಮೆಯಿಂದ ಕೆಲಸ ಮಾಡಬೇಕಿರುತ್ತದೆ. ಈ ಮಧ್ಯೆ, ನಾನು ಅವಳಿಗೆ ಚಿತ್ರದ ಪುಸ್ತಕಗಳು ಮತ್ತು ಇತರ ಸಣ್ಣ ಪುಸ್ತಕಗಳನ್ನು ತಂದುಕೊಟ್ಟೆನು. ಆ ಪುಟ್ಟ ಹುಡುಗಿ ನಿಧಾನವಾಗಿ, ಕೊಟ್ಟ ಪುಸ್ತಕಗಳು ಮತ್ತು ನಮ್ಮ ಮಾತುಕತೆಗಳ ಮೂಲಕ ಸ್ವಲ್ಪ ಸಹಜವಾದಂತೆ ಕಂಡಳು. ಆಕೆಗೆ ತನ್ನನ್ನು ತಾನು ಸಾಮಾನ್ಯ ಎಂದು ಭಾವಿಸುವುದು ಮತ್ತು ಇತರ ಮಕ್ಕಳೊಂದಿಗೆ ಸಹಜವಾಗಿರುವಂತೆ ಮಾಡುವುದು ನಮಗೆ ದೊಡ್ಡ ಸವಾಲಾಗಿತ್ತು. ಅವಳೂ ಸಹ ಇತರ ಮಕ್ಕಳಂತೆ ಆಡುವುದು, ಜಿಗಿಯುವುದು, ಓದುವುದು, ಮೋಜು, ಕೀಟಲೆ ಎಲ್ಲವನ್ನೂ ಮಾಡಲಿ ಎಂಬಾಸೆ ನಮಗಿತ್ತು. ಅವಳು ಭಯಭೀತಳಾಗಿರದೆ, ಮುದುಡದೆ, ಬಾಡದೆ, ತನ್ನ ಮನದೊಳಗಿನ ಮಾತನ್ನು ಆಡಬೇಕೆಂದು ನಾನು ಬಯಸುತ್ತಿದ್ದೆ.

ನಾನು ಇದರಲ್ಲಿನ ಮನೋವೈಜ್ಞಾನಿಕ ಆಯಾಮವನ್ನು ಅರ್ಥಮಾಡಿಕೊಂಡೆ. ಅದರ ಕುರಿತಾಗಿ ಪುಸ್ತಕಗಳನ್ನು ಓದಿದೆ ಮತ್ತು ಕೆಲವು ಶಿಕ್ಷಣ ತಜ್ಞರು, ಚಿಕಿತ್ಸಕರು ಮುಂತಾದವರೊಂದಿಗೆ ಚರ್ಚಿಸಿದೆ. ಇದರ ನಂತರ, ಶಿಕ್ಷಕರು ನಾವೆಲ್ಲರೂ ಒಟ್ಟಾಗಿ ಯೋಚಿಸಿ ಕೆಲವು ಉಪಾಯಗಳನ್ನು ಕಂಡುಕೊಂಡೆವು. ಉದಾಹರಣೆಗೆ, ತರಗತಿಯ ಚಟುವಟಿಕೆಗಳಲ್ಲಿ, ನಾವು ಎಲ್ಲಾ ಮಕ್ಕಳೊಂದಿಗೆ ಆಟಗಳನ್ನು ಆಡಿದಾಗ, ನಾವು ಅವಳನ್ನು ಸೇರಿಸುತ್ತಿದ್ದೆವು. ನೃತ್ತವನ್ನು ರಚಿಸುವಾಗ ನಾವು ಅವಳ ಕೈಯನ್ನು ಹಿಡಿಯುತ್ತಿದ್ದೆವು. ತರಗತಿಯಲ್ಲಿ ಯಾವುದೇ ಅಗತ್ಯವಿದ್ದರೆ, ಕಥೆಯನ್ನು ಹೇಳಲು ನಾವು ಅವಳನ್ನು ಆಹ್ವಾನಿಸುತ್ತಿದ್ದೆವು ಇತ್ಯಾದಿ. ಅದೇ ಸಮಯದಲ್ಲಿ, ನಾವು ಆಕೆಯ ಹೆತ್ತವರೊಂದಿಗೆ ನಿರಂತರವಾಗಿ ಮಾತನಾಡುತ್ತಿದ್ದೆವು. ಕಾಲಾನಂತರದಲ್ಲಿ, ಅವಳು ತಾನಾಗಿಯೇ ಮುಂದೆ ಬರಲು ಪ್ರಾರಂಭಿಸಿದಳು ಮತ್ತು ಕಡಿಮೆ ಪದಗಳಲ್ಲಿ ಕ್ರಮೇಣ ಮಾತನಾಡಲು ಪ್ರಾರಂಭಿಸಿದಳು.

ಒಂದು ದಿನ ಅವಳು ನನಗೆ ಮೆಲ್ಲನೆಯ ಧ್ವನಿಯಲ್ಲಿ, ಕೆಲವು ಮಕ್ಕಳು ನನ್ನನ್ನು 'ಕರ್ಗಿ' ಎಂದು ಕರೆದು ಗೇಲಿ ಮಾಡುತ್ತಾರೆ ಎಂದು ಹೇಳಿದಳು. ಇದನ್ನು ಹೇಳುತ್ತಿದ್ದಂತೆ ಅವಳ ಕಣ್ಣುಗಳು ಕಣ್ಣೀರಿನಿಂದ ತುಂಬಿದವು. ಅಂತಹ ಮನಸ್ಥಿತಿಯಲ್ಲಿ, ತನ್ನ ಸ್ವಂತ ಅಸ್ತಿತ್ವದೊಂದಿಗೆ ಹೆಣಗಾಡುತ್ತಿರುವಾಗ ಆ ಮಗುವಿನ ಮನಸ್ಸು ಓದುಬರಹದ ಕಡೆಗೆ ಹೇಗಿರಲು ಸಾಧ್ಯ? ಆಗ ನಾನು, "ಯಾರದ್ದೇ ಬಣ್ಣವು ಯಾವುದಾದಾದರೂ ಆಗಿರಬಹುದು. ನೀನು ವಿದ್ಯಾವಂತಳಾದರೆ ಮತ್ತು ಉತ್ತಮ ವ್ಯಕ್ತಿಯಾದರೆ, ಎಲ್ಲರೂ ನಿನ್ನನ್ನು ಬಹಳ ಆದರಿಸುತ್ತಾರೆ. ಆದ್ದರಿಂದ ನೀನು ನಿನ್ನ ಗಮನವನ್ನು ಓದುವುದರ ಮೇಲೆ ಮಾತ್ರ ಕೇಂದ್ರೀಕರಿಸು" ಎಂಬುದಾಗಿ ಮಾತನಾಡಿದೆ. ಅದರ ನಂತರ ಅವಳು ಸಹಜವಾದಳು, ಆಟವಾಡಿದಳು, ಉತ್ಸವದಲ್ಲಿ ನೃತ್ಯ ಮಾಡಿದಳು ಮತ್ತು ಓದುವ ಮತ್ತು ಬರೆಯುವ ಕಡೆಗೆ ಗಮನ ಹರಿಸಲು ಪ್ರಾರಂಭಿಸಿದಳು. ಆದರೆ ಇದೆಲ್ಲವೂ ಒಂದೇ ದಿನದಲ್ಲಿ ಸಂಭವಿಸಲಿಲ್ಲ. ವಾಸ್ತವವಾಗಿ, ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಬಾಲಕಿಯು ಶಾಲೆಯ ಕೊನೆಯ ತರಗತಿಯಲ್ಲಿ (೮ ನೇ ತರಗತಿ) ಉತ್ತೀರ್ಣಳಾಗಿದ್ದಾಳೆ ಮತ್ತು ೯ ನೇ ತರಗತಿಗಾಗಿ ಮತ್ತೊಂದು ಶಾಲೆಗೆ ಸೇರಿದ್ದಾಳೆ. ಈಗ ಅವಳು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಹೋಗಿದ್ದಾಳೆ. ಇನ್ನೂ ಅದರಿಂದ ಆಕೆ ಪೂರ್ತಿ ಹೊರಬಂದಿಲ್ಲವಾದರೂ, ಈಗ ತನ್ನ ಮೇಲೆಯೇ ವಿಶ್ವಾಸ ಹೊಂದುವಷ್ಟು ಮಾಗಿದ್ದಾಳೆ ಎಂಬುದನ್ನು ನೋಡಲು ಸಂತೋಷವಾಗುತ್ತದೆ. ಬಣ್ಣವು ಇಷ್ಟು ಅಡ್ಡಿಯಾಗುತ್ತದೆ ಎಂದು ನನಗೆ ತಿಳಿದಿಲ್ಲ. ಆದರೆ ಶಿಕ್ಷಣವು ಖಂಡಿತವಾಗಿ ಅವಳನ್ನು ಸಶಕ್ತಗೊಳಿಸುತ್ತದೆ ಎಂಬ ಭರವಸೆ ನನಗಿದೆ.

ನಮ್ಮ ಸಮಾಜದೊಳಗಿನ ವೈವಿಧ್ಯಮಯ ಬಣ್ಣಗಳಿಂದ ಅಲಂಕರಿಸಲ್ಪಟ್ಟ ನಮ್ಮ ಮಕ್ಕಳು ಯಾವಾಗ ಮತ್ತು ಯಾವ ಪರಿಸ್ಥಿತಿಯನ್ನು ಎದುರಿಸುವ ಅನಿವಾರ್ಯತೆಗೆ ಒಳಗಾಗುತ್ತಾರೆಂಬುದು ಗೊತ್ತೇ ಆಗುವುದಿಲ್ಲ. ಇಂತಹದರಲ್ಲಿ, 'ಸಮನ್ವಯ' ಎಂಬ ಪದವನ್ನು ಹೇಳುವುದು ತುಂಬಾ ಸುಲಭವೆಂದು ತೋರುತ್ತದೆ, ಆದರೆ ಆ ಕುರಿತು ಚಟುವಟಿಕೆಗಳನ್ನು ಮಾಡಿದಾಗ, ಅನೇಕ ಸಲ ಇದು ಅಸಾಧ್ಯವೆಂದು ಅನಿಸಿಬಿಡುತ್ತದೆ ಮತ್ತು ಕೆಲವೊಮ್ಮೆ ಶಿಕ್ಷಕರಾದ ನಮ್ಮ ಧೈರ್ಯವೂ ಅಡಗಲಾರಂಭಿಸುತ್ತದೆ. ಏಕೆಂದರೆ ಅಂತಹ ಕೆಲಸದ ಫಲಿತಾಂಶಗಳು ಬೇಗನೇ ಕಂಡುಬರುವುದಿಲ್ಲ.

ಪೂನಮ್ ಭಾಟಿಯಾ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಂಬಾಲಾ, ಸಾಂಗಾನೇರ್, ಜಯಪುರ, ರಾಜಸ್ಥಾನ.

ಅನುವಾದ: ಆಶಾ ಸಿಂಗ್ | ಪರಿಶೀಲನೆ: ದಿನೇಶ್ ಮಡಗಾಂವ್ಕರ್

# "ಶಿಕ್ಷಣ ಮತ್ತು ಗೌರವ ಪ್ರತಿಯೊಬ್ಬರ ಹಕ್ಕು" - ಸಂಗೀತಾ ಫರಾಸಿ

ಪ್ರತಿಭಾ ಕಟಿಯಾರ್

ಅತ್ಯಂತ ಬದ್ಧತೆಯಿರುವ ಸಾಮಾಜಿಕ ಕಳಕಳಿ, ಆ ಕಾಳಜಿಗಳನ್ನು ಮುಂದುವರಿಸುವ ಬಲವಾದ ಬಯಕೆ ಮತ್ತು ದಾರಿಯಲ್ಲಿ ಬರುವ ತೊಂದರೆಗಳನ್ನು ಎದುರಿಸುವ ದೃಢನಿಶ್ಚಯವನ್ನು ಹೊಂದಿರುವಾಗ ಅಂತಹ ಮಾನವರ ಜೀವನದ ಕಥೆಯನ್ನು ಹೇಳುವುದು ಯೋಗ್ಯವಾಗುತ್ತದೆ. ಉತ್ತರಾಖಂಡದ ಶ್ರೀನಗರ ಜಿಲ್ಲೆಯ ಗಹಡ್ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಸಂಗೀತಾ ಫರಾಸಿ ಅವರ ಕಥೆಯನ್ನು ಅಂತಹ ಭರವಸೆಯ ಎಳೆಗಳೊಂದಿಗೆ ಇಲ್ಲಿ ಹೆಣೆಯಲಾಗಿದೆ.



ಚಿತ್ರ 1: ಮಕ್ಕಳು ಒಟ್ಟಿಗೆ ಕ್ರೀಡಾ ಚಟುವಟಿಕೆಯನ್ನು ಆನಂದಿಸುತ್ತಿರುವುದು

ಉತ್ತರಾಖಂಡ್ ರಾಜ್ಯದ ಶ್ರೀನಗರ ಪಟ್ಟಣದ ಸುಂದರವಾದ ಗುಡ್ಡಗಾಡಿನ ಮೇಲೆ ಗಹಡ್ ಸರ್ಕಾರಿ ಪ್ರಾಥಮಿಕ ಶಾಲೆ ಇದೆ. ಈ ಶಾಲೆಯಲ್ಲಿ ಒಂದು ಕಥೆಯನ್ನು ಬರೆಯಲಾಗುತ್ತಿದೆ. ಬರೆಯುತ್ತಿರುವವರು ಶಾಲಾ ಶಿಕ್ಷಕಿ ಸಂಗೀತಾ ಫರಾಸಿ. ಶಿಕ್ಷಣ ಮತ್ತು ಗೌರವ ಈ ಕಥೆಯ ಮುಖ್ಯ ಪಾತ್ರಗಳಾಗಿವೆ. ಇದು ನಗರದಲ್ಲಿ ಭಿಕ್ಷೆ ಬೇಡಿ ಜೀವನ ನಡೆಸುವ ಜನರ ಕಾಲೋನಿಯ ಕಥೆಯಾಗಿದೆ. ಅವಮಾನ ಮತ್ತು ತಿರಸ್ಕಾರದ ಉಗ್ರಶಾಪಕ್ಕೆ ಗುರಿಯಾಗಿರುವ ಈ ಸಮುದಾಯದ ಶಿಕ್ಷಣದ ಬಗ್ಗೆ ರಾಜ್ಯವಾಗಲಿ ಅಥವಾ ಸಮಾಜವಾಗಲಿ ಎಂದಿಗೂ ಯೋಚಿಸಿಲ್ಲ. ದಿನಕ್ಕೆ ಎರಡು ಹೊತ್ತಿನ ತುತ್ತಿಗಾಗಿ ಅಲೆದಾಡುತ್ತಿರುವ ಈ ಸಮುದಾಯದ ಅಗತ್ಯಗಳಲ್ಲಿ ಶಿಕ್ಷಣವು ಒಂದು ಕನಸಾಗಿ ಕೂಡ ಇಲ್ಲ. ಸಾಲದ್ದಕ್ಕೆ ಈ ಸಮುದಾಯದ ಮೇಲೆ ಕಳ್ಳತನ, ಜೇಬುಗಳ್ಳತನದ ಆರೋಪಗಳೂ ಮೆತ್ತಿದವು. ಪೋಲೀಸರು ಅವರನ್ನು ಯಾವುದೇ ಸಮಯದಲ್ಲಿ, ಯಾವುದೇ ಆರೋಪದ ಮೇಲೆ ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಆದ್ದರಿಂದ ಇದು, ಓದು ಮತ್ತು ಬರವಣಿಗೆಯಿಂದ ವಂಚಿತರಾದ ಮತ್ತು ಸಮಾಜದ ಗಣ್ಯ ಜಗತ್ತು ಎಂದು ಕರೆಯಲ್ಪಡುವ ಜನರಿಂದ ಶೋಷಣೆಗೆ ಒಳಗಾದ ಈ ಜನರ ನಡುವೆ ಹೋಗಿ, ಅವರ ಸವಾಲುಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅವರ ವಿಶ್ವಾಸವನ್ನು ಗಳಿಸುವ ಒಬ್ಬ ಶಿಕ್ಷಕಿಯ ಕಥೆಯಾಗಿದೆ. ಅಂತೆಯೇ, ಮಕ್ಕಳ ಕೈಗಳನ್ನು ಅಕ್ಷರಶಃ ಹಿಡಿದುಕೊಂಡು, ಅವರನ್ನು ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಕರೆದೊಯ್ಯುವ ಮತ್ತು ಓದುವ ಮತ್ತು ಬರೆಯುವ ಆಸಕ್ತಿಯನ್ನು ಮೂಡಿಸಿದ ಶಿಕ್ಷಕಿ ಮತ್ತು ಆತ್ಮವಿಶ್ವಾಸ ತುಂಬಿದ ಮಕ್ಕಳ ಕಥೆಯೂ ಇದಾಗಿದೆ. ಸಮನ್ವಯಗೊಳ್ಳುವಿಕೆ

ಎಂಬುದನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಕುರಿತು ಕೆಲಸ ಮಾಡಲು ಅಗತ್ಯವಿರುವ ಎರಡು ಮುಖ್ಯ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಿ ಸಂಗೀತಾ ಮೇಡಂ ಅವರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಮೊಟ್ಟಮೊದಲನೆಯದಾಗಿ ಸಮನ್ವಯದ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು. ಅಂದರೆ ಸಮಾಜದಲ್ಲಿ ಮತ್ತು ಶಾಲೆಯಲ್ಲಿ ಬಹಿಷ್ಕಾರಕ್ಕೆ ಕಾರಣವಾಗುವ ಸಮಸ್ಯೆಗಳನ್ನು ನೋಡಲು ಸಾಧ್ಯವಾಗುವುದು. ಎರಡನೆಯದಾಗಿ ಕಾರ್ಯವಿಧಾನ. ಸಮನ್ವಯವು ಹೇಗಿರಬೇಕೆಂದರೆ ಯಾರಿಗೂ ಏನೂ ತಿಳಿಯದಷ್ಟು ಸಹಜವಾಗಿರಬೇಕು ಮತ್ತು ಎಲ್ಲಾ ವೈವಿಧ್ಯಮಯ ಗುರುತುಗಳು ಅವರ ಇರುವಿಕೆಯೊಳಗೆ ಸಮ್ಮಿಳಿತವಾಗಿರಬೇಕು. ಹತ್ತು ವರ್ಷಗಳ ಹಿಂದೆ, ಸಂಗೀತಾ ಮೇಡಂ ಈ ದಿಕ್ಕಿನಲ್ಲಿ ಒಂದು ಹೆಜ್ಜೆ ಇಟ್ಟಾಗ, ಅವರ ಈ ಪ್ರಯಾಣವು ಎಷ್ಟು ಕಾಲ ಇರುತ್ತದೆ, ಎಷ್ಟು ಬದಲಾವಣೆ ತರುತ್ತದೆ ಎಂದು ಅವರಿಗೆ ತಿಳಿದಿರಲಿಲ್ಲ. ಸಮನ್ವಯಕ್ಕಾಗಿ ಮಾಡಿರುವ ಅವರ ಪ್ರಯತ್ನಗಳನ್ನು ಎರಡು ಭಾಗಗಳಾಗಿ ನೋಡಬಹುದು: ಒಂದು ಸಾಮಾಜಿಕ ಬದಲಾವಣೆ, ಇನ್ನೊಂದು ಶೈಕ್ಷಣಿಕ ಪ್ರಯತ್ನ.




ಚಿತ್ರ 2: ಸಾಮಾಜಿಕ-ಭೌಗೋಳಿಕ ಪರಿಸ್ಥಿತಿಗಳು ಶಿಕ್ಷಣದ ಹಾದಿಯಲ್ಲಿ ಅಡ್ಡ ಬರುವುದಿಲ್ಲ

## ಸಾಮಾಜಿಕ ಬದಲಾವಣೆ

**ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವುದು :** ಯಾವುದೇ ಸಮಸ್ಯೆಯನ್ನು ಪರಿಹರಿಸುವುದು ಎಷ್ಟು ಮುಖ್ಯವೋ, ಅದರ ಕಾರಣಗಳನ್ನು ಅರ್ಥಮಾಡಿಕೊಳ್ಳುವುದೂ ಅಷ್ಟೇ ಮುಖ್ಯ. ಶಿಕ್ಷಕಿ ಸಂಗೀತಾ ಅವರು ಮಾಡಿದ್ದು ಇದನ್ನೇ. ತಿರಸ್ಕಾರ ಅವಮಾನ, ಶೋಷಣೆ ಮತ್ತು ಅನ್ಯಾಯದಿಂದ ಹುಟ್ಟುಹಾಕಲ್ಪಟ್ಟ ಬಡತನಕ್ಕೆ ಗುರಿಯಾದ ಜನರ, ಭಿಕ್ಷೆ ಬೇಡುವ ಮೂಲಕ ಜೀವನ ನಡೆಸುತ್ತಿರುವ, ಕೊಳೆಗೇರಿಗಳ ಸರ್ವಜಗತ್ತೇ ಶಿಕ್ಷಕಿಯ ಮುಂದೆ ತೆರೆದುಕೊಂಡಿತು. ಆಗ, ಯಾರಿಗೆ ತನ್ನ ಹೊಟ್ಟೆ ತುಂಬುವ ಮತ್ತು ಗುರುತು-ಗೌರವದ ಅಸ್ತಿತ್ವವೇ ಮೂಲಭೂತ ಪ್ರಶ್ನೆಯಾಗಿದೆಯೋ ಅಂತಹ ಸ್ಥಿತಿಯಲ್ಲಿರು-ವವರ ಜೊತೆಗೆ ಶಿಕ್ಷಣದ ಬಗ್ಗೆ ಮಾತನಾಡುವ ಮೊದಲು ಮಾಡಬೇಕಾದ ಬಹಳಷ್ಟು ಕೆಲಸಗಳಿವೆ ಎಂದು ಮೇಡಂ ಅವರಿಗೆ ಅರ್ಥವಾಯಿತು. ಈ ಸಮುದಾಯವೂ ಸಹ, ತನ್ನ ಬಗ್ಗೆ ಮತ್ತು ತನ್ನ ಮಕ್ಕಳ ಬಗ್ಗೆ ಕನಸು ಕಾಣುವಂತಾಗಬೇಕು ಮತ್ತು ನಮ್ಮ ಮೇಲೆ ಭರವಸೆ ಇಡುವಂತಾಗಬೇಕು – ಅಂತಹ ಕೆಲಸ ಮಾಡಬೇಕೆಂದು ಮೇಡಂ ಅವರಿಗೆ ಅನಿಸಿತು.

**ವಿಶ್ವಾಸ ಗೆಲ್ಲುವುದು :** ಸಮುದಾಯದ ವಿಶ್ವಾಸವನ್ನು ಗಳಿಸುವುದು ದೊಡ್ಡ ಸವಾಲಾಗಿತ್ತು. ಈ ಸಮುದಾಯದ ಅಗತ್ಯವನ್ನು ಅರ್ಥಮಾಡಿಕೊಂಡ ಸಂಗೀತಾ ಅವರು ಅಲ್ಲಿನ ಜನರಿಗೆ ಹೇಳಿದರು, "ನಿಮ್ಮ ಮಕ್ಕಳು ದಿನವಿಡೀ ಭಿಕ್ಷೆ ಬೇಡಿ ಸಂಪಾದಿಸುವಷ್ಟನ್ನು ನಾನೇ ಆರ್ಥಿಕವಾಗಿ ನಿಮ್ಮೆಲ್ಲರಿಗೂ ಸಹಾಯ ಮಾಡುತ್ತೇನೆ. ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರಾರಂಭಿಸಿ". ಅಂತೆಯೇ ಮಕ್ಕಳ ಪೋಷಕರಿಗೆ ದಿನಸಿ ವಸ್ತುಪದಾರ್ಥಗಳನ್ನು ನೀಡಲು ಶುರು ಮಾಡಿದರು. ಅವರದನ್ನು ತಮ್ಮ ವೈಯಕ್ತಿಕ ಹಣದಿಂದ ಮಾಡಿದರು. ಇದೆಲ್ಲವನ್ನೂ ಮಾಡುವ ಮೊದಲು, ಶಿಕ್ಷಕಿಯವರು ಪ್ರತಿದಿನ ಅವರ ವಾಸದಜಾಗಕ್ಕೆ ಹೋಗಿ, ಅವರ ಸಮಸ್ಯೆಗಳನ್ನು ಆಲಿಸಿದರು, ಅರ್ಥಮಾಡಿಕೊಂಡರು ಮತ್ತು ಅವುಗಳನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಲು ಪ್ರಾರಂಭಿಸಿದರು.

**ನಿರಂತರತೆಯು ಒಂದು ಅಡಚಣೆ :** ಶಿಕ್ಷಕಿಯೊಂದಿಗೆ ಮಕ್ಕಳು ನಿಯಮಿತವಾಗಿ ಭೇಟಿ ಮಾಡುವುದು ಈಗಲೂ ಸಮಸ್ಯೆಯಾಗಿತ್ತು. ಅವರು ಭಿಕ್ಷೆ ಬೇಡಲು ಮತ್ತೆ-ಮತ್ತೆ ಹೋಗಿಬಿಡುತ್ತಿದ್ದರು. ಕೆಲವರು ಅಭ್ಯಾಸದಿಂದಾಗಿ ಮತ್ತು ಕೆಲವರು ಪೋಷಕರ ಒತ್ತಡದಿಂದಾಗಿ ಹೀಗೆ ಹೋಗುತ್ತಿದ್ದರು. ಈ ಸಮಸ್ಯೆಯನ್ನು ಬಗೆಹರಿಸಲು ಶಿಕ್ಷಕಿಯು ಎರಡು ರೀತಿಯ ಕೆಲಸ ಮಾಡಿದರು. ಮೊದಲನೆಯದು, ಅವರು ಸಮುದಾಯದ ಜನರಿಗೆ, ವಿಶೇಷವಾಗಿ ತಾಯಂದಿರಿಗೆ, ನಿಯಮಿತವಾಗಿ ಶಾಲೆಗೆ ಬರುವ ಮಗುವಿನ ತಾಯಿಗೆ 'ಅತ್ಯುತ್ತಮ ತಾಯಿ ಪ್ರಶಸ್ತಿ' ನೀಡಲಾಗುವುದು. ಹಾಗೂ ಈ ಪ್ರಶಸ್ತಿಯಲ್ಲಿ ದಿನಸಿ ಮತ್ತು ಬಟ್ಟೆಗಳನ್ನು ಸಹ ನೀಡಲಾಗುವುದು ಎಂದು ಹೇಳಿದರು. ಈ ಎಲ್ಲಾ ಖರ್ಚುಗಳನ್ನು ಸಂಗೀತಾರವರು ಸ್ವಂತವಾಗಿ ಭರಿಸುತ್ತಿದ್ದರು. ಎರಡನೆಯದಾಗಿ, ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಸಂಧ್ಯಾ ಅವರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಯ ಬಗ್ಗೆ ಹೇಳಿದರು. ಆನಂತರ ಇದರ ಪರಿಹಾರದ ಸಲುವಾಗಿ, ಸಬ್ ಇನ್ಸ್ ಪೆಕ್ಟರ್ ಸಂಧ್ಯಾ ಅವರು ಮಕ್ಕಳು ಭಿಕ್ಷೆ ಬೇಡುವುದನ್ನು ಕಂಡಾಗಲೆಲ್ಲಾ, ಅವರಿಗೆ ಪ್ರೀತಿಯಿಂದ ವಿವರಿಸಿ ಶಿಕ್ಷಕಿಯ ಬಳಿಗೆ ಹೋಗುವಂತೆ ಕಳುಹಿಸುತ್ತಿದ್ದರು.

ಈ ಉಪಾಯಗಳಿಂದ ಮಕ್ಕಳು ಶಾಲೆಗೆ ಬರುವ ನಿರಂತರತೆಯು ಹೆಚ್ಚಾಯಿತು. ನಿಸ್ಸಂಶಯವಾಗಿ, ಇದು ಚೆನ್ನಾಗಿ ಓದಲು ಮತ್ತು ಬರೆಯಲು ಮತ್ತು ಇತರ ವಿಷಯಗಳನ್ನು ಕಲಿಯಲು ಅವರ ಅವಕಾಶಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿತು. 'ಬೆಸ್ಟ್ ಮಾಮ್' ನ

ಮೊದಲ ಪ್ರಶಸ್ತಿ ಅಂಕುಲ್ ನ ತಾಯಿಗೆ ಸಿಕ್ಕಿತು. ಅಂಕುಲ್ ಈಗ ತನ್ನ ಪ್ರೌಢಶಾಲಾ ಪರೀಕ್ಷೆಗಳಿಗೆ ತಯಾರಾಗುತ್ತಿದ್ದಾನೆ ಮತ್ತು ತಾನಿರುವ ಕೊಳೆಗೇರಿ ಪ್ರದೇಶದಲ್ಲಿರುವ ಉಳಿದ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹಿಸುತ್ತಾನೆ. ಅಲ್ಲದೇ ಸಹಾಯವನ್ನೂ ಮಾಡುತ್ತಾನೆ.

**ಶಾಲೆಗಾಗಿನ ಸಿದ್ಧತೆ :** ಮಕ್ಕಳ ನಿಯಮಿತವಾದ ಬರುವಿಕೆ ಇನ್ನೂ ಮೇಡಂ ಅವರ ಮನೆಯತನಕ ಮಾತ್ರವಿತ್ತು. ಇಲ್ಲಿ ಮೇಡಮ್ ಮಕ್ಕಳೊಂದಿಗೆ ಕೆಲವು ಆಟಗಳನ್ನು ಆಡುತ್ತಿದ್ದರು, ಕಥೆಗಳನ್ನು ಹೇಳುತ್ತಿದ್ದರು, ಓದು-ಬರಹದ ಮಹತ್ವವನ್ನು ವಿವರಿಸುತ್ತಿದ್ದರು. ಶಾಲಾ ಪ್ರಕ್ರಿಯೆ ಇನ್ನೂ ಆರಂಭವಾಗಿರಲಿಲ್ಲ. ಶಾಲೆಗೆ ಹೋಗುವ ತಯಾರಿಯಾಗಿ, ಅವರಿಗೆ ಪರಸ್ಪರ ತಮ್ಮೊಳಗೆ ಹೇಗೆ ಮಾತಾಡಬೇಕು ಮತ್ತು ಶಿಕ್ಷಕರೊಂದಿಗೆ ಹೇಗೆ ಮಾತನಾಡಬೇಕು ಮತ್ತು ವ್ಯವಹರಿಸಬೇಕು ಎಂಬುದನ್ನು ಕಲಿಸುವುದು ಅಗತ್ಯವಾಗಿತ್ತು. ಅವರಿಗೆ ಶಾಲಾ ಸಮವಸ್ತ್ರ, ಸ್ಕೂಲ್ ಬ್ಯಾಗ್‌ಗಳು, ಪುಸ್ತಕಗಳು, ಬೂಟುಗಳು ಇತ್ಯಾದಿಗಳನ್ನು ವ್ಯವಸ್ಥೆ ಮಾಡಬೇಕಾಗಿತ್ತು. ಇವುಗಳಲ್ಲಿ ವಸ್ತುಗಳನ್ನು ಹೊಂದಿಸುವ ವ್ಯವಸ್ಥೆ ಮಾಡುವುದು ಈಗ ಸ್ವಲ್ಪ ಸುಲಭವಾಗಿತ್ತು, ಏಕೆಂದರೆ ನಗರದ ಕೆಲವು ಜನರು ಈ ಅಭಿಯಾನವನ್ನು ಬೆಂಬಲಿಸಲು ಮುಂದೆ ಬರಲಾರಂಭಿಸಿದ್ದರು. ಆದರೆ ಮುಖ್ಯ ಸಮಸ್ಯೆ ಇದ್ದಿದ್ದು ಅವರು ಹೊಂದಿದ್ದ ನಡೆವಳಿಕೆ ಹಾಗೂ ಭಾಷೆಯಾಗಿತ್ತು. ಮಕ್ಕಳು ಮಾತನಾಡುತ್ತಿರುವಾಗ ಬೈಯ್ಗುಳವನ್ನು ಬಳಸುವುದು ಸಾಮಾನ್ಯವಾಗಿತ್ತು, ಏಕೆಂದರೆ ಮಕ್ಕಳು ಇಂತಹ ಪರಿಸರದಲ್ಲೇ ಪಾಲನೆ-ಪೋಷಣೆ ಪಡೆದಿದ್ದರು. ದೊಡ್ಡವರೊಂದಿಗೆ ಹೇಗೆ ಮಾತನಾಡಬೇಕೆಂದು ಅವರು ತಿಳಿದಿರಲಿಲ್ಲ. ಇದೆಲ್ಲವೂ ಬದಲಾಗದಿದ್ದರೆ, ಶಾಲೆಗೆ ಬರುವ ಉಳಿದ ಮಕ್ಕಳು ಮತ್ತು ಅವರ ಪೋಷಕರು ಸಹ ಇದರಿಂದ ಚಿಂತೆಗೊಳಗಾಗಬಹುದೆಂಬುದು ನಮ್ಮ ಆತಂಕವಾಗಿತ್ತು. "ಆಗ ನನ್ನ ಬಳಿ ಇದಕ್ಕಾಗಿ ಎರಡೇ ವಿಷಯಗಳು ಇದ್ದವು - ಒಂದು ತಾಳ್ಮೆ ಮತ್ತೊಂದು ಪ್ರೀತಿ. ಈ ಬದಲಾವಣೆ ಸಂಭವಿಸಲು ಸಮಯ ಹಿಡಿಯುತ್ತದೆ ಎಂದು ನನಗೆ ತಿಳಿದಿತ್ತು. ಆದರೂ ಒಮ್ಮೊಮ್ಮೆ ನಾನೂ ಸಹ ದುರ್ಬಲಳಾಗುತ್ತಿದ್ದೇನೆ ಎಂಬ ಭಾವನೆ ಬಂದುಬಿಡುತ್ತಿತ್ತು. ಆಗ ಮುಗ್ಧ ಮುಖಗಳು ಕಣ್ಣಮುಂದೆ ಬರುತ್ತಿದ್ದವು. ಇದರಿಂದ ನನ್ನಲ್ಲಿ ಮತ್ತೆ ಶಕ್ತಿ ತುಂಬುತ್ತಿತ್ತು" ಎಂದು ಶಿಕ್ಷಕಿ ಸಂಗೀತಾ ಹೇಳುತ್ತಾರೆ.

> "ಸಂಗೀತಾ ಘರಾಸಿ ಕಠಿಣ ಪರಿಶ್ರಮಿಯಾದ ಶಿಕ್ಷಕಿಯಾಗಿದ್ದಾರೆ. ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಕ್ಕಳನ್ನು ಶಾಲೆಗೆ ಕರೆತರಲು ಅವರು ಪ್ರಯತ್ನಿಸಿದ ರೀತಿಯು, ಇಡೀ ಒಂದು ಸಂಸ್ಥೆಯ ಪರಿಪೂರ್ಣ ಕೆಲಸದಂತೆ ಎಂದು ಹೇಳಬಹುದು. ಮಕ್ಕಳಿಗೆ ತಮ್ಮ ಸ್ವಂತ ಸಂಪನ್ಮೂಲ-ದಿಂದ ಶಾಲೆಗೆ ಹೋಗುವ ಮತ್ತು ಶಾಲೆಯಿಂದ ಬರುವ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಂಜೆ ತಮ್ಮ ಮನೆಯಲ್ಲಿ ಅವರಿಗೆ ಕಲಿಸುವುದು ಸ್ಫೂರ್ತಿದಾಯಕವಾಗಿದೆ. ಅವರು ಕೊಳೆಗೇರಿ ಪ್ರದೇಶದ ಕುಟುಂಬಗಳೊಂದಿಗೆ ನಿರ್ಮಿಸಿದ ಅತ್ಯಾಪ್ತವಾದ ಸಂಬಂಧವು ಮತ್ತು ಅವರ ವಿಶ್ವಾಸವನ್ನು ಗೆದ್ದ ರೀತಿಯು ಸ್ವತಃ ತನ್ನಲ್ಲಿಯೇ ಒಂದು ವಿಶೇಷವಾಗಿದೆ".
>
> - ಅಶ್ವಿನಿ ರಾವತ್, ಕ್ಷೇತ್ರ ಶಿಕ್ಷಣ ಅಧಿಕಾರಿ ಖಿರ್ಸೂ, ಪೌಡಿ ಗಢ್ ವಾಲ್ ಜಿಲ್ಲೆ, ಉತ್ತರಾಖಂಡ್.

**ಜನರು ಏನನ್ನಾದರೂ ಹೇಳಿಯೇ ಹೇಳುತ್ತಾರೆ :** ಒಂದೆಡೆ, ಮಕ್ಕಳನ್ನು ಶಾಲೆಗೆ ಕರೆತರುವುದು, ಕಲಿಸುವುದು, ಇದಕ್ಕಾಗಿ ಅವರನ್ನು ಸಿದ್ಧಪಡಿಸುವುದು, ಅವರ ಕುಟುಂಬದವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು, ಮತ್ತದರ ಪರಿಹಾರ ಹುಡುಕುವುದು ಮತ್ತು ಇವರೆಲ್ಲರ ವಿಶ್ವಾಸ ಗೆಲ್ಲುವುದು ಸವಾಲಾಗಿತ್ತು. ಮತ್ತೊಂದೆಡೆ, "ಇದು ಹುಚ್ಚುತನ" ಎಂದು ಹೇಳುವುದು, ಪ್ರಶಸ್ತಿಗಾಗಿ ಇವೆಲ್ಲವನ್ನು ಮಾಡುತ್ತಿರಬೇಕು ಎಂದು ಸಂಶಯದಿಂದ ಮಾತಾಡುವುದು, ಇದನ್ನೆಲ್ಲ ಹೆಚ್ಚು ದಿನ ಮಾಡುವುದಿಲ್ಲ, ಮನೆಯಿಂದ ಹಣ ತಂದು ಸುರಿದು ಎಷ್ಟು ದಿನ ಮಾಡಲು ಸಾಧ್ಯ, ಇದರ ಹಿಂದೆ ಖಂಡಿತ ಏನೋ ಉದ್ದೇಶವಿದ್ದಿರಬೇಕು ಮುಂತಾಗಿ ಮನನೋಯಿಸಿ ಮಾತಾಡು-ವುದನ್ನು ಕೇಳುವುದೂ ಸವಾಲಾಗಿತ್ತು. ಇವೆಲ್ಲವೂ ಸಂಗೀತಾರವರ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ ಎಂದಲ್ಲ, ಆದರೆ ಖಿನ್ನತೆಗೆ ಒಳಗಾಗದೆ, ಹತಾಶ ಮನದವರಾಗದೆ ಇವೆಲ್ಲವನ್ನೂ ಮೀರಿದರು. ಇದಕ್ಕೆ ಕಾರಣ ಅವರ ಕುಟುಂಬ ದೃಢವಾಗಿ ಬೆಂಬಲಿಸಿ ಜೊತೆಗೆ ನಿಂತಿದ್ದು. ಕೆಲವರು ಹೀಗೆ ಹೇಳುತ್ತಲೇ ಇರುತ್ತಾರೆ ಎಂದುಕೊಂಡು, ಮನಸ್ಸಿನೊಳಗೇ 'ಕುಛ್ ತೋ ಲೋಗ್ ಕಹೇಂಗೆ' ಎಂಬ ಸಿನಿಮಾ ಹಾಡನ್ನು ಗುನುಗುನಿಸಿಕೊಂಡು ಮುಗುಳುನಗುತ್ತ ಕೊಳೆಗೇರಿಯತ್ತ ನಡೆಯುತ್ತಿದ್ದರು.

## ಮಕ್ಕಳಿಗೆ ಹೊಸ ಅನುಭವಗಳ ನೀಡುವಿಕೆ

ಓದುವುದೆನ್ನುವುದು ಕೇವಲ ಶಾಲೆಯಲ್ಲಿ ನಡೆಯುವುದಲ್ಲ, ಕೇವಲ ಪುಸ್ತಕಗಳಿಂದಲೂ ನಡೆಯುವಂಥದ್ದಲ್ಲ ಎಂಬುದು ಸಂಗೀತಾ ಅವರು ಅರಿತಿದ್ದರು ಮತ್ತು ಅವರು ಮಕ್ಕಳ ಜೀವನದಲ್ಲಿ ಹೊಸ ಅನುಭವಗಳನ್ನು ತಂದುಕೊಡಲು ಪ್ರಾರಂಭಿಸಿದರು. ಇಲ್ಲಿಯವರೆಗೆ ಅವರ ಜೀವನದಲ್ಲಿ ಇಲ್ಲದಿದ್ದಂತಹ ಅನುಭವಗಳನ್ನು ಮಕ್ಕಳು ಅನುಭವಿಸಿದರು. ಉದಾಹರಣೆಗೆ, ಹತ್ತಿರದಲ್ಲೇ ಸುತ್ತಮುತ್ತಲಿನ ಸ್ಥಳಗಳನ್ನು ನೋಡಲು ಹೋಗುವುದು, ಅದರ ಬಗ್ಗೆ ಮಕ್ಕಳೊಂದಿಗೆ ಮಾತನಾಡುವುದು, ಕಾರಿನಲ್ಲಿ ಓಡಾಡುವುದು, ಮೇಜು-ಕುರ್ಚಿಯ ಮೇಲೆ ಕುಳಿತುಕೊಂಡು ಊಟ ಮಾಡುವುದು, ಟಿವಿ ನೋಡುವುದು ಇತ್ಯಾದಿ. ಇಂತಹ ಅನುಭವಗಳಲ್ಲಿ ಒಂದೆಂದರೆ ಮಕ್ಕಳನ್ನು ಏನಾದರೂ ತಿನ್ನಿಸಲು ಹೋಟೆಲ್‌ಗೆ ಕರೆದೊಯ್ದದ್ದು. ಯಾವ ಹೋಟೆಲ್‌ಗಳ ಹೊರಬಾಗಿಲಿನಿಂದಲೇ ಓಡಿಸಲ್ಪಡುತ್ತಿದ್ದರೋ ಅಲ್ಲಿಗೆ ಅದೇ ಹೋಟೆಲ್‌ಗೆ ನಿರ್ಭೀತಿಯಿಂದ ಪ್ರವೇಶಿಸುವುದು, ಟೇಬಲ್ ನಲ್ಲಿ ಒಟ್ಟಿಗೆ ಕುಳಿತು ತಿನ್ನುವುದು, ಪಾರ್ಟಿ ಮಾಡುವುದು ಒಂದು ಹೊಸ ಜಗತ್ತನ್ನೇ ತೆರೆದಂತಾಗಿತ್ತು. ಶಿಕ್ಷಕಿ ಹೇಳುತ್ತಾರೆ- "ಆ ದಿನ ನಾನು ಮಕ್ಕಳೊಂದಿಗೆ ಒಂದು ಹೋಟೆಲ್ ನಲ್ಲಿದ್ದೆ. ಜೋರಾಗಿ ಮಳೆ ಸುರಿಯುತ್ತಿತ್ತು. ನಮ್ಮೊಡನಿದ್ದ ಒಂದು ಮಗು ಹೋಟೆಲ್ ಗಾಜಿನ ಈ ಬದಿಯಿಂದ ಹೊರಗಿನ ಮಳೆಯನ್ನು ನೋಡುತ್ತಿತ್ತು. ಸಂಪೂರ್ಣವಾಗಿ ಮೌನವಾಗಿ, ಕಣ್ಣೆವೆ ಮುಚ್ಚದೇ. ನಾನು ಅವನನ್ನು ಕೇಳಿದೆ, "ನೀನು ಏನನ್ನು ಇಷ್ಟು ಗಮನವಿಟ್ಟು ನೋಡುತ್ತಿದ್ದಿ?" ಅವನು

ಕಣ್ಣೀರು ತುಂಬಿದ ಕಣ್ಣಿನಿಂದ ನನ್ನತ್ತ ನೋಡಿ ಹೇಳಿದ, "ನಿಮ್ಮಿಂದಾಗಿಯೇ ನಾವು ಇಂದು ಇಲ್ಲದ್ದೇವೆ. ಇಡೀ ನಗರವು ಮಳೆಯಲ್ಲಿ ಒದ್ದೆಯಾಗುತ್ತಿರುವಾಗ, ನಾವು ಒದ್ದೆಯಾಗುತ್ತಿಲ್ಲ. ಬೇರೆ ಇನ್ಯಾವುದೇ ದಿನವಾಗಿದ್ದರೆ, ಮಳೆಯಿಂದ ತಪ್ಪಿಸಿಕೊಂಡು ನಿಲ್ಲಲೂ ನಮಗೆ ಯಾರೂ ಇಲ್ಲಿ ಅವಕಾಶ ಕೊಡುತ್ತಿರಲಿಲ್ಲ. ಎಲ್ಲರೂ ನಮ್ಮನ್ನು ಬೈದು ಓಡಿಸಿರೋರು". ಆ ಮಗುವಿನ ಕಣ್ಣುಗಳಲ್ಲಿ ಏನಿತ್ತು ಎಂದು ತಿಳಿದಿಲ್ಲ."

ಈಗಲೂ ಆ ಘಟನೆಯ ಉಲ್ಲೇಖ ಮಾತ್ರದಿಂದ ಸಂಗೀತಾ ಮೇಡಂ ಅವರ ಕಣ್ಣುಗಳು ತುಂಬಿ ಬರುತ್ತವೆ.

### ಶೈಕ್ಷಣಿಕ ಪ್ರಯತ್ನಗಳು :

### ಶಾಲೆಗೆ ಹೋಗುವ ಮುನ್ನ, ಶಾಲೆಯಿಂದ ಬಂದ ನಂತರ :

ಮಕ್ಕಳು ಸಂಗೀತಾರವರನ್ನು ಬಿಟ್ಟು ಅಲುಗಾಡುತ್ತಿರಲಿಲ್ಲ. ಪೋಷಕರು ಸಹ ಅವರನ್ನು ನಂಬಲು ಪ್ರಾರಂಭಿಸಿದ್ದರು, ಆದರೆ ಇದಿಷ್ಟೇ ಸಾಕಾಗುತ್ತಿರಲಿಲ್ಲ. ಮಕ್ಕಳು ಶಾಲೆಗೆ ಹೋಗಲಿಕ್ಕಾಗಿ ತಯಾರಿಯೂ ನಡೆಯಬೇಕಿತ್ತು. ಆದ್ದರಿಂದ ಕೆಲವೊಮ್ಮೆ ಅವರಿರುವ ಕೊಳಚೆ ಪ್ರದೇಶಕ್ಕೇ ಹೋಗಿ ಮತ್ತು ಕೆಲವೊಮ್ಮೆ ಮಕ್ಕಳನ್ನೇ ಮನೆಗೆ ಕರೆದು ಅವರ ಓದು-ಬರಹದ ಶಿಕ್ಷಣ ಆರಂಭವಾಯಿತು. ಈ ಅಭಿಯಾನದಲ್ಲಿ, ರೇಖಾ ಮತ್ತು ಅನಿಲ್ ಎಂಬ ಯುವಜನರು ನನ್ನನ್ನು ಬೆಂಬಲಿಸಿದರು ಮತ್ತು ಶಾಂತಿಜಿ ಎಂಬುವರು ನಮ್ಮನ್ನು ಬೆಂಬಲಿಸಿದ್ದಲ್ಲದೆ ಪ್ರೋತ್ಸಾಹವನ್ನೂ ನೀಡಿದರು. ನಾವು ಪ್ರತಿದಿನ ಸ್ವಲ್ಪ ಸಮಯ ಮಕ್ಕಳಿಗೆ ಕಲಿಸುತ್ತಿದ್ದೆವು. ಇದು ದೀರ್ಘಸಮಯದ ಶಿಕ್ಷಣದಿಂದ ಅವರು ಬೇಸರಗೊಳ್ಳಬಾರದೆಂಬ ಕಾರಣಕ್ಕೆ ಸ್ವಲ್ಪ ಸಮಯದ ಪ್ರಯತ್ನವಾಗಿತ್ತು. ಕೆಲವೊಮ್ಮೆ ಅವರ ಆಯ್ಕೆಯ ಆಟಗಳೂ ನಡೆಯುತ್ತಿದ್ದವು, ಕೆಲವೊಮ್ಮೆ ಹಾಡುತ್ತಿದ್ದರು, ಊಟ-ಪಾಠ ನಡೆಯುತ್ತಿತ್ತು, ಹಾಗೆಯೇ ಜೊತೆಗೆ ಪುಸ್ತಕಗಳೂ ಇರುತ್ತಿದ್ದವು. ಕಥೆಗಳು ಮತ್ತು ಕವಿತೆಗಳೊಂದಿಗೆ ಇದು ಪ್ರಾರಂಭವಾಗುತ್ತಿತ್ತು ಹಾಗೂ ಅಕ್ಷರ ಗುರುತಿಸುವುದರಿಂದ ಹಿಡಿದು, ದೈನಂದಿನ ಜೀವನದಲ್ಲಿ ಬಳಸುವ ಗಣಿತದ ಲೆಕ್ಕಕ್ಕೆ ಹೋಗಿ ಸೇರುತ್ತಿತ್ತು. ಆಟವಾಡುತ್ತಲೇ ಯಾರು ಯಾರಿಗೆ ಎಷ್ಟು ಬಾರಿ ತಳ್ಳಿದರು, ಯಾರು ಎಷ್ಟು ಚಪಾತಿ ತಿಂದರು ಎಂಬುದೆಲ್ಲಾ ಸಹ ಗಣಿತವೇ ಎಂದು ತಿಳಿಯುವುದು ಮಕ್ಕಳ ಪಾಲಿಗೆ ಮೋಜಿನ ಸಂಗತಿಯಾಗಿತ್ತು" ಎಂದು ಸಂಗೀತಾ ರವರು ಹೇಳುತ್ತಾರೆ. ಮತ್ತು ಮುಂದುವರಿದು ಹೇಳುತ್ತಾ, "ಮಕ್ಕಳ ಜೀವನ ಬದಲಾಗುತ್ತಿತ್ತು. ಶಾಲಾ ಸಮವಸ್ತ್ರ ಧರಿಸಿದ ಮಕ್ಕಳು ಮೇಡಂ ವ್ಯವಸ್ಥೆ ಮಾಡಿದ ವಾಹನದಲ್ಲಿ ಶಾಲೆಗೆ ಹೋಗುತ್ತಿದ್ದರು. ದಿನವಿಡೀ ಶಾಲೆಯಲ್ಲಿ, ಆಟ-ಹಾರಾಟ, ಓದುವುದು ಮತ್ತು ಮರಳಿ ಮೇಡಂರ ಮನೆಗೆ ಬರುವುದು. ಅಲ್ಲಿ ಅವರಿಗೆ ಸಿಗುತ್ತಿತ್ತು ಘಮ್ಮೆನ್ನುವ ಭಾತ್ (ಅನ್ನ). ಈ ಪ್ರಕ್ರಿಯೆಯು ವರುಷಗಳಿಂದ ಇದೇ ರೀತಿ ನಡೆಯುತ್ತಿದೆ. ಇಂದಿಗೂ, ಶಾಲೆಯ ನಂತರ ಮೇಡಂ ಅವರ ಮನೆಯಲ್ಲಿ ಮಕ್ಕಳನ್ನು ನೋಡಬಹುದು, ಅಲ್ಲಿ ಅವರು ತಿನ್ನುತ್ತಾರೆ, ಓದುತ್ತಾರೆ, ಆಟವಾಡುತ್ತಾರೆ, ಟಿವಿ ನೋಡುತ್ತಾರೆ. ಮಕ್ಕಳ ಶಾಲಾ ಬ್ಯಾಗ್ ಗಳು ಮೇಡಂ ಅವರ ಮನೆಯಲ್ಲೇ ಇರುತ್ತವೆ. ಬೆಳಗ್ಗೆ, ಇಲ್ಲಿಂದಲೇ ಮತ್ತೆ ಮಕ್ಕಳು ಸ್ಕೂಲ್ ಬ್ಯಾಗ್ ಎತ್ತಿಕೊಂಡು ಗಾಡಿಯಲ್ಲಿ ಕುಳಿತು ಶಾಲೆಗೆ ಹೋಗುತ್ತಾರೆ.

ಈ ಮಕ್ಕಳು ಶಾಲೆಗೆ ಬರುವ ಮೊದಲು, ಶಾಲೆಯಲ್ಲಿ ಮಕ್ಕಳ ಸಂಖ್ಯೆ 11 ಆಗಿತ್ತು ಮತ್ತು ಈಗ ಅದು 23 ಆಗಿದೆ. ಆದರೆ ಇಲ್ಲಿ ದಾಖಲಾತಿಯನ್ನು ಹೆಚ್ಚಿಸುವುದನ್ನು ಮೀರಿದ ವಿಷಯವೊಂದಿದೆ. ಮಕ್ಕಳ ನಡುವೆ ಯಾವುದೇ ತಾರತಮ್ಯವಿಲ್ಲ, ಪೋಷಕರಿಗೂ ಯಾವುದೇ ಸಮಸ್ಯೆ ಇಲ್ಲ, ಎಲ್ಲರೂ ಸೇರಿ ಆಪ್ತತೆಯಿಂದ ಒಟ್ಟಿಗೆ ಆಡುತ್ತಾರೆ ಮತ್ತು ಓದಿಕೊಳ್ಳುತ್ತಾರೆ.

**ಸಂದರ್ಭಕ್ಕೆ ಹೊಂದಿಸಿ ಪಾಠ ಮಾಡುವುದು:** ಮೇಡಂ ಪ್ರತಿ ಮಗುವನ್ನು ಅಪ್ಪಿಕೊಳ್ಳುತ್ತಾರೆ, ತಲೆ ನೇವರಿಸುತ್ತಾರೆ ಮತ್ತು ಅವರನ್ನು ಪ್ರೋತ್ಸಾಹಿಸುತ್ತಾರೆ. ಹೌದು, ಇದೇ ಅವರ ಬೋಧನಾ ವಿಧಾನದ ಮೊದಲ ಭಾಗ ಆಗಿದೆ. ತಮ್ಮ ಬೋಧನೆಗೆ ಶಿಶು ಸ್ನೇಹಿ ವಾತಾವರಣವನ್ನು ಸೃಷ್ಟಿಸಲು ಅವರು ಮಾಡಬೇಕಾಗಿರುವುದು ಇದೇ ಆಗಿದೆ. ಶಿಕ್ಷಕಿಯ ಕುರಿತು, ಮಕ್ಕಳು 'ಮೇಡಂ ತಮ್ಮವರು' ಎಂಬ ಆಪ್ತಭಾವನೆಯನ್ನು ಅನುಭವಿಸಲು ಪ್ರಾರಂಭಿಸಿದ್ದಾರೆ ಮತ್ತು ಕಲಿಸಲು ಮತ್ತು ಕಲಿಯಲು ಅವರು ನಡೆಸುವ ಪ್ರತಿಯೊಂದು ಚಟುವಟಿಕೆ-ಯಲ್ಲಿಯೂ ಉತ್ಸಾಹದಿಂದ ಭಾಗವಹಿಸಲು ಪ್ರಾರಂಭಿಸಿದ್ದಾರೆ.



ಚಿತ್ರ 3: ಶಾಲೆಗೆ ಮಕ್ಕಳು ಹೋಗಿ-ಬರಲು ಶಿಕ್ಷಕರು ವ್ಯವಸ್ಥೆ ಮಾಡಿದ ಗಾಡಿ



ಚಿತ್ರ 4: ಕೌಶಲ ಆಧಾರಿತ ಗುಂಪುಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕಿ

ಎಲ್ಲಿಯವರೆಗೆ ನೀವು ಮಕ್ಕಳ ಸಂದರ್ಭವನ್ನು ಅರ್ಥ–ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ, ಕಲಿಕೆ ಮತ್ತು ಬೋಧನೆಯ ನಡುವೆ ಅಂತರವಿದ್ದೇ ಇರುತ್ತದೆ. ಆ ದಿನ ನಾನು ಶಾಲೆಗೆ ಬಂದಾಗ ಇದನ್ನು ಅರಿತುಕೊಂಡೆ. ಎರಡು ಕೊಠಡಿಗಳು ಮತ್ತು ಒಂದು ಸಣ್ಣ ಜಗಲಿಯನ್ನು ಹೊಂದಿರುವ ಶಾಲೆಯಲ್ಲಿ, ಮಕ್ಕಳು ಕ್ರಮಬದ್ಧವಾಗಿ ಪ್ರತ್ಯೇಕ ಗುಂಪುಗಳಲ್ಲಿ ಓದಿಕೊಳ್ಳುತ್ತಿದ್ದರು. ಸಂಗೀತಾರವರು ಮಕ್ಕಳ ನಡುವೆ ಕುಳಿತಿದ್ದರು. ಅವರ ಸುತ್ತಲೂ ವಿಭಿನ್ನ ವೃತ್ತಗಳು ಇದ್ದವು. ಇವರು ವಿಭಿನ್ನ ಕೌಶಲ ಮಟ್ಟಗಳ ಮಕ್ಕಳಾಗಿದ್ದರು ಮತ್ತು ಶಿಕ್ಷಕಿಯು ಬಾರಿ–ಬಾರಿಯಾಗಿ ಎಲ್ಲರೊಂದಿಗೂ ಪಾಠ ಮಾಡುತ್ತಿದ್ದರು. ನಾನು ಮಕ್ಕಳೊಂದಿಗೆ ಸ್ನೇಹ ಬೆಳೆಸಿದೆ. ಕೆಲವು ಮಕ್ಕಳು ನಾಚಿಕೆಪಟ್ಟರು, ಆದರೆ ಬೇಗನೆ ಸ್ನೇಹಿತರಾದರು. ನಾನು 1 ನೇ ತರಗತಿಯ ಮಕ್ಕಳ ಗುಂಪಿನ ಪಕ್ಕದಲ್ಲಿ ಕುಳಿತೆ, ಅವರು ಇನ್ನೂ ಅಕ್ಷರಗಳಿಂದ ಪದಗಳನ್ನು ರಚಿಸಲು ಮತ್ತು ಪದಗಳಲ್ಲಿ ಅಕ್ಷರಗಳನ್ನು ಗುರುತಿಸಲು ಕಲಿಯುತ್ತಿದ್ದರು. ನಾನು ಯೋಚಿಸಿದೆ, ಅವರು ಏನು ಓದುತ್ತಿದ್ದಾರೋ ಅದರ ಬಗ್ಗೆಯೇ ಏಕೆ ಮಾತನಾಡಬಾರದು ಎಂದು. ನಾನು ಕೇಳಿದೆ– "ಸರಿ, 'ಬ' ಅಕ್ಷರದಿಂದ ಇನ್ನೂ ಏನೇನು ಆಗುತ್ತದೆ?" ಮಕ್ಕಳು ಸ್ವಲ್ಪವೂ ತಡ ಮಾಡದೆ ಹೇಳಲು ಪ್ರಾರಂಭಿಸಿದರು... ಬಾರಿಷ್ (ಮಳೆ), ಬಕರಿ (ಮೇಕೆ), ಬೇಕಾರ್ (ಅಗತ್ಯವಿಲ್ಲದ), ಬಕ್ ಬಕ್ (ವಾಚಾಳ), ಬದ್ ಬೂ (ಕೆಟ್ಟ ವಾಸನೆ), ಬೇರ್ (ಬಾರೆಹಣ್ಣು). ನಂತರ 'ಕ' ದಿಂದ ಕಬೂತರ್ ಅಂದರೆ ಪಾರಿವಾಳವು ಎಲ್ಲೋ ಹಾರಿತು ಎಂಬಂತಿತ್ತು. ಮತ್ತೆ ಅವರಿಗೆ ಸಿಕ್ಕ ಪದಗಳು ಹೀಗಿವೆ : ಕೂಡಾಕಚರಾ (ಕಸ), ಕಾನಾ (ಕೃಷ್ಣ), ಕಲ್ಲೂ (ಹೆಸರು), ಕಚೂಮರ್ (ಕುಟ್ಟಿಕುಟ್ಟಿ ಪುಡಿ ಮಾಡುವುದು), ಕದ್ದೂ (ಕುಂಬಳಕಾಯಿ). ಮಕ್ಕಳಿಗೆ ಅವರ ಸನ್ನಿವೇಶದಲ್ಲಿ ಕಲಿಸುವ ಅಗತ್ಯವಿದೆ, ಇದು ಈ ಸಂದರ್ಭಕ್ಕೆ ಸೂಕ್ತವಾಗಿ ಹೊಂದಿಕೊಳ್ಳುತ್ತಿತ್ತು. ನಂತರ ಅವರು ಸ್ವಲ್ಪ ಸಮಯದವರೆಗೆ, ಮಕ್ಕಳು ಕೂಡುವುದು–ಕಳೆಯುವುದು ಅರ್ಥ–ಮಾಡಿಕೊಳ್ಳಲು ಸಾಧ್ಯವಾಗುವಂತಹ, ಗಣಿತ ಪ್ರಶ್ನೆಗಳ ಕುರಿತು ಮೌಖಿಕವಾಗಿ ಮಾತುಕತೆ ಮಾಡಿದರು. ನಂತರ ನಾನು ಮಕ್ಕಳನ್ನು ಕೇಳಿದೆ, "ನಿಮಗೆ ತಿನ್ನಲು ಏನು ಇಷ್ಟ?" ಮಕ್ಕಳು ಹೇಳಿದರು... ಬೇಳೆಸಾರು, ಅನ್ನ, ಭಾತ್–ದಾಲ್, ದಾಲ್–ಭಾತ್, ಖಿಚಡಿ ಇದಿಷ್ಟೇ.

### ಟಿಎಲ್ಎಂ ಬಳಸುವುದು ಮತ್ತು ಪರಸ್ಪರ ಕಲಿಯುವುದು :

ಸಂಗೀತಾ ಮೇಡಂ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು, ಇದರಲ್ಲಿ ಮಕ್ಕಳು ಓದುವುದನ್ನು ಇಷ್ಟಪಡಲಿ ಎಂಬ ಉದ್ದೇಶವಿತ್ತು. ಅವರು ಕ್ರೀಡಾ ಚಟುವಟಿಕೆಗಳು, ಆಟಿಕೆಗಳು ಮತ್ತು ಟಿಎಲ್ಎಂ ಇತ್ಯಾದಿಗಳನ್ನು ಬಳಸುವ ಮೂಲಕ ಕಲಿಸಲು ಪ್ರಾರಂಭಿಸಿದರು. ಪದಗಳಿಗೆ ಏನನ್ನಾದರೂ ಸೇರಿಸಬೇಕಿತ್ತು, ಏನನ್ನಾದರೂ ತೆಗೆಯಬೇಕಿತ್ತು, ಕೆಲವು ಪದಗಳ ಆಟವನ್ನು ಆಡುವುದಿತ್ತು, ಕಥೆಗಳನ್ನು ಕೇಳಬೇಕಿತ್ತು, ಕಥೆಗಳನ್ನು ಹೇಳಬೇಕಿತ್ತು ಮತ್ತು ಹೀಗೆ ಓದುವ ಮತ್ತು ಬರೆಯುವ ಕಡೆಗೆ ಅವರು ಸಾಗಬೇಕಿತ್ತು. ಪ್ರೋತ್ಸಾಹದಿಂದ ಮ್ಯಾಜಿಕ್ಕೇ ನಡೆಯುತ್ತಿತ್ತು ಅಲ್ಲಿ. ಒಂದು ಮಗು ಏನನ್ನಾದರೂ ಕಲಿತರೆ, ಅದೇ ವಿಷಯವನ್ನು ಇನ್ನೊಬ್ಬರಿಗೆ ಕಲಿಸಲು ಆ ಮಗುವಿಗೆ ಸೂಚಿಸಲಾಗುತ್ತಿತ್ತು. ಅವರು ಪರಸ್ಪರ ಕಲಿಯುತ್ತಿರುವ ವಿಭಿನ್ನ ಕೌಶಲಗಳನ್ನು ಹೊಂದಿರುವ ಮಕ್ಕಳ ಗುಂಪುಗಳನ್ನಾಗಿ ರಚಿಸಿದರು. ಓದುವುದು ಮತ್ತು ಬರೆಯುವುದು ಹೊರೆಯಾಗದೆ ಆನಂದದಿಂದ ಪಾಲ್ಗೊಳ್ಳುವಂತೆ ಮಾಡಲು ಅವರು ಸಂಪೂರ್ಣ ಗಮನ ನೀಡಿದರು. ಎಲ್ಲಾ ಸಮಸ್ಯೆಗಳ ನಡುವೆ, ಮಕ್ಕಳಿಗೆ ಈಗ ಸಹಜವಾಗಿ ಓದಲು ಮತ್ತು ಬರೆಯಲು ಸಾಧ್ಯವಾಗುತ್ತಿದೆ.



ಚಿತ್ರ 5 ಮತ್ತು 6: ಮಕ್ಕಳು ಮತ್ತು ಶಿಕ್ಷಕರು ಮಾಡಿರುವ ಟಿಎಲ್ಎಂ

## ಶಾಲಾ ಸಂಪನ್ಮೂಲಗಳು ಮತ್ತು ಶಾಲೆಯ ನಿರ್ವಹಣೆಯ ಜವಾಬ್ದಾರಿ ಮಕ್ಕಳದು :

ಶಾಲೆಯಲ್ಲಿ ಎರಡು ಕೊಠಡಿಗಳಿವೆ. ರೀಡಿಂಗ್ ರೂಮ್ ಮತ್ತು ಗ್ರಂಥಾಲಯವಾಗಿರುವ ಒಂದು ಕೊಠಡಿಯಲ್ಲಿ, ವಯಸ್ಸಿನ ಆಧಾರದ ಮೇಲೆ ಮಕ್ಕಳಿಗಾಗಿ ವಿವಿಧ ಆಸಕ್ತಿದಾಯಕ ಪುಸ್ತಕಗಳಿವೆ. ಮಕ್ಕಳಿಗೆ ಓದಲು ಉತ್ತಮ ಆಸನ ವ್ಯವಸ್ಥೆ ಇದೆ. ಗ್ರಂಥಾಲಯವನ್ನು ಮಕ್ಕಳೇ ನಡೆಸುತ್ತಾರೆ. ಎರಡನೇ ಕೋಣೆಯಲ್ಲಿ, ಹಿಂದಿ, ಇಂಗ್ಲಿಷ್, ಗಣಿತ, ಇವಿಎಸ್ ಮುಂತಾದ ವಿಷಯಗಳ ಕುರಿತಾಗಿ ವಿವಿಧ ಟಿಎಲ್‌ಎಂಗಳು, ಪ್ರಾಜೆಕ್ಟ್‌ಗಳು, ಮಾದರಿಗಳು ಇಲ್ಲಿವೆ. ಇವನ್ನೆಲ್ಲ ಮಕ್ಕಳು ಮೇಡಂ ಅವರೊಂದಿಗೆ ಸೇರಿ ಒಟ್ಟಾಗಿ ವಿಂಗಡಿಸುವ ಕೆಲಸ ಮಾಡಿದ್ದಾರೆ. ಮಕ್ಕಳು ಇವುಗಳ ಬಗ್ಗೆ ವಿವರವಾಗಿ ಮಾತನಾಡಬಲ್ಲರು ಮತ್ತು ಪ್ರಾಜೆಕ್ಟಿನ ಅರ್ಥವೇನೆಂದು ವಿವರಿಸಬಲ್ಲರು. ಈ ಕೋಣೆಯಲ್ಲಿ ಒಂದು ಕಂಪ್ಯೂಟರ್ ಇದೆ, ಅದನ್ನು ಮಕ್ಕಳೇ ಸ್ವಯಂ ಬಳಸುತ್ತಾರೆ. ಯಾವ ಲಿಂಕ್ ನಲ್ಲಿ ಯಾವ ಕಥೆ ಸಿಗುತ್ತದೆ ಮತ್ತು ಎಲ್ಲಿ ಪ್ರಶ್ನೋತ್ತರಗಳ ಕುರಿತು ವಿವರವಿರುತ್ತದೆ ಎಂಬುದೂ ಅವರಿಗೆ ತಿಳಿದಿದೆ. ಅವರು ಕಂಪ್ಯೂಟರ್ ಅನ್ನು ಪೂರ್ಣ ವಿಶ್ವಾಸದಿಂದ ಬಳಸುತ್ತಾರೆ ಮತ್ತು ದತ್ತಾಂಶಗಳಿಗಾಗಿ ಮೇಡಂ ಬಳಿಯಿಂದ ಅವರ ಫೋನ್ ತರುತ್ತಾರೆ. ಮೇಡಮ್ ಅವರ ಫೋನ್ ಮೇಲಂತೂ ಮಕ್ಕಳದೇ ಅಧಿಕಾರವಿದ್ದಂತೆ ಆಗಿದೆ. ಮೇಡಂ ಕೂಡ ಸಂತೋಷದಿಂದ ತಮ್ಮ ಫೋನ್ ಅನ್ನು ಅವರಿಗೆ ಕೊಟ್ಟುಬಿಡುತ್ತಾರೆ.

ಈ ರೀತಿಯಾಗಿ, ಪರಸ್ಪರ ಸಮನ್ವಯದೊಂದಿಗೆ ಶಿಕ್ಷಣವನ್ನೂ ನೀಡಲಾಗುತ್ತದೆ ಅಂತೆಯೇ ಆಟವನ್ನೂ ಸಹ. ಈ ಕಾರಣದಿಂದಲೇ ಶಾಲೆಯ 4 ಮಕ್ಕಳು ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಸಮಾಜದಲ್ಲಿ ವಿವಿಧ ರೀತಿಯ ತಾರತಮ್ಯ ಇರಬಹುದು, ಆದರೆ ಅದಕ್ಕೆ ಶಾಲೆಯಲ್ಲಿ ಸ್ಥಾನವಿಲ್ಲ. ಎಲ್ಲಾ ಮಕ್ಕಳು ಪರಸ್ಪರ ಆಟವಾಡುತ್ತಾರೆ, ಓದುತ್ತಾರೆ ಮತ್ತು ಒಟ್ಟಾಗಿ ಊಟ ಮಾಡುತ್ತಾರೆ. ಅವರು ಪರಸ್ಪರ ಕಲಿಯಲು ಸಹಾಯವನ್ನೂ ಮಾಡುತ್ತಾರೆ. ಇದಕ್ಕಾಗಿ, ಮೇಡಂ ಮಕ್ಕಳ ವಿವಿಧ ಗುಂಪುಗಳನ್ನು ರಚಿಸಿದ್ದಾರೆ. ಇವರಲ್ಲಿ ಎಲ್ಲಾ ರೀತಿಯ ಅಸ್ಮಿತೆ ಇರುವ ಮಕ್ಕಳು ಸೇರಿದ್ದಾರೆ. ಅಧ್ಯಯನ ಮಾಡುವುದಕ್ಕಾಗಿ ಇರುವ ಗುಂಪುಗಳು ಮತ್ತು ಕ್ರೀಡಾ ಗುಂಪುಗಳು ಬೇರೆಯಾಗಿವೆ. ಶಾಲಾ ಪರಿಸರದಲ್ಲಿ ತಾರತಮ್ಯಕ್ಕೆ ಅವಕಾಶವಿಲ್ಲವೇ ಇಲ್ಲ ಎಂಬುದು ಇಲ್ಲಿ ಮಹತ್ವಪೂರ್ಣ ಅಂಶವಾಗಿದೆ. ಮಕ್ಕಳು ಹೇಳುವುದರಿಂದ ಕಲಿಯುವುದಕ್ಕಿಂತ ಹೆಚ್ಚಾಗಿ ಗಮನಿಸುವ ಮೂಲಕ ಕಲಿಯುತ್ತಾರೆ ಮತ್ತು ಅದನ್ನು ಇಲ್ಲಿ ಬಹಳ ಸ್ಪಷ್ಟವಾಗಿ ಕಾಣಬಹುದು.

"ಇಲ್ಲಿ ಒಂದು ತೋಟವಿದೆ. ಅದನ್ನು ಮಕ್ಕಳೇ ಮಾಡಿದ್ದಾರೆ" ಎಂದು ಹೇಳುತ್ತಾ ಸಂಗೀತಾ ಅವರು ನನ್ನ ಮುಂದೆ ಒಂದು ಲೋಟ ಕೆಂಪು ಚಹಾವನ್ನು ಚಾಚಿದರು. "ಇದರಲ್ಲಿ ಮಕ್ಕಳು ನೆಟ್ಟ ಮರದ ನಿಂಬೆಹಣ್ಣು ಇದೆ" ಎಂದು ಮೇಡಂ ಹೇಳುವಾಗ ಅವರ ಕಣ್ಣುಗಳು ಮುಗುಳ್ನಗುತ್ತಿದ್ದವು ಮತ್ತು ಎದುರಲ್ಲಿ ಮಕ್ಕಳ ಕೈಗಳಿಂದ ನೆಡಲ್ಪಟ್ಟ ಮತ್ತು ಪೋಷಿಸಿ ಸಂರಕ್ಷಿಸಲ್ಪಟ್ಟ ನಿಂಬೆಹಣ್ಣಿನ ಗಿಡವೂ ಮುಗುಳುನಗುತ್ತಿತ್ತು.

**ಪ್ರತಿ ಮಗುವಿಗೂ ಗೌರವವಿದೆ :** ಮಕ್ಕಳನ್ನು ಅಥವಾ ಅವರ ಕುಟುಂಬಗಳನ್ನು 'ಈ ಮಕ್ಕಳು' 'ಅವರ ಕುಟುಂಬಗಳು' 'ಅವರು' 'ಈ ಜನರು' ಎಂದು ಸಂಬೋಧಿಸುವುದು ಸರಿಯಲ್ಲ. ಮಕ್ಕಳು ಏನನ್ನೂ ಹೇಳುವುದಿಲ್ಲ, ಆದರೆ ಅವರು ಅದನ್ನು ಕೇಳಿಸಿಕೊಳ್ಳುತ್ತಾರೆ. ಅದರಿಂದ ಮನಸ್ಸಿಗೆ ನೋವಾಗುತ್ತದೆ. ಇಂತಹ ಸಂಬೋಧನೆಗಳು ಅವರನ್ನು ಬೇರೆಯವರು ಎಂಬುದಾಗಿ ವರ್ಗೀಕರಿಸುತ್ತವೆ. ಸಂಗೀತಾಜಿ ಸ್ವತಃ ಅಂತಹ ಮಾತುಗಳನ್ನು ಆಡುವುದಿಲ್ಲ ಅಥವಾ ಹಾಗೆ ಮಾತಾಡಲು ಯಾರಿಗೂ ಬಿಡುವುದೂ ಇಲ್ಲ. ಮಕ್ಕಳ ಬಗ್ಗೆ ಗೌರವದ ಕೊರತೆಯನ್ನು ಅವರು ಸ್ವಲ್ಪವೂ ಸಹಿಸುವುದಿಲ್ಲ.

**ಓದಲು ಮತ್ತು ಬರೆಯಲು ವಿಶೇಷ ಸಹಕಾರ :** ಓದುವ ಮತ್ತು ಬರೆಯುವ ಈ ಪ್ರಯಾಣವು ಸುಲಭವಾಗಿರಲಿಲ್ಲ. ಆದರೆ ಈ ಎಲ್ಲಾ ಮಕ್ಕಳು ಯಾರಿಗಿಂತಲೂ ಕಡಿಮೆಯಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಸಹ ಮುಖ್ಯವಾಗಿತ್ತು. ಅವರು ಜನರೊಂದಿಗೆ ಸೇರಿ ಮಕ್ಕಳಿಗೆ ವಿಶೇಷವಾಗಿ ಕಲಿಸಲು ಪ್ರಾರಂಭಿಸಿದರು. ಈ ಮುನ್ನಡೆಯು ಒಂದು ಸೇತುವೆಯಂತೆ ಕೆಲಸ ಮಾಡಿತು. ಕ್ರಮೇಣ, ಮಕ್ಕಳ ಕಲಿಕೆಯು ವೇಗವನ್ನು ಪಡೆಯಲು ಪ್ರಾರಂಭಿಸಿತು. ಕೋವಿಡ್ ಬಂದಾಗ, ಕಲಿಕೆಯ ಈ ಪ್ರಕ್ರಿಯೆಯ ಸರಪಳಿ ಮುರಿಯುತ್ತದೆ ಎಂಬಂತೆ ತೋರಿತು. ಆದರೆ ಕೋವಿಡ್ ಸಮಯದಲ್ಲಿಯೂ ಮಕ್ಕಳು ಎಲ್ಲಾ ನಿಯಮಗಳನ್ನು ಅನುಸರಿಸಿ ಓದುವುದನ್ನು ಮತ್ತು ಬರೆಯುವುದನ್ನು ಮುಂದುವರಿಸಿದರು.

**ಬಹಳಷ್ಟು ಹೇಳುತ್ತಿದ್ದ ನಗರ :** "ನನ್ನ ಕೆಲಸವನ್ನು ಹುಚ್ಚು ಎಂದು ಕರೆಯುತ್ತಿದ್ದ ನಗರ ಅಥವಾ ಕೆಲವರು ಇದು ಹೆಚ್ಚು ಕಾಲ ಉಳಿಯುವುದಿಲ್ಲ ಎಂದು ಭಾವಿಸಿದ್ದಾಗ, ಅಥವಾ ನಾನು ಇದೆಲ್ಲವನ್ನೂ ಪ್ರಶಂಸೆ ಅಥವಾ ಪ್ರತಿಫಲಗಳನ್ನು ಪಡೆಯುವ ಉದ್ದೇಶದಿಂದ ಮಾಡುತ್ತಿದ್ದೇನೆ ಎಂದು ಭಾವಿಸಿದ್ದ ನಗರ, ನಿಧಾನವಾಗಿ ಈ ಎಲ್ಲಾ ತಪ್ಪು ತಿಳುವಳಿಕೆಗಳಿಂದ ಪರದೆಯನ್ನು ತೆಗೆದುಹಾಕಿತು. ಅಲ್ಲದೆ ಆಗ ಅನುಮಾನಿಸುತ್ತಿದ್ದವರು ಈಗ ನನಗೆ ಬೆಂಬಲ ನೀಡುತ್ತಿದ್ದಾರೆ. ಮಕ್ಕಳು ನನಗೆ ತುಂಬಾ ಪ್ರೀತಿಯನ್ನು ನೀಡಿದ್ದಾರೆ, ನನ್ನ ಮೇಲೆ ತುಂಬಾ ವಿಶ್ವಾಸವಿಟ್ಟಿದ್ದಾರೆ. ನೆನೆದರೆ ನನ್ನ ಕಣ್ಣುಗಳು ಒದ್ದೆಯಾಗುತ್ತವೆ. ಒಮ್ಮೆ ನಾನು ಅನಾರೋಗ್ಯಕ್ಕೆ ಒಳಗಾದಾಗ ಮತ್ತು ಶಾಲೆಗೆ ಹೋಗಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾಗ, ಮಕ್ಕಳು ಶಾಲೆಯಿಂದ ಬಂದ ನಂತರ ಬಹಳ ಚೆನ್ನಾಗಿ ನನ್ನ ಆರೈಕೆ ಮಾಡಿದರು. ಒಬ್ಬರು ಜ್ಯೂಸ್ ತರುತ್ತಿದ್ದರು, ಮತ್ತೊಬ್ಬರು ಹಣ್ಣನ್ನು ಕತ್ತರಿಸಿ ತಿನ್ನಿಸುತ್ತಿದ್ದರು, ಇನ್ನೊಬ್ಬರು ನನಗಾಗಿ ಚಹಾ ಮಾಡುತ್ತಿದ್ದರು" ಎಂದು ಸಂಗೀತಾ ಮೇಡಂ ಅನಿಸಿಕೆ ಹಂಚಿಕೊಳ್ಳುತ್ತಾರೆ. ಯಾರಾದರೂ ತಮ್ಮ ಸ್ವಂತ ಹಣವನ್ನು ಖರ್ಚು ಮಾಡುವ ಮೂಲಕ ತಮ್ಮ ಸಮಯ ಮತ್ತು ಶಕ್ತಿಯನ್ನು ಏಕೆ ಖರ್ಚು ಮಾಡುತ್ತಾರೆ ಎಂಬ ಪ್ರಶ್ನೆ ಜನರ ಮನಸ್ಸಿನಲ್ಲಿ ಬರಬಹುದು. ಆದರೆ ಮಕ್ಕಳು ವಿದ್ಯಾಭ್ಯಾಸ ಮಾಡುವುದನ್ನು ನೋಡುವಾಗ ನಾನು ಪಡೆಯುವ ತೃಪ್ತಿ ಬೆಲೆ ಕಟ್ಟಲಾಗದಂತಹದ್ದು. ನನ್ನ ಕುಟುಂಬವು ನನ್ನನ್ನು ಬೆಂಬಲಿಸದಿದ್ದರೆ ಅದು ನನ್ನ ಪಾಲಿಗೆ ಸುಲಭವಾಗಿರುತ್ತಿರಲಿಲ್ಲ. ಹಾಗೆಯೇ ಶಾಲೆಯ ಉಳಿದ ಸಹೋದ್ಯೋಗಿಗಳೂ ಸಹ ಬಹಳ ಬೆಂಬಲ ನೀಡಿದ್ದಾರೆ. "ಮೇಡಂ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ಪ್ರಯತ್ನಗಳನ್ನು ನಾನು

ಸಾಧ್ಯವಾದಷ್ಟು ಬೆಂಬಲಿಸಲು ಪ್ರಯತ್ನಿಸುತ್ತೇನೆ" ಎಂದು ಪ್ರಾಂಶುಪಾಲರಾದ ಲಲಿತ್ ಮೋಹನ್ ಬಿಷ್ಟ್ ಹೇಳುತ್ತಾರೆ. ಅಡುಗೆ ಸಹಾಯಕಿಯವರಾದ ಸುನೀತಾ ದೇವಿ "ಮೇಡಂ ಎಲ್ಲಾ ಮಕ್ಕಳನ್ನು ತನ್ನ ಸ್ವಂತ ಮಕ್ಕಳಂತೆ ಪ್ರೀತಿಸುತ್ತಾರೆ ಮತ್ತು ಎಲ್ಲರ ಬಗ್ಗೆ ಬಹಳ ಕಾಳಜಿ ವಹಿಸುತ್ತಾರೆ" ಎಂದು ಹೇಳುತ್ತಾರೆ.

**ಸ್ವಲ್ಪ ವಿಷಾದ, ಸ್ವಲ್ಪ ಭರವಸೆ :** ಎಲ್ಲವೂ ಚೆನ್ನಾಗಿ ನಡೆಯುತ್ತಿದೆ, ಆದರೆ ಇನ್ನೂ ಸರಿಯಾಗಿ ಆಗಬೇಕಾಗಿರುವುದು ಬಹಳಷ್ಟಿದೆ. ಹತ್ತಿರದ ಶಾಲೆಗಳು ಈ ಮಕ್ಕಳಿಗೆ ದಾಖಲಾತಿ ನೀಡಿ ಸೇರಿಸಿಕೊಳ್ಳುವುದಿಲ್ಲ. ಇನ್ನೂ ಶಾಲೆಗೆ ಹೋಗದೆ ಇರುವ ಮಕ್ಕಳು ಹೆಚ್ಚಿದ್ದಾರೆ. ಸ್ವಲ್ಪವಾಗಿ ಸಹಾಯ ಮಾಡುವುದು ಅಥವಾ ಹೊಗಳುವುದು ಬೇರೆ. ಆದರೆ ಮಕ್ಕಳನ್ನು ಹೃದಯಕ್ಕೆ ಆಪ್ತವಾಗಿಸಿ ಸ್ವೀಕರಿಸಿಕೊಳ್ಳುವುದು ಹೆಚ್ಚು ಮಹತ್ವಪೂರ್ಣವಾದುದು. ಅದರಲ್ಲಿ ಕೊರತೆ ಈಗಲೂ ಇದೆ. ನನ್ನ ಬಳಿಯ ಮಕ್ಕಳು ಐದನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಬಹುದಾಗಿದೆ. ಆದರೆ ಅವರ ಪ್ರಯಾಣವು ದೀರ್ಘವಾದುದಾಗಿದೆ. ಶಿಕ್ಷಣವು ಅವರ ಹಕ್ಕು ಎಂದು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳುವುದು ಮುಖ್ಯವಾದುದು. ನನ್ನ ಶಾಲೆಯ ಅಂಕುಲ್ ಎಂಬ ವಿದ್ಯಾರ್ಥಿಯು ಬೇರೆ ಶಾಲೆಯಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದ ಕಾರಣ, ಹತ್ತನೇ ತರಗತಿಯ ಖಾಸಗಿ ಪರೀಕ್ಷೆ ಪಡೆಯುತ್ತಿರುವುದು ನನಗೆ ತುಂಬಾ ವಿಷಾದ ತಂದಿದೆ. ಅವನಿಗೆ ಶಾಲೆಯಲ್ಲಿ ದಾಖಲಾತಿ ಸಿಗಬೇಕಾಗಿತ್ತು. ಅಂಕುಲ್ ತನ್ನ ವಿದ್ಯಾಭ್ಯಾಸ ಪೂರ್ಣಗೊಳಿಸಬೇಕೆಂದು ನಾನು ಬಯಸುತ್ತೇನೆ. ಅವನು ಉದ್ಯೋಗವನ್ನು ಪಡೆಯಬೇಕು. ಇದರಿಂದ ಈ ಸಮುದಾಯಕ್ಕೆ, ಈ ಜಗತ್ತಿನಲ್ಲಿ ಇತರರಿಗಿರುವಷ್ಟೇ ಪಾಲು ತಮಗೂ ಇದೆ ಎಂಬ ಭರವಸೆ ಬರುತ್ತದೆ. ಸ್ವಾಭಿಮಾನದಿಂದ ಗಳಿಸುವ ಊಟದ ತುತ್ತು ಒಂದು ಕನಸಲ್ಲ. ಇದು ಕೇವಲ ಆರಂಭವಷ್ಟೆ, ಇನ್ನು ದೀರ್ಘ ಪ್ರಯಾಣ ಮುಂದಿದೆ

"ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಶಿಕ್ಷಣವು ಏಕೈಕ ಮತ್ತು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಸಮತೆಯ ಮತ್ತು ಸಮನ್ವಯದ ಶಿಕ್ಷಣವು ಕೇವಲ ಅತ್ಯಗತ್ಯ ಗುರಿ ಮಾತ್ರವಲ್ಲ, ಬದಲಾಗಿ ಸಮತೆಯ ಮತ್ತು ಸಮನ್ವಯದ ಸಮಾಜವನ್ನು ನಿರ್ಮಿಸಲು ಇದೊಂದು ಅತ್ಯಗತ್ಯ ಹೆಜ್ಜೆಯಾಗಿದೆ. ಇಂತಹ ವ್ಯವಸ್ಥೆಯೊಂದರಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಕನಸು ಕಾಣಲು, ಅಭಿವೃದ್ಧಿ ಹೊಂದಲು ಮತ್ತು ದೇಶದ ಹಿತಾಸಕ್ತಿಗೆ ಕೊಡುಗೆ ನೀಡಲು ಅವಕಾಶ ಸಿಗುವಂತಾಗಬೇಕು".

– ರಾಷ್ಟ್ರೀಯ ಶಿಕ್ಷಣ ನೀತಿ, 2020



14 ವರ್ಷಗಳ ಕಾಲ ಹಿಂದಿ ಮುದ್ರಣ ಮಾಧ್ಯಮದಲ್ಲಿ ಪತ್ರಕರ್ತೆಯಾಗಿ ಕೆಲಸ ಮಾಡಿದ ನಂತರ, ಪ್ರತಿಭಾ ಕಟಿಯಾರ್ ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ನಾಲ್ಕು ಪುಸ್ತಕಗಳು ಪ್ರಕಟವಾಗಿವೆ ಮತ್ತು ಆಚಿತ ಎರಡು ಸಣ್ಣ ಕಥೆಗಳನ್ನು ಆಧರಿಸಿ ಕಿರುಚಿತ್ರಗಳನ್ನು ಮಾಡಲಾಗಿದೆ. ಅಂಡಮಾನ್ ಬಗ್ಗೆ ಬರೆದ ಪ್ರಯಾಣದ ನೆನಪು ಮತ್ತು ಕವಿತೆ 'ಓ ಅಚ್ಛೀ ಲಡಕಿಯೋಂ' ಅನ್ನು ಕರ್ನಾಟಕದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮಕ್ಕೆ ಅಳವಡಿಸಿಕೊಳ್ಳಲಾಗಿದೆ. ಇವರ ಕವಿತೆಗಳು ಗುಜರಾತಿ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ.
ಸಂಪರ್ಕ: pratibha.katiyar@azimpremjifoundation.org

ಅನುವಾದ: ಆಶಾ ಸಿಂಗ್ | ಪರಿಶೀಲನೆ: ದಿನೇಶ್ ಮಡಗಾಂವ್ಕರ್





# ದೇರ್ ಈಸ್ ಸಮ್‌ಥಿಂಗ್ ಅಬೌಟ್ ಗಿನ್ನಿ!

## ವಿಮರ್ಶೆ: ಶಾರೂನ್ ಸನಿ

'ದೇರ್ ಈಸ್ ಸಮ್‌ಥಿಂಗ್ ಅಬೌಟ್ ಗಿನ್ನಿ!', ಪುಟ್ಟ ಹುಡುಗಿಯ ಹೃದಯಸ್ಪರ್ಶಿ ಕಥೆ. ಈ ಹುಡುಗಿ ತನ್ನ ದೈಹಿಕ ಭಿನ್ನತೆಯನ್ನು ಒಪ್ಪಿಕೊಳ್ಳುತ್ತಾಳೆ ಮತ್ತು ಅವಳ ಸುತ್ತಲಿನ ಜನರು ಸಹ ಆಕೆಯನ್ನು ಸ್ವೀಕರಿಸುತ್ತಾರೆ. ವಿನೀತಾ ಕೃಷ್ಣ ಬರೆದ ಮತ್ತು ಸುವಿಧಾ ಮೂರ್ತಿ ಚಿತ್ರ ಬಿಡಿಸಿರುವ ಈ ಕಥೆಯು ಎಂಟು ವರ್ಷದ ಗಿನ್ನಿಯ ದೈಹಿಕ ಸವಾಲುಗಳನ್ನು ಹತ್ತಿರದಿಂದ ನೋಡುತ್ತದೆ. ಈ ಪುಸ್ತಕವನ್ನು ಹಿಂದಿಯಿಂದ ಅನುವಾದಿಸಲಾಗಿದೆ ಮತ್ತು ಅದರ ಶೀರ್ಷಿಕೆ 'ಕುಚ್ ಅಲಗ್ ಸಿ ಗಿನ್ನಿ'. ಗಿನ್ನಿಯು ಹುಟ್ಟುವಾಗ ಹ್ಯಾಂಡ್ ರೇಡಿಯಲ್ ಕ್ಲಬ್ ಜೊತೆ ಜನಿಸಿದ್ದಳು ಮತ್ತು ಒಟ್ಟಾರೆಯಾಗಿ, ಎರಡು ಕೈ ಸೇರಿ ಒಂಬತ್ತು ಬೆರಳು ಹೊಂದಿದ್ದಾಳೆ. ದಪ್ಪ ಕನ್ನಡಕ ಮತ್ತು ಮಣಿಕಟ್ಟಿನ ಕಟ್ಟುಪಟ್ಟಿಯನ್ನು ಧರಿಸಿರುವ ಗಿನ್ನಿ ದುಸ್ತರವಾಗಿ ತೋರುವ ಅಡೆತಡೆಗಳನ್ನು ಎದುರಿಸುತ್ತಾಳೆ. ಆದರೆ ಅವಳ ಲವಲವಿಕೆ ಮತ್ತು ಅನನ್ಯ ಪ್ರತಿಭೆಯಿಂದಾಗಿ, ಆಕೆ ಇತರರೊಂದಿಗೆ ಸ್ನೇಹ ಬೆಳೆಸಲು ಮತ್ತು ಅವರನ್ನು ಸಂತೋಷ ಪಡಿಸುವಲ್ಲಿ ಸಫಲಳಾಗುತ್ತಾಳೆ.




ಲೇಖಕರು: ವಿನೀತಾ ಕೃಷ್ಣ
ಚಿತ್ರಕಲಾವಿದರು: ಸುವಿಧಾ ಮೂರ್ತಿ
ವಯಸ್ಸಿನ ಗುಂಪು: 3 ವರ್ಷ ಮತ್ತು ಮೇಲ್ಪಟ್ಟವರು
ಪುಟ ಸಂಖ್ಯೆ: 20
ಭಾಷೆ: ಇಂಗ್ಲಿಷ್ (ಹಿಂದಿಯಲ್ಲಿಯೂ ಲಭ್ಯವಿದೆ)
ಪ್ರಕಾಶಕರು: ಗಿನ್ನೀಸ್ ಪ್ಲಾನೆಟ್ ಪ್ರೈವೇಟ್ ಲಿಮಿಟೆಡ್

ಪುಸ್ತಕದಲ್ಲಿ, ಸಮನ್ವಯಗೊಳ್ಳುವಿಕೆಯ ವಾತಾವರಣವನ್ನು ಸೃಷ್ಟಿಸುವಲ್ಲಿ ಸಹಾನುಭೂತಿ, ಸ್ವೀಕೃತಿ ಮತ್ತು ಲಘು ಹಾಸ್ಯದ ಪಾತ್ರವನ್ನು ಸುಂದರವಾಗಿ ಚಿತ್ರಿಸಲಾಗಿದೆ. ಗಿನ್ನಿಯ ದೈಹಿಕ ಮಿತಿಗಳು ಇತರರೊಂದಿಗೆ ಸಂವಹನ ನಡೆಸುವ ಅಥವಾ ಬೆರೆಯುವ ಸಾಮರ್ಥ್ಯಕ್ಕೆ ಅಡ್ಡಿಯಾಗುವುದಿಲ್ಲ. ಓದುಗರಿಗೆ ಇದೊಂದು ದೊಡ್ಡ ಪಾಠ. ಪುಸ್ತಕದ ಚಿತ್ರಗಳು ಆಕರ್ಷಕವಾಗಿವೆ ಮತ್ತು ಪಾತ್ರಗಳ ಮನಸ್ಥಿತಿಯನ್ನು ಅದ್ಭುತವಾಗಿ ವ್ಯಕ್ತಪಡಿಸುತ್ತವೆ.

ತಾನು ಸಂಗ್ರಹಿಸಿರುವ ಹೇರ್ ಬ್ಯಾಂಡ್ ಗಳ ಜೊತೆಗೆ ಉಡುಗೆ ತೊಡುವ ಅಥವಾ ಶೃಂಗರಿಸಿಕೊಳ್ಳುವ ಆಟದಿಂದ ಹಿಡಿದು ಕುತುಬ್ ಮಿನಾರ್‌ನ ಮಾದರಿಯನ್ನು ನಿರ್ಮಿಸುವವರೆಗೆ ಗಿನ್ನಿಯ ಸೃಜನಶೀಲತೆ ಮತ್ತು ಉತ್ಸಾಹವು ಕಂಡುಬರುತ್ತದೆ. ಆಕೆ ತನ್ನ ಸ್ನೇಹಿತೆಯರನ್ನು ಮಳೆಯಲ್ಲಿ ಆಡಿ ಆನಂದಿಸಲು ಪ್ರೋತ್ಸಾಹಿಸುತ್ತಾಳೆ. ಇದರಿಂದ ಆಕೆ ಪ್ರತಿ ಸಂದರ್ಭವನ್ನು ಧನಾತ್ಮಕವಾಗಿ ನೋಡಬಯಸುತ್ತಾಳೆ ಎಂಬುದನ್ನು ತೋರಿಸುತ್ತದೆ. ಮಳೆಯಲ್ಲಿ ಆಡುವ ಮಕ್ಕಳ ಆಕರ್ಷಕ ವಿವರಣೆಯು ಕಲ್ಪನೆಯ ಶಕ್ತಿಯನ್ನು ಮತ್ತು ಜೀವನದ ಸರಳ ಸಂತೋಷಗಳನ್ನು ಅಳವಡಿಸಿಕೊಳ್ಳುವ ಸುಖವನ್ನು ಎತ್ತಿ ತೋರಿಸುತ್ತದೆ. ಕಥೆಯನ್ನು ಹೇಳಿದ ನಂತರ, ಶಿಕ್ಷಕರು ತಮ್ಮ ಸಂಭಾಷಣೆಗಳಲ್ಲಿ ಈ ಸಂಗತಿಯ ಮೇಲೆ ಬೆಳಕು ಚೆಲ್ಲಿ, ಮಕ್ಕಳು ವಿನೋದವನ್ನು ಸಹ ಮುಖ್ಯವೆಂದು ಗುರುತಿಸಲು ಸಹಾಯ ಮಾಡಬಹುದು.

ದೈಹಿಕ ಮತ್ತು ಕಲಿಕೆಯ ವ್ಯತ್ಯಾಸಗಳ ಬಗ್ಗೆ ಚರ್ಚೆಗಳನ್ನು ಪ್ರಾರಂಭಿಸಲು ಶಿಕ್ಷಕರು ಈ ಪುಸ್ತಕವನ್ನು ಬಳಸಬಹುದು. ಉದಾಹರಣೆಗೆ, ಇತರರಿಂದ ದೈಹಿಕವಾಗಿ ಭಿನ್ನವಾಗಿದ್ದರೂ ಗಿನ್ನಿ ಆತ್ಮವಿಶ್ವಾಸವನ್ನು ಹೊಂದಿದ್ದಳು ಎಂದು ನೀವು ಏಕೆ ಭಾವಿಸುತ್ತೀರಿ; ಅಥವಾ ಅವನ ಸ್ನೇಹಿತರು ಅವನನ್ನು ಹೇಗೆ ಸ್ವೀಕರಿಸಿದರು; ಇತ್ಯಾದಿ. ಅಂತಹ ಪ್ರಶ್ನೆಗಳು ವಿದ್ಯಾರ್ಥಿಗಳು ತಮ್ಮ ಸ್ವಂತ ಅನುಭವಗಳನ್ನು ಮತ್ತು ದೃಷ್ಟಿಕೋನಗಳನ್ನು ಪರಿಗಣಿಸಲು ಪ್ರೋತ್ಸಾಹಿಸಬಹುದು. ನಾವು ವೈವಿಧ್ಯದಿಂದ ತುಂಬಿರುವ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆ ಮತ್ತು ವೈವಿಧ್ಯಗಳು ಜಗತ್ತನ್ನು ಸುಂದರವಾಗಿಸುತ್ತದೆ ಎಂಬುದನ್ನು ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ. ತರಗತಿಯಲ್ಲಿನ ಇಂತಹ ಸಂಭಾಷಣೆಗಳು ಮಕ್ಕಳು ಮತ್ತು ವಯಸ್ಕರು ಈ ವೈವಿಧ್ಯಗಳೊಂದಿಗೆ ಹೇಗೆ ವ್ಯವಹರಿಸುತ್ತಾರೆ ಎಂಬುದರ ಕುರಿತು ಅರಿವು ಮತ್ತು ಸೂಕ್ಷ್ಮತೆಯನ್ನು ಹೆಚ್ಚಿಸುತ್ತವೆ.

ಈ ಪುಸ್ತಕದ ಮುಖಪುಟವು ಮೂರು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ಸೂಕ್ತವಾಗಿದೆ ಎಂದು ಸೂಚಿಸುತ್ತದೆ. ಆದರೆ ಅದರ ಭಾಷೆ 6 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ಹೆಚ್ಚು ಸೂಕ್ತವಾಗಿದೆ. ಶೀರ್ಷಿಕೆ ಮತ್ತು ವಿವರಣೆಯು ಗಿನ್ನಿಯ ಭೌತಿಕ ವ್ಯತ್ಯಾಸಗಳ ಬಗ್ಗೆ ಸುಳಿವು ನೀಡಿದ್ದರೂ, ಕಥೆಯು ಈ ದೈಹಿಕ ಸವಾಲುಗಳನ್ನು ಹೆಚ್ಚು ಸ್ಪಷ್ಟವಾಗಿಸಿದ್ದರೆ ಒಳ್ಳೆಯದಿತ್ತು. ಒಂದು ದೃಶ್ಯದಿಂದ ಇನ್ನೊಂದಕ್ಕೆ ಸಾಗುವಾಗಲೂ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ. ಆದ್ದರಿಂದ ಮಕ್ಕಳಿಗೆ ಕಥೆಯನ್ನು ಹೇಳುವ ಮೊದಲು ಶಿಕ್ಷಕರು ಅದನ್ನು ಸುಲಭವಾಗಿ ಅರ್ಥಮಾಡಿಸಲು ವಿಶೇಷ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಒಟ್ಟಾರೆಯಾಗಿ, 'ದೇರ್ ಈಸ್ ಸಮ್‌ಥಿಂಗ್ ಅಬೌಟ್ ಗಿನ್ನಿ!' ಮನಸ್ಸಿಗೆ


ಹತ್ತಿರ ಮತ್ತು ಸ್ಪೂರ್ತಿದಾಯಕ ಕಥೆಯಾಗಿದ್ದು ಅದು ಪ್ರತ್ಯೇಕತೆ ಮತ್ತು ಸ್ವೀಕಾರದ ಶಕ್ತಿಯನ್ನು ತೋರಿಸುತ್ತದೆ. ಯುವ ಓದುಗರ ಅನುಭೂತಿ ಮತ್ತು ಇತರರ ತಿಳಿವಳಿಕೆಯನ್ನು ಬೆಳೆಸಲು ಬಯಸುವ ಪೋಷಕರು ಮತ್ತು ಶಿಕ್ಷಕರಿಗೆ ವಿಶೇಷವಾಗಿ ದೈಹಿಕ ಮತ್ತು ಕಲಿಕೆಯ ವ್ಯತ್ಯಾಸಗಳನ್ನು ಹೊಂದಿರುವವರಿಗೆ ಇದು ಪ್ರಮುಖ ಸಂಪನ್ಮೂಲವಾಗಿದೆ.

---

ಶಾರೂನ್ ಸನ್ನಿಯವರು ಇಂಗ್ಲಿಷ್ ಭಾಷಾ ಬೋಧನೆಯ ಓರ್ವ ವೃತ್ತಿಪರ ಶಿಕ್ಷಕ ಶಿಕ್ಷಕರಾಗಿದ್ದಾರೆ. ಸೃಜನಶೀಲ ಬರವಣಿಗೆಯ ಸಂಶೋಧಕರಾಗಿ ಮತ್ತು ಶಿಕ್ಷಕರಾಗಿ ಅವರು ಸೃಜನಶೀಲತೆ, ಸೊಬಗು ಮತ್ತು ಸರಳತೆಯನ್ನು ಒಗ್ಗೂಡಿಸುವ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದಾರೆ.

# ಚುಸ್ಕಿತ್ ಗೋಸ್ ಟು ಸ್ಕೂಲ್!

## ವಿಮರ್ಶೆ: ಧ್ರುವ ದೇಸಾಯಿ




ಲೇಖಕರು: ಸುಜಾತಾ ಪದ್ಮನಾಭನ್
ಚಿತ್ರಕಲಾವಿದರು: ಮಧುವಂತಿ ಅನಂತರಾಜನ್
ಪುಟ: 22
ಭಾಷೆ: ಇಂಗ್ಲಿಷ್
ಪ್ರಕಾಶಕರು: ಸ್ಟೋರಿವೀವರ್, ಪ್ರಥಮ್ ಬುಕ್ಸ್

'ಚುಸ್ಕಿತ್ ಗೋಸ್ ಟು ಸ್ಕೂಲ್!' – ಶಾಲೆಗೆ ಹೋಗಲು ಬಯಸಿದ ಸಣ್ಣ ವಿಕಲಾಂಗ ಲಡಾಖ್ ಹುಡುಗಿಯ ಕಥೆ. ಆಕೆಯ ಕುಟುಂಬವು ಆಕೆಗೆ ಪ್ರತಿ ಹಂತದಲ್ಲೂ ಬೆಂಬಲ ನೀಡಿದೆ ಮತ್ತು ಆಕೆಗಾಗಿ ಚಕ್ರಗಳುಳ್ಳ ಐಷಾರಾಮಿ ಕುರ್ಚಿಯನ್ನು ಸಹ ಖರೀದಿಸಿತು. ಆದರೆ ಶಾಲೆಗೆ ಹೋಗುವ ಮಾರ್ಗವನ್ನು ಕುರ್ಚಿಯಲ್ಲಿ ದಾಟುವಂತಿರಲಿಲ್ಲ. ರಸ್ತೆಯು ಒರಟು ಮತ್ತು ಕಲ್ಲುಗಳಿಂದ ಕೂಡಿತ್ತು, ಮತ್ತು ಮಧ್ಯದಲ್ಲಿ ಸಣ್ಣ ತೊರೆ ಹರಿಯುತ್ತಿತ್ತು. ಈ ಕಾರಣಗಳಿಂದ ಆಕೆಗೆ 9ನೇ ವಯಸ್ಸಿಗೆ ಶಾಲೆಗೆ ಹೋಗಲಾಗಲಿಲ್ಲ. ಒಂದು ದಿನ ಆಕೆಯ ಹಳ್ಳಿಯ ಹುಡುಗನೊಬ್ಬ ಆಕೆಯೊಂದಿಗೆ ಶಾಲೆಗೆ ಹೋಗುವ ಬಗ್ಗೆ ಮಾತನಾಡುತ್ತಾನೆ. ಚುಸ್ಕಿತ್ ಶಾಲೆಗೆ ಹೋಗಲು ತುಂಬಾ ಉತ್ಸುಕಳಾಗಿರುವುದನ್ನು ಕಂಡ ಅವನು ಚುಸ್ಕಿತ್‌ಳನ್ನು ಶಾಲೆಗೆ ಕಳುಹಿಸುವ ಮಾರ್ಗವನ್ನು ಹುಡುಕಲು ಪ್ರಾರಂಭಿಸುತ್ತಾನೆ ಮತ್ತು ಅದರ ಬಗ್ಗೆ ತನ್ನ ಮುಖ್ಯೋಪಾಧ್ಯಾಯರೊಂದಿಗೆ ಮಾತನಾಡುತ್ತಾನೆ. ಚುಸ್ಕಿತ್ ಶಾಲೆಗೆ ಹೋಗುವ ರೋಚಕ ದಿನದಿಂದ ಕಥೆ ಪ್ರಾರಂಭವಾಗುತ್ತದೆ.

ಈ ಪುಸ್ತಕದ ಅತ್ಯುತ್ತಮ ವಿಷಯವೆಂದರೆ ಇದು ಲಡಾಖಿ ಸಂಸ್ಕೃತಿ ಮತ್ತು ಭಾಷೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಪಠ್ಯವು ಲಡಾಖಿ ಭಾಷೆಯಲ್ಲಿ ಅನೇಕ ಸಾಮಾನ್ಯ ಪದಗಳು ಮತ್ತು ಶುಭಾಶಯಗಳನ್ನು ಒಳಗೊಂಡಿದೆ ಮತ್ತು ಕೊನೆಯಲ್ಲಿ ಪದಕೋಶವನ್ನು ಸಹ ಒದಗಿಸಲಾಗಿದೆ. ಆದಾಗ್ಯೂ, ಕಥೆಯ ಸಂದರ್ಭವನ್ನು ಎಷ್ಟು ಚೆನ್ನಾಗಿ ವಿವರಿಸಲಾಗಿದೆ ಎಂದರೆ ಪರಿಚಯವಿಲ್ಲದ ಪದಗಳ ಅರ್ಥ ಹುಡುಕುವುದು ಕಷ್ಟವೇನಲ್ಲ. ಇದಲ್ಲದೆ, ಭವ್ಯವಾದ ಚಿತ್ರಗಳು ಲಡಾಖಿ ಜೀವನದ ಒಂದು ನೋಟವನ್ನು ನೀಡುತ್ತವೆ. ಈ ವಿಷಯಗಳು ಕಥೆಯನ್ನು ಬಹಳ ಸ್ಪಷ್ಟವಾಗಿ ಚಿತ್ರಿಸುತ್ತವೆ ಮತ್ತು ಲಡಾಖಿಯ ಭೂದೃಶ್ಯ, ವಾಸ್ತುಶಿಲ್ಪ ಮತ್ತು ಇತರ ವಿವರಗಳನ್ನು ಚೆನ್ನಾಗಿ ಹೊರತಂದಿವೆ, ಓದುಗರು ಆ ಪರಿಸರವನ್ನು ಸುಲಭವಾಗಿ ಊಹಿಸಬಹುದು.

ಇಂತಹ ಪ್ರಯತ್ನಗಳ ವಿರುದ್ಧವೂ ಕೆಲವರು ಧ್ವನಿ ಎತ್ತಿದ್ದಾರೆ. ಈ ಧ್ವನಿಗಳು ಕೆಲವು ಶಾಲಾ ಶಿಕ್ಷಕರಿಂದ ಬರುತ್ತವೆ, ಅವರು (ಎಲ್ಲಾ ಸಮಾಜಗಳಂತೆ) ಚುಸ್ಕಿತ್ ಶಾಲೆಗೆ ಬರುವುದನ್ನು ವಿರೋಧಿಸುವುದಿಲ್ಲ, ಆದರೆ ಬಹುಶಃ ಅವರು ಆ ಪ್ರಯತ್ನಗಳನ್ನು ಸಾಕಾರಗೊಳಿಸಲು ಬೇಕಾದ ಕೆಲಸವನ್ನು ಊಹಿಸಲು ಅಥವಾ ಮಾಡಲು ಬಯಸುವುದಿಲ್ಲ ಅಥವಾ ಮಾಡಲು ಸಾಧ್ಯವಿಲ್ಲ. ಕಥೆಯಲ್ಲಿ, ಈ ಪಾತ್ರಗಳ ಅಂತಹ ದೃಷ್ಟಿಕೋನಗಳನ್ನು ಅತ್ಯಂತ ಬಲವಾಗಿ ತಿಳಿಸಲಾಗಿದೆ ಮತ್ತು ಪುಸ್ತಕದ ಕಥಾವಸ್ತುವು ಶಿಕ್ಷಕರ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತದೆ. ಈ ಎಲ್ಲಾ ಅಂಶಗಳು ಮಕ್ಕಳನ್ನು ಅಂಗವೈಕಲ್ಯ, ವೈವಿಧ್ಯ ಮತ್ತು ಸಮನ್ವಯಗೊಳ್ಳುವಿಕೆಯ ಪ್ರಶ್ನೆಗಳೊಂದಿಗೆ ತೊಡಗಿಸಿಕೊಳ್ಳಲು ಮಕ್ಕಳನ್ನು ಹೊಂದಿಸುವ ಕಾರಣದಿಂದ ಈ ಪುಸ್ತಕವು ಒಂದು ಅದ್ಭುತ ಪುಸ್ತಕವೆನಿಸಿಕೊಳ್ಳುತ್ತದೆ. ಚಿಕ್ಕ ಮಕ್ಕಳೊಂದಿಗೆ 'ಸಮಸ್ಯಾತ್ಮಕ' ಸಂಭಾಷಣೆಗಳನ್ನು ತಪ್ಪಿಸಲು ಪ್ರಯತ್ನಿಸುವ ಪ್ರವೃತ್ತಿ ಶಿಕ್ಷಕರು ಮತ್ತು ಪೋಷಕರಲ್ಲಿದೆ. ಆದಾಗ್ಯೂ, ಕೆಲವೊಮ್ಮೆ ಅವರು ಅದೇ ಜಗತ್ತಿನಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ಅವರು ಮರೆತುಬಿಡುತ್ತಾರೆ. ತರಗತಿಯಲ್ಲಿ ಈ ರೀತಿಯ ಪುಸ್ತಕಗಳನ್ನು ಓದುವುದು ಈ ಬಗೆಯ ವಿಚಾರಗಳನ್ನು ಪರಿಚಯಿಸಲು ಸಹಾಯ ಮಾಡುತ್ತದೆ ಮತ್ತು ಈ ರೀತಿಯ ಪ್ರಮುಖ ಸಂಭಾಷಣೆಗಳನ್ನು ಆಸಕ್ತಿದಾಯಕ ಮತ್ತು ಮೋಜಿನ ರೀತಿಯಲ್ಲಿ ಪ್ರಾರಂಭಿಸುತ್ತದೆ.

ಚುಸ್ಕಿತ್ ಮತ್ತು ಅವಳ ಕುಟುಂಬವು ಅಂಗವೈಕಲ್ಯ ಮತ್ತು ವೈವಿಧ್ಯದ ಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅವರು ಅನುಕಂಪದ ಪಾತ್ರಗಳಲ್ಲ, ಬದಲಿಗೆ ಹರ್ಷಚಿತ್ತದಿಂದ ಕೂಡಿದ ಮತ್ತು ಬಹುಮುಖಿ ಪಾತ್ರಗಳು. ಅವರಿಗೆ ಈ ಸವಾಲು ನಿಜವಾಗಿದ್ದರೂ, ಅದು ಅವರ ಜೀವನದ ಒಂದು ಭಾಗವಷ್ಟೇ. ಎಲ್ಲಾ ಒಳ್ಳೆಯ ಪುಸ್ತಕಗಳಂತೆ ಈ ಪುಸ್ತಕವೂ ಓದುಗರಿಗೆ ಕನ್ನಡಿ ಮತ್ತು ಕಿಟಕಿಯಾಗಿ ಕಾರ್ಯನಿರ್ವಹಿಸುತ್ತದೆ. ಪುಸ್ತಕವು ಹೊಸ ಮತ್ತು ವಿಭಿನ್ನ ಜಗತ್ತನ್ನು ಪ್ರದರ್ಶಿಸುತ್ತದೆ ಮತ್ತು ಅವರ ಜಗತ್ತಿನಲ್ಲಿ ಪರಿಚಿತ ವಿಷಯಗಳೊಂದಿಗೆ ಸಂಪರ್ಕಿಸುತ್ತದೆ.

ಕೆಲವು ಕಡೆ ಕಥೆ ಸ್ವಲ್ಪ ಭಾರವೆನಿಸಬಹುದು. ಉದಾಹರಣೆಗೆ ಚುಸ್ಕಿತ್‌ಳ ಸ್ನೇಹಿತನು  ಮುಖ್ಯೋಪಾಧ್ಯಾಯರೊಂದಿಗೆ ಮಾತನಾಡುವಾಗ, ಅವನ ಪ್ರಯತ್ನಗಳನ್ನು 'ನಾಗರಿಕರ ಮೂಲಭೂತ ಹಕ್ಕುಗಳಿಗೆ' ಹೊಂದಿಸಿದಾಗ. ಆದರೆ ಇದು ಕಥೆಯಿಂದ ನಮ್ಮ ಗಮನವನ್ನು ಬೇರೆಡೆ ಸೆಳೆಯುವುದಿಲ್ಲ ಅಥವಾ ಕಥೆಯ ನಿರ್ಣಯದ ಸಂಕೀರ್ಣ ಅಂಶಗಳು (ಅಧಿಕಾರಶಾಹಿ ಪ್ರಕ್ರಿಯೆಗಳು) ಕಥೆಯ ಮೇಲಿನ ನಮ್ಮ ಗಮನವನ್ನು ಬೇರೆಡೆ ಸೆಳೆಯದೆ ವೇಗವಾಗಿ ಸಾಗುತ್ತವೆ.


ಪ್ರಥಮ್ ಬುಕ್ಸ್ ಈ ಕಥೆ ಪುಸ್ತಕವನ್ನು ಮೂರನೇ ತರಗತಿಯ ಓದುಗರಿಗೆ ಸೂಕ್ತವಾಗಿದೆ ಎಂದು ಹೇಳಿದೆ. ಅಂದರೆ ಸ್ವತಂತ್ರವಾಗಿ ಓದಬಲ್ಲವರಿಗಾಗಿ. ಆದರೆ ನಮ್ಮ ದೇಶದ ತರಗತಿಗಳಲ್ಲಿ ಭಾಷೆಗಳ ಸಂಕೀರ್ಣತೆ ಇದೆ, ಇದರಿಂದಾಗಿ ಏಕರೂಪದ ಮಟ್ಟವನ್ನು ರಚಿಸುವುದು ಕಷ್ಟ. ಈ ಕಥೆಯನ್ನು ಚಿಕ್ಕ ಮಕ್ಕಳಿಗೂ ಓದಬಹುದು, ಮತ್ತು ನಂತರ ಈ ಮಕ್ಕಳು, ಶಿಕ್ಷಕ ಗ್ರಂಥಪಾಲಕ/ಪೋಷಕರ ಸಹಾಯದಿಂದ ಖಂಡಿತವಾಗಿಯೂ ಈ ಕಥೆಯೊಂದಿಗೆ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

---

ಧ್ರುವ ದೇಸಾಯಿ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶಿಕ್ಷಕ ಶಿಕ್ಷಣ ತಂಡದ ಸದಸ್ಯರಾಗಿದ್ದಾರೆ. ತಮ್ಮ ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಅವರು ಹೆಚ್ಚಿನ ಸಮಯವನ್ನು ಕ್ರೀಡೆ ಮತ್ತು ದೈಹಿಕ ಶಿಕ್ಷಣದ ಬಗ್ಗೆ ಆಲೋಚಿಸುತ್ತಾರೆ ಅಥವಾ ಮಕ್ಕಳ ಸಾಹಿತ್ಯದ ಬಗ್ಗೆ ಓದುತ್ತಾರೆ ಮತ್ತು ಯೋಚಿಸುತ್ತಾರೆ.

# ಗಪ್ಪು ಕಾಂಟ್ ಡಾನ್ಸ್

## ವಿಮರ್ಶೆ: ನಿಶಾ ನಾಗ್




ಲೇಖಕಿ: ಮೇನಕಾ ರಾಮನ್
ಚಿತ್ರಕಲಾವಿದರು: ಕೃಷ್ಣ ಚಂದ್ರನ್
ಪುಟ ಸಂಖ್ಯೆ: 13
ಭಾಷೆ: ಇಂಗ್ಲಿಷ್ (ಹಿಂದಿಯಲ್ಲಿಯೂ ಲಭ್ಯವಿದೆ)
ಅನುವಾದ: ಪೂರ್ಣೇಶ್ ಕುಮಾರ್ ತ್ರಿಪಾಠಿ
ಪ್ರಕಾಶಕರು: ಪ್ರಥಮ್ ಬುಕ್ಸ್

ಮಕ್ಕಳ ಪ್ರಪಂಚದಲ್ಲಿ, ನಮಗೆಲ್ಲರಿಗೂ ತಿಳಿದಿರುವಂತೆ, ವಿಶೇಷ ಅಗತ್ಯವುಳ್ಳ ಮಕ್ಕಳನ್ನು 'ವಿಶೇಷ ಮಕ್ಕಳು' ಎಂದು ಕರೆಯಲಾಗುತ್ತದೆ. ವಿಶೇಷ ಮಗು ಸಾಮಾನ್ಯ ಮಕ್ಕಳಿಂದ ಬೌದ್ಧಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ ಅಥವಾ ಭಾವನಾತ್ಮಕವಾಗಿ ತುಂಬಾ ಭಿನ್ನವಾಗಿದೆ ಎಂದು ಸಾಮಾನ್ಯವಾಗಿ ನಂಬಲಾಗಿದೆ, ಅವನು ಅಥವಾ ಅವಳು ನಿಯಮಿತ ಶಾಲಾ ಕಾರ್ಯಕ್ರಮಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ. ಅವರಿಗೆ ವಿಶೇಷ ತರಗತಿಗಳು ಅಥವಾ ಪೂರಕ ಶಿಕ್ಷಣ ಮತ್ತು ಸೇವೆಗಳ ಅಗತ್ಯವಿದೆ. ಸಮನ್ವಯ ಶಿಕ್ಷಣದ ಮೂಲ ಅಡಿಪಾಯ ಸಮಾನತೆ. ಈ ಸಮಾನತೆಯ ಪ್ರಜ್ಞೆಯು ಎಲ್ಲಾ ವಿದ್ಯಾರ್ಥಿಗಳು, ಅವರ ಸಾಮರ್ಥ್ಯಗಳು ಅಥವಾ ಅಂಗವೈಕಲ್ಯವನ್ನು ಲೆಕ್ಕಿಸದೆ, ತರಗತಿಯ ಚಟುವಟಿಕೆಗಳಲ್ಲಿ ಕಲಿಯಲು ಮತ್ತು ಭಾಗವಹಿಸಲು ಸಮಾನ ಅವಕಾಶಗಳನ್ನು ಹೊಂದಿದೆ ಎಂದು ಖಚಿತಪಡಿಸುತ್ತದೆ. ಸಮನ್ವಯ ಶಿಕ್ಷಣ ವ್ಯವಸ್ಥೆಯಲ್ಲಿ, ಸಾಮಾನ್ಯ ಮಕ್ಕಳೊಂದಿಗೆ ಯಾವುದೇ ತಾರತಮ್ಯವಿಲ್ಲದೆ ವಿಶೇಷ ಮಕ್ಕಳಿಗೆ ಶಿಕ್ಷಣವನ್ನು ನೀಡಲಾಗುತ್ತದೆ. ಅಂತಹ ಮಕ್ಕಳು ಸಮಾಜದಿಂದ ಪ್ರತ್ಯೇಕತೆಯನ್ನು ಅನುಭವಿಸದಂತೆ ಸಾಮಾನ್ಯ ಮಕ್ಕಳೊಂದಿಗೆ ಬೆಳೆಯುವ ಮತ್ತು ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರಬೇಕು ಎಂಬ ಕಲ್ಪನೆಯ ಪರಿಣಾಮವೇ ಈ ನಿರೀಕ್ಷೆ. ಈ ಉಪಕ್ರಮವು ಉತ್ತಮ ಸಮಾಜಕ್ಕೆ ದಾರಿ ಮಾಡಿಕೊಡುತ್ತದೆ. ಇದಕ್ಕಾಗಿ, ಎಲ್ಲಾ ಮಕ್ಕಳು ತರಗತಿ ಚಟುವಟಿಕೆಗಳಲ್ಲಿ ಸಮಾನವಾಗಿ ಭಾಗವಹಿಸುವುದು ಮುಖ್ಯವಾಗಿದೆ. ಆದರೆ ಎಡಗೈ ಮತ್ತು ಕಾಲಿನ ಅಂಗವೈಕಲ್ಯ ಹೊಂದಿರುವ ವಿಶೇಷ ಮಗು, ತರಗತಿಯ ಚಟುವಟಿಕೆಯಲ್ಲಿ ಶಿಕ್ಷಕರು ಏನು ಹೇಳುತ್ತಾರೋ ಅದಕ್ಕೆ ವಿರುದ್ಧವಾಗಿ ಮಾಡಿದರೆ ಏನಾಗಬಹುದು? ತರಗತಿಯಲ್ಲಿ ಇತರ ವಿದ್ಯಾರ್ಥಿಗಳಲ್ಲಿ ಅವನ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಹೇಗೆ? ಅಂತಹ ಪರಿಸ್ಥಿತಿಗೆ ಸಮರ್ಪಕವಾದ ಉತ್ತರವೇ ಗಪ್ಪು ನಾಚ್ ನಹೀ ಸಕ್‌ತಿ

ತರಗತಿಯಲ್ಲಿ, ಗಪ್ಪು ಮೂಳೆಯ ವಿಕಲತೆ ಇರುವ ಹುಡುಗಿಯಾಗಿದ್ದು, ಆಕೆಯ ಎಡಗೈಯ ಮೂಳೆಗಳು, ಕೀಲುಗಳು ಮತ್ತು ಸ್ನಾಯುಗಳು ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ. ಗಪ್ಪುವಿನ ಇತಿಮಿತಿಗಳನ್ನು ಅರ್ಥಮಾಡಿಕೊಂಡ ಅವಳ ಶಿಕ್ಷಕರು ತಮ್ಮ ತರಗತಿಯ ವಿದ್ಯಾರ್ಥಿಗಳನ್ನು ಗಪ್ಪುಗೆ ಹೊಂದಿಕೊಳ್ಳುವಂತೆ ಕೇಳುತ್ತಾರೆ. ಅವರು ಗಪ್ಪುವಿನ ವೈಯಕ್ತಿಕ ವ್ಯತ್ಯಾಸಗಳನ್ನು ಸಂಪನ್ಮೂಲವಾಗಿ ಬಳಸುತ್ತಾರೆ. ಶಿಕ್ಷಕರಿಗೆ

ಸಮಸ್ಯೆಯನ್ನು ಪರಿಹರಿಸುವ ಕೌಶಲವಿದೆ. ಗಪ್ಪು ಪ್ರತ್ಯೇಕವಾಗಿ ಉಳಿಯುವ ಬದಲು, ಶಿಕ್ಷಕರು ಸಮಸ್ಯೆಯನ್ನು ಪರಿಹರಿಸಲು ವಿಭಿನ್ನವಾಗಿ ಯೋಚಿಸುತ್ತಾರೆ. ಅವರು ಗಪ್ಪುವನ್ನು ಅವರೊದಿಗೆ ಹೆಜ್ಜೆ ಹಾಕಲು ತರಗತಿಯಲ್ಲಿ ಕೇಳುವ ಮೂಲಕ ಪ್ರೋತ್ಸಾಹಿಸುತ್ತಾರೆ. ಗಪ್ಪುವಿನ ಅಗತ್ಯಗಳಿಗೆ ಪ್ರಾಮುಖ್ಯತೆಯನ್ನು ನೀಡುವಾಗ, ಅವರು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ನೃತ್ಯ ರಚನೆಯನ್ನು ಬದಲಾಯಿಸುತ್ತಾರೆ. ಇದು ವಿದ್ಯಾರ್ಥಿಗಳು ಮತ್ತು ಗಪ್ಪುವಿನ ತಂಡಸ್ಪೂರ್ತಿಯ ಕೌಶಲಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಶಿಕ್ಷಕರ ಈ ಉಪಕ್ರಮದಿಂದ, ಇತರ ಮಕ್ಕಳು ಸಹ ಧನಾತ್ಮಕ ಚಿಂತನೆ, ಸ್ವೀಕೃತಿ, ತಾಳ್ಮೆ, ಸಹನೆ, ಸ್ನೇಹ ಇತ್ಯಾದಿ ಕೌಶಲಗಳನ್ನು ಅಭಿವೃದ್ಧಿಪಡಿಸುತ್ತಾರೆ. ತರಗತಿಯೊಳಗೆ ಗಪ್ಪುವನ್ನು ಸಮನ್ವಯಗೊಳಿಸಲು ಶಿಕ್ಷಕರ ಈ ಪ್ರಯತ್ನವು ಕಲಿಕೆಯಲ್ಲಿ ಸೇರ್ಪಡೆಗೆ ವಿಭಿನ್ನ ವಿಧಾನವನ್ನು ಪ್ರಸ್ತುತಪಡಿಸುತ್ತದೆ.

ಒಟ್ಟಾರೆಯಾಗಿ, ಈ ಚಿಕ್ಕ 130–ಪದಗಳ ಚಿತ್ರ ಕಥೆ ಪುಸ್ತಕವು ಸಮನ್ವಯ ಶಿಕ್ಷಣದ ಪ್ರಾಯೋಗಿಕತೆಗೆ ಉತ್ತಮ ಉದಾಹರಣೆಯಾಗಿದೆ. ಲಯಬದ್ಧ ಪದ ರಚನೆ ಈ ಕಥೆಯ ವಿಶೇಷತೆ. ಈ ಕಥೆಯನ್ನು ಓದುವಾಗ ಗಪ್ಪುವಿನ ತರಗತಿಯ ಸಂಪೂರ್ಣ ದೃಶ್ಯ ಕಣ್ಮುಂದೆ ಬರುತ್ತದೆ. ಶಿಕ್ಷಕರು ಮಕ್ಕಳಿಗೆ ಸೂಚಿಸುತ್ತಾರೆ – "ತಕ್ ಧಿಮಿ ಥೈ ನಿಮ್ಮ ಎಡಗೈಯನ್ನು ಮೇಲಕ್ಕೆತ್ತಿ."

"ಓಹೋ! ಗಪ್ಪು ತನ್ನ ಬಲಗೈಯನ್ನು ಎತ್ತುತ್ತಾಳೆ. ಗಪ್ಪು ಗೆ ನೃತ್ಯ ಮಾಡಲು ಸಾಧ್ಯವಿಲ್ಲ." ಇತರ ದೈಹಿಕ ಕ್ರಿಯೆಗಳೊಂದಿಗೆ 'ಗಪ್ಪು ನೃತ್ಯ ಮಾಡಲು ಸಾಧ್ಯವಿಲ್ಲ' ಎಂಬ ವಾಕ್ಯವು ಕಥೆಯಲ್ಲಿ ಇನ್ನೂ ಮೂರು ಬಾರಿ ಕಂಡುಬರುತ್ತದೆ. ಅಂತೆಯೇ, ಮಕ್ಕಳಿಗೆ ವೇಗವಾಗಿ ತಿರುಗಲು ಸೂಚಿಸಿದಾಗ, ಗಪ್ಪು ತುಂಬಾ ನಿಧಾನವಾಗಿ ತಿರುಗುತ್ತಾಳೆ. ಇದಕ್ಕೆ ಕಾರಣ ತನ್ನದೇ ಆದ ಮಿತಿಗಳು. "ಟ್ಯಾಪ್ ಟಪ್ಪಪ್ ಟ್ಯಾಪ್, ಎಲ್ಲರೂ ಹಾರಿ ಝುಟ್‌ಪಟ್" ಎಂಬ ಸೂಚನೆಯನ್ನು ಸ್ವೀಕರಿಸಿದ ನಂತರ, ಗಪ್ಪು ಕುಳಿತುಕೊಳ್ಳುತ್ತಾಳೆ ಮತ್ತು ಅವಳ ಬಲಗಾಲನ್ನು ಒಳಗೆ ಹಾಕಲು ಸೂಚಿಸಿದಾಗ, ಅವಳು ಅದನ್ನು ಹೊರತೆಗೆಯುತ್ತಾಳೆ. ಸೂಚನೆಗಳಿಗೆ ವಿರುದ್ಧವಾಗಿ ಗಪ್ಪು ತಪ್ಪು ಹೆಜ್ಜೆ ಹಾಕಿದಾಗ, ಎಲ್ಲಾ ಮಕ್ಕಳು ಆಕೆಯ ಕಡೆಗೆ ತಿರುಗಿ ನಗುತ್ತಾರೆ.

ಇದನ್ನು ನೋಡಿದ ಶಿಕ್ಷಕರು ತಮ್ಮ ಸೂಚನೆಗಳನ್ನು ಬದಲಾಯಿಸುತ್ತಾ, "ತಕ್ ಧಿಮಿ ಥೈ" ಎನ್ನುತ್ತಾರೆ. ಕೆಲವು ಮಕ್ಕಳು ತಮ್ಮ ಕೈಗಳನ್ನು ಕೆಳಗೆ ಮತ್ತು ಕೆಲವರು ಮೇಲಕ್ಕೆ ಇಟ್ಟುಕೊಳ್ಳುತ್ತಾರೆ, ನಡಿಗೆಯ ಸೂಚನೆಗಳನ್ನು ಸಹ ಬದಲಾಯಿಸುತ್ತಾರೆ. ಶಿಕ್ಷಕರು ಮುಂದುವರಿಯುತ್ತಾ "ನಿಮಗೆ ಇಷ್ಟವಾದಷ್ಟು ವೇಗವಾಗಿ ಮತ್ತು ನಿಧಾನವಾಗಿ ಇಡೀ ಕೊಠಡಿಯನ್ನು ದಾಟಿ, ಅಥವಾ ನಿಮಗೆ ಅನಿಸುವಷ್ಟು ವೇಗವಾಗಿ ಜಿಗಿಯಿರಿ. ಯೋಚಿಸದೆ ಅದನ್ನು ಮಾಡಿ." ಎಂದು ಹೇಳುತ್ತಾರೆ. ಇದರ ಪರಿಣಾಮವೆಂದರೆ ಗಪ್ಪು ಈಗ ನೃತ್ಯ ಮಾಡಬಹುದು. ಏಕೆಂದರೆ ಅವಳು ಇನ್ನು ಮುಂದೆ ಕಿರಿದಾದ ಗಡಿಗಳಲ್ಲಿ ನೃತ್ಯ ಮಾಡಬೇಕಾಗಿಲ್ಲ. ಈ ಉಪಾಯದ ಶ್ರೇಯಸ್ಸು ಶಿಕ್ಷಕರಿಗೆ ಸಲ್ಲುತ್ತದೆ. ಇದರೊಂದಿಗೆ ವಿಶೇಷ ಮಕ್ಕಳನ್ನು ಹೇಗೆ ತರಗತಿಗೆ ಸೇರಿಸಬಹುದು ಎಂಬ ಸಂದೇಶವನ್ನೂ ಶಿಕ್ಷಕರು ನೀಡುತ್ತಾರೆ.

ಹದಿಮೂರು ಪುಟಗಳ ಈ ಕಿರುಪುಸ್ತಕದ ಮುದ್ರಣ ಆಕರ್ಷಕವಾಗಿದೆ. ಕವರ್ ಮತ್ತು ಒಳಗಿನ ಚಿತ್ರಗಳು ತಕ್ಷಣವೇ ಗಮನ ಸೆಳೆಯುತ್ತವೆ. ಪುಸ್ತಕದ ವಿವರಣೆಗಳ ವಿಶೇಷತೆಯೆಂದರೆ ಅದರ ಬಣ್ಣ ಸಂಯೋಜನೆ, ಶಿಕ್ಷಕರ ಭಂಗಿ ಮತ್ತು ಮಕ್ಕಳ ಕಣ್ಣುಗಳು ವಿಶೇಷವಾಗಿ ಗಮನ ಸೆಳೆಯುತ್ತವೆ ಏಕೆಂದರೆ ಅವುಗಳಲ್ಲಿ ಪ್ರತಿಬಿಂಬಿತವಾದ ಕೌತುಕ ಮತ್ತು ಕುತೂಹಲವು ಬಾಲ್ಯವನ್ನು ವಾಸ್ತವಕ್ಕೆ ತರುತ್ತದೆ. ಪುಸ್ತಕ ಓದಲು ಮಾತ್ರವಲ್ಲದೆ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಸಹಾಯ ಮಾಡುತ್ತದೆ.

ಮಕ್ಕಳ ಕಲಿಕೆಯ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪಿಲ್ಲ ಎಂಬ ಇನ್ನೊಂದು ಸಂದೇಶವೂ ಈ ಕಿರುಪುಸ್ತಕದಲ್ಲಿದೆ. ಮಾಮೂಲಿ ಕಲಿಕೆಯ ಪರಿಪಾಠದ ಹೊರತಾಗಿ, ಇತರ ಚಟುವಟಿಕೆಗಳ ಮೂಲಕ ಇಲ್ಲಿ ಮಕ್ಕಳು ಬಹಳಷ್ಟು ಕಲಿಯುತ್ತಾರೆ.

---

**ನಿಶಾ ನಾಗ್** ಅವರು ದೆಹಲಿ ವಿಶ್ವವಿದ್ಯಾಲಯದ ಮಿರಾಂಡಾ ಹೌಸ್‌ನಲ್ಲಿ ಹಿರಿಯ ಉಪನ್ಯಾಸಕಿಯಾಗಿದ್ದಾರೆ, ಅಲ್ಲಿ ಅವರು 26 ವರ್ಷಗಳಿಂದ ಬೋಧನೆ ಮಾಡುತ್ತಿದ್ದಾರೆ. ಅವರ ವಿಮರ್ಶೆಗಳು, ಲೇಖನಗಳು ಮತ್ತು ಕಥೆಗಳು ವಿವಿಧ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇರುತ್ತವೆ.

# ಬನ್ನಿ, ಸ್ವತಃ ಮಾಡಿ ನೋಡೋಣ

ಇಲ್ಲಿ ನೀಡಲಾದ ಎಲ್ಲಾ ಚಟುವಟಿಕೆಗಳನ್ನು, ಎಲ್ಲರ ಭಾಗವಹಿಸುವಿಕೆಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಇವು ಎಂತಹ ಚಟುವಟಿಕೆಗಳಾಗಿವೆಯೆಂದರೆ– ವಿವಿಧ ರೀತಿಯ ಸ್ವಭಾವಗಳನ್ನು ಹೊಂದಿರುವ ಅಂದರೆ, ವಿವಿಧ ಅಸ್ಮಿತೆ, ಸಾಮರ್ಥ್ಯ ಮತ್ತು ನಡೆವಳಿಕೆ (ಕ್ರಿಯಾಶೀಲ, ನಾಚಿಕೆ ಸ್ವಭಾವ) ಗಳನ್ನು ಹೊಂದಿರುವ ಮಕ್ಕಳೆಲ್ಲರೂ ಸಮಾನವಾಗಿ ಭಾಗವಹಿಸುವುದು ಮಾತ್ರವಲ್ಲದೆ, ಆ ಚಟುವಟಿಕೆಯ ಸಂಪೂರ್ಣ ಆನಂದವನ್ನು ಅನುಭವಿಸುವಂತಹದ್ದಾಗಿವೆ. ಈ ಚಟುವಟಿಕೆಗಳು ಸರಳವಾಗಿರುವುದೇ ಅವುಗಳ ವಿಶಿಷ್ಟ ಲಕ್ಷಣವಾಗಿದೆ. ಮತ್ತು ಇಂತಹ ಚಟುವಟಿಕೆಗಳಲ್ಲಿ ಯಾವ ಮಗುವೂ ಆಟದಿಂದ ಹೊರಗುಳಯುವುದಿಲ್ಲ.

### ಸಂಗೀತದ ಚಟುವಟಿಕೆ



ಈ ಚಟುವಟಿಕೆಯನ್ನು 5–10 ಮಕ್ಕಳಿರುವ ಸಣ್ಣ ಗುಂಪುಗಳೊಂದಿಗೆ ಅಥವಾ 15–20 ಮಕ್ಕಳ ದೊಡ್ಡ ಗುಂಪುಗಳೊಂದಿಗೆ ನಡೆಸಬಹುದಾಗಿದೆ.

**ಸುಲಭ / ಮಧ್ಯಮ ಮಟ್ಟ:** ತಾನು ಮಾಡಬಲ್ಲೆ ಎನ್ನುವಂತಹ ಸುಲಭವಾದ, ಮೋಜಿನದಾದ ಚಟುವಟಿಕೆ (ಕ್ರಿಯೆ)ಯೊಂದನ್ನು ಪ್ರತಿಯೊಂದು ಮಗುವು ತನಗಾಗಿ ಯೋಚಿಸಿಕೊಳ್ಳಬೇಕಿರುತ್ತದೆ. ಇದರಲ್ಲಿ ಚಪ್ಪಾಳೆ ತಟ್ಟುವುದು, ಚಿಟಿಕೆ ಹೊಡೆಯುವುದು, ಕುತ್ತಿಗೆಯನ್ನು ಎಡ–ಬಲಕ್ಕೆ ಹೊರಳಿಸುವುದು, ಪಾದವನ್ನು ನೆಲದ ಮೇಲೆ ನಿಧಾನವಾಗಿ ಬಡಿಯುವುದು, ಬಾಯಿಂದ ಶಿಳ್ಳೆ ಹೊಡೆಯುವ ಅಥವಾ ಗುನುಗುವ ತರಹದ ಕೆಲವು ಧ್ವನಿಗಳನ್ನು ಹೊರಡಿಸುವುದು – ಇಂತಹ ಚಟುವಟಿಕೆಗಳನ್ನು ಒಳಗೊಂಡಿರುತ್ತವೆ.

**ಹೀಗೆ ಮಗುವು ತಾನು ಯೋಚಿಸಿದ ಚಟುವಟಿಕೆಯನ್ನು ಮಾಡುತ್ತದೆ, ಉದಾಹರಣೆಗೆ:** ಆ ಮಗು ಚಪ್ಪಾಳೆ ತಟ್ಟುವುದು. ಅನಂತರ ಗುಂಪಿನಲ್ಲಿರುವ ಇತರ ಮಕ್ಕಳು ಅದನ್ನು ಪುನರಾವರ್ತನೆ ಮಾಡುವುದು. ಹೀಗೆ ಮೂರರಿಂದ ನಾಲ್ಕು ಬಾರಿ ಪುನರಾವರ್ತಿಸಿದ ನಂತರ, ಮುಂದಿನ ಮಗುವು ತಾನು ಯೋಚಿಸಿದ ಚಟುವಟಿಕೆಯನ್ನು ಮಾಡತೊಡಗುತ್ತದೆ. ಈ ರೀತಿಯಾಗಿ ಪ್ರತಿ ಮಗುವಿನ ಚಟುವಟಿಕೆ ಮಾಡುವ ಸರದಿ ಬರುತ್ತದೆ ಮತ್ತು ಹೀಗೆ ಆಟ ಮುನ್ನಡೆಯುತ್ತಾ ಹೋಗುತ್ತದೆ. ಈ ಆಟದಲ್ಲಿ ಮಕ್ಕಳು ನೆಲದಲ್ಲಿ ಕುಳಿತುಕೊಂಡು, ನಿಂತುಕೊಂಡು, ಕುರ್ಚಿಯ ಮೇಲೆ ಕುಳಿತುಕೊಂಡು ಮುಂತಾಗಿ ಯಾವುದೇ ತರಹದಲ್ಲಾದರೂ ಭಾಗವಹಿಸಬಹುದು.

**ಕ್ಲಿಷ್ಟವಾದ ಮಟ್ಟ:** ಈ ರೀತಿಯಾಗಿ ಮಕ್ಕಳು ಭಿನ್ನ–ಭಿನ್ನ ವಾಕ್ಯಗಳನ್ನು ತಮ್ಮದೇ ರೀತಿಯಲ್ಲಿ ಹೇಳುತ್ತಾರೆ. ಉದಾಹರಣೆಗೆ: ವಾಕ್ಯಗಳನ್ನು ಯಾವುದೇ ಮಗು ಹಾಡನ್ನು ಹೇಳುವಂತೆ ಹೇಳಬಹುದು, "ನಾನು ಕಮಲಾ. ನನಗೆ ಹಾಡು ಹೇಳುವುದು ಇಷ್ಟ"; ಅಥವಾ "ನನ್ನ ಹೆಸರು ರೇಶ್ಮಾ. ನನಗೆ ರಾಜ್ಮಾ (ಅಡುಗೆಗೆ ಬಳಸುವ ಅಲಸಂದೆ ತರಹದ ದೊಡ್ಡ ಕೆಂಪು ಕಾಳು) ಇಷ್ಟ"; "ನನ್ನ ಹೆಸರು ಕಬೀರ್. ಆಟವಾಡುವುದು ನನಗೆ ಇಷ್ಟ"; ಇತ್ಯಾದಿ ಈ ತರಹದ ವಾಕ್ಯಗಳನ್ನು ಸರದಿಯಲ್ಲಿ ತಮ್ಮದೇ ರೀತಿಯಲ್ಲಿ ಹಾಡುತ್ತಾ, ಗುನುಗುನಿಸುತ್ತಾ, ಮೆಲ್ಲನೆಯ ದನಿಯಲ್ಲಿ ಪಿಸುಗುಟ್ಟುತ್ತಾ ಆಟವನ್ನು ಮುಂದುವರಿಸುತ್ತಾರೆ.



## ದೃಶ್ಯಕಲೆಗಳ ಚಟುವಟಿಕೆ

ಈ ಚಟುವಟಿಕೆಯನ್ನು 5 ರಿಂದ 6 ವಿದ್ಯಾರ್ಥಿಗಳಿರುವ ಸಣ್ಣ ಗುಂಪುಗಳಲ್ಲಿ ಮಾಡಬಹುದು. ಇದರಿಂದ ಗುಂಪಿನಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ, ಗುಂಪಿನಲ್ಲಿರುವ ಇತರ ಮಕ್ಕಳಿಗೆ ಸೂಚನೆ ನೀಡುವ ಅವಕಾಶ ದೊರೆಯುತ್ತದೆ. ಈ ಸೂಚನೆಯು ಸಾಮಾನ್ಯವಾಗಿ ಚಿತ್ರ ಬಿಡಿಸುವುದಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ತಾನು ಕೊಡಬೇಕಾದ ಸೂಚನೆಯ ಬಗ್ಗೆ ಯೋಚಿಸಲು ಒಬ್ಬ ವಿದ್ಯಾರ್ಥಿಯು ಒಂದು ನಿಮಿಷದ ಸಮಯವನ್ನು ಹೊಂದಿರುತ್ತಾನೆ. ಅಂತೆಯೇ, ನಂತರ ಆ ಸೂಚನೆಯನ್ನು ಪಾಲಿಸಲು ಗುಂಪಿನ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ನಿಮಿಷದ ಸಮಯ ಕೊಡಲಾಗುತ್ತದೆ.

**ಸರಳವಾದ ಮಟ್ಟ:** ಯಾವುದರ ಚಿತ್ರವನ್ನು ಕಲ್ಪಿಸಿಕೊಳ್ಳಬಹುದೋ ಅಂತಹ ಸಾಮಾನ್ಯವಾದ ವಸ್ತು ಅಥವಾ ಜೀವಂತ ಪ್ರಾಣಿಯ ಬಗ್ಗೆ ವಿದ್ಯಾರ್ಥಿಗಳು ಸರದಿಯಲ್ಲಿ ಯೋಚಿಸುತ್ತಾರೆ. ನಂತರ ಅದರ ಹೆಸರನ್ನು ಗುಂಪಿನ ಎದುರು ಗಟ್ಟಿಯಾಗಿ ಹೇಳುತ್ತಾರೆ. ಆಗ ಗುಂಪಿನ ಇನ್ನಿತರ ವಿದ್ಯಾರ್ಥಿಗಳು ಅದರ ಚಿತ್ರವನ್ನು ಬರೆಯುತ್ತಾರೆ.

**ಮಧ್ಯಮ ಮಟ್ಟ:** ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಸರಳವಾದ ಚಿತ್ರವನ್ನು ಅಥವಾ ವಿನ್ಯಾಸವನ್ನು ಬಿಡಿಸುತ್ತಾರೆ ಮತ್ತು ಅದನ್ನು ಇತರ ವಿದ್ಯಾರ್ಥಿಗಳಿಗೆ ತೋರಿಸುತ್ತಾರೆ. ಇತರ ವಿದ್ಯಾರ್ಥಿಗಳು ಸಾಧ್ಯವಾದಷ್ಟು ಅದಕ್ಕೆ ಹೋಲುವಂತೆ ಇರುವ ಚಿತ್ರವನ್ನು ಬಿಡಿಸಬೇಕಾಗಿರುತ್ತದೆ.

**ಸಂಕೀರ್ಣ ಮಟ್ಟ:** ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿ 4 ರಿಂದ 5 ಫ್ಲಾಶ್ ಕಾರ್ಡ್ ಇರುತ್ತವೆ. ಅಂತೆಯೇ ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಫ್ಲಾಶ್ ಕಾರ್ಡ್ ಮೇಲೆ ಯಾವುದಾದರೂ ಸರಳವಾದ ಚಿತ್ರ ಅಥವಾ ವಿನ್ಯಾಸವನ್ನು ಬಿಡಿಸುತ್ತಾರೆ. ನಂತರ ಎಲ್ಲ ವಿದ್ಯಾರ್ಥಿಗಳು ಒಂದು ಕಾರ್ಡ್ ಅನ್ನು ತಮ್ಮ ಬಳಿ ಇಟ್ಟುಕೊಂಡು ಉಳಿದ ಕಾರ್ಡ್ ಗಳನ್ನು ತಮ್ಮ ಗುಂಪಿನ ಸದಸ್ಯರೊಂದಿಗೆ ಅದಲು-ಬದಲು ಮಾಡಿಕೊಳ್ಳುತ್ತಾರೆ. ತದನಂತರ, ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಪಾಲಿಗೆ ಸಿಕ್ಕ ಎಲ್ಲ ಫ್ಲಾಶ್ ಕಾರ್ಡ್ ಗಳಲ್ಲಿ ರಚಿಸಲಾಗಿರುವ ಚಿತ್ರಗಳನ್ನು ಬಿಡಿಸುತ್ತಾನೆ.

ಹೋಲಿಕೆಯಲ್ಲಿ ಮಧ್ಯಮ ಮತ್ತು ಸಂಕೀರ್ಣ ಮಟ್ಟದ ಚಟುವಟಿಕೆಗಳಿಗಾಗಿ ಸಮಯದ ಗಡುವು ಮೊದಲ ಮಟ್ಟಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತದೆ.

### ಈ ಚಟುವಟಿಕೆಯು ಸಮನ್ವಯವನ್ನು ಯಾವ ರೀತಿಯಲ್ಲಿ ಸೂಚಿಸುತ್ತದೆ ?

ಪ್ರತಿ ವಿದ್ಯಾರ್ಥಿಯ ಊಹೆ ಕಲ್ಪನೆಗಳು ತನ್ನ ಚಿತ್ರಗಳಲ್ಲಿಯಷ್ಟೇ ಅಲ್ಲದೆ, ಇತರರ ಚಿತ್ರಗಳಲ್ಲೂ ಸ್ಥಾನ ಪಡೆಯುತ್ತವೆ. ಇದರಲ್ಲಿ ಎಲ್ಲ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳ ಆಲೋಚನೆಗಳನ್ನು ಮತ್ತು ಅಭಿವ್ಯಕ್ತಿಗಳನ್ನು ಸ್ವೀಕರಿಸುತ್ತಾರೆ ಮತ್ತು ಅವರೊಂದಿಗೆ ಕೆಲಸ ಮಾಡುವುದರಲ್ಲಿ ಉತ್ಸಾಹಿತರಾಗುತ್ತಾರೆ. ತರಗತಿಯಲ್ಲಿ ಕೆಲವು ದೃಷ್ಟಿದೋಷವಿರುವ ವಿದ್ಯಾರ್ಥಿಗಳಿದ್ದರೆ, ಅವರಿಗಾಗಿ ಈ ಚಟುವಟಿಕೆಗಳಲ್ಲಿ ಜೇಡಿಮಣ್ಣಿನಂತಹ ವಸ್ತುಗಳನ್ನು ಮಾಧ್ಯಮವನ್ನಾಗಿ ಬಳಸಬಹುದಾಗಿದೆ.

ವಿದ್ಯಾರ್ಥಿಗಳ ಅಗತ್ಯಗಳಿಗೆ ಮತ್ತು ಅವರ ಸಾಮರ್ಥ್ಯಕ್ಕನುಸಾರವಾಗಿ ಈ ಚಟುವಟಿಕೆಗಳನ್ನು ಬದಲಾಯಿಸಬಹುದಾಗಿದೆ. ಎಲ್ಲ ವಿದ್ಯಾರ್ಥಿಗಳೂ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ಅದರಿಂದ ಸಿಗುವ ಮೋಜಿನ ಭಾವನೆಯನ್ನು ಆನಂದಿಸುವುದು ಸಾಧ್ಯವಾಗಲಿ ಎಂಬುದನ್ನು ಖಚಿತಪಡಿಸುವುದೇ ಈ ಚಟುವಟಿಕೆಗಳ ಉದ್ದೇಶವಾಗಿದೆ.

ಈ ಎರಡು ಚಟುವಟಿಕೆಗಳು, ಗುಜರಾತಿನ ವಡೋದರಾದ ದೃಶ್ಯ ಕಲಾವಿದೆ (ವಿಶುಯಲ್ ಆರ್ಟಿಸ್ಟ್) ಹಾಗೂ ಶಿಕ್ಷಕಿ ಆಗಿರುವ ಮಾಳವಿಕಾ ರಾಜನಾರಾಯಣ್ ಅವರ ಸಲಹೆಯಾಗಿದೆ. ಅವರು ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ದೃಶ್ಯಕಲೆ ಮತ್ತು ಸಂಗೀತದ ಶಿಕ್ಷಕರಿಗೆ ಬೆಂಬಲ ಮತ್ತು ಸಂಪನ್ಮೂಲಗಳನ್ನು ಒದಗಿಸುತ್ತಾರೆ. ಅವರು ಭೋಪಾಲ್‌ದಲ್ಲಿನ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಅಧ್ಯಾಪಕರೂ (ವಿಸಿಟಿಂಗ್ ಫ್ಯಾಕಲ್ಟಿ) ಆಗಿದ್ದಾರೆ.

## ಮ್ಯೂಸಿಕಲ್ ಚೇರ್ ಆಟ



ಯಾರೇ ಇರಲಿ, ಅವರು ವಯಸ್ಸಾದವರಿರಲಿ ಸಣ್ಣವರಿರಲಿ, ಎಲ್ಲರೂ ಮ್ಯೂಸಿಕಲ್ ಚೇರ್ ಆಟವನ್ನು ಇಷ್ಟಪಡುತ್ತಾರೆ. ಬಹುತೇಕ ಗುಂಪಿನ ಆಟಗಳಲ್ಲಿ ಇರುವಂತೆ, ಆಟಗಾರರೆಲ್ಲ ಒಬ್ಬೊಬ್ಬರಾಗಿ ಔಟ್ ಆಗುತ್ತಾ ಕಡೆಗೆ ಒಬ್ಬನೇ ಆಟಗಾರ ಉಳಿಯುವವರೆಗೆ ಮತ್ತು ಕೊನೆಯಲ್ಲಿ ಉಳಿದ ವ್ಯಕ್ತಿಯನ್ನು ವಿಜೇತರು ಎಂದು ಘೋಷಿಸುವ ರೀತಿಯಲ್ಲಿಯೇ ಈ ಮ್ಯೂಸಿಕಲ್ ಚೇರ್ ಆಟದಲ್ಲೂ ನಡೆಯುತ್ತದೆ.

ಈ ಸಾಮಾನ್ಯವಾದ ಆಟವನ್ನು, ಚಟುವಟಿಕೆಯಲ್ಲಿ ಸ್ವಲ್ಪಮಟ್ಟಿಗೆ ಬದಲಾಯಿಸಿ ಪ್ರಸ್ತುತಪಡಿಸಲಾಗಿದೆ. ಮ್ಯೂಸಿಕಲ್ ಚೇರ್ ಎಂದು ಕರೆಯಲಾಗುವ ಈ ಆಟದ ಶ್ರೇಯಸ್ಸು ಜಪಾನೀಯರಿಗೆ ಸಲ್ಲುತ್ತದೆ. ಈ ಆಟವನ್ನು ಹೀಗೆ ಆಡಲಾಗುತ್ತದೆ:

1. ಈ ಆಟವನ್ನು 4 ರಿಂದ 5 ಮಕ್ಕಳಿರುವ, 2 ರಿಂದ 5 ಗುಂಪುಗಳಲ್ಲಿ ಆಡಲಾಗುತ್ತದೆ.
2. ಪ್ರತಿ ಗುಂಪಿಗೆ ಕುರ್ಚಿಗಳನ್ನು ವೃತ್ತಾಕಾರದಲ್ಲಿ ಇರಿಸಿ. ಚೇರ್ ಗಳ ಹಿಂಭಾಗವು ವೃತ್ತದ ಒಳಮುಖವಾಗಿದ್ದು, ಚೇರ್‌ನ ಕುಳಿತುಕೊಳ್ಳುವ ಭಾಗವು ವೃತ್ತದ ಹೊರಮುಖವಾಗಿರಬೇಕು. ಆಟಗಾರರ ಸಂಖ್ಯೆಗಿಂತ ಒಂದು ಚೇರ್ ಅನ್ನು ಕಡಿಮೆ ಇಡಿ. ಅಂದರೆ ಒಂದು ಗುಂಪಿನಲ್ಲಿ 5 ಆಟಗಾರರು ಇದ್ದರೆ, ಆಗ ಕೇವಲ 4 ಚೇರ್ ಗಳನ್ನು ಇರಿಸಬೇಕು. (ಕುಳಿತುಕೊಳ್ಳಲು ಚೇರ್‌ಗಳ ಬದಲಿಗೆ ಪತ್ರಿಕೆಗಳನ್ನು ಸಹ ಬಳಸಬಹುದು)
3. ಮಕ್ಕಳು ಚೇರ್ ಗಳ ಸುತ್ತ ಸುತ್ತುತ್ತಿರುವಾಗ, ಸಂಗೀತವನ್ನು ಹಾಕಿ.
4. ನೀವು ಸಂಗೀತವನ್ನು ನಿಲ್ಲಿಸಿದಾಗ ಪ್ರತಿಯೊಬ್ಬರೂ ಕುಳಿತುಕೊಳ್ಳಲು ಚೇರ್‌ಗಳನ್ನು ಹುಡುಕಬೇಕು. ಅವರು ಚೇರ್ ಹುಡುಕಲು ಹಿಂದಕ್ಕೆ ಹೋಗುವಂತಿಲ್ಲ, ಮುಂದಕ್ಕೆ ಮಾತ್ರ ಹೋಗಬಹುದು.
5. ಎಲ್ಲ ಮಕ್ಕಳೂ ಕುಳಿತುಕೊಳ್ಳುವುದು ಅವಶ್ಯಕವಾಗಿದೆ. ಆದ್ದರಿಂದ ಅವರು ಚೇರ್ ಅನ್ನು ಪಡೆಯಲು ಸಾಧ್ಯವಾಗದ ಮಗುವಿಗೆ ಜಾಗವನ್ನು ನೀಡಬೇಕು, ಏಕೆಂದರೆ ಯಾವುದಾದರೂ ಒಂದು ಮಗು ನಿಂತಿದ್ದರೆ ಅದನ್ನು ಇಡೀ ಗುಂಪಿನ ಸೋಲು ಎಂದು ಪರಿಗಣಿಸಲಾಗುತ್ತದೆ.
6. ಚೇರ್ ಗಳ ಸಂಖ್ಯೆ ಕಡಿಮೆಯಾದಂತೆಲ್ಲ ಆಟವು ಹೆಚ್ಚು ಸವಾಲಿನ ಮತ್ತು ವಿನೋದಮಯವಾಗುತ್ತಾ ಹೋಗುತ್ತದೆ. ಅಂತೆಯೇ ಮಕ್ಕಳು ಇನ್ನೊಬ್ಬರ ಮಡಿಲಲ್ಲಿ ಕುಳಿತುಕೊಳ್ಳಲು ಶುರು ಮಾಡಿಬಿಡುತ್ತಾರೆ.
7. ಕೇವಲ ಒಂದು ಚೇರ್ ಮಾತ್ರ ಉಳಿದಿರುವಾಗ, ಯಾವ ಗುಂಪು (ಅಥವಾ ಒಂದಕ್ಕಿಂತ ಹೆಚ್ಚು ಗುಂಪು) ತನ್ನ ಗುಂಪಿನ ಎಲ್ಲರನ್ನೂ ಒಂದೇ ಚೇರ್ ನ ಮೇಲೆ ಕುಳ್ಳಿರಿಸುತ್ತದೋ ಆ ಗುಂಪು ವಿಜೇತರು ಆಗುತ್ತಾರೆ.

ಈ ಚಟುವಟಿಕೆಗಾಗಿ ಹರಿಯಾಣದ ಫರೀದಾಬಾದ್ ನಲ್ಲಿರುವ ಒಬ್ಬ ವಿಶೇಷ ಶಿಕ್ಷಕಿ (ಸ್ಪೆಶಲ್ ಎಜುಕೇಟರ್) ಪ್ರತಿಮಾ ಶರ್ಮಾ ಅವರಿಂದ ಸಲಹೆ ಪಡೆಯಲಾಗಿದೆ.

(ಚಿತ್ರರಚನೆ: ಶಿವೇಂದ್ರ ಪಾಂಡಿಯಾ)



# ಸಂಪಾದಕರಿಗೆ ಪತ್ರ

## ತುಂಟತನವು ಮಕ್ಕಳ ಸಹಜ ಮತ್ತು ಸಾಮಾನ್ಯ ಗುಣವಾಗಿದೆ

ಪಾಠಶಾಲೆಯ 20ನೇ ಸಂಚಿಕೆಯಲ್ಲಿ ದೀಪಾಲಿ ಶುಕ್ಲಾ ಅವರ ಲೇಖನ, 'ಮೈಟಿ, ಕುಳಿತುಕೋ! ಕುಳಿತುಕೋ ಮೈಟಿ!' ಓದುವ ಅವಕಾಶ ಸಿಕ್ಕಿತು. ನಾನು ಈ ಪುಸ್ತಕವನ್ನು ಮಕ್ಕಳಿಗೆ ಕಲಿಸುವಾಗ ಓದುತ್ತೇನೆ. ನಾನು ಓದುವ ರೀತಿಗೂ ದೀಪಾಲಿ ಶುಕ್ಲಾ ನನ್ನನ್ನು ಅಧ್ಯಯನ ಮಾಡಲು ಹೇಳಿದ ರೀತಿಗೂ ಭೂಮಿ-ಆಕಾಶದ ವ್ಯತ್ಯಾಸವಿದೆ. ವಾಸ್ತವವಾಗಿ, ನಮ್ಮ ತರಗತಿಗಳಲ್ಲಿ ಅನೇಕ ಹೈಪರ್ ಆ್ಯಕ್ಟಿವ್ ಮಕ್ಕಳಿದ್ದಾರೆ. ಅವರು ಮೈಟಿಯಂತೆ ಕುಣಿಯುವುದಿಲ್ಲ, ತಮ್ಮ ಹೈಪರ್ ಆ್ಯಕ್ಟಿವಿಟಿಯನ್ನು ತೋರಿಸಲು ಒಬ್ಬರಿಗೊಬ್ಬರು ಮಾತನಾಡುತ್ತಾರೆ ಮತ್ತು ತುಂಟತನ ಮಾಡುತ್ತಾರೆ.

ಈ ಲೇಖನವನ್ನು ಓದಿದ ನಂತರ ನಾನು ಎರಡು ಹೊಸ ತಿಳುವಳಿಕೆಗಳನ್ನು ಬೆಳೆಸಿಕೊಂಡೆ. ಮೊದಲನೆಯದಾಗಿ, ಮಕ್ಕಳು ತರಗತಿಯಲ್ಲಿ ಕಿಡಿಗೇಡಿತನ ಮಾಡುವುದು ಸಹಜ ಮತ್ತು ಸಾಮಾನ್ಯ ಪ್ರಕ್ರಿಯೆ. ಶಿಕ್ಷಕರಾಗಿ, ನಾವು ಅವರಿಗೆ ನಿದರ್ಶನವನ್ನು ತೋರಿಸಬಹುದು ಮತ್ತು ಅವರ ಹೈಪರ್ ಆ್ಯಕ್ಟಿವಿಟಿಯನ್ನು ಸೃಜನಶೀಲತೆಗೆ ಪರಿವರ್ತಿಸಲು ಪ್ರಯತ್ನಿಸಬಹುದು. ಎರಡನೆಯದಾಗಿ, ಒಂದು ಕಥೆಯು ತರಗತಿಯ ಬೋಧನೆಯ ಸಮಯದಲ್ಲಿ ಕೆಲಸ ಮಾಡಲು ನಮಗೆ ಸಾಕಷ್ಟು ಅವಕಾಶಗಳನ್ನು ನೀಡುತ್ತದೆ. ಈ ಲೇಖನವನ್ನು ಓದಿದ ನಂತರ, ನಾನು ಕಥೆಗಳನ್ನು ಹೇಳುವ ವಿಧಾನದಲ್ಲಿ ಸಾಕಷ್ಟು ಬದಲಾಗಿದೆ. ಈ ಲೇಖನವು ಶಿಕ್ಷಕನಾಗಿ ಹೆಚ್ಚು ಸಂವೇದನಾಶೀಲನಾಗಲು ನನಗೆ ಸಹಾಯ ಮಾಡಿದೆ.

– ಅರವಿಂದ್ ಕುಮಾರ್ ಸಿಂಗ್, ಸಹಾಯಕ ಶಿಕ್ಷಕ, ಪ್ರಾಥಮಿಕ ಶಾಲೆ ಬಂಗ್ಲಾ ಪೂಠರಿ, ಜಿಲ್ಲೆ ಬುಲಂದ್‌ಶಹರ್, ಉತ್ತರ ಪ್ರದೇಶ

## ಹೊಸ ಸಂಸ್ಕೃತಿಯನ್ನು ರಚಿಸುವ ಕಡೆಗೆ

ಪಾಠಶಾಲೆಯ 20ನೇ ಸಂಚಿಕೆಯಲ್ಲಿ ಪ್ರಕಟವಾದ 'ರಚನಾತ್ಮಕ ಚರ್ಚೆಗಳ ಮೂಲಕ ಕಲಿಕೆ' ಲೇಖನ ನನಗೆ ಇಷ್ಟವಾಯಿತು. ಅಮನ್ ಮದನ್ ಬರೆದ ಈ ಲೇಖನದ ಉತ್ತಮ ವಿಷಯವೆಂದರೆ ರಚನಾತ್ಮಕ ವಿವಾದಗಳಿಂದಲೂ ನಾವು ಬಹಳಷ್ಟು ಕಲಿಯಬಹುದು. ಲೇಖಕರು ಸೂಚಿಸಿದ ವಿವಾದಗಳನ್ನು ಪರಿಹರಿಸುವ ವಿಧಾನಗಳು ನನ್ನ ತರಗತಿ ಮತ್ತು ನನ್ನ ಕೆಲಸದೊಂದಿಗೆ ಸಂಪರ್ಕ ಹೊಂದಿವೆ. ಅನೇಕ ಬಾರಿ ನಾನು ಮಕ್ಕಳ ಕೆಲಸವನ್ನು ಮತ್ತು ಅವರ ಮಾತುಗಳನ್ನು ನಿರ್ಲಕ್ಷಿಸುತ್ತೇನೆ ಮತ್ತು ನನ್ನ ನಿರ್ಧಾರಗಳನ್ನು ಅವರ ಮೇಲೆ ಹೇರುತ್ತೇನೆ. ಲೇಖನ ಓದಿದ ನಂತರ ಇದು ಸರಿಯಲ್ಲ ಅನ್ನಿಸಿತು. ನನ್ನ ತರಗತಿಗಳಲ್ಲಿ ಆಗಾಗ ಮಕ್ಕಳ ಎರಡು ಗುಂಪುಗಳು ಹುಟ್ಟಿಕೊಳ್ಳುತ್ತವೆ. ಒಂದು ಗುಂಪು, ಸಾರ್, ಆಡೋಣ ಎಂದು ಹೇಳಿದರೆ, ಇನ್ನೊಂದು ಗುಂಪು ಇಲ್ಲ ಸಾರ್, ಕಲಿಸಿ ಎಂದು ಹೇಳುತ್ತದೆ. ನಾನು ಇಲ್ಲಿಯವರೆಗೆ ಅದರ ಪರಿಹಾರದ ಬಗ್ಗೆ ಯೋಚಿಸಿರಲಿಲ್ಲ ಮತ್ತು ನಾನು ಈ ಲೇಖನವನ್ನು ಓದದಿದ್ದರೆ, ನಾನು ಬಹುಶಃ ಅದರ ಬಗ್ಗೆ ಯೋಚಿಸುತ್ತಿರಲಿಲ್ಲ. ಈ ಲೇಖನವು ನನಗೆ ಹೊಸ ಆಲೋಚನೆಯನ್ನು ಸೂಚಿಸಿದೆ, ನಾವು ಏಕೆ ಎರಡೂ ಗುಂಪುಗಳೊಂದಿಗೆ ಈ ರೀತಿಯಲ್ಲಿ ಸಂವಹನ ನಡೆಸಿ ಒಟ್ಟಿಗೆ ಫಲಿತಾಂಶವನ್ನು ಕಂಡುಕೊಳ್ಳಬಾರದು?

–ಚರಣ್‌ಜಿತ್‌ಸಿಂಗ್, ಸಹಾಯಕ ಶಿಕ್ಷಕ, ಪ್ರಾಥಮಿಕ ಶಾಲೆ ಖುರೈ, ಜಿಲ್ಲೆ ಸಾಗರ್, ಮಧ್ಯಪ್ರದೇಶ

## ಮಕ್ಕಳೊಂದಿಗೆ ತಾಳ್ಮೆ ಮತ್ತು ಸತತವಾದ ಕೆಲಸದ ಅಗತ್ಯವಿರುತ್ತದೆ

ಪಾಠಶಾಲೆಯ ಸಂಚಿಕೆ 21 ರಲ್ಲಿ ಅರ್ಚನಾ ಅರೋರಾ ಅವರ ಸಂದರ್ಶನವು ಅನುಭವದಲ್ಲಿ ಬಹಳ ಶ್ರೀಮಂತವಾಗಿದೆ. ಮಕ್ಕಳೊಂದಿಗೆ ಕೆಲಸ ಮಾಡಲು ಅಗತ್ಯವಿರುವ ತಾಳ್ಮೆ ಮತ್ತು ಪರಿಶ್ರಮವನ್ನು ಈ ಸಂದರ್ಶನದ ಮೂಲಕ ಅರ್ಥಮಾಡಿಕೊಳ್ಳಬಹುದು. ಇದೇ ಸಂಚಿಕೆಯಲ್ಲಿ ಸುಮನ್ ಪಟೇಲ್ ಬರೆದಿರುವ 'ನಾವು ರೊಟ್ಟಿ ಮಾಡುವುದಿಲ್ಲ' ಲೇಖನ ಬಹಳ ಚಿಂತನೆಗೆ ಹಚ್ಚುವ ಲೇಖನ. ಇದನ್ನು ಓದಿದ ನಂತರ, ಹುಡುಗರು ಮತ್ತು ಹುಡುಗಿಯರು ಅಥವಾ ಪುರುಷರು ಮತ್ತು ಮಹಿಳೆಯರು ಭಿನ್ನರಲ್ಲ ಎಂದು ಎಲ್ಲರೂ ಅರ್ಥಮಾಡಿಕೊಳ್ಳುತ್ತಾರೆ. ನಾವೆಲ್ಲರೂ ಮನುಷ್ಯರು, ಮನುಷ್ಯರು ಮತ್ತು ಪ್ರಕೃತಿಯಿಂದ ಹುಟ್ಟಿದವರು. ಕೆಲಸ ಕಾರ್ಯಗಳನ್ನು ವಿಂಗಡಿಸಿಕೊಂಡವರು ನಾವು ಮತ್ತು ಸಮಾಜ. ಈ ಅಂತರವನ್ನು ಹೆಚ್ಚಿಸುವ ಇಂತಹ ವಿಷಯಗಳನ್ನು ತಪ್ಪಿಸಬೇಕು. ಇಂತಹ ಲೇಖನವನ್ನು ಪ್ರಕಟಿಸಿ ನಮಗೆಲ್ಲರಿಗೂ ಲಭ್ಯವಾಗುವಂತೆ ಮಾಡಿದ ಇಡೀ ಶಾಲೆಗೆ ಹೃತ್ಪೂರ್ವಕ ಕೃತಜ್ಞತೆಗಳು.

– ರಜನಿಬಾಯಿ ದೇವತವಾಲ್, ಶಿಕ್ಷಕಿ, ಸೀನಿಯರ್ ಸೆಕೆಂಡರಿ ಸ್ಕೂಲ್, ರಾಮಪುರಾ ಊಂಟಿ, ಸಂಗಾನೇರ್ ಗ್ರಾಮ,ಜೈಪುರ ಜಿಲ್ಲೆ, ರಾಜಸ್ಥಾನ

## ಭಯದ ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ

ಪಾಠಶಾಲೆಯ 21ನೇ ಸಂಚಿಕೆಯಲ್ಲಿ ಪ್ರಕಟವಾದ 'ಮಕ್ಕಳ ಮನಸ್ಸಿನಿಂದ ಮೆದುಳಿಗೆ' ಲೇಖನ ನನಗೆ ತುಂಬಾ ಇಷ್ಟವಾಯಿತು. ಶಾಲಾ ಪರಿಸರದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ವಿಷಯವನ್ನು ಹೇಗೆ ವಿವರಿಸಬೇಕು ಎಂಬುದರ ಕುರಿತು ಈ ಲೇಖನವು ಬೆಳಕು ಚೆಲ್ಲುತ್ತದೆ. ಮಕ್ಕಳು ಯಾವುದೇ ವಿಷಯವನ್ನು ಯಾವುದೇ ಭಯ ಮತ್ತು ಆತಂಕವಿಲ್ಲದೆ ಸುಲಭವಾಗಿ ಅರ್ಥಮಾಡಿಕೊಳ್ಳಬೇಕು ಎಂದು ಲೇಖನವು ಹೇಳುತ್ತದೆ. ಭಯದ ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ, ಅದು ಅವರ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಸರಿಯಾಗಿ ಬರೆಯಲಾಗಿದೆ. ಇದನ್ನು ಮನುಷ್ಯ ಮತ್ತು ಮರದ ಕಥೆಯ ಮೂಲಕ ಲೇಖನದಲ್ಲಿ ಸರಳವಾಗಿ ವಿವರಿಸಲಾಗಿದೆ.

–ಸತ್ಯವಾನ್ ಖಲ್‌ಖೋ, ಸಹಾಯಕ ಶಿಕ್ಷಕ, ಸರ್ಕಾರಿ ಪ್ರಾಥಮಿಕ ಶಾಲೆ ಹರ್ರಾ ತೀನ್‌ಟಾಂಗರ್, ಜಿಲ್ಲೆ ಗುಮ್ಲಾ, ಜಾರ್ಖಂಡ್

## ಲಿಂಗ ತಾರತಮ್ಯವನ್ನು ಹಂತ ಹಂತವಾಗಿ ಮಾತ್ರ ನಿವಾರಿಸಬಹುದು

ಪಾಠಶಾಲೆಯ 21ನೇ ಸಂಚಿಕೆಯಲ್ಲಿ ಸುಮನ್ ಪಟೇಲ್ ಬರೆದಿರುವ 'ನಾವು ರೊಟ್ಟಿ ಮಾಡುವುದಿಲ್ಲ'ದಂತಹ ಲೇಖನಗಳು ಇಂದಿನ ಸನ್ನಿವೇಶದಲ್ಲಿ ತೀರಾ ಅಗತ್ಯವಾಗಿವೆ. ಲಿಂಗ ತಾರತಮ್ಯದಿಂದಾಗಿ ಮಹಿಳೆಯರು ನಮ್ಮ ಸಮಾಜದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಂತಹ ತಾರತಮ್ಯಕ್ಕೆ ಯಾವುದೇ ಸಮರ್ಥನೆ ಇಲ್ಲ ಎಂದು ಮಕ್ಕಳಿಗೆ ಬಾಲ್ಯದಲ್ಲಿಯೇ ಕಲಿಸಿದರೆ, ಈ ಪರಿಹಾರವು ಭವಿಷ್ಯದಲ್ಲಿ ಪರಿಣಾಮಕಾರಿ ಎಂದು ಸಾಬೀತುಪಡಿಸಬಹುದು ಎಂದು ಲೇಖನದಿಂದ ತಿಳಿಯಬಹುದು. ಇದರಿಂದ ಈ ತಾರತಮ್ಯವನ್ನು ಎಲ್ಲರೂ ಮಾಡುತ್ತಾರೆ ಎಂದು ತಿಳಿದು ಬರುತ್ತದೆ . ಇದು ಶಾಲೆಯಲ್ಲಿ, ಕುಟುಂಬದಲ್ಲಿ, ಸಮಾಜದಲ್ಲಿ, ಆಟದ ಮೈದಾನದಲ್ಲಿ ಮತ್ತು ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುತ್ತದೆ. ಅಂದರೆ, ಮಹಿಳೆಯರು ಎಲ್ಲೆಡೆ ಈ ರೀತಿಯ ತಾರತಮ್ಯವನ್ನು ಎದುರಿಸಬೇಕಾಗುತ್ತದೆ. ಇದೊಂದು ದೊಡ್ಡ ಅಂತರವಾಗಿದ್ದು ಇದನ್ನು ಕ್ರಮೇಣ ಮಾತ್ರ ಸರಿಪಡಿಸಬಹುದು. ಇದನ್ನು ಕಡಿಮೆ ಮಾಡಲು ನಾವು ಮಕ್ಕಳೊಂದಿಗೆ ಸಣ್ಣ ಸಂವಹನ ಮತ್ತು ಚಟುವಟಿಕೆಗಳ ಮೂಲಕ ಕೆಲಸ ಮಾಡಬೇಕಾಗಿದೆ.

–ಅನಿತಾ ಶರ್ಮಾ, ಶಿಕ್ಷಕಿ, ಮಹಾತ್ಮಾ ಗಾಂಧಿ ಶಾಲೆ ಪ್ರತಾಪ್ ನಗರ, ಜೈಪುರ ಜಿಲ್ಲೆ, ರಾಜಸ್ಥಾನ

## ಹೊಸ ಶಕ್ತಿಯೊಂದಿಗೆ ಬೆಳಗಿನ ಆರಂಭ

ಪಾಠಶಾಲೆಯ ಸಂಚಿಕೆ 21ರಲ್ಲಿ ಪ್ರಕಟವಾಗಿರುವ ಅಂಶಿಕಾ ಶರ್ಮಾ ಅವರ 'ಬೆಳಗಿನ ಸಭೆಯೇ ಬದಲಾವಣೆಯ ಆರಂಭ' ಲೇಖನವನ್ನು ಓದಿದೆ. ಲೇಖನದಲ್ಲಿ, ಲೇಖಕರು ಕೆಲವು ಬದಲಾವಣೆಗಳನ್ನು ಮಾಡುವ ಮೂಲಕ ಹೊಸ ಶಕ್ತಿಯೊಂದಿಗೆ ಬೆಳಗ್ಗೆ ಸಭೆಯನ್ನು ಹೇಗೆ ಪ್ರಾರಂಭಿಸಿದರು ಎಂದು ಹೇಳಿದ್ದಾರೆ. ಶಾಲೆಗಳಲ್ಲಿ ನಡೆಸಲಾಗುವ ಸಾಂಪ್ರದಾಯಿಕ ಬೆಳಗಿನ ಅಸೆಂಬ್ಲಿಯು ಮಕ್ಕಳಿಗೆ ಮಾತ್ರವಲ್ಲದೆ ಶಿಕ್ಷಕರಾದ ನಮಗೆ  ತುಂಬಾ ತೊಡಕಿನ ಪ್ರಕ್ರಿಯೆಯಾಗಿದೆ. ಬೆಳಗ್ಗೆ ಅಸೆಂಬ್ಲಿಯಲ್ಲಿ ಕುಟುಂಬದಲ್ಲಿ ಮಗುವಿನ ಸಾವಿನ ಘಟನೆಯನ್ನು ಹಂಚಿಕೊಳ್ಳುವ ಕಲ್ಪನೆಯು ಸ್ವತಃ ಒಂದು ಅನನ್ಯ ಪ್ರಯತ್ನವಾಗಿದೆ ಮತ್ತು ಶಿಕ್ಷಕ ಹಾಗೂ ಮಕ್ಕಳ ನಡುವಿನ ಆಳವಾದ ಸಂಬಂಧವನ್ನು ಸೂಚಿಸುತ್ತದೆ. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಈ ಸಭೆ ವೇದಿಕೆಯಾಯಿತು. ಪ್ರತಿ ಮಗು ಎಷ್ಟು ಬಾರಿ ತನ್ನ ಅನಿಸಿಕೆ ಹಂಚಿಕೊಂಡಿದೆ ಎಂಬುದನ್ನು ಶಿಕ್ಷಕರು ಎಚ್ಚರಿಕೆಯಿಂದ ದಾಖಲಿಸಿದ್ದಾರೆ. ಇದರಿಂದ ನಾವು ಬೆಳಗಿನ ಸಭೆಗೆ ಎಂದಿಗೂ ಬಾರದ ಮಕ್ಕಳನ್ನು ಪ್ರೋತ್ಸಾಹಿಸಬಹುದು.

–ಪಲ್ಲವಿ ದಿವಾನ್, ಚಗೋರಾಭಾಟಾ ಪ್ರಿ ಸ್ಕೂಲ್, ರಾಯಪುರ ಜಿಲ್ಲೆ, ಛತ್ತೀಸ್‌ಗಢ

## ಓದಲು ಮತ್ತು ಬರೆಯಲು ಕಲಿಯಲು ಗ್ರಂಥಾಲಯವು ಕೀಲಿ ಕೈಯ್ಯಾಗಿದೆ

ಪಾಠಶಾಲೆಯ 21ನೇ ಸಂಚಿಕೆಯಲ್ಲಿ ಬಂದಿರುವ 'ಶಾಲೆಯಲ್ಲಿ ಗ್ರಂಥಾಲಯ: ಓದು ಬರಹದ ಸಂದರ್ಭದಲ್ಲಿ' ಎಂಬ ಲೇಖನ ಬಹಳ ಅರ್ಥಪೂರ್ಣವಾಗಿರುವುದನ್ನು ಕಂಡೆ. ಇದರ ಲೇಖಕ ಧೀರಜ್ ಪಟೇಲ್ ಅವರು ತರಗತಿಯಲ್ಲಿ ಗ್ರಂಥಾಲಯ ನಿರ್ಮಾಣ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಉತ್ತಮ, ವ್ಯವಸ್ಥಿತ ಮತ್ತು ಅನುಕ್ರಮವಾಗಿ ವಿವರಿಸಿದ್ದಾರೆ. ಉದಾಹರಣೆಗೆ, ಲೇಖಕರು ಗ್ರಂಥಾಲಯದ ಉದ್ದೇಶದಲ್ಲಿ ಬರೆದಿದ್ದಾರೆ, "ಶಾಲಾ ಪುಸ್ತಕಗಳನ್ನು ಓದುವ ಮತ್ತು ಕಲಿಸುವ ಅಭ್ಯಾಸದೊಂದಿಗೆ ಹೊಂದಿಸುವುದು; ಅವುಗಳಲ್ಲಿ ಕಥೆಗಳನ್ನು ಓದುವುದು, ಕೇಳುವುದು ಮತ್ತು ಹೇಳುವುದು ಮತ್ತು ಕಥೆಗಳನ್ನು ಸ್ವಂತವಾಗಿ ರಚಿಸುವುದು ಮತ್ತು ಅವುಗಳನ್ನು  ಸ್ವತಂತ್ರ ಅಭಿವ್ಯಕ್ತಿ ಮತ್ತು ಬರವಣಿಗೆಯ ಕಡೆ ಕೊಂಡೊಯ್ಯುವುದು." ; ಇತ್ಯಾದಿ." ಹೆಚ್ಚುವರಿಯಾಗಿ, ಅವರು ಕಲಿಕೆಯ ಫಲಿತಾಂಶಗಳಿಗೆ ಉದ್ದೇಶಗಳನ್ನು ಲಿಂಕ್ ಮಾಡಿದ್ದಾರೆ, ಇದರಿಂದ ಲೇಖನವನ್ನು ಇನ್ನಷ್ಟು ಉತ್ಕೃಷ್ಟಗೊಳಿಸಿದ್ದಾರೆ.

ಲೇಖನದಲ್ಲಿ ಗ್ರಂಥಾಲಯಕ್ಕೆ ಸಂಬಂಧಿಸಿದ ಮೌಖಿಕ ಮತ್ತು ಲಿಖಿತ ಕೆಲಸವು ತುಂಬಾ ಆಸಕ್ತಿದಾಯಕವೆನಿಸಿತು. ಇದರ ಅಡಿಯಲ್ಲಿ, ಪ್ರಾರ್ಥನಾ ಸಭೆಗಳಲ್ಲಿ ಕಥೆ ಹೇಳುವಿಕೆಯು ಮೌಖಿಕವಾಗಿ ಪ್ರಾರಂಭವಾಯಿತು. ಅಂತಹ ಚಟುವಟಿಕೆಯು ಪ್ರಾರ್ಥನಾ ಸಭೆಯನ್ನು ಹೆಚ್ಚು ಉತ್ಸಾಹಭರಿತವಾಗಿಸಲು ಪರಿಣಾಮಕಾರಿಯಾಗಿದೆ. ಲೇಖಕರು ಬರವಣಿಗೆಯ ಕೆಲಸವನ್ನು ಹಂತ ಹಂತವಾಗಿ ಮಾಡಿದರು. ಮೊದಲ ಹಂತದಲ್ಲಿ ಓದಿದ ಕಥೆಯನ್ನಾಧರಿಸಿ ಮಕ್ಕಳಿಗೆ ಇನ್ನೊಂದು ಕಥೆ ಬರೆಯುವಂತೆ ಮಾಡಿ, ಎರಡನೇ ಹಂತದಲ್ಲಿ ಅವರೇ ಕಥೆ ಬರೆಯುವಂತೆ ಮಾಡಿದರು. ಓದುವುದು ಮತ್ತು ಬರೆಯುವುದನ್ನು ಕಲಿಸಲು ಇದು ಅತ್ಯಂತ ಪರಿಣಾಮಕಾರಿ ಚಟುವಟಿಕೆಯಾಗಿದೆ. ಮಕ್ಕಳಿಗೆ ಕಥೆಗಳ ಮೂಲಕ ಓದಲು ಮತ್ತು ಬರೆಯಲು ಕಲಿಸಿದಾಗ, ಅವರು ಹೆಚ್ಚು ವೇಗವಾಗಿ ಕಲಿಯುತ್ತಾರೆ ಏಕೆಂದರೆ ಅವರು ತಮ್ಮ ಬಹಳಷ್ಟು ಅನುಭವಗಳನ್ನು ಸೇರಿಸಲು ಸಮರ್ಥರಾಗಿದ್ದಾರೆ ಮತ್ತು ಅವುಗಳಲ್ಲಿ ಏನನ್ನೂ ಸೇರಿಸಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ.

–ಸುಮನ್ ಪಟೇಲ್, ಸದಸ್ಯ, ಅಜೀಂ ಪ್ರೇಮ್‌ಜಿ ಫೌಂಡೇಷನ್ ರಾಹತ್‌ಗಢ, ಜಿಲ್ಲೆ ಸಾಗರ್, ಮಧ್ಯಪ್ರದೇಶ

## ಮಕ್ಕಳು ಪುಸ್ತಕಗಳನ್ನು ತಿರುವಿ ಹಾಕುವುದು ಮುಖ್ಯ

ಪಾಠಶಾಲೆಯ 21ನೇ ಸಂಚಿಕೆಯಲ್ಲಿ ಧೀರಜ್ ಪಟೇಲ್ ಅವರ 'ಶಾಲೆಯ ಗ್ರಂಥಾಲಯದಲ್ಲಿ ಓದುವ ಮತ್ತು ಬರೆಯುವ ಸಂದರ್ಭದಲ್ಲಿ' ಲೇಖನವನ್ನು ಓದಿದೆ. ನಮ್ಮ ಎಲ್ಲಾ ಶಾಲೆಗಳಲ್ಲಿ ಮುಸ್ಕಾನ್ ಲೈಬ್ರರಿ ಲಭ್ಯವಿದ್ದರೂ, ಕೇವಲ 10 ಪ್ರತಿಶತದಷ್ಟು ಮಕ್ಕಳು ಮಾತ್ರ ಗ್ರಂಥಾಲಯವನ್ನು ಓದಲು ಮತ್ತು ಬರೆಯಲು ನಿಯಮಿತವಾಗಿ ಬಳಸುತ್ತಾರೆ. ಮಕ್ಕಳ ಓದುವ ಮತ್ತು ಬರೆಯುವ ಕೌಶಲವನ್ನು ಅಭಿವೃದ್ಧಿಪಡಿಸುವ ಮಾರ್ಗವಾಗಿ ಶಿಕ್ಷಕರು ಗ್ರಂಥಾಲಯದ ಕಡೆ ಹೆಚ್ಚು ನೋಡುವುದಿಲ್ಲ.

ಮಕ್ಕಳು ಪುಸ್ತಕಗಳನ್ನು ತಿರುಗಿಸುವುದು, ಚಿತ್ರಗಳನ್ನು ನೋಡುವುದು ಮತ್ತು ಗ್ರಂಥಾಲಯದಲ್ಲಿರುವ ಪುಸ್ತಕಗಳೊಂದಿಗೆ ಮಾತನಾಡುವುದು ಮುಖ್ಯ. ಪ್ರಾರ್ಥನಾ ಸಭೆಯಲ್ಲಿ ಲೇಖನಗಳನ್ನು ಪುಸ್ತಕಗಳಿಂದ ಕಥೆಗಳನ್ನು ಓದುವ ಆಸಕ್ತಿಯನ್ನು ಹುಟ್ಟುಹಾಕುವ ಪ್ರಕ್ರಿಯೆಯು ನನಗೆ ತುಂಬಾ ಇಷ್ಟವಾಯಿತು.

ಓದಿದ ಕಥೆಗಳ ಮೂಲಕ ಮಕ್ಕಳನ್ನು ಲಿಖಿತ ಮತ್ತು ಮೌಖಿಕ ಅಭಿವ್ಯಕ್ತಿಯ ಕಡೆಗೆ ಕರೆದೊಯ್ಯುವ ಕೆಲವು ಉದಾಹರಣೆಗಳನ್ನು ಸಹ ಲೇಖನದಲ್ಲಿ ನೀಡಲಾಗಿದೆ. ಹಾಗೆಯೇ ಪ್ರಾರ್ಥನಾ ಸಭೆಯಲ್ಲಿ ಮಕ್ಕಳಿಂದ ಕಥೆಗಳನ್ನು ಹೇಳಿಸುವುದು. ಆರಂಭದಲ್ಲಿ ಕೆಲವು ಮಕ್ಕಳು ಅನುಕ್ರಮವಾಗಿ ಕಥೆ ಹೇಳಿದರು. ಕೆಲವು ಮಕ್ಕಳು ಪುಸ್ತಕದಿಂದ ಓದುವ ಮೂಲಕ ಕಥೆಯನ್ನು ಓದಲು ಪ್ರಯತ್ನಿಸಿದರು ಮತ್ತು ಕೆಲವರು ಕಥೆಯನ್ನು ತಮ್ಮ ಮಾತಿನಲ್ಲಿ ಕೇಳಲು ಪ್ರಯತ್ನಿಸಿದರು. ಲೇಖಕರ ಈ ಪ್ರಯತ್ನದಿಂದಾಗಿ ಮಕ್ಕಳು ಪುಸ್ತಕಗಳನ್ನು ಓದುವ ಆಸಕ್ತಿಯನ್ನು ಬೆಳೆಸಿಕೊಂಡರು ಎಂದು ನಾನು ಭಾವಿಸುತ್ತೇನೆ. ನಾನು ಸಹ ಇದೇ ರೀತಿಯ ಹೋರಾಟವನ್ನು ಎದುರಿಸುತ್ತಿರುವ ಕಾರಣ ಖಂಡಿತವಾಗಿಯೂ ಈ ಪ್ರಕ್ರಿಯೆಯನ್ನು ನನ್ನ ಶಾಲೆಯಲ್ಲಿ ಅಳವಡಿಸಿಕೊಳ್ಳುತ್ತೇನೆ.

–ಸೋನಲ್ ತಿವಾರಿ ಚಗೋಟಾಭಾಟಾ ಮೆನ್ ಸ್ಕೂಲ್, ಜಿಲ್ಲೆ ರಾಯ್‌ಪುರ್, ಛತ್ತೀಸ್‌ಗಢ

## ನಿರರ್ಗಳವಾಗಿ ಓದುವುದು, ಅನುಭವ ಏನು ಹೇಳುತ್ತದೆ?

ಪಾಠಶಾಲೆಯ 21ನೇ ಸಂಚಿಕೆಯಲ್ಲಿ ರವಿಶೇಖರ್ ವರ್ಮಾ ಅವರು ಬರೆದಿರುವ 'ನಿರರ್ಗಳ ಓದು' ಲೇಖನ ಸ್ವಾರಸ್ಯಕರವಾಗಿದೆ. ಇದು ತರಗತಿಯು ಮಕ್ಕಳನ್ನು ವ್ಯಾಪಕವಾಗಿ ಓದಲು ಮತ್ತು ಗ್ರಹಿಕೆಯೊಂದಿಗೆ ಓದಲು ಸಹಾಯ ಮಾಡುವ ಚಟುವಟಿಕೆಗಳನ್ನು ಒಳಗೊಂಡಿರಬೇಕು ಎಂಬ ತಿಳುವಳಿಕೆಗೆ ಕಾರಣವಾಗುತ್ತದೆ. ನಾನು ಕೂಡ ಅದನ್ನೇ ನಂಬುತ್ತೇನೆ. ಮಕ್ಕಳಿಗೆ ಓದಿದ ಕಥೆಯಿಂದ, ಅವರು ಆ ಪುಸ್ತಕವನ್ನು ಓದುತ್ತಾರೆ ಮತ್ತು ಮಾತನಾಡುತ್ತಾರೆ ಎಂಬುದು ನನ್ನ ಅನುಭವವನ್ನು ಹೆಚ್ಚಿಸುತ್ತದೆ. ಈ ಇಡೀ ಪ್ರಕ್ರಿಯೆಯಲ್ಲಿ ಮಕ್ಕಳು ಸಹ ಊಹೆಗಳನ್ನು ಮಾಡುತ್ತಾರೆ ಮತ್ತು ಆಗ ಮಾತ್ರ ಅವರು ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿಯೇ ಮಕ್ಕಳಿಗೆ ಅಧ್ಯಯನ ಮಾಡಲು ಅವಕಾಶಗಳನ್ನು ನೀಡುವುದು ಮುಖ್ಯವಾಗಿದೆ.

ಕಥೆಯನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವುದರ ಜೊತೆಗೆ ಓದಲು ಕಲಿಯುವ ಮಕ್ಕಳೊಂದಿಗೆ ಅಕ್ಷರ ಮತ್ತು ಉಚ್ಚಾರಾಂಶಗಳನ್ನು ಗುರುತಿಸುವ ಕೆಲಸವನ್ನೂ ಮಾಡಬಹುದು ಎಂಬುದು ನನ್ನ ಅನುಭವ. ಮಕ್ಕಳು ಸಹ ಈ ಕೆಲಸವನ್ನು ಆನಂದಿಸುತ್ತಾರೆ ಏಕೆಂದರೆ ನಾವು ಯಾವ ಅಕ್ಷರದ ಪಾಠ ಮಾಡುತ್ತೇವೆಯೋ ಅವರು ಓದಿದ ಅಥವಾ ಹೇಳಿದ ಕಥೆಗಳಿಂದಲೇ ಅವು ಬಂದವುಗಳಾಗಿವೆ. ಆಗಾಗ್ಗೆ ಬಳಸುವ ಪದಗಳನ್ನು ಓದುವಾಗ, ಮಕ್ಕಳು ಈ ಪದಗಳನ್ನು ನೋಡಿದ ತಕ್ಷಣ ಓದಲು ಪ್ರಾರಂಭಿಸುತ್ತಾರೆ. ಇದು ಪಠ್ಯವನ್ನು ಓದಲು ಅವರಿಗೆ ತುಂಬಾ ಸಹಾಯ ಮಾಡುತ್ತದೆ. ನಾನು ಇದನ್ನು ನನ್ನ ಬೋಧನಾ ಪ್ರಕ್ರಿಯೆಯಲ್ಲಿ ಸೇರಿಸುತ್ತೇನೆ.

–ಸುಜಾತಾ ಪಟೇಲ್, ಸಮಗ್ರ ಸರ್ಕಾರಿ ಮಾಧ್ಯಮಿಕ ಶಾಲೆ ಕೊರಾಸಾ, ಖುರೈ, ಜಿಲ್ಲೆ ಸಾಗರ, ಮಧ್ಯಪ್ರದೇಶ

# ಲೇಖಕರ ಗಮನಕ್ಕಾಗಿ

1. ನೀವು ಕಳುಹಿಸುವ ಲೇಖನದಲ್ಲಿ ಯಾವುದೇ ರೀತಿಯ ಡಿಸೈನ್, ಬಾರ್ಡರ್ ಹಾಗೂ ಬಾಕ್ಸ್‌ಗಳು ಇರಬಾರದು. ಲೇಖನವನ್ನು ಪಿಡಿಎಫ್ ಸ್ವರೂಪದಲ್ಲಿ ಕಳುಹಿಸಬೇಡಿ.
2. ಲೇಖನಕ್ಕೆ ಸಂಬಂಧಿಸಿದ ಫೋಟೋಗಳು ಅಥವಾ ಇನ್ನಿತರ ದೃಶ್ಯ–ಚಿತ್ರಗಳು ಉನ್ನತ ಮಟ್ಟದ್ದಾಗಿರುವಂತೆ ನೋಡಿಕೊಳ್ಳಿ. (ಹೈ ರೆಸಲ್ಯೂಶನ್ ಫೋಟೋ–ಇಮೇಜ್‌ಗಳು). ಅಂತೆಯೇ,
   - ಈ ಫೋಟೋ ಮತ್ತು ದೃಶ್ಯಚಿತ್ರಗಳನ್ನು ವರ್ಡ್‌ಫೈಲ್‌ನ ಒಳಗಡೆಯೇ ಕಾಪಿ ಪೇಸ್ಟ್ ಮಾಡಿ ಕಳುಹಿಸದೆ ಅದರ ಬದಲಾಗಿ, ಇ–ಮೇಲ್ ಮಾಡುವಾಗ ಚಿತ್ರಗಳನ್ನು ಪ್ರತ್ಯೇಕವಾಗಿ ಅಟ್ಯಾಚ್‌ಮಾಡಿ ಮೇಲ್ ಮಾಡಿ. (ಒಂದೇ ಮೇಲ್‌ನಲ್ಲಿ ಬೇರೆ–ಬೇರೆಯಾಗಿ ಅಟ್ಯಾಚ್ ಮಾಡಿರಿ)
   - ಫೋಟೋಗಳಿಗೆ, ಚಿತ್ರಗಳಿಗೆ: ಚಿತ್ರ – 1, ಚಿತ್ರ – 2 ಎಂಬುದಾಗಿ ಫೈಲ್ ನೇಮ್ ಕೊಟ್ಟು ಸೇವ್‌ಮಾಡಿಟ್ಟುಕೊಂಡಿರಿ.
   - ಯಾವ ಫೋಟೋವು ಲೇಖನದ ಯಾವ ಸ್ಥಳದಲ್ಲಿ ಬರಬೇಕೆಂದು ನೀವು ಭಾವಿಸುತ್ತೀರೋ, ಲೇಖನದ ಆ ಜಾಗದಲ್ಲಿ (ಚಿತ್ರ–1, ಚಿತ್ರ–2 ಎಂದು) ನೀವು ಬರೆದು ಸೂಚಿಸಬೇಕು.
   - ಈ ವಿಷಯದಲ್ಲಿ ಅಂತಿಮ ನಿರ್ಧಾರವು ಸಂಪಾದಕೀಯ ತಂಡದ್ದಾಗಿರುತ್ತದೆ.
3. ಚಿತ್ರದ ಕೆಳಗೆ ಚಿತ್ರದ ಆಕರವನ್ನು ತಪ್ಪದೆ ನಮೂದಿಸಿ. (ಚಿತ್ರಕೃಪೆ ಎಂಬುದಾಗಿ)
   - ಚಿತ್ರ–ಫೋಟೋಗಳ ಹಕ್ಕುಸ್ವಾಮ್ಯ(ಕಾಪಿರೈಟ್)ದ ಬಗ್ಗೆ ಜಾಗ್ರತೆಯಿಂದಿರಿ. ಚಿತ್ರ–ಫೋಟೋಗಳು, ಕಾಪಿರೈಟ್–ಫ್ರೀ ಆಗಿವೆಯೇ ಎಂದು ಗಮನಿಸಿಕೊಳ್ಳಿ. ಒಂದುವೇಳೆ ಕಾಪಿರೈಟ್–ಫ್ರೀ ಇಲ್ಲದಿದ್ದರೆ ಎಲ್ಲಿಂದ ಚಿತ್ರವನ್ನು ತೆಗೆದುಕೊಳ್ಳಲಾಗಿದೆಯೋ ಅಲ್ಲಿಂದ ಅನುಮತಿ ಪಡೆದಿರಬೇಕು ಅಥವಾ ಚಿತ್ರದ ಕೆಳಗೆ ಕೃತಜ್ಞತೆ ಸಲ್ಲಿಸಿರುವ ಉಲ್ಲೇಖ (ಚಿತ್ರಕೃಪೆ) ಇರಬೇಕು.
   - ಒಂದುವೇಳೆ ಫೋಟೋ ನೀವೇ ತೆಗೆದಿದ್ದಲ್ಲಿ, ಅದನ್ನೂ ಸಹ ಉಲ್ಲೇಖಿಸಿ. ಅಲ್ಲದೆ ಫೋಟೋ ತೆಗೆಯುವ ಮುನ್ನ ಆಯಾ ಶಾಲೆ ಅಥವಾ ತರಗತಿಯ ಅನುಮತಿಯನ್ನು ಅವಶ್ಯವಾಗಿ ಪಡೆದಿರತಕ್ಕದ್ದು.
4. ಮಕ್ಕಳ ಫೋಟೋಗಳನ್ನು ತೆಗೆಯಬೇಡಿ. ಅದರಲ್ಲೂ ವಿಶೇಷವಾಗಿ, ಮಕ್ಕಳ ಮುಖ ಸ್ಪಷ್ಟವಾಗಿ ಕಾಣುವಂತಹ ಫೋಟೋಗಳನ್ನು ತೆಗೆದುಕೊಳ್ಳಲೇಕೂಡದು.
5. ನೀವು ಬರೆಯುವ ಲೇಖನದಲ್ಲಿ, ಯಾವುದೇ ಪುಸ್ತಕದಿಂದ ಆಯ್ದ ಭಾಗವನ್ನು ತೆಗೆದುಕೊಂಡಲ್ಲಿ, ಲೇಖನದಿಂದ ಆಯ್ದ ಭಾಗ ತೆಗೆದುಕೊಂಡಲ್ಲಿ ಅಥವಾ ಯಾವುದೇ ಲೇಖಕರ ಉಲ್ಲೇಖವನ್ನು ತೆಗೆದುಕೊಂಡಲ್ಲಿ, ದಯವಿಟ್ಟು ಅವುಗಳನ್ನು ನೀವು ಅವಶ್ಯವಾಗಿ ಉಲ್ಲೇಖಿಸಿ ಮತ್ತು ಅವುಗಳಿಗೆ ಕ್ರೆಡಿಟ್ ನೀಡಿ.
6. ನಿಮ್ಮ ಲೇಖನದ ಜೊತೆಗೆ – ನಿಮ್ಮ ಸಂಕ್ಷಿಪ್ತ ಪರಿಚಯ, ನಿಮ್ಮ ಮುಖ ಮುಂಭಾಗದಿಂದ ಸ್ಪಷ್ಟವಾಗಿ ಕಾಣಿಸುವಂತಹ ಮತ್ತು ಹತ್ತಿರದಿಂದ ತೆಗೆದಿರುವಂತಹ ಒಂದು ಫೋಟೋ ಮತ್ತು ಮೊಬೈಲ್ ನಂಬರ್, ಪೂರ್ಣ ವಿಳಾಸ ಹಾಗೂ ಇ–ಮೇಲ್ ಐಡಿಯನ್ನೂ ಸಹ ಒದಗಿಸಿ.'
7. ಪಾಠಶಾಲಾ' ಪತ್ರಿಕೆಗೆ ಕಳುಹಿಸುವ ನಿಮ್ಮ ಯಾವುದೇ ಲೇಖನವು – ಬೇರೆಡೆ ಕಳುಹಿಸಿರಬಾರದು ಮತ್ತು ಯಾವುದೇ ಸೋಶಿಯಲ್ ಮೀಡಿಯಾದಲ್ಲಿ ಹಾಕಿರಬಾರದು – ಅಂತಹ ಲೇಖನವಾಗಿರುವಂತೆ ನೋಡಿಕೊಳ್ಳಿ.
8. ಲೇಖನವು ನಮಗೆ ತಲುಪಿದ ಕೂಡಲೇ ನಿಮಗೆ ಮಾಹಿತಿ ನೀಡಲಾಗುವುದು ಮತ್ತು 30 ದಿನಗಳ ಒಳಗೆ ಲೇಖನದ ಸ್ವೀಕಾರ ಅಥವಾ ಅಸ್ವೀಕಾರ ಅಥವಾ ಆ ಲೇಖನ ಸಂಬಂಧಿತ ಸುಧಾರಣೆಯ ಕುರಿತಾಗಿ ತಿಳಿಸಲಾಗುವುದು.'
9. ಪಾಠಶಾಲಾ' ಪತ್ರಿಕೆಯ ಲೇಖನಗಳಲ್ಲಿ ಮೂರು ವಿಭಾಗಗಳಿವೆ. ಮೊದಲನೆಯ ವಿಭಾಗದಲ್ಲಿ– 2000 ಪದಗಳ ಲೇಖನ, ಎರಡನೆಯ ವಿಭಾಗದಲ್ಲಿ– 1500 ಪದಗಳ ಲೇಖನ ಮತ್ತು ಮೂರನೆಯ ವಿಭಾಗದಲ್ಲಿ– 700 ರಿಂದ 1000 ಪದಗಳ ಒಳಗೆ ಮಿತಿಯಿರುವ ಲೇಖನಗಳಿರುತ್ತವೆ.
10. ಸಂಪಾದಕೀಯ ತಂಡವು ಲೇಖನದಲ್ಲಿ ಸಂಪಾದನ (ತಿದ್ದುಪಡಿ) ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಆವಶ್ಯಕ ತಿದ್ದುಪಡಿ ಮಾಡಿದ ನಂತರ ನಿಮಗೆ ನಿಮ್ಮ ಲೇಖನವನ್ನು ಕಳುಹಿಸಲಾಗುವುದು.'
11. ಪಾಠಶಾಲಾ' ಪತ್ರಿಕೆಯು ಈಗ ಹಿಂದಿ ಭಾಷೆಯ ಜೊತೆಗೆ ಇಂಗ್ಲಿಷ್ ಮತ್ತು ಕನ್ನಡದಲ್ಲೂ ಪ್ರಕಟವಾಗುವುದು. ಅಂದರೆ, ನೀವು ಈ ಮೂರರಲ್ಲಿ ಯಾವ ಭಾಷೆಯಲ್ಲಾದರೂ ಲೇಖನವನ್ನು ಕಳುಹಿಸಬಹುದು. ಲೇಖನ ಕಳುಹಿಸಬೇಕಾದ ಮೇಲ್‌ಐಡಿ: pathshala@apu.edu.in
12. ನೀವು ಕಳುಹಿಸಿದ ಲೇಖನವು ಯಾವುದೇ ಮೂಲ ಭಾಷೆಯಲ್ಲಿರಲಿ, ಅದು ಮೂರೂ ಭಾಷೆಗಳಲ್ಲಿ ಅನುವಾದಗೊಂಡು ಪ್ರಕಟವಾಗುತ್ತದೆ. ಸಂಪಾದಕೀಯ ತಂಡವು ಇದರ ಹಕ್ಕನ್ನು ಹೊಂದಿರುತ್ತದೆ.

ಯಾವುದೇ ಇನ್ನಿತರ ಮಾಹಿತಿಗಾಗಿ ನೀವು ಸಂಪರ್ಕಿಸಬಹುದಾದ ವಿವರ :
ಪ್ರತಿಭಾ (ಹಿಂದಿ) : katiyar@azimpremjifoundation.org
ಶೆಫಾಲೀ (ಇಂಗ್ಲಿಷ್) : shefali.mehta@apu.edu.in
ರಾಘವೇಂದ್ರ ಹೇರ್ಳೆ (ಕನ್ನಡ) : raghavendra.herle@azimpremjifoundation.org


ಮುದ್ರಣ ಮತ್ತು ಪ್ರಕಟಣೆ: ಶರದ್ ಸುರೆ, ಕುಲಸಚಿವರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪರವಾಗಿ.
ಮುದ್ರಣ: ಲಕ್ಷ್ಮೀ ಮುದ್ರಣಾಲಯ, 117, 5ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು –560018
ಪ್ರಕಟಣೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸರ್ವೇ ನಂ. 66, ಬೂರುಗುಂಟೆ ಗ್ರಾಮ, ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು, ಕರ್ನಾಟಕ 562 125
ಮುಖ್ಯ ಸಂಪಾದಕರು: ಪ್ರತಿಭಾ ಕಟಿಯಾರ್

Postgraduate Diploma Programmes in Education

Azim Premji University

# For practicing professionals in the field of Education

*Flexible | Blended Mode*



APPLY NOW

| Early Childhood Education | Inclusive Education | Teaching Children with Learning Disabilities |
|---|---|---|

## Key Features of the Programmes:

- The programme is aligned to the credit structure as defined by the National Credit Framework (NCrF) issued by UGC in April 2023.
- Course content and pedagogy lays emphasis on relevant theories, practice and hands on skills required for building expertise in the respective areas of early childhood education, inclusive education and teaching children with learning disabilities.
- Become a member of a community of reflective practitioners through our alumni network.
- Participants have the flexibility of joining the PG Diploma Programme or taking one or more Certificate Programmes individually.

## Admission Process:

Particiants can enter into the PG Diploma Programme through any of the Certificate Programmes.

The two steps of the process are :-

**Step 1:** Online application form with Statement of Purpose.

**Step 2:** Panel Interview in online mode.

## Fees and Financial Assistance:

- Fee details are available on the website.
- The University will offer financial assistance to deserving candidates based on their income. This financial assistance will be partial waivers of the fee component and will be awarded at the sole discretion of the University. The University will ask for documentary proof as required. Admission available to participants requesting financial assistance is limited.

Scan the QR code to know more:

Azim Premji University

# Anuvada Sampada

# ಅನುವಾದ ಸಂಪದ

## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲಗಳ ಸಂಗ್ರಹ

ಇಂಗ್ಲಿಷ್‌ನಿಂದ ಕನ್ನಡ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿರುವ 2000ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಮುಕ್ತ ಮತ್ತು ವಿನೂತನವಾದ ಆನ್‌ಲೈನ್ ಸಂಪದ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಮಾನವಿಕ, ಶಿಕ್ಷಣ ಮತ್ತು ಭಾಷಾ ವಿಷಯಗಳ ಪರಿಕಲ್ಪನೆಗಳು ಮತ್ತು ಚಿಂತನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿನ ಕಣಜ.






ಕನ್ನಡ ಮತ್ತು ಹಿಂದಿಯಲ್ಲಿ ಉಚಿತವಾಗಿ ಹಾಗೂ ಮುಕ್ತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ವೆಬ್‌ಸೈಟ್.

- ಪುಸ್ತಕಗಳು ಮತ್ತು ಪುಸ್ತಕದ ಅಧ್ಯಾಯಗಳು
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು ಮತ್ತು ಲೇಖನಗಳು
- ಸಂಪಾದಿತ ವಾಚಿಕೆಗಳು ಮತ್ತು ವಿಚಾರಗೋಷ್ಠಿಗಳ ಬರಹಗಳು

**ಅನುವಾದ ಸಂಪದಕ್ಕೆ ಭೇಟಿ ಕೊಡಿ:**

**https://anuvadasampada.azimpremjiuniversity.edu.in/**

## ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಿಂದ ಪ್ರಕಟಿತ ಪತ್ರಿಕೆಗಳು

